ಗುರುವಾರ, ಜೂನ್ 13, 2024 | ₹ 7.00

www.prajavani.net

prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಅಭಿಮಾನ**

ನ್ಯೂಯಾರ್ಕ್‌ನಲ್ಲಿ ನಡೆದ ಭಾರತ ಮತ್ತು ಅಮೆರಿಕ ನಡುವಿನ ಐಸಿಸಿ ಟಿ–20 ವಿಶ್ವಕಪ್ ಪಂದ್ಯದ ವೇಳೆ ಅಭಿಮಾನಿಯೊಬ್ಬರು ಕಾಣಿಸಿಕೊಂಡಿದ್ದು ಹೀಗೆ...

**SHOWROOMS: KARNATAKA: BENGALURU:** RENAULT **BANNERGHATTA ROAD** Ph: 8546820204, RENAULT **MYSORE ROAD** Ph: 8527240549 & 7026666922, RENAULT **SILK BOARD** Ph: 8527240654, RENAULT **WHITEFIELD** Ph: 8527240685, RENAULT **JP NAGAR** Ph: 8527240626 & 7353760555, RENAULT **KALYAN NAGAR** Ph: 8527236137 & 8722866664, RENAULT **SARJAPURA** Ph: 8448481374, 8746811000 & 8496915111, RENAULT **YELAHANKA** Ph: 8527234592, 9071767600 & 8884498993, RENAULT **YESWANTHPUR** Ph: 9311832962 & 9311832968. RENAULT **TUMKUR** Ph: 7353764337.

## ಕೆಪಿಸಿಎಲ್ ನೇಮಕಾತಿ: ಅಂತಿಮ ಅಂಕಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿಎಲ್) 622 ಹುದ್ದೆಗಳ ನೇಮಕಾತಿಗೆ ಇದೇ ಫೆಬ್ರುವರಿ 18ರಂದು ನಡೆಸಲಾಗಿದ್ದ ಸ್ಪರ್ಧಾತ್ಮಕ ಪರೀಕ್ಷೆಯ ಅಂತಿಮ ಅಂಕ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪ್ರಕಟಿಸಿದೆ.

ಕೆಪಿಸಿಎಲ್ ಲಿಖಿತ ಸೂಚನೆಯಂತೆ ಕಳೆದ ಬಾರಿಯಂತೆಯೇ, ಪ್ರತಿ ಮೂರು ತಪ್ಪು ಉತ್ತರಕ್ಕೆ ಒಂದು ಅಂಕ ಕಡಿತಗೊಳಿಸುವ ಋಣಾತ್ಮಕ ಅಂಕ ಪದ್ಧತಿಯಂತೆ ಮೌಲ್ಯ ಮಾಪನ ಮಾಡಲಾಗಿದೆ. ಹುದ್ದೆವಾರು ಪರೀಕ್ಷೆ ಬರೆದ ಅಭ್ಯರ್ಥಿಗಳ ಅಂತಿಮ ಅಂಕಪಟ್ಟಿ ಪ್ರಕಟಿಸಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಅಂತಿಮ ಅಂಕಪಟ್ಟಿಯನ್ನು ಕೆಪಿಸಿಎಲ್ ಸಂಸ್ಥೆಗೆ ಹಸ್ತಾಂತರಿಸಲಾಗುವುದು. ನಿಯಮಾನುಸಾರ ಆಯ್ಕೆ ಪಟ್ಟಿ ಪ್ರಕಟಿಸಲು ಕೆಪಿಸಿಎಲ್ ಕ್ರಮ ವಹಿಸಲಿದೆ ಎಂದು ಮಾಹಿತಿ ನೀಡಿದ್ದಾರೆ.

### ಸರ್ಕಾರಿ ಐಟಿಐ: ಜೆಟಿಒ ಆಯ್ಕೆ ಪಟ್ಟಿ ಪರಿಷ್ಕರಿಸಿದ ಕೆಪಿಎಸ್‌ಸಿ; ಹೊಸಪಟ್ಟಿಯಲ್ಲಿ 222 ಹೆಸರು

# 177 ಅಧಿಕಾರಿಗಳ ಹುದ್ದೆಗೆ ಕುತ್ತು?

• ರಾಜೇಶ್ ರೈ ಚಟ್ಲ

**ಬೆಂಗಳೂರು:** ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಇಲಾಖೆ ಅಡಿಯಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ (ಐಟಿಐ) ಖಾಲಿ ಇರುವ 1,520 ಕಿರಿಯ ತರಬೇತಿ ಅಧಿಕಾರಿಗಳ (ಜೆಟಿಒ) ಹುದ್ದೆಗೆ 2019ರಲ್ಲಿ ಪ್ರಕಟಿಸಿದ್ದ ಅಂತಿಮ ಆಯ್ಕೆ ಪಟ್ಟಿಯನ್ನು ಹೈಕೋರ್ಟ್ ನಿರ್ದೇಶನದಂತೆ ಕೆಪಿಎಸ್‌ಸಿ ಪರಿಷ್ಕರಿಸಿದೆ. ಸದ್ಯ ಹುದ್ದೆಯಲ್ಲಿರುವ 177 ಅಭ್ಯರ್ಥಿಗಳು ಹೊಸ ಪಟ್ಟಿಯಿಂದ ಹೊರಗುಳಿದಿದ್ದಾರೆ.

ರಾಜ್ಯದ ವಿವಿಧೆಡೆಗಳಲ್ಲಿರುವ ಐಟಿಐ ಕಾಲೇಜುಗಳಲ್ಲಿ ಕಳೆದ ಒಂದೂವರೆ ವರ್ಷದಿಂದ ಕೆಲಸ ಮಾಡುತ್ತಿರುವ ಈ ಜೆಟಿಒಗಳು ಕೆಲಸ ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದಾರೆ.

2019ರ ಆಯ್ಕೆ ಪಟ್ಟಿ ಮತ್ತು ಪರಿಷ್ಕೃತ ಆಯ್ಕೆ ಪಟ್ಟಿ ಎರಡರಲ್ಲೂ 463 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಈ ಪೈಕಿ 399 ಮಂದಿ (2019ರ ಪಟ್ಟಿಯ ಅನ್ವಯ) ನೇಮಕಾತಿ ಆದೇಶ ಪಡೆದು ಕೆಲಸ ಮಾಡುತ್ತಿದ್ದಾರೆ. ಪರಿಷ್ಕೃತ ಪಟ್ಟಿಯಲ್ಲಿ ಈ 399ರಲ್ಲಿ 177 ಮಂದಿಯ ಹೆಸರು ಇಲ್ಲ. ಕೇವಲ 222 ಮಂದಿಯ ಹೆಸರಿದೆ.

| | |
|---|---|
| ರಾಜ್ಯದಲ್ಲಿರುವ ಸರ್ಕಾರಿ ಐಟಿಐಗಳು | 270 |
| ಖಾಲಿ ಇರುವ ಜೆಟಿಒ ಹುದ್ದೆಗಳು | 1,900 |
| 2018ರಲ್ಲಿ ಭರ್ತಿಗೆ ಉದ್ದೇಶಿಸಿದ್ದ ಹುದ್ದೆಗಳು | 1,520 |
| ಪರಿಷ್ಕೃತ (ತಾತ್ಕಾಲಿಕ) ಆಯ್ಕೆ ಪಟ್ಟಿಯಲ್ಲಿರುವ ಹುದ್ದೆಗಳು | 1415 |
| ಬಾಕಿ ಹುದ್ದೆಗಳು | 105 |
| ಒಂದು ವೃತ್ತಿಗೆ ಆಯ್ಕೆಯಾದವರು | 965 |
| ಒಂದಕ್ಕಿಂತ ಹೆಚ್ಚು ವೃತ್ತಿಗೆ ಆಯ್ಕೆಯಾದವರು | 450 |
| ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವುದು | 399 |
| ಪರಿಷ್ಕೃತ ಪಟ್ಟಿಯಲ್ಲಿ ಮರು ಆಯ್ಕೆಯಾದವರು | 222 |
| ಪಟ್ಟಿಯಿಂದ ಹೊರಗಡೆ ಉಳಿದವರು | 177 |

**ಮುಖ್ಯಾಂಶಗಳು**

- **ಕೆಲಸ ಕಳೆದುಕೊಳ್ಳುವ ಆತಂಕದಲ್ಲಿ ಜೆಟಿಒಗಳು**
- **ನೇಮಕಾತಿ ಆದೇಶಕ್ಕೆ ಕಾಯುತ್ತಿರುವ ಅಕಾಂಕ್ಷಿಗಳು**

ಪರಿಷ್ಕೃತ ಪಟ್ಟಿಯಲ್ಲಿರುವ 450 ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ವೃತ್ತಿಗಳಿಗೆ (ಟ್ರೇಡ್) ಆಯ್ಕೆಯಾಗಿದ್ದಾರೆ. ಎಲ್ಲರೂ ಒಂದು ಟ್ರೇಡ್‌ನ್ನು ಆಯ್ಕೆ ಮಾಡಿಕೊಂಡರೆ, ಹಳೆ ಆಯ್ಕೆ ಪಟ್ಟಿಯಲ್ಲಿರುವ ಕೆಲವರ ಹೆಸರು ಪರಿಷ್ಕೃತ ಪಟ್ಟಿಯ ಒಳಗೆ ಬರುವ ಸಾಧ್ಯತೆಯಿದೆ.

ಐಟಿಐಗಳಲ್ಲಿ 23 ವಿವಿಧ ವೃಂದಗಳಲ್ಲಿ ಖಾಲಿ ಇರುವ ಜೆಟಿಒಗಳ ನೇಮಕಾತಿಗೆ 2018 ಫೆ. 19 ರಂದು ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿತ್ತು. ಅರ್ಜಿ ಸಲ್ಲಿಸಿದ್ದ 50 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ 2018 ಡಿ. 27 ರಿಂದ 2019 ಜ. 3ರವರೆಗೆ ಪರೀಕ್ಷೆ ನಡೆದಿತ್ತು. ದಾಖಲೆಗಳ ಪರಿಶೀಲನೆ ಬಳಿಕ ವಿವಿಧ ವೃತ್ತಿಗಳಲ್ಲಿ 1,367 ಅಭ್ಯರ್ಥಿಗಳ ಆಯ್ಕೆ ಪಟ್ಟಿ ಪ್ರಕಟಿಸಲಾಗಿತ್ತು. ಕೆಲವು ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗೆ ಆಯ್ಕೆಯಾಗಿದ್ದರು. ಒಬ್ಬರಿಗೆ ಒಂದು ಹುದ್ದೆ ಎಂದು ಪರಿಗಣಿಸಿದಾಗ ಒಟ್ಟು 945 ಅಭ್ಯರ್ಥಿಗಳು ಆಯ್ಕೆಯಾಗಿದ್ದು, 399 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿತ್ತು. ಇನ್ನೂ 546 ಅಭ್ಯರ್ಥಿಗಳು ನೇಮಕಾತಿ ಆದೇಶಕ್ಕಾಗಿ ಕಾಯುತ್ತಿದ್ದಾರೆ.

ನೇಮಕಾತಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದು, ದಾಖಲೆಗಳ ಪರಿಶೀಲನೆ ಸಂದರ್ಭದಲ್ಲಿ ಎಲ್ಲವೂ ಸರಿಯಾಗಿವೆ ಎಂದು ಪ್ರಮಾಣೀಕರಿಸಿದ್ದರೂ, ಸೇವಾನುಭವ ಪ್ರಮಾಣ ಪತ್ರದಲ್ಲಿ 'ನಿರ್ದಿಷ್ಟ ಕಾರ್ಯಕ್ಷೇತ್ರದ ಕಾರ್ಯಾನುಭವದಲ್ಲಿ ಸ್ಪಷ್ಟತೆ ಇಲ್ಲ' ಎಂದು ಕಾರಣ ನೀಡಿ ಹಲವು ಅಭ್ಯರ್ಥಿಗಳನ್ನು ಕೆಪಿಎಸ್‌ಸಿ ತಿರಸ್ಕರಿಸಿತ್ತು. ಕೆಪಿಎಸ್‌ಸಿಯ ಈ ನಡೆಯನ್ನು ಪ್ರಶ್ನಿಸಿ ಹುದ್ದೆಗೆ ಆಯ್ಕೆಯಾಗದ ಅಭ್ಯರ್ಥಿಗಳು ಹೈಕೋರ್ಟ್‌ಮೆಟ್ಟಿಲೇರಿದ್ದರು.

'ಹುದ್ದೆಗಳಿಗೆ ಆಯ್ಕೆಯಾದವರಿಗೆ 'ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು' ಎಂಬ ಷರತ್ತು ವಿಧಿಸಿ ನೇಮಕಾತಿ ಆದೇಶ ನೀಡಲಾಗಿದೆ. ಹೀಗಾಗಿ, ಪಟ್ಟಿಯಿಂದ ಹೊರಗುಳಿಯುವವರು ಈ ಷರತ್ತಿಗೆ ಬದ್ಧರಾಗಿರಬೇಕಾಗಿದೆ' ಎಂದು ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಜಾವಾಣಿ ವಿಶೇಷ

### ಹೈಕೋರ್ಟ್ ಆದೇಶದಂತೆ ಪಟ್ಟಿ ಪರಿಷ್ಕರಣೆ

ಜೆಟಿಒ ನೇಮಕಾತಿ ಪ್ರಕರಣದಲ್ಲಿ, ಮೆರಿಟ್ ಪರಿಗಣಿಸದೆ, ಸೇವಾನುಭವದ ಪ್ರಮಾಣಪತ್ರದ ಆಧಾರದಲ್ಲಿ ಆಯ್ಕೆ ಪಟ್ಟಿ ಮಾಡಿರುವುದು ಸರಿಯಲ್ಲವೆಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಅಲ್ಲದೆ, ಸೇವಾನುಭವ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ಉದ್ಯೋಗದಾತರಿಂದ (ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಇಲಾಖೆ) ಸ್ಪಷ್ಟೀಕರಣ ಪಡೆದು, ಆಯ್ಕೆ ಪಟ್ಟಿ ಸಿದ್ಧಪಡಿಸುವಂತೆ ಮಾರ್ಚ್ 20ರಂದು ಮಧ್ಯಂತರ ಆದೇಶ ನೀಡಿತ್ತು. ಅದರಂತೆ ಸಿದ್ಧಪಡಿಸಿದ ಪರಿಷ್ಕೃತ ತಾತ್ಕಾಲಿಕ ಪಟ್ಟಿಯನ್ನು ಕೆಪಿಎಸ್‌ಸಿ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. 23 ವಿವಿಧ ವೃಂದಗಳಲ್ಲಿನ ಖಾಲಿ ಹುದ್ದೆಗಳಿಗೆ ಒಟ್ಟಿಗೆ ನೇಮಕಾತಿ ನಡೆದಿದ್ದು, ಒಂದಕ್ಕಿಂತ ಹೆಚ್ಚು ವೃತ್ತಿಗಳಿಗೆ ಆಯ್ಕೆಯಾದವರ ಆದ್ಯತೆಯನ್ನು ಪಡೆದು, ಮೂರು ತಿಂಗಳ ಒಳಗೆ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಬೇಕು ಎಂದೂ ಕೋರ್ಟ್ ಹೇಳಿದೆ.

## ಸುದ್ದಿ 2 ನಿಮಿಷ

### ಪ್ರಜ್ವಲ್ ಪ್ರಕರಣ–ಸ್ವತಂತ್ರ ತನಿಖೆ ಕೋರಿಕೆ: ಅರ್ಜಿ ವಿಲೇವಾರಿ

**ಬೆಂಗಳೂರು:** 'ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಆರೋಪದ ಪ್ರಕರಣಕ್ಕೆ ಸಂಬಂಧಿಸಿದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಲು ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ.

ಈ ಸಂಬಂಧ 'ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ'ದ (ಕೆಆರ್‌ಎಸ್‌ಪಿ) ಉಪಾಧ್ಯಕ್ಷ ಎಸ್.ಎಚ್.ಲಿಂಗೇಗೌಡ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್, 'ಪ್ರಜ್ವಲ್ ರೇವಣ್ಣ ಹಲವು ಮಹಿಳೆಯರನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಕೆಆರ್‌ಎಸ್ ಪಕ್ಷವು, ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿತ್ತು. ಆದರೆ, ಹೊಳೆನರಸೀಪುರ ಪೊಲೀಸರು, 'ಈಗಾಗಲೇ ದೂರು ದಾಖಲಾಗಿದ್ದು, ಮತ್ತೊಂದು ದೂರು ದಾಖಲಿಸಿಕೊಳ್ಳುವುದಿಲ್ಲ' ಎಂಬ ಹಿಂಬರಹ ನೀಡಿದ್ದರು. 'ಈ ಹಿಂಬರಹವನ್ನು ರದ್ದುಪಡಿಸಿ ದೂರು ದಾಖಲಿಸಿಕೊಳ್ಳಲು ಪೊಲೀಸರಿಗೆ ನಿರ್ದೇಶಿಸಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಎಸ್‌ಐಟಿ ಈಗಾಗಲೇ ಪ್ರಕರಣದ ತನಿಖೆ ನಡೆಸುತ್ತಿದೆ. ಈ ಹಂತದಲ್ಲಿ ನ್ಯಾಯಾಲಯ ಮಧ್ಯಪ್ರವೇಶಿಸುವ ಅವಶ್ಯಕತೆ ಇಲ್ಲ. ಅರ್ಜಿದಾರರಿಗೆ ಏನಾದರೂ ಕುಂದುಕೊರತೆ ಇದ್ದರೆ, ಅದರ ಬಗ್ಗೆ ಎಸ್‌ಐಟಿಯಲ್ಲೇ ದಾಖಲಿಸಿ ಅಲ್ಲಿಯೇ ಪರಿಹಾರ ಪಡೆಯಬಹುದು' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ಇತ್ಯರ್ಥಗೊಳಿಸಿತು.

### ನಾಗರಹೊಳೆ: ಹುಲಿ ಕಳೇಬರ ಪತ್ತೆ

**ಪಿರಿಯಾಪಟ್ಟಣ (ಮೈಸೂರು ಜಿಲ್ಲೆ):** ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಆನೆಚೌಕೂರು ವಲಯದಲ್ಲಿ ಹುಲಿ ಕಳೇಬರ ಪತ್ತೆಯಾಗಿದೆ. ಲಕ್ಷ್ಮೀಪುರ ಕಳ್ಳಬೇಟೆ ತಡೆ ಶಿಬಿರಕ್ಕೆ ಹೊಂದಿಕೊಂಡಿರುವ ಗೋವಿಂದೇಗೌಡ ಕಂಡಿ ಅರಣ್ಯ ಪ್ರದೇಶದಲ್ಲಿ ಮಂಗಳವಾರ ಸತ್ತ ಪ್ರಾಣಿಯ ವಾಸನೆ ಬಂದಿದ್ದು, ಪರಿಶೀಲಿಸಿದಾಗ ಕಳೇಬರ ಪತ್ತೆಯಾಯಿತು.

'ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ಮಾರ್ಗಸೂಚಿಯಂತೆ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. 5 ವರ್ಷದ ಹುಲಿಯು ವನ್ಯಪ್ರಾಣಿಯ ಜೊತೆಗಿನ ಕಾದಾಟದಿಂದ ಮೃತಪಟ್ಟಿದೆ' ಎಂದು ಪಶು ವೈದ್ಯಾಧಿಕಾರಿ ಡಾ.ರಮೇಶ್ ಮಾಹಿತಿ ನೀಡಿದ್ದಾರೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ, ಎಸಿಎಫ್ ಡಿ.ಎಸ್. ದಯಾನಂದ, ಡಾ.ಬಿ.ಸಿ.ಚಿಟ್ಟಿಯಪ್ಪ, ಕೃತಿಕಾ ಮೋಹನ್, ವಿ.ಬೋಸ್ ಮಾದಪ್ಪ, ತಮ್ಮಯ್ಯ, ಕೆ.ಇ.ಸುಬ್ರಮಣ್ಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

## ಕೃಪಾ ಫಡಕೆ ನೇಮಕ ರದ್ದು; ಶುಭಾ ಧನಂಜಯ್ ನೇಮಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎರಡು ತಿಂಗಳ ಹಿಂದಷ್ಟೇ ಸಂಗೀತ ನೃತ್ಯ ಅಕಾಡೆಮಿಗೆ ಡಾ. ಕೃಪಾ ಫಡಕೆ ಅವರನ್ನು ನೇಮಕ ಮಾಡಿದ್ದ ಸರ್ಕಾರ, ಆ ಆದೇಶವನ್ನು ರದ್ದು ಪಡಿಸಿ ಈ ಸ್ಥಾನಕ್ಕೆ ಶಿವಮೊಗ್ಗದ ಶುಭಾ ಧನಂಜಯ ಅವರನ್ನು ನೇಮಕ ಮಾಡಿದೆ.

ಕನ್ನಡ ಸಂಸ್ಕೃತಿ ಇಲಾಖೆಯಡಿ ಕಾರ್ಯನಿರ್ವಹಿಸುವ ವಿವಿಧ ಅಕಾಡೆಮಿ, ಪ್ರಾಧಿಕಾರಗಳಿಗೆ ಇದೇ ವರ್ಷದ ಮಾರ್ಚ್ 15ರಂದು ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿತ್ತು. ನೇಮಕಾತಿ ಆದೇಶದ ಬೆನ್ನಲ್ಲೇ, ಚುನಾವಣಾ ನೀತಿ ಸಂಹಿತೆ ಜಾರಿಯಾಗಿದ್ದರಿಂದಾಗಿ ಯಾರೊಬ್ಬರೂ ಅಧಿಕಾರ ಸ್ವೀಕರಿಸಿರಲಿಲ್ಲ.

ಆದೇಶ ಹೊರಬಿದ್ದ ಬೆನ್ನಲ್ಲೇ, 'ಸಂಘಪರಿವಾರದ ಚಿಂತನೆಯಿರುವವರನ್ನು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನೇಮಕ ಮಾಡಲಾಗಿದೆ' ಎಂದು ಕೆಲವರು ಹುಯಿಲೆಬ್ಬಿಸಿದ್ದರು. ಸಾಮಾಜಿಕ ಮಾಧ್ಯಮಗಳಲ್ಲಿ ಈ ಬಗ್ಗೆ ಚರ್ಚೆ ನಡೆದಿತ್ತು. ಜಾತ್ಯತೀತ, ಸೌಹಾರ್ದತೆಯ ಆಶಯ ಇರುವವರನ್ನು ನೇಮಕ ಮಾಡಿ ಎಂದು ಆಗ್ರಹಿಸಿದ್ದ ಕೆಲವರು, ನೇಮಕವಾದವರು ಬಿಜೆಪಿಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿರುವ ಚಿತ್ರಗಳನ್ನೂ ಲಗತ್ತಿಸಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬುಧವಾರ ಹೊರಡಿಸಿದ ಆದೇಶದಲ್ಲಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷೆ ಮೈಸೂರಿನ ಡಾ. ಕೃಪಾ ಫಡಕೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸದಸ್ಯೆ ವಿಜಯಲಕ್ಷ್ಮಿ ಕೌಟಗಿ ಹಾಗೂ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯ ಮಾಲೂರು ವಿಜಿ ಅವರ ನಾಮನಿರ್ದೇಶನವನ್ನು ರದ್ದುಗೊಳಿಸಲಾಗಿದೆ ಎಂದು ತಿಳಿಸಲಾಗಿದೆ. ಇವರ ಪೈಕಿ, ಫಡಕೆ ಮತ್ತು ಕೌಟಗಿ ನೇಮಕಕ್ಕೆ ಆಕ್ಷೇಪ ವ್ಯಕ್ತವಾಗಿತ್ತು. ಮಾಲೂರು ವಿಜಿ ಅವರು ಹಿಂದಿನ ಅವಧಿಯಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಕಾರಣಕ್ಕೆ ಬದಲಾವಣೆ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸದಸ್ಯರಾಗಿ ರಿಪ್ಪನ್‌ಪೇಟೆಯ ಸರ್ಕಾರಿ ಪದವಿ ಕಾಲೇಜಿನ ಇಂಗ್ಲಿಷ್ ಉಪನ್ಯಾಸಕ ಬಿ.ಎಲ್. ರಾಜು ಮತ್ತು ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿ ರಂಗ ಕಲಾವಿದ ಜಿ.ವಿ. ರವೀಂದ್ರನಾಥ (ರವೀಂದ್ರನಾಥ ಸಿರಿವರ) ಅವರನ್ನು ನೇಮಿಸಿದೆ.

## ತುಂಗಾ ಜಲಾಶಯ ಬಹುತೇಕ ಭರ್ತಿ

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** ತುಂಗಾ, ಭದ್ರಾ ಹಾಗೂ ಲಿಂಗನಮಕ್ಕಿ ಜಲಾನಯನ ಪ್ರದೇಶಗಳಲ್ಲಿ ಮುಂಗಾರು ಚುರುಕುಗೊಂಡಿದ್ದು, ಈ ಜಲಾಶಯಗಳಲ್ಲಿ ಒಳಹರಿವು ಹೆಚ್ಚಳವಾಗಿದೆ.ಗಾಜನೂರಿನ ತುಂಗಾ ಜಲಾಶಯ ಬಹುತೇಕ ಭರ್ತಿಯಾಗುವ ಹಂತ ತಲುಪಿದೆ.

ತುಂಗಾ ಜಲಾಶಯದ ಗರಿಷ್ಠ ಮಟ್ಟ 588.24 ಮೀಟರ್ ಇದ್ದು, ಬುಧವಾರ ಜಲಾಶಯದಲ್ಲಿ ನೀರಿನ ಮಟ್ಟ 588.11 ಮೀಟರ್ ಇತ್ತು. ಒಳಹರಿವು 1,765 ಕ್ಯುಸೆಕ್ ಇದೆ. ಜಲಾಶಯದಿಂದ ನದಿಗೆ 1,700 ಕ್ಯುಸೆಕ್ ನೀರು ಹರಿಯಬಿಡಲಾಗುತ್ತಿದೆ. 3.25 ಟಿಎಂಸಿ ಸಾಮರ್ಥ್ಯದ ಜಲಾಶಯ ಈ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲೇ ಮೊದಲು ಭರ್ತಿಯಾದ ಜಲಾಶಯ ಎಂಬ ಶ್ರೇಯಕ್ಕೆ ಪಾತ್ರವಾಗುವ ಹಂತದಲ್ಲಿದೆ.

ತುಂಗಾ ಜಲಾಶಯ ಕಳೆದ ವರ್ಷ ಜುಲೈ 5ರಂದು ಭರ್ತಿಯಾಗಿತ್ತು. ಆದರೆ, ಈ ಬಾರಿ ಮಳೆ ಬೇಗನೇ ಶುರುವಾಗಿದ್ದರಿಂದ ಒಂದು ತಿಂಗಳು ಮೊದಲೇ ಭರ್ತಿ ಹಂತಕ್ಕೆ ಬಂದಿದೆ ಎಂದು ತುಂಗಾ ಜಲಾಶಯ ಯೋಜನೆಯ ಕಾರ್ಯನಿರ್ವಾಹಕ ಎಂಜಿನಿಯರ್ ತಿಪ್ಪಾ ನಾಯ್ಕ 'ಪ್ರಜಾವಾಣಿ'ಗೆ ತಿಳಿಸಿದರು.

**ಬೀದರ್‌ವರದಿ:**ಜಿಲ್ಲೆಯಾದ್ಯಂತಮಂಗಳವಾರ ರಾತ್ರಿ ಭಾರಿ ಮಳೆಯಾಗಿದ್ದು, ಬಸವಕಲ್ಯಾಣ ತಾಲ್ಲೂಕಿನ ಕೋಹಿನೂರ್ ಹೋಬಳಿಯಲ್ಲಿ ಅಟ್ಟೂರ್ ಕೆರೆ ಒಡೆದು ಅಪಾರ ಪ್ರಮಾಣದ ನೀರು ಹರಿದುಹೋಗಿದೆ.

ಕೆರೆ ಒಡೆದು ಅಪಾರ ಪ್ರಮಾಣದ ನೀರಿನೊಂದಿಗೆ 200 ಎಕರೆ ಪ್ರದೇಶದ ಹೊಲಗಳ ಫಲವತ್ತಾದ ಮಣ್ಣು ಕೊಚ್ಚಿಕೊಂಡು ಹೋಗಿದೆ. ಅಟ್ಟೂರ್ ತಾಂಡಾ ಸೇರಿದಂತೆ ತಾಲ್ಲೂಕಿನ ಹತ್ತು ಸೇತುವೆಗಳು ಕುಸಿದಿರುವುದರಿಂದ ಸಂಚಾರ ಕಡಿತಗೊಂಡಿದೆ.

ಬಸವಕಲ್ಯಾಣ ತಾಲ್ಲೂಕಿನ ಕೋಹಿನೂರ್ ಹೋಬಳಿಯಲ್ಲಿ 18 ಸೆಂ.ಮೀ. ಮಳೆಯಾಗಿದೆ. ಮಹಾರಾಷ್ಟ್ರದಿಂದ ಮಾಂಜ್ರಾ ನದಿಗೆ ನೀರು ಹರಿಸಲಾಗಿದ್ದು, ಕೊಂಗಳಿ ಬ್ರಿಜ್ ಕಂ ಬ್ಯಾರೇಜ್‌ನಿಂದ ತಡವಾಗಿ ಗೇಟ್‌ಗಳನ್ನು ತೆರೆದ ಕಾರಣ ನೂರಾರು ಎಕರೆ ಪ್ರದೇಶದ ಹೊಲಗಳಿಗೆ ನೀರು ನುಗ್ಗಿದೆ. ಬ್ರಿಜ್ ಕಂ ಬ್ಯಾರೇಜಿನ ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿದ್ದರಿಂದ ವಿದ್ಯುತ್ ಪೂರೈಕೆ ಕಡಿತಗೊಳಿಸಲಾಗಿತ್ತು. ಗೇಟ್ ತೆರೆಯಲು ಸಾಧ್ಯವಾಗಿರಲಿಲ್ಲ. ಅಧಿಕಾರಿಗಳ ಮನವೊಲಿಸಿ ಗೇಟ್ ತೆರೆದು ನೀರು ಹರಿಸುವಷ್ಟರಲ್ಲಿ ಗದ್ದೆಗಳಿಗೆ ನೀರು ನುಗ್ಗಿದೆ.

ಕಲಬುರಗಿ ಜಿಲ್ಲೆಯಾದ್ಯಂತ ಮುಂಗಾರು ಬಿರುಸಿನ ಮಳೆಯನ್ನು ತಂದಿದೆ. ಮಂಗಳವಾರ ಸುರಿದ ಮಳೆಗೆ ಕೊಳ್ಳಗಳು ತುಂಬಿ ಹರಿದವು.

ಕೊಪ್ಪಳ ಜಿಲ್ಲೆಯಲ್ಲಿ ಬುಧವಾರ ಬಿರುಸಿನ ಮಳೆಯಾಯಿತು. ತಾಲ್ಲೂಕಿನ ಮುನಿರಾಬಾದ್ ಹಿಟ್ನಾಳ ಹೋಬಳಿ ವ್ಯಾಪ್ತಿಯಲ್ಲಿ ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿವೆ. ಮಡಿಕೇರಿಯಲ್ಲಿ ಬುಧವಾರ ಬೆಳಿಗ್ಗೆ ಧಾರಾಕಾರವಾಗಿ ಮಳೆ ಸುರಿದು ನಂತರ ಬಿಡುವು ನೀಡಿತು. ಶನಿವಾರ ಸಂತೆಯಲ್ಲಿ ಮಧ್ಯಾಹ್ನ ಮಳೆ ಸುರಿಯಿತು.

**ಹುಬ್ಬಳ್ಳಿ ವರದಿ:** ಗದಗ, ಉತ್ತರ ಕನ್ನಡ, ಬಾಗಲಕೋಟೆ, ವಿಜಯನಗರ ಜಿಲ್ಲೆಯ ಕೆಲವೆಡೆ ಮಳೆಯಾಯಿತು. ಮಂಗಳೂರು ವರದಿ: ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬುಧವಾರ ಮೋಡ ಕವಿದ ವಾತಾವರಣವಿತ್ತು. ಕೆಲವೆಡೆ ಸಾಧಾರಣ ಮಳೆಯಾಯಿತು.

ಶಿವಮೊಗ್ಗ ಸಮೀಪದ ಗಾಜನೂರಿನ ತುಂಗಾ ಜಲಾಶಯ ಬಹುತೇಕ ಭರ್ತಿಯಾಗಿದ್ದು, ಬುಧವಾರ ಕಂಡು ಬಂದ ಜಲಾಶಯದ ನೋಟ

## ಪಿಒಪಿ ಗಣಪತಿ ತಯಾರಿಸದಂತೆ ಈಗಲೇ ನೋಟಿಸ್ - ಖಂಡ್ರೆ

ಪ್ರಜಾವಾಣಿ ವಾರ್ತೆ

ಈಶ್ವರ ಬಿ. ಖಂಡ್ರೆ

**ಬೆಂಗಳೂರು:** 'ಪ್ಲಾಸ್ಟರ್ ಆಫ್ ಪ್ಯಾರೀಸ್ (ಪಿಒಪಿ) ಗಣಪತಿ ಮೂರ್ತಿ ತಯಾರಿಸದಂತೆ ಈಗಿನಿಂದಲೇ ನೋಟಿಸ್ ನೀಡಬೇಕು' ಎಂದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳಿಗೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದರು.

ಮಂಡಳಿಯ ಪ್ರಗತಿ ಪರಿಶೀಲನೆಯನ್ನು ಬುಧವಾರ ನಡೆಸಿದ ಸಚಿವರು, 'ಪಿಒಪಿ ಗಣಪತಿ ಮೂರ್ತಿಗಳ ವಿಸರ್ಜನೆಯಿಂದ ಜಲಮೂಲಗಳು ಕಲುಷಿತಗೊಳ್ಳುತ್ತಿವೆ. ಮೊದಲೇ ತಿಳಿಸಿದ್ದರೆ, ಪಿಒಪಿ ಗಣಪತಿ ಮೂರ್ತಿಗಳನ್ನು ತಯಾರಿಸುತ್ತಿರಲಿಲ್ಲ ಎಂದು ಈ ಮಾದರಿಯ ಗಣಪತಿ ತಯಾರಕರು ಪ್ರತಿ ವರ್ಷ ಹೇಳುತ್ತಾರೆ. ಹಾಗಾಗಿ, ತಯಾರಿಕೆ ಆರಂಭಿಸುವ ಮೊದಲೇ ನೋಟಿಸ್ ನೀಡುವ ಕೆಲಸ ಮಾಡಿ' ಎಂದು ನಿರ್ದೇಶನ ನೀಡಿದರು.

**ಪಟಾಕಿ ಮಾರಾಟಗಾರರಿಗೂ ನೋಟಿಸ್:** 'ಹಸಿರು ಪಟಾಕಿ ಹೊರತಾಗಿ ಹೆಚ್ಚು ಮಾಲಿನ್ಯಕಾರಕ ಸಾಮಾನ್ಯ ಪಟಾಕಿ ಮಾರಾಟ, ದಾಸ್ತಾನು ಮಾಡದಂತೆ ಪಟಾಕಿ ಮಾರಾಟಗಾರರಿಗೆ ನೋಟಿಸ್ ನೀಡಬೇಕು. ಬಿಬಿಎಂಪಿ ವ್ಯಾಪ್ತಿಯಲ್ಲಿ ವಿವಿಧ ಆಟದ ಮೈದಾನಗಳಲ್ಲಿ ಪಟಾಕಿ ಮಳಿಗೆ ತೆರೆಯಲು ಸ್ಥಳೀಯ ಸಂಸ್ಥೆಗಳಿಂದ ಅನುಮತಿ ಪಡೆಯುವ ಪಟಾಕಿ ಮಾರಾಟಗಾರರ ವಿಳಾಸ ಪಡೆದು, ಹಸಿರು ಪಟಾಕಿ ಮಾತ್ರ ಮಾರಾಟ ಮಾಡುವಂತೆ ಸೂಚಿಸಬೇಕು' ಎಂದು ಖಂಡ್ರೆ ಆದೇಶಿಸಿದರು.

'ರಾಜ್ಯದಾದ್ಯಂತ ಇರುವ ಕೆರೆಕಟ್ಟೆಗಳ ನೀರನ್ನು ನಿಯಮಿತವಾಗಿ ಪರೀಕ್ಷೆ ಮಾಡಬೇಕು. ಕೈಗಾರಿಕಾ ವಲಯಗಳ ಸುತ್ತಮುತ್ತ ರಾಜಕಾಲುವೆ, ನದಿಮೂಲ, ಹಳ್ಳಗಳಿಗೆ ನೇರವಾಗಿ ತ್ಯಾಜ್ಯ ಹರಿಸುತ್ತಿರುವ ಪ್ರಕರಣಗಳನ್ನು ಪತ್ತೆ ಹಚ್ಚಿ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದೂ ತಿಳಿಸಿದರು.

**ಸ್ಥಳೀಯ ಸಂಸ್ಥೆ ವಿರುದ್ಧ ಮೊಕದ್ದಮೆ:** 'ಸ್ಪಷ್ಟ ಸೂಚನೆ, ನೋಟಿಸ್‌ಗಳ ಹೊರತಾಗಿಯೂ ಜಲತ್ಯಾಜ್ಯ ಸಂಸ್ಕರಿಸಲು ಎಸ್‌ಟಿಪಿ ಅಳವಡಿಸದ, ಅಳವಡಿಸಿದ ಎಸ್‌ಟಿಪಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ದೂರುಗಳಿವೆ. ಈ ಬಗ್ಗೆ ನಿಯಮಿತವಾಗಿ ಪರಿಶೀಲಿಸಿ, ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ವಿರುದ್ಧ ಮೊಕದ್ದಮೆ ದಾಖಲಿಸಬೇಕು. ಜಲ ಮೂಲಗಳಿಗೆ ಸಂಪರ್ಕ ಇರುವ ಮಳೆ ನೀರು ಕಾಲುವೆ, ಚರಂಡಿಗಳಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ಮಳೆಗಾಲಕ್ಕೆ ಮೊದಲು ಮತ್ತು ನಿಯಮಿತವಾಗಿ ತೆರವು ಮಾಡಿ ನೀರಿನ ಗುಣಮಟ್ಟ ಕಾಪಾಡುವಂತೆ ನೋಟಿಸ್ ನೀಡಬೇಕು' ಎಂದು ಸಚಿವರು ಸೂಚನೆ ನೀಡಿದರು.

ಮಂಡಳಿಯ ಅಧಿಕಾರೇತರ ಸದಸ್ಯರಾದ ಶರಣಕುಮಾರ್ ಮೋದಿ, ಡಾ. ಪ್ರದೀಪ್ ಸಿ, ಮರಿಸ್ವಾಮಿ ಗೌಡ, ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿ ಬಿ.ಪಿ. ರವಿ ಸಭೆಯಲ್ಲಿ ಇದ್ದರು.

## ಮತ್ತೆ ಏಳು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

**ಮುಡಿಪು (ದಕ್ಷಿಣ ಕನ್ನಡ):** ಬಿಜೆಪಿಯ ಇಬ್ಬರು ಕಾರ್ಯಕರ್ತರಿಗೆ ಉಳ್ಳಾಲ ತಾಲ್ಲೂಕಿನ ಬೋಳಿಯಾರ್‌ನಲ್ಲಿ ಚೂರಿ ಇರಿದ ಪ್ರಕರಣ ಸಂಬಂಧ ಮತ್ತೆ ಏಳು ಮಂದಿ ಆರೋಪಿಗಳನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

'ಬೋಳಿಯಾರ್ ನಿವಾಸಿಗಳಾದ ತಾಜುದ್ದೀನ್ ಅಲಿಯಾಸ್ ಸಿದ್ದಿಕ್, ಸರ್ವಾನ್, ಮುಬಾರಕ್, ಅಶ್ರಫ್, ತಲ್ಹತ್, ಕೋಳಿ ಇರ್ಷಾದ್ ಮತ್ತು ಇಮ್ರಾನ್ ಅವರನ್ನು ಬಂಧಿಸಲಾಗಿದೆ. ಬಂಧಿತರ ಸಂಖ್ಯೆ 13ಕ್ಕೆ ಏರಿದೆ. ಇನ್ನಷ್ಟು ಆರೋಪಿಗಳ ಬಂಧನಕ್ಕೆ ಕ್ರಮವಹಿಸಲಾಗಿದೆ' ಎಂದು ಮಂಗಳೂರು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

ಬೋಳಿಯಾರ್‌ನ ಮೊಹಮ್ಮದ್ ಶಾಕಿರ್, ಅಬ್ದುಲ್ ರಜಾಕ್, ಅಬೂಬಕರ್ ಸಿದ್ಧಿಕ್, ಸವದ್, ಮೋನು ಅಲಿಯಾಸ್ ಹಫೀಜ್ ಹಾಗೂ ಅಬೂಬಕರ್ ಅವರನ್ನು ಪೊಲೀಸರು ಈ ಹಿಂದೆಯೇ ಬಂಧಿಸಿದ್ದರು.

ಮೋದಿ ನೇತೃತ್ವದ ಸರ್ಕಾರ ಸತತ ಮೂರನೇ ಸಲ ಅಧಿಕಾರಕ್ಕೆ ಬಂದಿದ್ದಕ್ಕೆ ಬಿಜೆಪಿ ವತಿಯಿಂದ ಬೋಳಿಯಾರ್‌ನಲ್ಲಿ ವಿಜಯೋತ್ಸವ ಮೆರವಣಿಗೆಯನ್ನು ಭಾನುವಾರ ರಾತ್ರಿ ಏರ್ಪಡಿಸಲಾಗಿತ್ತು. ಮೆರವಣಿಗೆಯಲ್ಲಿ ಸಾಗಿದವರು ಅಲ್ಲಿನ ಮೊಹಿಯುದ್ದೀನ್ ಜುಮ್ಮಾ ಮಸೀದಿ ಎದುರು ಪ್ರಚೋದನಕಾರಿ ಘೋಷಣೆಗಳನ್ನು ಕೂಗಿದ್ದರು ಎನ್ನಲಾಗಿದ್ದು, ಮೆರವಣಿಗೆ ಬಳಿಕ ಧರ್ಮನಗರದ ಹರೀಶ್, ನಂದನ್ ಕುಮಾರ್ ಅವರಿಗೆ ಮುಸ್ಲಿಂ ಯುವಕರ ತಂಡ ಬೋಳಿಯಾರ್‌ನ ಸಮಾಧಾನ್ ಬಾರ್ ಮುಂಭಾಗದಲ್ಲಿ ಚೂರಿಯಿಂದ ಇರಿದಿತ್ತು.

ವಿಜಯೋತ್ಸವದ ಸಂದರ್ಭದಲ್ಲಿ ಮಸೀದಿಯ ಮುಂದೆ ಪ್ರಚೋದನಕಾರಿ ಘೋಷಣೆ ಕೂಗಿದ ಕುರಿತು ಮಸೀದಿ ಆಡಳಿತ ಸಮಿತಿಯ ಅಧ್ಯಕ್ಷರು ದೂರು ನೀಡಿದ್ದು, ಬಿಜೆಪಿ ಕಾರ್ಯಕರ್ತರಾದ ಸುರೇಶ್, ವಿನಯ್ , ಸುಭಾಷ್, ರಂಜಿತ್, ಧನಂಜಯ ಎಂಬವರ ವಿರುದ್ಧವೂ ಪ್ರಕರಣ ದಾಖಲಾಗಿದೆ.

## ಪೋಷಕರಿಗೆ ಬೆದರಿಕೆ ಕರೆ; ಹಣಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಕೆಲವು ಕಾಲೇಜುಗಳ ವಿದ್ಯಾರ್ಥಿಗಳ ಪೋಷಕರಿಗೆ ಪೊಲೀಸರ ಸೋಗಿನಲ್ಲಿ ಮಂಗಳವಾರ ಮತ್ತು ಬುಧವಾರ ಬೆದರಿಕೆ ಕರೆಗಳು ಬಂದಿವೆ. ವಾಟ್ಸ್ ಆ್ಯಪ್ ಬಳಸಿ ಕರೆ ಮಾಡಿದ ಕಿಡಿಗೇಡಿಗಳು ಹಿಂದಿ ಭಾಷೆಯಲ್ಲಿ ಮಾತನಾಡಿದ್ದು, 'ನಿಮ್ಮ ಮಗ/ ಮಗಳನ್ನು ಬಂಧಿಸಿದ್ದೇವೆ. ಇಂತಿಷ್ಟು ಹಣ ನೀಡಿದರೆ ಎಫ್‌ಐಆರ್ ದಾಖಲಿಸದೇ ಬಿಟ್ಟುಬಿಡುತ್ತೇವೆ' ಎಂದು ಹೇಳಿದ್ದಾರೆ.

'ಪೋಲೆಂಡ್, ಪಾಕಿಸ್ತಾನ ಮೊದಲಾದ ವಿದೇಶಿ ಸಂಖ್ಯೆಗಳಿಂದ ಬೆದರಿಕೆ ಕರೆಗಳು ಬಂದಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆಗೆ ಕ್ರಮವಹಿಸಿದ್ದೇವೆ' ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

'ಕರೆ ಮಾಡಿದ ಕಿಡಿಗೇಡಿಗಳು ಹಿಂದಿಯಲ್ಲಿ ಮಾತನಾಡಿ ತಮ್ಮನ್ನು ಪೊಲೀಸ್ ಅಧಿಕಾರಿಗಳು ಎಂದು ಪರಿಚಯಿಸಿಕೊಂಡಿದ್ದಾರೆ. 'ನಿಮ್ಮ ಮಗ/ ಮಗಳನ್ನು ಪ್ರಕರಣವೊಂದರಲ್ಲಿ ಬಂಧಿಸಿದ್ದೇವೆ. ಎಫ್‌ಐಆರ್ ದಾಖಲಿಸದೇ ಅವರನ್ನು ಬಿಟ್ಟುಬಿಡಬೇಕಾದರೆ ನೀವು ಹಣ ನೀಡಬೇಕು' ಎಂದು ಬೇಡಿಕೆ ಇಟ್ಟಿದ್ದಾರೆ. ಕೆಲವು ಪೋಷಕರು ಈ ಬಗ್ಗೆ ಪರಿಶೀಲಿಸಿದಾಗ ಅವರ ಮಕ್ಕಳು ಶಾಲೆಯಲ್ಲಿ ಸುರಕ್ಷಿತವಾಗಿದ್ದು, ಇದು ಹುಸಿ ಕರೆ ಎಂದು ಗೊತ್ತಾಗಿದೆ' ಎಂದು ಅವರು ವಿವರಿಸಿದ್ದಾರೆ.

'ತರಗತಿಗಳು ನಡೆಯುತ್ತಿದ್ದ ಅವಧಿಯಲ್ಲೇ ಕರೆಗಳನ್ನು ಮಾಡಲಾಗಿದೆ. ' ಎಂದು ಅವರು ತಿಳಿಸಿದ್ದಾರೆ.

'ಕರೆ ಬಂದ ಸಂಖ್ಯೆಯ ಡಿಪಿಯಲ್ಲಿ ಪೊಲೀಸ್ ಅಧಿಕಾರಿಗಳ ಭಾವಚಿತ್ರಗಳಿದ್ದವು. ಅವುಗಳನ್ನು ನೋಡಿ ಕೆಲವು ಪೋಷಕರು ನಿಜಕ್ಕೂ ಪೊಲೀಸರಿಂದಲೇ ಕರೆ ಬಂದಿರಬಹುದು ಎಂದು ಭಾವಿಸಿದ್ದರು. ಬೆದರಿಕೆ ಕರೆಯನ್ನು ನಂಬಿ ಹಣ ಕಳೆದುಕೊಂಡ ಬಗ್ಗೆ ದೂರು ಬಂದಿಲ್ಲ' ಎಂದು ಅಧಿಕಾರಿಯೊಬ್ಬರು ಹೇಳಿದರು.

### ಪೋಷಕರ ಮೊಬೈಲ್ ಸಂಖ್ಯೆ ಸಿಕ್ಕಿದ್ದು ಹೇಗೆ?

'ಈ ರೀತಿ ಬೆದರಿಕೆ ಕರೆ ಬಂದ ಹೆಚ್ಚಿನ ಪೋಷಕರ ವಿದ್ಯಾರ್ಥಿಗಳು ಪ್ರಥಮ ಪಿ.ಯು. ತರಗತಿಯಲ್ಲಿ ಓದುತ್ತಿದ್ದಾರೆ. ನಗರದ ಬೇರೆ ಬೇರೆ ಕಾಲೇಜುಗಳ ವಿದ್ಯಾರ್ಥಿಗಳ ಪೋಷಕರಿಗೆ ಕರೆ ಬಂದಿದೆ. ಶಾಲಾ ದಾಖಲಾತಿಯಲ್ಲಿ ವಿದ್ಯಾರ್ಥಿಯ ಹೆಸರು ಹಾಗೂ ಪೋಷಕರ ಹೆಸರು ಹೇಗೆ ಇದೆಯೋ ಅದೇ ರೀತಿ ಅವರು ಹೆಸರನ್ನು ತಿಳಿಸಿದ್ದಾರೆ. ಅವರಿಗೆ ವಿದ್ಯಾರ್ಥಿಗಳ ಪೋಷಕರ ಮೊಬೈಲ್ ಸಂಖ್ಯೆ ಸಿಕ್ಕಿದ್ದು ಹೇಗೆ' ಎಂದು ಪೋಷಕರೊಬ್ಬರು ಪ್ರಶ್ನಿಸಿದರು.

### 'ಗೊತ್ತಿಲ್ಲದ ವಿದೇಶಿ ಕರೆಗೆ ಉತ್ತರಿಸದಿರಿ'

'ಇಂತಹ ಬೆದರಿಕೆ ಹುಸಿ ಕರೆ ಬಂದರೆ ಗಾಬರಿಗೆ ಒಳಗಾಗಬೇಡಿ. ತಕ್ಷಣ ಸ್ಥಳೀಯ ಪೊಲೀಸರಿಗೆ, ಸೈಬರ್ ಠಾಣೆಗೆ ಮಾಹಿತಿ ನೀಡಿ. ಅಪರಿಚಿತ ವಿದೇಶಿ ಸಂಖ್ಯೆಯಿಂದ ಇಂತಹ ವಾಟ್ಸ್‌ಆ್ಯಪ್ ಕರೆ ಬಂದರೆ ಅದಕ್ಕೆ ಉತ್ತರಿಸಬೇಡಿ' ಎಂದು ಅನುಪಮ್ ಅಗರ್ವಾಲ್ ಸಲಹೆ ನೀಡಿದ್ದಾರೆ.

ಶಿಕ್ಷಣ ಸಂಸ್ಥೆಗಳು ಈ ಮಾಹಿತಿಯನ್ನು ವಿದ್ಯಾರ್ಥಿಗಳ ಪೋಷಕರಿಗೆ ತಿಳಿಸುವಂತೆಯೂ ಕೋರಿದ್ದಾರೆ.

## ಕಲುಷಿತ ನೀರು ಸೇವನೆ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಮೀನಾಕ್ಷಿ

**ತುಮಕೂರು:** ಮಧುಗಿರಿ ತಾಲ್ಲೂಕಿನ ಚಿನ್ನೇನಹಳ್ಳಿ ಗ್ರಾಮದಲ್ಲಿ ಸೋಮವಾರ (ಜೂನ್ 10) ಕಲುಷಿತ ನೀರು ಸೇವಿಸಿ ಅಸ್ವಸ್ಥರಾದ ಮೂರು ವರ್ಷದ ಮಗು ಸೇರಿ ಮೂವರು ಬುಧವಾರ ಸಾವನ್ನಪ್ಪಿದ್ದಾರೆ.

ಮಧುಗಿರಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದ ಮೀನಾಕ್ಷಿ (3) ಮತ್ತು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಿಕ್ಕದಾಸಪ್ಪ (76) ಮತ್ತು ಪೆದ್ದಣ್ಣ (74) ಮೃತಪಟ್ಟಿದ್ದಾರೆ.

ಮೀನಾಕ್ಷಿಯನ್ನು ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಬಳಿಕ ಮನೆಗೆ ಕರೆದೊಯ್ಯಲಾಗಿತ್ತು. ಮತ್ತೆ ಅಸ್ವಸ್ಥಳಾಗಿದ್ದರಿಂದ ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟಿದ್ದಾಳೆ.

ಚಿನ್ನೇನಹಳ್ಳಿ ಗ್ರಾಮದ ಓವರ್ ಹೆಡ್ ಟ್ಯಾಂಕ್ ಮತ್ತು ಶುದ್ಧ ನೀರಿನ ಘಟಕದಿಂದ ಪೂರೈಸುವ ನೀರು ಸೇವಿಸಿ ಗ್ರಾಮದ 98 ಜನ ಅಸ್ವಸ್ಥರಾಗಿದ್ದರು. ಆ ಪೈಕಿ 59 ಜನ ಗುಣಮುಖರಾಗಿದ್ದಾರೆ.

### ಧಾರ್ಮಿಕ ವಿಧಿಯಿಲ್ಲದೆ ಅಂತ್ಯಕ್ರಿಯೆ; ಸರ್ಕಾರಿ ಗೌರವ

## ಸರೋದ್ ಮಾಂತ್ರಿಕನಿಗೆ ವಿದಾಯ

ಪ್ರಜಾವಾಣಿ ವಾರ್ತೆ

**ಮೈಸೂರು:** ಮಂಗಳವಾರ ನಿಧನರಾದ ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ ತಾರಾನಾಥ ಅವರ ಅಂತ್ಯಕ್ರಿಯೆಯನ್ನು ಬುಧವಾರ ಇಲ್ಲಿನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯ ಅನಿಲ ಚಿತಾಗಾರದಲ್ಲಿ ಶಿಷ್ಯಂದಿರು, ಸಂಗೀತ– ಸಾಹಿತ್ಯ ಅಭಿಮಾನಿಗಳ ಸಮ್ಮುಖದಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಿಸಲಾಯಿತು.

ಪತ್ನಿ ಮಾಧವಿ ಹಾಗೂ ಪುತ್ರ ಚೇತನ್ ಅನಾರೋಗ್ಯದ ಕಾರಣ ಅಮೆರಿಕದಿಂದ ಬರಲಿಲ್ಲ. ವಿಡಿಯೊ ಕಾಲ್ ಮೂಲಕವೇ ಅಂತ್ಯಕ್ರಿಯೆಯನ್ನು ನೋಡಿದರು. ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ಗೌರವ ಸಲ್ಲಿಸಿದರು. ಪೊಲೀಸ್ ಬ್ಯಾಂಡ್ ರಾಷ್ಟ್ರಗೀತೆ ನುಡಿಸಿತು.

ಕೃಷ್ಣಾ ಮನವಳ್ಳಿ, ಅರಣ್ಯ ಕುಮಾರ್, ಸೋಹನ್ ನೀಲಕಂಠ, ಸಚಿನ್ ಹಂಪೆ ಸೇರಿದಂತೆ ಸಂಗೀತ– ಸಾಹಿತ್ಯ ಕ್ಷೇತ್ರದ ಶಿಷ್ಯಂದಿರು ಅಂತಿಮ ನಮನ ಸಲ್ಲಿಸಿದರು. ಧಾರ್ಮಿಕ ವಿಧಿವಿಧಾನವಿಲ್ಲದೇ ತಾರಾನಾಥರ ಇಷ್ಟದಂತೆಯೇ ಅಂತ್ಯಕ್ರಿಯೆ ನಡೆಯಿತು.

ಲೇಖಕರಾದ ದೇವನೂರ ಮಹಾದೇವ, ಓ.ಎಲ್.ನಾಗಭೂಷಣ ಸ್ವಾಮಿ, ರಹಮತ್ ತರೀಕೆರೆ, ಜಯಂತ ಕಾಯ್ಕಿಣಿ, ಅಬ್ದುಲ್ ರಶೀದ್, ಸುಮಂಗಲಾ, ಸಂಗೀತಗಾರರಾದ ಫಯಾಜ್ ಖಾನ್, ವೀರಭದ್ರಯ್ಯ ಹಿರೇಮಠ ಸೇರಿದಂತೆ ನೂರಾರು ಮಂದಿ ಬಂದಿದ್ದರು.

ಸರ್ಕಾರದ ಪರವಾಗಿ ಗೌರವ ಸಲ್ಲಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಾತನಾಡಿ, 'ಕುಟುಂಬದ ಸದಸ್ಯರೊಂದಿಗೆ ಚರ್ಚಿಸಿ ರಾಜೀವ ತಾರಾನಾಥರ ಸ್ಮಾರಕವನ್ನು ನಿರ್ಮಿಸಲಾಗುವುದು. ಆಸ್ಪತ್ರೆ ವೆಚ್ಚ ₹ 30 ಲಕ್ಷವಾಗಿದ್ದು, ಸರ್ಕಾರವೇ ಭರಿಸಲಿದೆ' ಎಂದರು.

ಸಚಿವ ಡಾ.ಎಚ್‌.ಸಿ.ಮಹದೇವಪ್ಪ, ಲೇಖಕ ಚಂದ್ರಶೇಖರ ಕಂಬಾರ,ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ರಾಜೀವ ತಾರಾನಾಥರ ಅಂತಿಮ ದರ್ಶನ ಪಡೆದರು. ಕೆ.ಎಂ.ಗಾಯತ್ರಿ, ಎಂ.ಡಿ.ಸುದರ್ಶನ್, ಕೃಷ್ಣಾ ಮನವಳ್ಳಿ, ವಿಜಯಮ್ಮ ಹಾಜರಿದ್ದರು

### ಪಿಪಿಪಿ ಮಾದರಿಯಲ್ಲಿ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಯೋಜನೆ – ಎಚ್‌.ಕೆ. ಪಾಟೀಲ

## 15, 16ರಂದು 'ದಕ್ಷಿಣ ಭಾರತ ಉತ್ಸವ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಕರ್ನಾಟಕ ವಾಣಿಜ್ಯೋದ್ಯಮ ಮಹಾಮಂಡಲದ (ಎಫ್‌ಕೆಸಿಸಿಐ) ಸಹಯೋಗದಲ್ಲಿ ಇದೇ 15 ಮತ್ತು 16ರಂದು 'ದಕ್ಷಿಣ ಭಾರತ ಉತ್ಸವ–2024' ಆಯೋಜಿಸಲಾಗಿದೆ' ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಅರಮನೆ ಮೈದಾನದಲ್ಲಿ ನಡೆಯಲಿರುವ ಈ ಉತ್ಸವಕ್ಕೆ ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೊಡಗಿರುವ ಆಂಧ್ರಪ್ರದೇಶ, ತಮಿಳುನಾಡು, ಕೇರಳ, ತೆಲಂಗಾಣ, ಪುದುಚೇರಿ, ಲಕ್ಷದ್ವೀಪ ಪ್ರವಾಸಿ ಸಹಭಾಗೀದಾರರನ್ನು ಆಹ್ವಾನಿಸಲಾಗುವುದು' ಎಂದರು.

'ಒಂದೇ ವೇದಿಕೆಯಲ್ಲಿ ಪ್ರವಾಸೋದ್ಯಮ ಹೂಡಿಕೆದಾರರ ಸಭೆಗಳು, ಬಿ2ಬಿ ಸಭೆಗಳು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಜೊತೆಗೆ, ಈ ಉತ್ಸವದ ಮೂಲಕ ಪ್ರವಾಸೋದ್ಯಮ ಹೂಡಿಕೆಯ ಸಂಭಾವ್ಯತೆಯನ್ನು ಪ್ರದರ್ಶಿಸಲು ಮತ್ತು ಖಾಸಗಿ ವಲಯದಿಂದ ಹೆಚ್ಚಿನ ಸಂಖ್ಯೆಯನ್ನು ಭಾಗವಹಿಸುವಂತೆ ಪ್ರೋತ್ಸಾಹಿಸಲು ಉದ್ದೇಶಿಸಲಾಗಿದೆ' ಎಂದರು.

'ಹೂಡಿಕೆದಾರರು ಹೂಡಿಕೆ ಮಾಡಬಹುದಾದ ಯೋಜನೆಗಳ ವರದಿಯನ್ನು ಸಿದ್ಧಪಡಿಸಲಾಗಿದೆ. ಸ್ಮಾರಕಗಳನ್ನು ಅಭಿವೃದ್ಧಿಪಡಿಸಲು ಈಗಾಗಲೇ ಸ್ಮಾರಕ ದತ್ತು ಯೋಜನೆ ಆರಂಭಿಸಲಾಗಿದೆ. ಈ ಯೋಜನೆಯಡಿ ಮೊದಲ ಹಂತದಲ್ಲಿ 272 ಸ್ಮಾರಕಗಳ ದತ್ತು ಸ್ವೀಕಾರಕ್ಕೆ ಅವಕಾಶ ಕಲ್ಪಿಸಲಾಗಿದೆ' ಎಂದರು.

'ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ವಿಜಯಪುರ ಪ್ರವಾಸಿ ವೃತ್ತ ಮತ್ತು ಮೈಸೂರು, ಶ್ರೀರಂಗಪಟ್ಟಣ, ಹಾಸನ, ಬೇಲೂರು, ಹಳೆಬೀಡು ಪ್ರವಾಸಿ ವೃತ್ತಗಳಡಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಪ್ರವಾಸೋದ್ಯಮ ಇಲಾಖೆ ಹೊಂದಿರುವ 388.4 ಎಕರೆ ಜಮೀನಿನಲ್ಲಿ ಪ್ರವಾಸಿಗರಿಗೆ ಅಗತ್ಯವಾದ ಸೌಲಭ್ಯಗಳನ್ನು ₹595.84 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಅಲ್ಲದೆ, ಸಾಹಸ ಪ್ರವಾಸೋದ್ಯಮವನ್ನು ಉತ್ತೇಜಿಸಲು 16 ಜಿಲ್ಲೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ಒಟ್ಟು 18 ಜಲಾಶಯಗಳ ಯೋಜನಾ ವರದಿ ಸಿದ್ಧಪಡಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

**ದಕ್ಷಿಣ ಭಾರತ ಉತ್ಸವದ ಮೂಲಕ ದಕ್ಷಿಣದ ರಾಜ್ಯಗಳ ಸಾಂಸ್ಕೃತಿಕ, ಐತಿಹಾಸಿಕ, ಭೌಗೋಳಿಕ ವೈವಿಧ್ಯವನ್ನು ಪ್ರದರ್ಶಿಸಿ, ಪ್ರವಾಸೋದ್ಯಮಕ್ಕೆ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಉದ್ದೇಶಿಸಲಾಗಿದೆ.**

**ಎಚ್‌.ಕೆ. ಪಾಟೀಲ,** ಪ್ರವಾಸೋದ್ಯಮ ಸಚಿವ

### 'ಕ್ರೂಸ್, ಹಿನ್ನೀರು ಟೂರಿಸಂ'

'ಮಂಗಳೂರು, ಮಲ್ಪೆ, ಬೇಲೆಕೇರಿ ಮತ್ತು ಕಾರವಾರ ಬಂದರುಗಳಲ್ಲಿ ಕ್ರೂಸ್ ಟೂರಿಸಂ, ಉಡುಪಿ, ಕಬಿನಿ ಜಲಾಶಯ, ಭದ್ರಾ ಜಲಾಶಯ, ಕಾರವಾರಗಳಲ್ಲಿ ಹಿನ್ನೀರು ಟೂರಿಸಂ, ಹಾಸನ– ಮಂಗಳೂರು ಮಾರ್ಗದಲ್ಲಿ ಐಷಾರಾಮಿ ಪ್ರವಾಸಿ ರೈಲು ಹೀಗೆ ರಾಜ್ಯದ ವಿವಿಧೆಡೆ ಪಿಪಿಪಿ ಮಾದರಿಯ ಯೋಜನಾ ವರದಿಗಳನ್ನು ಸಿದ್ಧಪಡಿಸಲಾಗಿದೆ. ಒಟ್ಟಿನಲ್ಲಿ ರಾಜ್ಯದ ಪ್ರವಾಸೋದ್ಯಮವನ್ನು ದೇಶೀಯ ಮತ್ತು ವಿದೇಶಿಯ ಪ್ರವಾಸಿಗರ ನೆಚ್ಚಿನ ತಾಣವಾಗಿ ರೂಪಿಸುವ ಉದ್ದೇಶದಿಂದ ಈ ಉತ್ಸವವನ್ನು ಆಯೋಜಿಸಲಾಗಿದೆ' ಎಂದು ಎಚ್.ಕೆ. ಪಾಟೀಲ ತಿಳಿಸಿದರು

● www.prajavani.net

prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸ್ಪರ್ಧಾವಾಣಿ**
ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಬಹುಆಯ್ಕೆಯ ಪ್ರಶ್ನೋತ್ತರಗಳು



**ಆಳ-ಅಗಲ**
ಬಿಜೆಪಿ 'ಸೋತಿದ್ದು' ಹೇಗೆ?
ನಿಫ್ಟಿ ಸಾರ್ವಕಾಲಿಕ ಗರಿಷ್ಠ 10
ಯಡಿಯೂರಪ್ಪ ಬಂಧನ ಕೋರಿ ರಿಟ್ ಅರ್ಜಿ 6

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 76,606 | 23,323 | ₹73,900 (ಬೆಂಗಳೂರು) | ₹91,000 (ಬೆಂಗಳೂರು) | 83.54 |

# ಐಐಎಸ್‌ಸಿ ಶೋಧ: ಭಾರಲೋಹದಿಂದ ನೀರಿನ್ನು ಹಗುರ

ಭಾರಲೋಹ ಬೇರ್ಪಡಿಸಿ ಶುದ್ಧ ನೀರು ಕೊಡುವ ಸಾಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಂತರ್ಜಲದಲ್ಲಿ ಮಿಳಿತವಾಗಿರುವ ಮತ್ತು ಮಾನವ ದೇಹಕ್ಕೆ ಅತ್ಯಂತ ಅಪಾಯಕಾರಿ ಎನಿಸಿರುವ ಭಾರಲೋಹದ ಅಂಶ (ಆರ್ಸೆನಿಕ್) ಬೇರ್ಪಡಿಸುವ ಹೊಸ ಪರಿಹಾರ ವಿಧಾನವೊಂದನ್ನು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ.

ಮೂರು ಹಂತಗಳ ಈ ತಂತ್ರಜ್ಞಾನಕ್ಕೆ ಪೇಟೆಂಟ್ ಇನ್ನಷ್ಟೇ ಸಿಗಬೇಕಿದೆ. ನೀರಿನಿಂದ ಬೇರ್ಪಡಿಸಿದ ಭಾರಲೋಹವನ್ನು ಪರಿಸರಸ್ನೇಹಿ ವಿಧಾನದಲ್ಲಿ ವಿಲೇವಾರಿ ಮಾಡಲು ಸಾಧ್ಯವಿರುವುದು ಇದರ ವಿಶೇಷ. ವಿಷಕಾರಿ ಭಾರಲೋಹದಿಂದ ಕೂಡಿದ ಕೆಸರನ್ನು ಎಲ್ಲೆಂದರಲ್ಲಿ ಹರಿಸುವುದು, ಗುಂಡಿಗಳಲ್ಲಿ ತುಂಬಿ ಮತ್ತೆ ಭೂಮಿಯೊಳಗೆ ಹೋಗುವುದನ್ನೂ ಈ ಸಾಧನದಿಂದ ತಪ್ಪಿಸಬಹುದಾಗಿದೆ.

ಇನ್ನೂ ಒಂದು ಅಚ್ಚರಿಯ ಅಂಶ ಎಂದರೆ, ಜೈವಿಕ ನಿರ್ಜಲೀಕರಣ ವಿಧಾನಕ್ಕೆ ಹಸುವಿನ ಸಗಣಿಯಲ್ಲಿ ಸಿಗುವ ಒಂದು ಬಗೆಯ ಬ್ಯಾಕ್ಟೀರಿಯಾ ಬಳಸಲಾಗುತ್ತದೆ. ಈ ಬ್ಯಾಕ್ಟೀರಿಯಾ ಭಾರಲೋಹದಲ್ಲಿನ ವಿಷಕಾರಿ ಅಂಶಗಳನ್ನೂ ತೆಗೆದುಹಾಕುತ್ತದೆ ಎಂದು ಐಐಎಸ್‌ಸಿಯ ಸುಸ್ಥಿರ ತಂತ್ರಜ್ಞಾನಗಳ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಯಜ್ಞಸೇನಿ ರಾಯ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು. ಇವರ ಪ್ರಯೋಗಾಲಯದಲ್ಲೇ ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ.

'ಈ ತಂತ್ರಜ್ಞಾನದಲ್ಲಿ ಭಾರಲೋಹವನ್ನು ಬೇರ್ಪಡಿಸಿ ಶುದ್ಧ ನೀರನ್ನು ಪಡೆಯಬಹುದು. ಈ ರೀತಿ ಶುದ್ಧೀಕರಿಸಿದ ಬಳಿಕ ಉಳಿಯುವ ಭಾರಲೋಹದ ಕೆಸರು ಮತ್ತೆ ಭೂಮಿಗೆ ಸೇರದಂತೆ ನೋಡಿಕೊಳ್ಳಬೇಕು. ಆದರೆ, ಈಗ ಲಭ್ಯವಿರುವ ತಂತ್ರಜ್ಞಾನಗಳಲ್ಲಿ ಅದಕ್ಕೆ ಮಹತ್ವ ನೀಡಿಲ್ಲ. ನಮ್ಮ ತಂತ್ರಜ್ಞಾನ ಈ ಸಮಸ್ಯೆಗೆ ಪರಿಹಾರ ಒದಗಿಸಿದೆ' ಎಂದು ಅವರು ಹೇಳಿದರು.

ದೇಶದ 21 ರಾಜ್ಯಗಳ 133 ಜಿಲ್ಲೆಗಳಲ್ಲಿ ಪ್ರತಿ ಲೀಟರ್ ನೀರಿನಲ್ಲಿ 0.01 ಮಿಲಿಗ್ರಾಮ್‌ನಷ್ಟು ಆರ್ಸೆನಿಕ್ ಇದೆ. 23 ರಾಜ್ಯಗಳ 223 ಜಿಲ್ಲೆಗಳಲ್ಲಿ ಪ್ರತಿ ಲೀಟರ್ ನೀರಿನಲ್ಲಿ 1.5 ಮಿಲಿಗ್ರಾಮ್‌ನಷ್ಟು ಫ್ಲೋರೈಡ್ ಅಂಶ ಇದೆ. ಇದು ಬ್ಯೂರೊ ಆಫ್ ಇಂಡಿಯನ್ ಸ್ಟಾಂಡರ್ಡ್ ಮತ್ತು ವಿಶ್ವ ಆರೋಗ್ಯ ಸಂಸ್ಥೆ ಅನುಮತಿ ನೀಡಿದ ಪ್ರಮಾಣಕ್ಕಿಂತಲೂ ಅಧಿಕ ಎಂದು ಅವರು ತಿಳಿಸಿದರು.

ಈ ಸಾಧನವನ್ನು ಎಲ್ಲಿ ಬೇಕಾದರೂ ಅತ್ಯಂತ ಸುಲಭವಾಗಿ ಜೋಡಿಸಿ ಬಳಕೆ ಮಾಡಬಹುದು. ಪ್ರಯೋಗಾಲಯದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಗುಣಮಟ್ಟಕ್ಕೆ ಅನುಗುಣವಾಗಿ ಇಬ್ಬರು ವ್ಯಕ್ತಿಗಳಿಗೆ ಮೂರು ದಿನಗಳಿಗೆ ಬೇಕಾಗುವಷ್ಟು ನೀರು ಶುದ್ಧೀಕರಿಸಿ ನೀಡಲಾಗಿತ್ತು. ಸಂಶೋಧಕರು ಐಎನ್‌ಆರ್‌ಇಎಂ ಫೌಂಡೇಶನ್ ಮತ್ತು ಅರ್ಥ್ ವಾಚ್ ಸಂಸ್ಥೆಗಳ ಮೂಲಕ ಬಿಹಾರದ ಬಾಗಲ್ಪುರ ಮತ್ತು ಕರ್ನಾಟಕದ ಚಿಕ್ಕಬಳ್ಳಾಪುರದಲ್ಲಿ ಪ್ರಯೋಗ ಮುಂದುವರೆಸಿದ್ದಾರೆ.

## ಶುದ್ಧೀಕರಣದ ಹಂತಗಳು

**ಹಂತ 1** ಚಿಸ್ಟೋಸಾನ್‌ನಿಂದ ಮಾಡಿದ ಜೈವಿಕವಾಗಿ ಕರಗಬಲ್ಲ ಹೀರು ಹಾಸಿಗೆ ಮೇಲೆ ಭಾರಲೋಹದಿಂದ ಕಲುಷಿತಗೊಂಡ ನೀರನ್ನು ಹಾಯಿಸಲಾಗುತ್ತದೆ. (ಚಿಸ್ಟೋಸಾನ್ ಎಂದರೆ ಕಪ್ಪೆ ಚಿಪ್ಪು, ಏಡಿ, ಸೀಗಡಿಗಳ ಚಿಪ್ಪು ಮತ್ತು ಅಸ್ಥಿಪಂಜರಗಳಿಂದ ತಯಾರಿಸಿದ ಸಕ್ಕರೆ ಮಾದರಿಯ ಕಣ. ಚಿಸ್ಟೋಸಾನ್ ಅನ್ನು ಔಷಧಗಳ ತಯಾರಿಕೆಯಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ) ಹೀರು ಹಾಸಿಗೆ ವಿಷಕಾರಿ ಭಾರಲೋಹವನ್ನು ಹೀರಿಕೊಳ್ಳುತ್ತದೆ. ಇದಕ್ಕೆ ಎಲೆಕ್ಟ್ರೊಸ್ಟಾಟಿಕ್ ಫೋರ್ಸ್ ನೆರವಾಗುತ್ತದೆ. ಇದು ಕ್ಷಾರೀಯ ಅಂಶವನ್ನು ಚೆನ್ನಾಗಿ ತೊಳೆದು ಹಾಕುತ್ತದೆ.

**ಹಂತ 2** ನೀರಿನಲ್ಲಿರುವ ಸೋಡಿಯಂ ಹೈಡ್ರಾಕ್ಸೈಡ್ ಮತ್ತು ಆರ್ಸೆನಿಕ್ ಅನ್ನು ಬೇರ್ಪಡಿಸಲಾಗುವುದು. ಕ್ಷಾರೀಯ ತೊಳೆಯುವಿಕೆ ಹಂತದಲ್ಲಿ ಭಾರಲೋಹ ಪ್ರತ್ಯೇಕಗೊಳ್ಳುತ್ತದೆ.

**ಹಂತ 3** ಇದು ಅತ್ಯಂತ ಮಹತ್ವದ ಹಂತ. ಭಾರಲೋಹದಲ್ಲಿನ ವಿಷಕಾರಿ ಅಂಶವನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆಗೊಳಿಸಲಾಗುತ್ತದೆ. ಹಸುವಿನ ಸಗಣಿಯಲ್ಲಿ ಸಿಗುವ ಸೂಕ್ಷ್ಮಜೀವಿ ಅಥವಾ ಬ್ಯಾಕ್ಟೀರಿಯಾ ಮೂಲಕ ಆರ್ಸೆನಿಕ್ ಅನ್ನು ಮೀಥೆಲೀಕರಿಸಲಾಗುತ್ತದೆ. ಇದರಿಂದ ನೀರಿನಲ್ಲಿ ಭಾರ ಲೋಹದ ವಿಷದ ಪ್ರಮಾಣ ವಿಶ್ವ ಆರೋಗ್ಯ ಕೇಂದ್ರ ನಿಗದಿ ಮಾಡಿದ ಪ್ರಮಾಣಕ್ಕಿಂತಲೂ ಕಡಿಮೆ ಇರುತ್ತದೆ. ಇದು ಭೂಮಿಗೆ ಅಪಾಯಕಾರಿ ಅಲ್ಲ. ಬ್ಯಾಕ್ಟೀರಿಯಾ ಆಗಿ ಬಳಸುವ ಸಗಣಿಯನ್ನು ಸುರಕ್ಷಿತವಾಗಿ ವಿಲೇವಾರಿ ಮಾಡಬಹುದು. ಆರ್ಸೆನಿಕ್ ಅಂಶ ಸಾವಯವ ಸ್ವರೂಪಕ್ಕೆ ಪರಿವರ್ತನೆಗೊಂಡಿರುತ್ತದೆ. ಈ ವಿಧಾನದ ಮೂಲಕ ನೀರಿನಲ್ಲಿರುವ ಫ್ಲೋರೈಡ್ ಅಂಶವನ್ನು ಬೇರ್ಪಡಿಸಿ ತೆಗೆಯಲು ಸಾಧ್ಯವಿದೆ.

# ಬಚಾವಾಗಲು ₹30 ಲಕ್ಷ ಸುಪಾರಿ

## ದರ್ಶನ್ ಹೆಸರು ಬಾಯ್ಬಿಡದಂತೆ ಆಮಿಷ? ● ಮೂವರಿಗೆ ತಲಾ ₹5 ಲಕ್ಷ ಮುಂಗಡ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆ ತೀವ್ರಗೊಳಿಸಿರುವ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು, 'ಕೊಲೆ ಪ್ರಕರಣ ಒಪ್ಪಲು, ಮೃತದೇಹದ ವಿಲೇವಾರಿ ಮಾಡಲು ಹಾಗೂ ನಟ ದರ್ಶನ್ ಅವರ ಹೆಸರು ಬಾಯ್ಬಿಡದಿರಲು ಬಂಧಿತರ ಪೈಕಿ ಐವರಿಗೆ ₹30 ಲಕ್ಷಕ್ಕೆ ಸುಪಾರಿ ನೀಡಲಾಗಿತ್ತು' ಎಂಬ ಸಂಗತಿ ಪೊಲೀಸರಿಗೆ ವಿಚಾರಣೆ ವೇಳೆ ಗೊತ್ತಾಗಿದೆ.

ಮೃತದೇಹ ಸಿಗದಂತೆ ವಿಲೇವಾರಿ ಮಾಡಲು ಮುಂಗಡವಾಗಿ ಮೂವರು ಆರೋಪಿಗಳಿಗೆ ತಲಾ ₹5 ಲಕ್ಷ ಸಂದಾಯ ಮಾಡಲಾಗಿತ್ತು. ಉಳಿದ ಇಬ್ಬರು ಆರೋಪಿಗಳು ಜೈಲಿಗೆ ಹೋದ ಮೇಲೆ ಅವರ ಮನೆಯವರಿಗೆ ಹಣ ತಲುಪಿಸುವುದಾಗಿ ಹೇಳಲಾಗಿತ್ತು ಎಂಬ ವಿಚಾರವನ್ನು ಆರೋಪಿಗಳು ಬಾಯ್ಬಿಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

ಜೂನ್ 9ರಂದು ಸುಮನಹಳ್ಳಿ ಸತ್ವ ಅನುಗ್ರಹ ಅಪಾರ್ಟ್‌ಮೆಂಟ್ ಸಮೀಪದ ಮೋರಿ ಬಳಿ ಸಿಕ್ಕಿದ ಮೃತದೇಹ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಕೃತ್ಯ ಎಸಗಿದ ಆರೋಪಿಗಳ ವಿರುದ್ಧ ಹಲವು ಮಹತ್ವದ ಸಾಕ್ಷ್ಯ ಸಂಗ್ರಹಿಸಿದ್ದಾರೆ. ಅಪಾರ್ಟ್‌ಮೆಂಟ್ ಸೆಕ್ಯುರಿಟಿ ಆಫೀಸರ್ ಕೇವಲ್ ರಾಜ್‌ದೋರ್‌ಜೀ ಅವರು ನೀಡಿದ ದೂರು ಆಧರಿಸಿ, ಆರೋಪಿಗಳ ವಿರುದ್ಧ ಕೊಲೆ (302) ಹಾಗೂ ಸಾಕ್ಷ್ಯನಾಶ (201) ಪ್ರಕರಣ ದಾಖಲಾಗಿದೆ.

'ಈ ಕೊಲೆ ಪ್ರಕರಣದಲ್ಲಿ 17 ಮಂದಿ ಭಾಗಿ ಆಗಿರುವುದು ತನಿಖೆಯಿಂದ ದೃಢಪಟ್ಟಿದೆ. ಇದುವರೆಗೂ ನಟ ದರ್ಶನ್, ಅವರ ಆಪ್ತೆ ಪವಿತ್ರಾಗೌಡ ಸೇರಿ 13 ಮಂದಿ ಬಂಧಿಸಲಾಗಿದ್ದು, ತಲೆಮರೆಸಿಕೊಂಡಿರುವ ಜಗದೀಶ್, ಅನು, ರವಿ ಹಾಗೂ ರಾಜು ಅವರ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ. ಬಂಧಿತರಿಂದ ಜೀಪು, ಕಾರು, ಶಸ್ತ್ರಾಸ್ತ್ರ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

6ನೇ ಪುಟ ನೋಡಿ

ಬೆಂಗಳೂರಿನ ಪಟ್ಟಣಗೆರೆಗೆ ಆರೋಪಿಗಳನ್ನು ಬುಧವಾರ ಕರೆತಂದು ಸ್ಥಳ ಮಹಜರು ನಡೆಸಲಾಯಿತು –ಪ್ರಜಾವಾಣಿ ಚಿತ್ರ

### ರೌಡಿ ಶೀಟ್ ತೆರೆಯುವ ಚಿಂತನೆ

ದರ್ಶನ್ ವಿರುದ್ಧ ಈ ಹಿಂದೆಯೂ ಹಲವು ಪ್ರಕರಣ ದಾಖಲಾಗಿದ್ದವು. ಅವರ ವಿರುದ್ಧ ರೌಡಿಶೀಟ್ ತೆರೆಯುವ ಸಂಬಂಧ ಪೊಲೀಸ್ ಇಲಾಖೆ ಚಿಂತನೆ ನಡೆಸುತ್ತಿದೆ ಎಂದು ಗೊತ್ತಾಗಿದೆ. 'ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ನಮ್ಮನ್ನು ಕೇಳಿ ಸೆಕ್ಷನ್ ಹಾಕುವುದಿಲ್ಲ. ತನಿಖೆಯಾದ ಮೇಲೆ ಏನು ಶಿಫಾರಸು ಮಾಡುತ್ತಾರೆಂದು ನೋಡೋಣ' ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ದರ್ಶನ್ ವಿರುದ್ಧ ರೌಡಿಶೀಟ್ ತೆರೆಯುವ ಸಂಬಂಧ ಪ್ರತಿಕ್ರಿಯಿಸಿದ್ದಾರೆ.

'ಪ್ರಕರಣದಿಂದ ದರ್ಶನ್ ಹೆಸರು ಕೈಬಿಡುವಂತೆ ಪೊಲೀಸರ ಮೇಲೂ ಒತ್ತಡ ತರಲಾಗಿತ್ತು. ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಕೆಲವರು ಕರೆ ಮಾಡಿದ್ದರು. ಆದರೆ, ತನಿಖಾ ಧಿಕಾರಿಗಳು ಇದಕ್ಕೆ ಮಣಿಯದೇ ದರ್ಶನ್ ಬಂಧನಕ್ಕೆ ಜೂನ್ 10ರ ರಾತ್ರಿಯೇ ಮೈಸೂರಿಗೆ ತೆರಳಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

### ಮುಂದಿನ ತನಿಖೆ ಹೇಗಿರಲಿದೆ?

- ಆರೋಪಿಗಳ ಮೊಬೈಲ್‌ಗಳಲ್ಲಿ ಇರುವ ದತ್ತಾಂಶ ಹಾಗೂ ಮೊಬೈಲ್ ಕರೆ ವಿವರಗಳ ಸಂಗ್ರಹ
- ಆರೋಪಿಗಳನ್ನು ಚಿತ್ರದುರ್ಗಕ್ಕೆ ಕರೆದೊಯ್ದು ಸ್ಥಳ ಮಹಜರು
- ಸಾಕ್ಷಿದಾರರ ಹೇಳಿಕೆ ದಾಖಲಿಸುವ ಪ್ರಕ್ರಿಯೆ
- ಕೊಲೆ ಒಪ್ಪಿಕೊಳ್ಳಲು ನೀಡಿದ್ದ ನಗದು ಹಣ ಜಪ್ತಿಗೆ ಕ್ರಮ
- 2ನೇ ಆರೋಪಿ ಪ್ರಭಾವಿಯಾಗಿದ್ದು, ಸಾಕ್ಷ್ಯನಾಶಪಡಿಸಿರುವ ಸಾಧ್ಯತೆ, ಮಾಹಿತಿ ಸಂಗ್ರಹಕ್ಕೆ ತಯಾರಿ

### ಹತ್ಯೆ ಪ್ರಕರಣದ ಆರೋಪಿಗಳ ವಿವರ

| ಆರೋಪಿ ಸಂಖ್ಯೆ | ಆರೋಪಿ ಹೆಸರು | ವಿಳಾಸ |
|---|---|---|
| ಎ1 | ಪವಿತ್ರಾಗೌಡ(33) | ಕೆಂಚೇನಹಳ್ಳಿ ರಸ್ತೆ, ಆರ್‌ಆರ್ ನಗರ, ಬೆಂಗಳೂರು |
| ಎ2 | ದರ್ಶನ್ ಅಲಿಯಾಸ್ 'ಡಿ' ಬಾಸ್(47) | ಐಡಿಯಲ್ ಹೋಮ್ ಟೌನ್‌ಶಿಪ್, ರಾಜರಾಜೇಶ್ವರಿ ನಗರ, ಬೆಂಗಳೂರು |
| ಎ3 | ಪುಟ್ಟಸ್ವಾಮಿ ಅಲಿಯಾಸ್ ಕೆ.ಪವನ್(29) | ವಾಸ–ಕೆಂಚೇನಹಳ್ಳಿ, ಆರ್‌ಆರ್ ನಗರ, ಬೆಂಗಳೂರು, **ಸ್ವಂತ ಊರು:** ಅಕ್ಕೂರು ಗ್ರಾಮ, ಚನ್ನಪಟ್ಟಣ ತಾಲ್ಲೂಕು, ರಾಮನಗರ |
| ಎ4 | ರಾಘವೇಂದ್ರ(43) | ಕೋಳಿ ಬುರ್ಜನಹಟ್ಟಿ, ದೊಡ್ಡಪೇಟೆ, ಚಿತ್ರದುರ್ಗ |
| ಎ5 | ನಂದೀಶ(28) | ವಾಸ–ಕೃಷ್ಣಪ್ಪಲೇಔಟ್, ಆರ್‌ಆರ್ ನಗರ,ಬೆಂಗಳೂರು **ಸ್ವಂತ ಊರು:** ಚಾಮಲಾಪುರ ಗ್ರಾಮ, ಕೆರೆಗೋಡು ಹೋಬಳಿ, ಮಂಡ್ಯ ಜಿಲ್ಲೆ |
| ಎ6 | ಜಗದೀಶ್ ಅಲಿಯಾಸ್ ಜಗ್ಗ | (ತಲೆಮರೆಸಿಕೊಂಡಿರುವ ಆರೋಪಿ) |
| ಎ7 | ಅನು | (ತಲೆಮರೆಸಿಕೊಂಡಿರುವ ಆರೋಪಿ) |
| ಎ8 | ರವಿ | (ತಲೆಮರೆಸಿಕೊಂಡಿರುವ ಆರೋಪಿ) |
| ಎ9 | ರಾಜು | (ತಲೆಮರೆಸಿಕೊಂಡಿರುವ ಆರೋಪಿ) |
| ಎ10 | ವಿನಯ್.ವಿ(38) | ಜಯಣ್ಣ ಫಾರ್ಮ್ ಹೌಸ್, ಪಟ್ಟಣಗೆರೆ, ಆರ್‌ಆರ್ ನಗರ, ಬೆಂಗಳೂರು |
| ಎ11 | ನಾಗರಾಜ್(41) | ರಾಮಕೃಷ್ಣನಗರ, ಮೈಸೂರು |
| ಎ12 | ಲಕ್ಷ್ಮಣ್(54) | ಆರ್‌ಪಿಸಿ ಲೇಔಟ್, ಬೆಂಗಳೂರು |
| ಎ13 | ದೀಪಕ್(39) | ಬಿಇಎಂಎಲ್ ಲೇಔಟ್, ಆರ್‌ಆರ್ ನಗರ, ಬೆಂಗಳೂರು |
| ಎ14 | ಪ್ರದೂಷ್(40) | ಜೆಪಿ ರಸ್ತೆ, ಗಿರಿನಗರ, ಬೆಂಗಳೂರು |
| ಎ15 | ಕಾರ್ತಿಕ್ ಅಲಿಯಾಸ್ ಕಪ್ಪೆ (27) | ಚಾಮುಂಡಿನಗರ, ಕೆಇಬಿ ಕ್ವಾರ್ಟರ್ಸ್ ಹತ್ತಿರ, ಗಿರಿನಗರ, ಬೆಂಗಳೂರು |
| ಎ16 | ಕೇಶವಮೂರ್ತಿ(27) | ಹೀರಣ್ಣಗುಡ್ಡ, ಗಿರಿನಗರ, ಬೆಂಗಳೂರು |
| ಎ17 | ನಿಖಿಲ್ ನಾಯಕ್(21) | ಕೆಂಬತ್ತಹಳ್ಳಿ,ಕೊಟ್ಟಗೇರಿ ಅಂಚೆ, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು |

### ತಮಿಳುನಾಡು, ಕೇರಳದವರೇ ಅಧಿಕ

- ಮೃತರಲ್ಲಿ ಕೇರಳ, ತಮಿಳುನಾಡು ಮತ್ತು ಉತ್ತರ ಭಾರತದ ರಾಜ್ಯಗಳವರೇ ಹೆಚ್ಚು
- ಕುವೈತ್‌ನ ಒಟ್ಟಾರೆ ಜನಸಂಖ್ಯೆಯ ಪೈಕಿ ಶೇ 21ರಷ್ಟು ಜನ ಭಾರತೀಯರು
- ಒಟ್ಟು ಕಾರ್ಮಿಕರಲ್ಲಿ ಶೇ 30ರಷ್ಟು ಭಾರತೀಯ ಪ್ರಜೆಗಳು
- ಭಾರತದ ರಾಯಭಾರ ಕಚೇರಿಯಿಂದ ಸಹಾಯವಾಣಿ ಆರಂಭ
- ಸಹಾಯವಾಣಿ ಸಂಖ್ಯೆ: +965-65505246

## ಪ್ರಾಣ ಕಳೆದುಕೊಂಡವರಲ್ಲಿ ಹೆಚ್ಚಿನವರು ಭಾರತೀಯರು

# ಕುವೈತ್‌ನಲ್ಲಿ ಅಗ್ನಿ ಅನಾಹುತ

**49 ಸಾವು**

**ದುಬೈ/ನವದೆಹಲಿ (ಪಿಟಿಐ/ಎಎಫ್‌ಪಿ):** ಕುವೈತ್‌ನ ಕಟ್ಟಡವೊಂದರಲ್ಲಿ ಬುಧವಾರ ನಡೆದ ಅಗ್ನಿ ದುರಂತದಲ್ಲಿ 49 ಮಂದಿ ಮೃತಪಟ್ಟಿದ್ದಾರೆ. ಇವರಲ್ಲಿ ಹಲವರು ಭಾರತೀಯರು ಸೇರಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳೀಯ ಮಾಧ್ಯಮ ವರದಿಗಳು ಕೂಡ ಇದೇ ಮಾತು ಹೇಳಿವೆ. ಕುವೈತ್‌ನ ದಕ್ಷಿಣ ದಲ್ಲಿರುವ ಅಹ್ಮದಿ ಆಡಳಿತ ಪ್ರಾಂತ್ಯದ ಮಂಗಾಫ್ ಪ್ರದೇಶದ ಆರು ಮಹಡಿಗಳ ಕಟ್ಟಡವೊಂದರ ಅಡುಗೆ ಮನೆಯಲ್ಲಿ ಬುಧವಾರ ಬೆಳಿಗ್ಗೆ ಹೊತ್ತಿಕೊಂಡ ಬೆಂಕಿಯು ಈ ದುರಂತಕ್ಕೆ ಕಾರಣ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಕಟ್ಟಡದಲ್ಲಿ ಒಂದೇ ಕಂಪನಿಯ 160 ಮಂದಿ ಕೆಲಸಗಾರರು ವಾಸಿಸುತ್ತಿದ್ದರು ಎನ್ನಲಾಗಿದೆ. ಮೃತರಲ್ಲಿ ಹೆಚ್ಚಿನವರು ಭಾರತೀಯರು. ಅವರೆಲ್ಲ 20ರಿಂದ 50 ವರ್ಷ ವಯಸ್ಸಿನ ನಡುವಿನವರು ಎಂದು ವಿಧಿವಿಜ್ಞಾನ ಇಲಾಖೆಯ ಮಹಾನಿರ್ದೇಶಕ ಮೇಜರ್ ಜನರಲ್ ಇದ್ ಅಲ್–ಒವೈಹಾನ್ ಅವರು ಹೇಳಿರುವುದಾಗಿ ಅರಬ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ.

7ನೇ ಪುಟ ನೋಡಿ

### ಕುವೈತ್‌ಗೆ ತೆರಳಿದ ಸಚಿವ ಸಿಂಗ್

**ನವದೆಹಲಿ (ಪಿಟಿಐ):** ಅಗ್ನಿ ಅನಾಹುತದಲ್ಲಿ ಗಾಯಗೊಂಡಿರುವ ಭಾರತೀಯರಿಗೆ ನೆರವು ಒದಗಿಸುವ ಕಾರ್ಯದ ಉಸ್ತುವಾರಿಗೆ ಹಾಗೂ ಮೃತಪಟ್ಟವರ ದೇಹಗಳನ್ನು ಭಾರತಕ್ಕೆ ತ್ವರಿತವಾಗಿ ತರಲು ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ ಅವರು ತುರ್ತಾಗಿ ಕುವೈತ್‌ಗೆ ತೆರಳುತ್ತಿದ್ದಾರೆ.

ಸಿಂಗ್ ಅವರಿಗೆ ತುರ್ತಾಗಿ ತೆರಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಸೂಚನೆ ನೀಡಿದ್ದಾರೆ. ಈ ವಿಚಾರವನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಎಕ್ಸ್ ಮೂಲಕ ತಿಳಿಸಿದ್ದಾರೆ.

# ಮತ್ತೆ ಎಸ್‌ಐಟಿ ಕಸ್ಟಡಿಗೆ ಪ್ರಜ್ವಲ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅತ್ಯಾಚಾರ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ನ್ಯಾಯಾಂಗ ಬಂಧನ ದಲ್ಲಿದ್ದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಹೆಚ್ಚಿನ ವಿಚಾರಣೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಮತ್ತೆ ಕಸ್ಟಡಿಗೆ ಪಡೆದುಕೊಂಡಿತು.

ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ ಪ್ರಜ್ವಲ್ ರೇವಣ್ಣ ಅವರನ್ನು ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಿ ಕಸ್ಟಡಿಗೆ ನೀಡುವಂತೆ ಎಸ್‌ಐಟಿ ಅಧಿಕಾರಿಗಳು ಮನವಿ ಮಾಡಿದ್ದರು. ಮನವಿ ಪುರಸ್ಕರಿಸಿದ ಬೆಂಗಳೂರಿನ 42ನೇ ಎಸಿಎಂಎಂ ನ್ಯಾಯಾಲಯ ಜೂನ್ 18ರ ವರೆಗೆ ಎಸ್‌ಐಟಿ ಕಸ್ಟಡಿಗೆ ನೀಡಿ ಆದೇಶಿಸಿತು. ಈ ಹಿಂದೆ ಆರೋಪಿಯನ್ನು ಎಸ್‌ಐಟಿ ಅಧಿಕಾರಿಗಳು ಹತ್ತು ದಿನ ವಿಚಾರಣೆಗೆ ಒಳಪಡಿಸಿದ್ದರು. ಜೂನ್ 10ರಂದು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು. ನ್ಯಾಯಾಲಯ 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು.

# ಸೂಪರ್ ಎಂಟರ ಘಟ್ಟಕ್ಕೆ ಭಾರತ

**ನ್ಯೂಯಾರ್ಕ್:** ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೂಪರ್ 8ರ ಘಟ್ಟಕ್ಕೆ ಪ್ರವೇಶಿಸಿತು. ಬುಧವಾರ ನಡೆದ ಪಂದ್ಯದಲ್ಲಿ ಅರ್ಷದೀಪ್ ಸಿಂಗ್ ಅಮೋಘ ಬೌಲಿಂಗ್ ಹಾಗೂ ಸೂರ್ಯಕುಮಾರ್ ಯಾದವ್ ಅರ್ಧಶತಕದ ಬಲದಿಂದ ಭಾರತ ತಂಡವು 7 ವಿಕೆಟ್‌ಗಳಿಂದ ಅಮೆರಿಕ ಎದುರು ಜಯಿಸಿತು.

**ಸ್ಕೋರ್**
ಅಮೆರಿಕ 8ಕ್ಕೆ 110 (20 ಓವರ್‌ಗಳಲ್ಲಿ)
ಭಾರತ 3ಕ್ಕೆ 111 (18.2 ಓವರ್‌ಗಳಲ್ಲಿ)

**ಅರ್ಷದೀಪ್ ಸಿಂಗ್** 4-0-9-4

**ಸೂರ್ಯಕುಮಾರ್** ರನ್; 50* ಎಸೆತ; 49 ಬೌಂಡರಿ; 2 ಸಿಕ್ಸರ್; 2

12

## ಮುದ್ರಣ ಕಾರ್ಯ ವಿಳಂಬ, ವಿದ್ಯಾರ್ಥಿಗಳು, ಪೋಷಕರ ಅಲೆದಾಟ

# ಪಿಯು ಪಠ್ಯಪುಸ್ತಕ ಅಭಾವ

● ಚಂದ್ರಹಾಸ ಹಿರೇಮಳಲಿ

**ಬೆಂಗಳೂರು:** ಪ್ರಥಮ ಹಾಗೂ ದ್ವಿತೀಯ ಪಿಯು ಪಠ್ಯಪುಸ್ತಕಗಳಿಗೆ ಮಾರುಕಟ್ಟೆಯಲ್ಲಿ ಅಭಾವ ಸೃಷ್ಟಿಯಾಗಿದ್ದು, ವಿದ್ಯಾರ್ಥಿಗಳು–ಪೋಷಕರು ಅಲೆದಾಡುವಂತಾಗಿದೆ.

ಕಳೆದ ಸಾಲಿಗಿಂತ ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇ 10.49ರಷ್ಟು ಕುಸಿತ ಕಂಡಿದೆ. ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳು ಫಲಿತಾಂಶ ಉತ್ತಮಪಡಿಸಿಕೊಳ್ಳಲು ಎರಡನೇ ಪರೀಕ್ಷೆಯತ್ತ ಚಿತ್ತಹರಿಸಿದ್ದಾರೆ. ಹಾಗಾಗಿ, ಪ್ರಥಮ ಪಿಯುಸಿ ಪ್ರವೇಶ ಮಂದಗತಿಯಲ್ಲಿ ಸಾಗಿದೆ. ಈಗಾಗಲೇ ದಾಖಲಾತಿ ಪಡೆದ ವಿದ್ಯಾರ್ಥಿಗಳಿಗೂ ಅಗತ್ಯವಿರುವ ಎಲ್ಲ ಪಠ್ಯ ಪುಸ್ತಕಗಳು ರಾಜ್ಯದ ಯಾವುದೇ ಪುಸ್ತಕ ಮಳಿಗೆಗಳಲ್ಲಿ ದೊರೆಯುತ್ತಿಲ್ಲ.

ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗದ ಜತೆಗೆ ಕನ್ನಡ, ಇಂಗ್ಲಿಷ್ ಭಾಷಾ ವಿಷಯಗಳ ಪಠ್ಯಪುಸ್ತಕಗಳೂ ಮಾರುಕಟ್ಟೆಯಲ್ಲಿ ಸಿಗುತ್ತಿಲ್ಲ.

'ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 96 ಅಂಕ ಪಡೆದ ಮಗನನ್ನು ಖಾಸಗಿ ವಿಜ್ಞಾನ ಕಾಲೇಜಿಗೆ ಸೇರಿಸಿದ್ದೇವೆ. ಜೂನ್ 3ರಿಂದಲೇ ತರಗತಿಗಳು ಆರಂಭವಾಗಿವೆ. ಕೆಲವು ವಿಷಯಗಳ ಒಂದೆರಡು ಪಠ್ಯಪುಸ್ತಕಗಳು ದೊರೆತಿವೆ. ಇಂಗ್ಲಿಷ್, ಭೌತವಿಜ್ಞಾನ, ಜೀವವಿಜ್ಞಾನ ವಿಷಯದ ಪುಸ್ತಕಗಳು ದೊರೆತಿಲ್ಲ. ಇಂಗ್ಲಿಷ್ ಭಾಷಾ ಪುಸ್ತಕಕ್ಕಾಗಿ ಬೇರೆಬೇರೆ ಪುಸ್ತಕ ಮಳಿಗೆಗಳಿಗೆ ಅಲೆದಾಡಿದರೂ ಪ್ರಯೋಜನವಾಗಿಲ್ಲ' ಎನ್ನುತ್ತಾರೆ ಬಳ್ಳಾರಿಯ ಪೋಷಕ ನಿಜಗುಣಾನಂದ.

6ನೇ ಪುಟ ನೋಡಿ

### ಒಂದು ದಶಕ; ಬದಲಾಗದ ಪಠ್ಯ ಪುಸ್ತಕ



ಪ್ರಥಮ ಹಾಗೂ ದ್ವಿತೀಯ ಪಿಯು ಕಲಾ ಹಾಗೂ ವಾಣಿಜ್ಯ ವಿಭಾಗದ ಪಠ್ಯ ಪರಿಷ್ಕರಣೆಯಾಗಿ 2023–24ನೇ ಸಾಲಿಗೆ 10 ವರ್ಷಗಳಾಗಿವೆ. 2013–14ನೇ ಸಾಲಿನಲ್ಲಿ ನಿಗದಿ ಮಾಡಿದ್ದ ಪಠ್ಯವನ್ನೇ 2024–25ನೇ ಸಾಲಿಗೂ ಮಕ್ಕಳು ಓದುತ್ತಿದ್ದಾರೆ.

ಪದವಿಪೂರ್ವ ಶಿಕ್ಷಣದ ನಿಯಮದಂತೆ ಪ್ರತಿ ಐದು ಅಥವಾ ಆರು ವರ್ಷಗಳಿಗೆ ಪಠ್ಯ ಪರಿಷ್ಕರಣೆ ಮಾಡಬೇಕು. ಆದರೆ, 2020ರಲ್ಲಿ ಕೋವಿಡ್ ಎದುರಾಗಿದ್ದರಿಂದ ಪಠ್ಯ ಪರಿಷ್ಕರಣಾ ಕಾರ್ಯ ನನೆಗುದಿಗೆ ಬಿದ್ದಿತ್ತು. ನಂತರ ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಅಳವಡಿಸಿಕೊಳ್ಳಲು ಸಿದ್ಧತೆಗಳು ಆರಂಭವಾಗಿದ್ದವು. ಪದವಿಗೆ ಎನ್‌ಇಪಿ ಅಳವಡಿಸಿದರೂ, ಪದವಿಪೂರ್ವ ಶಿಕ್ಷಣದಲ್ಲಿ ಅನುಷ್ಠಾನವಾಗಲಿಲ್ಲ. ಹಾಗಾಗಿ, ಹಿಂದಿನ ಪಠ್ಯಕ್ರಮವೇ ಮುಂದುವರಿಯಿತು.

ವಿಜ್ಞಾನ ವಿಭಾಗದಲ್ಲಿ ಮಾತ್ರ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಕಾಲಕಾಲಕ್ಕೆ ಪರಿಷ್ಕರಿಸಿದ ವಿಜ್ಞಾನ ವಿಷಯಗಳ ಪಠ್ಯಗಳನ್ನೇ ಅಳವಡಿಸಿಕೊಂಡು ಬರಲಾಗಿದೆ.

### ಪಿಯು ಓದುತ್ತಿರುವ ವಿದ್ಯಾರ್ಥಿಗಳ ವಿವರ




**6.31 ಲಕ್ಷ** 2024ರಲ್ಲಿ ಎಸ್‌ಎಸ್‌ಎಲ್‌ಸಿ ತೇರ್ಗಡೆಯಾದವರು

# ದೇವದಾರಿಯಲ್ಲಿ ಗಣಿಗಾರಿಕೆ: ಎಚ್‌ಡಿಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬಳ್ಳಾರಿ ಜಿಲ್ಲೆಯ ಸಂಡೂರಿನ ದೇವದಾರಿ ಕಬ್ಬಿಣದ ಅದಿರು ಗಣಿ ಕಾರ್ಯಾಚರಣೆಗೆ ಸಂಬಂಧಿಸಿದ ಕುದುರೆಮುಖ ಕಬ್ಬಿಣದ ಅದಿರು ಕಂಪನಿಯ (ಕೆಐಒಸಿಎಲ್) ಕಡತಕ್ಕೆ ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಬುಧವಾರ ಸಹಿ ಹಾಕಿದರು.

ಉಭಯ ಇಲಾಖೆಗಳ ಉನ್ನತ ಅಧಿಕಾರಿಗಳ ಜತೆಗೆ ಸಚಿವರು ಸಭೆ ನಡೆಸಿ ಇಲಾಖೆಯ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು.

ಕಡತಕ್ಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಸಹಿ ಹಾಕಿದರು

6ನೇ ಪುಟ ನೋಡಿ

### ನಿರ್ಧಾರ ಪುನರ್ ಪರಿಶೀಲಿಸಲಿ: ಹಿರೇಮಠ



'ಪಶ್ಚಿಮ ಘಟ್ಟದ ಜೀವವೈವಿಧ್ಯಕ್ಕೆ ಹಾನಿಯಾದ ಕಾರಣಕ್ಕೆ ಕುದುರೆಮುಖದಲ್ಲಿ ಗಣಿಗಾರಿಕೆ ನಡೆಸದಂತೆ ಸುಪ್ರೀಂ ಕೋರ್ಟ್ ತಾಕೀತು ಮಾಡಿತ್ತು. ಸಂಡೂರು ಅತ್ಯಂತ ಶ್ರೀಮಂತ ಜೀವವೈವಿಧ್ಯದ ಪ್ರದೇಶ. ಇಲ್ಲಿ ಗಣಿಗಾರಿಕೆ ನಡೆಸಿದರೆ ಭಾರಿ ಹಾನಿಯಾಗಲಿದೆ. ಉಕ್ಕು ಸಚಿವಾಲಯದ ಅಧಿಕಾರಿಗಳ ಮಾತು ಕೇಳಿ ಕುಮಾರಸ್ವಾಮಿಯವರು ಕಡತಕ್ಕೆ ಸಹಿ ಹಾಕಿದ್ದಾರೆ. ಅವರು ನಿರ್ಧಾರವನ್ನು ಮರುಪರಿಶೀಲಿಸಬೇಕು. ಸಂಡೂರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸ್ಥಳೀಯರು ಹಾಗೂ ಪರಿಸರ ಹೋರಾಟಗಾರರೊಂದಿಗೆ ಸಮಾಲೋಚನೆ ನಡೆಸಬೇಕು' ಎಂದು ಸಮಾಜ ಪರಿವರ್ತನ ಸಮುದಾಯದ ಅಧ್ಯಕ್ಷ ಎಸ್.ಆರ್.ಹಿರೇಮಠ ಆಗ್ರಹಿಸಿದರು.

## ವಾಲ್ಮೀಕಿ ನಿಗಮದ ಹಗರಣ: ಮತ್ತೊಬ್ಬ ಆರೋಪಿ ಬಂಧನ

# ₹8.21 ಕೋಟಿ ನಗದು ಜಪ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಪಟ್ಟಂತೆ ಮತ್ತೊಬ್ಬ ಆರೋಪಿ ಸತ್ಯನಾರಾಯಣ್ ವರ್ಮಾ ಎಂಬಾತನನ್ನು ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಹೈದರಾಬಾದ್‌ನಲ್ಲಿ ಬಂಧಿಸಿದ್ದು, ಆತನಿಂದ ₹ 8.21 ಕೋಟಿ ನಗದು ಜಪ್ತಿ ಮಾಡಿದ್ದಾರೆ.

'ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ಬಗ್ಗೆ ಸಾಕಷ್ಟು ಪುರಾವೆಗಳನ್ನು ಸಂಗ್ರಹಿಸಲಾಗಿದೆ. ಇದೇ ಪುರಾವೆ ಆಧರಿಸಿ ವರ್ಮಾನನ್ನು ಹೈದರಾಬಾದ್‌ನಲ್ಲಿ ಬಂಧಿಸಲಾಗಿದ್ದು, ಅಧಿಕಾರಿಗಳ ತಂಡ ಆತನನ್ನು ನಗರಕ್ಕೆ ಕರೆತರುತ್ತಿದೆ' ಎಂದು ಎಸ್‌ಐಟಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಸತ್ಯನಾರಾಯಣ್ ವರ್ಮಾನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು. ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ನ್ಯಾಯಾಧೀಶರನ್ನು ಕೋರಲಾಗುವುದು. ಈತನ ವಿಚಾರಣೆ ಬಳಿಕ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದು ಹೇಳಿದರು.

'ಆರೋಪಿ ವರ್ಮಾ, ರಾಜ್ಯದ ಹಲವು ಅಧಿಕಾರಿಗಳು ಹಾಗೂ ರಾಜಕಾರಣಿಗಳ ಜೊತೆ ಒಡನಾಟ ಇಟ್ಟುಕೊಂಡಿದ್ದನೆಂಬ ಮಾಹಿತಿ ಇದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಬೇರೆ ಬೇರೆ ಖಾತೆಗಳಿಗೆ ಹಾಕಿಸಿಕೊಂಡು, ಅನ್ಯ ಉದ್ದೇಶಕ್ಕೆ ಬಳಸಿಕೊಂಡು ಲಾಭ ಮಾಡಿಕೊಳ್ಳುವ ಕೃತ್ಯದಲ್ಲಿ ಈತ ತೊಡಗಿದ್ದನೆಂಬ ಶಂಕೆ ಇದೆ' ಎಂದು ತಿಳಿಸಿದರು.

ವರ್ಮಾನನ್ನು ಪ್ರಾಥಮಿಕ ಹಂತದ ವಿಚಾರಣೆಗೆ ಒಳಪಡಿಸಲಾಗಿದೆ. 'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ವರ್ಗಾವಣೆ ಮಾಡುವ ಸಲುವಾಗಿಯೇ, ಆರೋಪಿಯು ವಿವಿಧ ಕಂಪನಿಗಳ ಹೆಸರಿನಲ್ಲಿ 18 ನಕಲಿ ಖಾತೆಗಳನ್ನು ಬ್ಯಾಂಕ್‌ನಲ್ಲಿ ತೆರೆದಿದ್ದ. ಖಾತೆಯ ಆರಂಭಿಕ ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಹಣ ಆ ಖಾತೆಗಳಿಗೆ ವರ್ಗಾವಣೆ ಆಗಿತ್ತು' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಎಂ.ಜಿ. ರಸ್ತೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ದಲ್ಲಿರುವ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಖಾತೆಯಿಂದ 18 ಖಾತೆಗಳಿಗೆ ₹ 94.73 ಕೋಟಿ ಅಕ್ರಮವಾಗಿ ವರ್ಗಾವಣೆಯಾಗಿತ್ತು. ಈ ಸಂಬಂಧ ತನಿಖೆ ನಡೆಸಲು ಎಸ್‌ಐಟಿ ರಚಿಸಲಾಗಿದೆ.

ಈ ಅಕ್ರಮ ಹಣ ವರ್ಗಾವಣೆ ಸಂಬಂಧ ಈಗಾಗಲೇ ತನಿಖೆಗೆ ಇಳಿದಿರುವ ಎಸ್‌ಐಟಿ, ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ, ಲೆಕ್ಕಾಧಿಕಾರಿ ಪರಶುರಾಮ್, ಮಾಜಿ ಸಚಿವ ಬಿ.ನಾಗೇಂದ್ರ ಅವರ ಆಪ್ತ ಎನ್ನಲಾದ ನಾಗರಾಜ್ ನೆಕ್ಕುಂಟಿ, ನಾಗೇಶ್ವರ್ ರಾವ್ ಎಂಬುವವರನ್ನು ಬಂಧಿಸಿದೆ. ಇದೇ ಪ್ರಕರಣದಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ಬಿ.ನಾಗೇಂದ್ರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

**ಸಿಬಿಐ ತನಿಖೆ:** ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡಿರುವ ಸಿಬಿಐ ಅಧಿಕಾರಿಗಳು, ಪ್ರಕರಣ ಸಂಬಂಧ ಪುರಾವೆಗಳನ್ನು ಸಂಗ್ರಹಿಸುತ್ತಿದ್ದಾರೆ. ಸದ್ಯದಲ್ಲೇ ಕೆಲ ಸ್ಥಳಗಳ ಮೇಲೆ ದಾಳಿ ನಡೆಸುವ ಸಾಧ್ಯತೆ ಇರುವುದಾಗಿ ಮೂಲಗಳು ಹೇಳಿವೆ.

### ಚಿನಕುರುಳಿ

ಪ್ರಕಾಶ್ ಶೆಟ್ಟಿ

## ಕ್ರಿಕೆಟ್: ಹೆಚ್ಚುವರಿ ಬಸ್– ಬಿಎಂಟಿಸಿ

**ಬೆಂಗಳೂರು:** ನಗರದ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜೂನ್ 13, 16, 19 ಮತ್ತು 23ರಂದು ಭಾರತ ಹಾಗೂ ದಕ್ಷಿಣ ಆಫ್ರಿಕಾ ಮಹಿಳಾ ತಂಡಗಳ ನಡುವಿನ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳ ವೀಕ್ಷಣೆಗೆ ಬರುವವರ ಅನುಕೂಲಕ್ಕಾಗಿ ಬಿಎಂಟಿಸಿ ವತಿಯಿಂದ ಹೆಚ್ಚುವರಿ ಬಸ್‌ಗಳು ಕಾರ್ಯಾಚರಣೆ ನಡೆಸಲಿವೆ. ಕ್ರೀಡಾಂಗಣದಿಂದ ಕಾಡುಗೋಡಿ (ಎಚ್‌ಎಎಲ್ ರಸ್ತೆ), ಸರ್ಜಾಪುರ, ಎಲೆಕ್ಟ್ರಾನಿಕ್ ಸಿಟಿ, ಬನ್ನೇರುಘಟ್ಟ ಮೃಗಾಲಯ, ಹೊಸಕೋಟೆ, ಬನಶಂಕರಿಗೆ ಹೆಚ್ಚುವರಿ ಬಸ್‌ಗಳು ಸಂಚರಿಸಲಿವೆ ಎಂದು ಬಿಎಂಟಿಸಿ ಪಿಆರ್‌ಒ ತಿಳಿಸಿದ್ದಾರೆ.


ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
ಹಿಂದಿನ ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್
(ಭಾರತ ಸರ್ಕಾರದ ಒಂದು ಅಧೀನ ಸಂಸ್ಥೆ)
ಸಿಐಎನ್: U15100MH1950GOI008187 ವೆಬ್‌ಸೈಟ್:www.irel.co.in
ಐಎಸ್‌ಒ9001:2015, ಐಎಸ್‌ಒ 14001:2015 ಮತ್ತು ಐಎಸ್‌ಒ 45001:2018 ಕಂಪನಿ
ಉಲ್ಲೇಖ:ಜಾಹೀರಾತುಸಂ.24–25/4 **ಟೆಂಡರ್ ಪ್ರಕಟಣೆ** ದಿನಾಂಕ:06.06.2024
ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್, ಚವಾರಾ ಇವರು ಕೆಳಕಂಡ ಐಟಂಗಳು/ಜಾಬ್ ವಿವರಗಳಿಗಾಗಿ ಬಿಡ್ ಆಹ್ವಾನಿಸಿದ್ದಾರೆ.

| ಕೆಲಸದ ಸಂ. | ಜಾಬ್/ಐಟಂ ವಿವರ |
|---|---|
| ಜಿಇಎಂ/2024/ಬಿ/ 5015900 | ವಿಟಿ ಪೊನ್ನಮ್ಮ ಗಣಿ ಪ್ರದೇಶದಲ್ಲಿ ಖನಿಜ ಮರಳು ಅಗೆದು, ಸಂಗ್ರಹಿಸಿ, ಲೋಡ್ ಮಾಡಿ, ಸಾಗಾಣಿಕೆ ಮಾಡುವುದಕ್ಕೆ ಮತ್ತು ವಿಟಿ ಗಣಿಗಾರಿಕೆ ನಿವೇಶನದಲ್ಲಿನ ಸ್ಪೈರಲ್ ಘಟಕದ ಹತ್ತಿರ ಅನ್‌ಲೋಡ್ ಮಾಡುವುದಕ್ಕಾಗಿ ಏಜೆನ್ಸಿ ತೊಡಗಿಸಿಕೊಳ್ಳುವುದು. |
| ಜಿಇಎಂ/2024/ಬಿ/ 5020407 | ಪದ್ಮನಾವನ್ ಜೆಟ್ಟಿ ಮತ್ತು ವಟ್ಟಕಯಾಲ್ ನಡುವಿನ ವೆಲ್ಲಂತರುತು ಇಲ್ಲೆಮನೈಟ್ ಗಣಿಯಲ್ಲಿನ ಟಿಎಸ್ ಕೆನಾಲ್‌ನ ಡಿಸಿಲ್ಟಿಂಗ್, ಡ್ರೆಡ್ಜಿಂಗ್‌ಗಾಗಿ 100 ಟನ್ ಸಾಮರ್ಥ್ಯದ ಡೀಸೆಲ್ ಡ್ರೆಡ್ಜರ್ ತೊಡಗಿಸಿಕೊಳ್ಳುವುದು. |

ಬಿಡ್‌ದಾರರು http://irel.co.in ಅಥವಾ http://gem.gov.in ವೆಬ್‌ಸೈಟ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಮೇಲ್ಕಂಡ ಟೆಂಡರ್‌ಗೆ ಯಾವುದೇ ತಿದ್ದುಪಡಿ/ವಿಸ್ತರಣೆ ಉಂಟಾದಲ್ಲಿ, ಅಂತಹವುಗಳನ್ನು ಮೇಲಿನ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
CBC 48139/12/0004/2425 ಸಹಿ/– ಮುಖ್ಯಸ್ಥರು, ಚವಾರಾ



ಕರ್ನಾಟಕ ಸರ್ಕಾರ
**ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ**
**ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ**
ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027, ದೂರವಾಣಿ : 080–22226627/6628, ಫ್ಯಾಕ್ಸ್ : 080–22226630, ಇಮೇಲ್ : dultbangalore@gmail.com, dult@karnataka.gov.in
ಸಂಖ್ಯೆ: DULT-ADM/12/2021 ದಿನಾಂಕ: 12.06.2024
**ಟೆಂಡರ್ ಪ್ರಕಟಣೆ**
ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ನಗರ ಭೂ ಸಾರಿಗೆ ನಿರ್ದೇಶನಾಲಯಕ್ಕಾಗಿ ಒಂದು ವರ್ಷದ ಅವಧಿಗೆ ವಾಹನಗಳ ಸೇವೆಯನ್ನು ಚಾಲಕರೊಂದಿಗೆ ಒದಗಿಸಲು ಅರ್ಹ ಸಂಸ್ಥೆಗಳಿಂದ ದಿನಾಂಕ: **13.06.2024** ರಿಂದ **24.06.2024** ರವರೆಗೆ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಬಿಡ್‌ದಾರರಿಗೆ ಬಿಡ್ ದಾಖಲಾತಿಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://eproc.karnataka.gov.in** ಮತ್ತು ನಗರ ಭೂ ಸಾರಿಗೆ ನಿರ್ದೇಶನಲಾಯದ ವೆಬ್ ಸೈಟ್ **https://dult.karnataka.gov.in** ನಿಂದ ಪಡೆಯಬಹುದು, ಬಿಡ್ ಸಲ್ಲಿಸಲು ಕೊನೆಯ **ದಿನಾಂಕ: 24.06.2024 ರ ಸಂಜೆ 5.30** ಗಂಟೆರೊಳಗಾಗಿ ಸಲ್ಲಿಸತಕ್ಕದ್ದು. ನಂತರ ಬರುವ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/– ಆಡಳಿತಾಧಿಕಾರಿ
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ
ವಾಸಾಸಂಇ/ವಾಪ್ರ/282/ಶಿರಡಿ ಸಾಯಿ/2024–25



**RE-TENDERING/ FRESH TENDERING OF REGT SHOPS**

1. Sealed tenders are invited from interested War Widow/ Widows of def pers killed while on duty/ Disabled Soldiers/ ESM & Spouses/ Widows of ESM subject to license pd of 3 yr (extn upto 5 yrs) for running Regt shop at ASC Centre (North) & ASC Centre (South) :-

| SNo | Name of Shop | No of Shop | Area Sqft | Loc | EMD |
|---|---|---|---|---|---|
| **ASC Centre (North)** | | | | | |
| (a) | Wet Canteen, Adm Bn | 01 | 1160 Sqft | Adm Bn | 1,500/- |
| (b) | Wet Canteen, No 1 Trg Bn (AT) | 01 | 100 Sqft (Temp) | No 1 Trg Bn (AT) | 1,500/- |
| (c) | Wet Canteen, No 2 Trg Bn (MT) (Iblur Camp) | 01 | 183 Sqft (Temp) | No 2 Trg Bn (MT) (Iblur Camp) | 1,500/- |
| (d) | E- Seva Kendra | 01 | 140 Sqft | Shopping Complex ASC Centre (North) | 1,500/- |
| (e) | Juice & Beverage Shop | 01 | 181 Sqft | Shopping Complex ASC Centre (North) | 1,500/- |
| (f) | Tailor Shop | 01 | 580 Sqft | Shopping Complex ASC Centre (North) | 1,500/- |
| **ASC Centre (South)** | | | | | |
| (a) | Grocery & Utensil Shop | 01 | 2,766.28 Sqft | Shopping Complex ASC Centre (South) | 1,500/- |
| (b) | Wet Canteen C/O No 4 Trg Bn | 01 | 2,850 Sqft | No 4 Trg Bn | 1,500/- |
| (c) | Tuck Shop/ Books & Uniform cum Wet Canteen C/O Adm Bn | 01 | 1,024 Sqft | APS ASC Centre & College | 1,500/- |
| (d) | AEPTA Cafetaria (incl Main Lawn, Bunker/ Birdie and Kitchen) C/O No 3 Trg Bn | 01 | 5,465 Sqft | AEPTA | 1,500/- |

2. Application form incl terms & conditions can be obtained from ASC Centre (North) & ASC Centre (South) respectively at the cost of Rs.100/- each as under :-
   (a) Collection of Form - 13 Jun 2024 to 28 Jun 2024.
   (b) Last date of submission - By 1230 hrs on 29 Jun 2024.
3. Queries, if any, may be clarified on Tele No. 080 - 29900365 (ASC Centre (South)) and Tele No. 8433085272 (ASC Centre (North)).

**Published by: ASC Centre (S)**



**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಕಾನಿಇಂ/ಬೃಕಾದವಿ/ಸಕಾಇಂ–6/813/2024–25 ದಿನಾಂಕ: 12.06.2024
**ಸಾರ್ವಜನಿಕರ ಎಚ್ಚರಿಕೆಗಾಗಿ**
ಸಾರ್ವಜನಿಕರ ಎಚ್ಚರಿಕೆಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕವಿಪ್ರನಿನಿಯು 2X150ಎಂ.ವಿ.ಎ, 220/66 ಕೆ.ವಿ. ಹೊರಾಂಗಣ ಜಿ.ಐ.ಎಸ್ ವಿದ್ಯುತ್ ಉಪ–ಕೇಂದ್ರ, ಕಿಯೋನಿಕ್ಸ್ ಸಿಟಿ ವಿದ್ಯುತ್ ಉಪ–ಕೇಂದ್ರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಈ ಕೆಳಕಂಡ ವಿದ್ಯುತ್ ಉಪ–ಕೇಂದ್ರದಿಂದ ಭೂಗತ ಕೇಬಲ್‌ನ್ನು ಎಳೆಯಬೇಕಿರುತ್ತದೆ.
(ಅ) ಹಾಲಿ ಇರುವ 220–220 ಕೆ.ವಿ. ಮೈಲಸಂದ್ರ–ಯರಂಡನಹಳ್ಳಿ ವಿದ್ಯುತ್ ಉಪ–ಕೇಂದ್ರದಿಂದ 220 ಕೆ.ವಿ. 1200 ಚ.ಮೀ.ಮೀ ವ್ಯಾಸದ ಸುಮಾರು 3.44 ಕಿ.ಮೀ ಉದ್ದದ ಭೂಗತ (ಒಂಟಿ ಮಾರ್ಗದ ಲಿಲೋ) ಕೇಬಲ್‌ನ್ನು ಅಳವಡಿಸಲಾಗಿದೆ.
(ಆ) ಹಾಲಿ ಇರುವ 220 ಕೆ.ವಿ. ಸೋಮನಹಳ್ಳಿ–ಹೂಡಿ ವಿದ್ಯುತ್ ಉಪ–ಕೇಂದ್ರದಿಂದ 220 ಕೆ.ವಿ. 1200 ಚ.ಮೀ.ಮೀ ವ್ಯಾಸದ ಸುಮಾರು 6.352 ಉದ್ದದ ಭೂಗತ ಕೇಬಲ್‌ನ್ನು ಅಳವಡಿಸಲಾಗಿದೆ.
ಸದರಿ ಭೂಗತ ಕೇಬಲ್‌ನಲ್ಲಿ **ದಿನಾಂಕ: 13.06.2024 ರಂದು** ಅಥವಾ ತದನಂತರದ ದಿನಗಳಲ್ಲಿ ವಿದ್ಯುಚ್ಛಕ್ತಿ ಪ್ರವಹಿಸಲಾಗುವುದು.
ಸದರಿ ಭೂಗತ ಕೇಬಲ್ ವಿದ್ಯುತ್ ಮಾರ್ಗವು 220–220 ಕೆ.ವಿ. ಮೈಲಸಂದ್ರ–ಯರಂಡನಹಳ್ಳಿ ವಿದ್ಯುತ್ ಉಪ–ಕೇಂದ್ರದಿಂದ ಹಾಗೂ 220 ಕೆ.ವಿ. ಸೋಮನಹಳ್ಳಿ–ಹೂಡಿ ವಿದ್ಯುತ್ ಉಪ–ಕೇಂದ್ರದಿಂದ 220/66 ಕೆ.ವಿ. ಕಿಯೋನಿಕ್ಸ್ ಸಿಟಿ ಹೊರಾಂಗಣ ಜಿ.ಐ.ಎಸ್ ವಿದ್ಯುತ್ ಉಪ–ಕೇಂದ್ರಕ್ಕೆ ಈ ಕೆಳಕಂಡ ಮಾರ್ಗದ ಮೂಲಕ ಹಾದು ಹೋಗುತ್ತದೆ.
1. ಎ.ಇ.ಸಿ.ಎಸ್. ಬಡಾವಣೆ (ಸಿಂಗಸಂದ್ರ ಹತ್ತಿರ)
2. ಬೆಂಗಳೂರು–ಹೊಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹಾದು ಹೋಗುವ ಪಿ.140–ಪಿ–142
3. ಬಿ.ಎಂ.ಆರ್.ಸಿ.ಎಲ್ ಮೆಟ್ರೋ ಪಿಲ್ಲರ್‌ನ ಬಲಭಾಗದಲ್ಲಿ ಹಾದುಹೋಗಿದೆ. (ಪಿಲ್ಲರ್–396)
4. ಬೆರಟೇನ ಅಗ್ರಹಾರ ಮೆಟ್ರೋ ನಿಲ್ದಾಣ.
5. ಎಲೆಕ್ಟ್ರಾನಿಕ್ ಸಿಟಿ ಮೆಟ್ರೋ ನಿಲ್ದಾಣ
6. ಕೋನಪ್ಪನ ಅಗ್ರಹಾರ ಮೆಟ್ರೋ ನಿಲ್ದಾಣ
7. ಹೊಸ ರೋಡ್ ಮೆಟ್ರೋ ನಿಲ್ದಾಣ
8. ಎಲ್ಸಿಟಾ ಲಿಮಿಟ್ಸ್ (1ನೇ ಮುಖ್ಯ ರಸ್ತೆ, 2ನೇ ಅಡ್ಡರಸ್ತೆ, 3ನೇ ಅಡ್ಡರಸ್ತೆ) ಮೂಲಕ 220/66 ಕೆ.ವಿ. ಹೊರಾಂಗಣ ಜಿ.ಐ.ಎಸ್. ಕಿಯೋನಿಕ್ಸ್ ಸಿಟಿ ವಿದ್ಯುತ್ ಉಪ–ಕೇಂದ್ರಕ್ಕೆ.

ಆದುದರಿಂದ ಈ ಮೇಲ್ಕಂಡ 220 ಕೆ.ವಿ. ಭೂಗತ ಕೇಬಲ್ ಹಾದು ಹೋಗಿರುವ ಮಾರ್ಗದಲ್ಲಿ ಯಾವುದೇ ಸಾರ್ವಜನಿಕರು / ಬೃ.ಬೆಂ.ಮ.ಪಾಲಿಕೆ / ಸರ್ಕಾರಿ ಸಂಸ್ಥೆಗಳು /ಪಟ್ಟಣ ಪಂಚಾಯಿತಿ / ಗ್ರಾಮ ಪಂಚಾಯಿತಿ / GAIL / ಖಾಸಗಿ ಸಂಸ್ಥೆ/ ರೈತರುಗಳು ರಸ್ತೆಯನ್ನು ಅಗೆಯಬಾರದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ. ಯಾರಾದರೂ ಇಂತಹ ಕೃತ್ಯಗಳನ್ನು ಎಸಗಿದಲ್ಲಿ ಉಂಟಾಗುವ ಅಪಘಾತಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಯಾವುದೇ ರೀತಿಯಲ್ಲಿ ಜವಾಬ್ದಾರಿಯಾಗುವುದಿಲ್ಲ ಹಾಗೂ ಇದರಿಂದ ಆಗುವ ನಿಗಮದ ಆಸ್ತಿ ಹಾಗೂ ಕಂದಾಯ ನಷ್ಟವನ್ನು ಸಂಬಂಧಪಟ್ಟವರೇ ಭರಿಸಬೇಕಾಗುತ್ತದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಬೃಹತ್ ಕಾಮಗಾರಿ ದಕ್ಷಿಣ ವಿಭಾಗ, ಕವಿಪ್ರನಿನಿ, ಆನಂದರಾವ್ ವೃತ್ತ, ಬೆಂಗಳೂರು–560009


## ಸಾಂಕ್ರಾಮಿಕ ರೋಗ: ಶಾಲಾ ಮಕ್ಕಳಿಂದ ಜನಜಾಗೃತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾಂಕ್ರಾಮಿಕ ರೋಗಗಳಾದ ಡೆಂಗಿ, ಚಿಕೂನ್ ಗುನ್ಯಾ, ಮಲೇರಿಯಾ ಬಗ್ಗೆ ಅರಿತು, ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ಶಾಲಾ ಮಕ್ಕಳು ಜನಜಾಗೃತಿ ಮೂಡಿಸಿದರು.

ಬಿಬಿಎಂಪಿ ಮಹದೇವಪುರ ವಲಯದ ಕೃಷ್ಣರಾಜಪುರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಬಿ.ನಾರಾಯಣಪುರ ಸರ್ಕಾರಿ ಪ್ರೌಢ ಶಾಲೆಯ ಸಹಯೋಗದೊಂದಿಗೆ ಜನಜಾಗೃತಿ ನಡೆಯಿತು.

ಆಡಳಿತ ವೈದ್ಯಾಧಿಕಾರಿ ಡಾ. ಬಾಬು ಮಹೇಂದ್ರ ಪ್ರಸಾದ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಗುರುರಾಜ್ ನೇತೃತ್ವದಲ್ಲಿ ಪ್ರೌಢಶಾಲಾ ಮಕ್ಕಳು ಜನ ಜಾಗೃತಿ-ಜಾಥಾದೊಂದಿಗೆ ಲಾರ್ವಾ ಸಮೀಕ್ಷೆ ಮತ್ತು ನಿರ್ಮೂಲನ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಯಿತು.

60 ವಿದ್ಯಾರ್ಥಿಗಳು ಪಾಲ್ಗೊಂಡು, 1,200ಕ್ಕೂ ಹೆಚ್ಚು ಮನೆಗಳಿಗೆ ಆಶ್ರಿತ ರೋಗವಾಹಕ ರೋಗಗಳ ಕುರಿತ ಕರಪತ್ರಗಳನ್ನು ಹಂಚಿದರು.

ಕೃಷ್ಣರಾಜಪುರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷ

ಣಾಧಿಕಾರಿ ಶ್ರೀಶೈಲ್ ಕನ್ನಾಳ್ ಅವರು ಡೆಂಗಿ, ಚಿಕೂನ್ ಗುನ್ಯಾ ಕುರಿತಾದ ಆರೋಗ್ಯ ಶಿಕ್ಷಣವನ್ನು ನೀಡಿದರು.

ಆರೋಗ್ಯನಿರೀಕ್ಷಣಾಧಿಕಾರಿಗಳಾದ ಮಂಜುನಾಥ, ಕಿರಣ್, ಶರತ್, ಶಿವಣ್ಣ ಉಪಸ್ಥಿತರಿದ್ದರು.


**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಮುಖ್ಯ ಅಯುಕ್ತರು ರವರ ಕಚೇರಿ, ಅನೆಕ್ಸ್ ಕಟ್ಟಡ–1, ನರಸಿಂಹರಾಜ ಚೌಕ, ಬೆಂಗಳೂರು–560 002.
ಬೃಬೆಂಮಪಾ/ಮು. ಆಯುಕ್ತರು/ಪಿಎಸ್‌ಆರ್(ಜಿ)/452/2023–24 **ನಮೂನೆ–3** ದಿನಾಂಕ: 05–06–2024
**ಸಾರ್ವಜನಿಕ ಪ್ರಕಟಣೆ**
ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 15–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, **ಎನ್ ಆರ್ ರಸ್ತೆಯಿಂದ ಕೆ ಹೆಚ್ ರಸ್ತೆವರೆಗೆ 1 ಕಿ.ಮೀ. ಉದ್ದದ ರಸ್ತೆಯನ್ನು ವಿಸ್ತರಿಸಲು** ಈ ಕೆಳಗಿನ ವೇಳಾಪಟ್ಟಿಯಲ್ಲಿ ಉಲ್ಲೇಖಿಸಲಾದ ಪ್ರದೇಶವು ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರಿಗೆ ಸ್ಥಳೀಯ ಪ್ರದೇಶ ಪ್ರಾಧಿಕಾರದ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಅಗತ್ಯವಿರುತ್ತದೆ.
ಈ ಕೆಳಗಿನ ಜಮೀನು/ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳ ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು/ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ/ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.
ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಡೆಪ್ಯೂಟಿ ಕಮೀಷನರ್‌ರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮಾ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

**ಭೂಮಿ/ಕಟ್ಟಡ ಪ್ರದೇಶವನ್ನು ನೀಡಿದ/ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ**

ಜಿಲ್ಲೆಯ ಹೆಸರು: ಬೆಂಗಳೂರು ನಗರ ತಾಲ್ಲೂಕು: ಬೆಂಗಳೂರು ಪೂರ್ವ ಗ್ರಾಮದ ಹೆಸರು: ಸುಧಾಮನಗರ ವಾರ್ಡ್

| Sy. No/ Khata No. | Type of Land: Vacant | Type of Land: Built up | Nature of Land: Agriculture | Nature of Land: Converted undeveloped | Nature of Land: Approved layout / Developed land Building Site | Dimension of the land/plot & extent in Sq.m: Dimension | Dimension of the land/plot & extent in Sq.m: Extent | Boundaries: North | Boundaries: South | Boundaries: East | Boundaries: West | Building Details: Extent in Sq.m | Building Details: Type of Construction & No. of floors | Building Details: Floor Area Ratio | Present Activity on Land/Building (Specify specific activity such as Shop, office, factory apartment, individual house etc.,) | Market (guidlines) value of the land per Sqm (in Rs.) | Name and address of the owner of the plot/land for which DRC is to be issued |
|---|---|---|---|---|---|---|---|---|---|---|---|---|---|---|---|---|---|
| CTS No.577, LA No.41, PID No. 45/1, Municipal No.1 | Vacant Land | | Converted A Khata Land | | | 161.22 Sqm | | Mission Road | Remaining portion of PID No.48-45-1 | Bharath Petrol Bunk | 1st Cross Road | None | None | None | Vacant | 1,15,500/- per Sqm | 1) Sri. Krishnaraj.S.P. 2) Sri. Seena B.R, 3) T.R. Vadiraj 4) Gururaj Hatwar. Residing at Khatha No.48-45-1, 986/21-1, 2nd Cross, 10th Main Road, Raghavendra Block, Srinagar, Bengaluru. |

ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು.

| ವಿಭಾಗ/ಉಪ–ವಿಭಾಗ/ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ | ವಿಶೇಷ ಭೂಸ್ವಾಧೀನ ಅಧಿಕಾರಿ, 2ನೇ ಮಹಡಿ, ಕೊಠಡಿ ಸಂ. 208, ಅನೆಕ್ಸ್ ಕಟ್ಟಡ–3, ಬೃಬೆಂಮಪಾ, ಎನ್.ಆರ್.ಚೌಕ, ಬೆಂಗಳೂರು–560002. |
|---|---|

ಸಹಿ/– ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.



**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.
ಸಂಖ್ಯೆ: ಬೆಂಅಪ್ರಾ/ನಯೋಸ/CLU-36/541/2024–25 ದಿನಾಂಕ: 12–06–2024
**ಪ್ರಕಟಣೆ**
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ಕೈಗಾರಿಕೆ'** ಭೂಉಪಯೋಗ ವಲಯದಿಂದ **'ವಸತಿ'** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ/ಗುಂ | BIAAPA ಮಹಾಯೋಜನೆ 2021 ರ ಪ್ರಕಾರ ಭೂಉಪಯೋಗ | ಬದಲಾವಣೆ ಕೋರಿರುವ ಭೂಉಪಯೋಗ |
|---|---|---|---|---|---|---|---|
| ಮೆ॥ ಡ್ರೀಮ್ ಲ್ಯಾಂಡ್ ಅವೆನ್ಯೂ ಪ್ರೈ, ಲಿ., ಅಂಡ್ ಅಲೋಕಂ ಪೆದ್ದಬ್ಬಯ್ಯ, ಎನ್ ಎಸ್ ಎಲ್ ಐಕಾನ್, 4ನೇ ಮಹಡಿ, #8–2–684/2/ಎ, ಫ್ಲಾಟ್ ನಂ.1 ರಿಂದ 4, ಐಸಿಐಸಿಐ ಬ್ಯಾಂಕ್ ಎದುರು, ನಂ.12, ಬಂಜರಾ ಹಿಲ್ಸ್, ಹೈದರಾಬಾದ್ – 500034. | ಯಲಹಂಕ | ಜಾಲ | ಬಂಡಿ ಕೊಡಿಗೇಹಳ್ಳಿ | 120, 121, 122, 123, 126/2, 127/2, 128/2, & 129/2 | ಒಟ್ಟು 23ಎ – 27ಗುಂ | ಕೈಗಾರಿಕೆ | ವಸತಿ |

**ಷರಾ:** ಈ ಜಮೀನಿನಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ಕೈಗಾರಿಕೆ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಸದರಿ ಜಮೀನನ್ನು ವಸತಿ ಉಪಯೋಗಕ್ಕೆ ಅಭಿವೃದ್ಧಿಪಡಿಸಿದರೆ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿ ನಡೆಯುವ ಸಮಯದಲ್ಲಿ ಸ್ಥಳೀಯ ಕಾರ್ಮಿಕರಿಗೆ ಉದ್ಯೋಗವಕಾಶ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ನಿರ್ಮಾಣದಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ಕೈಗಾರಿಕೆ ಭೂಉಪಯೋಗ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.



**ನೆಲಮಂಗಲ ಯೋಜನಾ ಪ್ರಾಧಿಕಾರ**
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com
ಸಂಖ್ಯೆ: ನೆಯೋಪ್ರಾ/CLU/34/2023–24 ದಿನಾಂಕ: 13–03–2024
**ಸಾರ್ವಜನಿಕ ಪ್ರಕಟಣೆ**
ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಅವೇರಹಳ್ಳಿ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **'ವ್ಯವಸಾಯ ವಲಯದಿಂದ ವಸತಿ'** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು ಶ್ರೀ / ಶ್ರೀಮತಿ | ತಾಲ್ಲೂಕು / ಹೋಬಳಿ / ಗ್ರಾಮ | ಸ.ನಂ. | ವಿಸ್ತೀರ್ಣ (ಎ–ಗುಂ) | ಅನುಮೋದಿತ ಮಹಾಯೋಜನೆಯ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|
| ಶ್ರೀ ಸಿ. ಕೃಷ್ಣಪ್ಪ ಬಿನ್ ಚಿಕ್ಕಣ್ಣ | ಬೆಂಗಳೂರು ಉತ್ತರ/ ದಾಸನಪುರ/ ಅವೇರಹಳ್ಳಿ | 86 | 07-34 | ವ್ಯವಸಾಯ | ವಸತಿ |
| | | ಒಟ್ಟು | 07-34 | | |

**ಷರಾ:–** ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛೆಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.
ವಾಸಾಸಂಇ/ವಾ.ಪ್ರ/288/ಅಡ್ವರ್ಟೋ/2024–25


## ಅನಧಿಕೃತ ಫ್ಲೆಕ್ಸ್ ತೆರವು 12 ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ 'ಜಾಹೀರಾತು ಮುಕ್ತ ಅಭಿಯಾನ' ಆರಂಭಿಸಿರುವ ಬಿಬಿಎಂಪಿ, ಅನಧಿಕೃತವಾಗಿ ಅಳವಡಿಸಿರುವ ಫ್ಲೆಕ್ಸ್, ಬ್ಯಾನರ್‌ಗಳನ್ನು ತೆರವುಗೊಳಿಸಿ 12 ಎಫ್‌ಐಆರ್ ದಾಖಲಿಸಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಡಿ.ಕೆ ಶಿವಕುಮಾರ್ ಅವರು ಫ್ಲೆಕ್ಸ್, ಬ್ಯಾನರ್ ಕಂಡುಬಂದರೆ ಸ್ಥಳೀಯ ಅಧಿಕಾರಿಗಳನ್ನೇ ಹೊಣೆಯನ್ನಾಗಿ ಮಾಡಲಾಗುತ್ತದೆ ಎಂದು ಮಂಗಳವಾರ ಎಚ್ಚರಿಸಿದ್ದರು. ಈ ಹಿನ್ನೆಲೆಯಲ್ಲಿ ಬುಧವಾರ ಅಧಿಕಾರಿಗಳು ತೆರವು ಕಾರ್ಯಾಚರಣೆಗೆ ವೇಗ ನೀಡಿದ್ದಾರೆ.

ಜೂನ್ 1ರಿಂದ ಜೂನ್ 12ರವರೆಗೆ 1259 ಫ್ಲೆಕ್ಸ್, ಬ್ಯಾನರ್, ಎಲ್‌ಇಡಿ ಹಾಗೂ ಹೋರ್ಡಿಂಗ್‌ಗಳನ್ನು ತೆರವುಗೊಳಿಸಲಾಗಿದೆ. ಆರ್.ಆರ್.ನಗರ ಹಾಗೂ ಮಹದೇವಪುರದಲ್ಲಿ ಅತಿ ಹೆಚ್ಚು ಫ್ಲೆಕ್ಸ್ ತೆರವುಗೊಳಿಸಲಾಗಿದ್ದರೆ, ಪಶ್ಚಿಮ ವಲಯದಲ್ಲಿ ಅತಿ ಹೆಚ್ಚು 15 ದೂರುಗಳು ದಾಖಲಾಗಿವೆ. ಒಟ್ಟಾರೆ ಪೊಲೀಸ್ ಠಾಣೆಯಲ್ಲಿ 27 ದೂರುಗಳು ದಾಖಲಾಗಿದ್ದು, ಅದರಲ್ಲಿ 12 ಎಫ್‌ಐಆರ್ ದಾಖಲಾಗಿವೆ ಎಂದು ಪ್ರಕಟಣೆ ತಿಳಿಸಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತುಗಳ ಕುರಿತು ಸಹಾಯವಾಣಿ 1533 ಅಥವಾ ಜಾಹೀರಾತು ವಿಭಾಗದ ವಾಟ್ಸ್ ಆ್ಯಪ್ 9480683939 ಗೆ ಛಾಯಾಚಿತ್ರ ಅಥವಾ ವಿಡಿಯೊ ಕಳುಹಿಸಬಹುದು ಎಂದು ತಿಳಿಸಲಾಗಿದೆ.

## ಕೊನೊಕಾರ್ಪಸ್ ಸಸಿ ತೆಗೆಯಲು ಮನವಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ನೆಡಲಾಗಿರುವ ಕೊನೊಕಾರ್ಪಸ್ ಸಸಿಗಳನ್ನು ಕೂಡಲೇ ತೆರವು ಮಾಡಬೇಕು. ಇನ್ನು ಮುಂದೆ ಆ ಸಸಿಗಳನ್ನು ನೆಡಬಾರದು ಎಂದು ಹಸಿರು ಸೇನಾ ಪಡೆ ಬಿಬಿಎಂಪಿಯ ಆಡಳಿತಗಾರ, ಮುಖ್ಯ ಆಯುಕ್ತ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರಿಗೆ ಮನವಿ ಮಾಡಿದೆ.

ನಗರದಲ್ಲಿ ರಸ್ತೆಗಳು, ಉದ್ಯಾನಗಳು ಸೇರಿದಂತೆ ಬಿಬಿಎಂಪಿಯೇ ಹಲವು ಕಡೆ ಕೊನೊಕಾರ್ಪಸ್ ಸಸಿಗಳನ್ನು ಬೆಳೆಸುತ್ತಿದೆ. ಇದು ಆರೋಗ್ಯಕ್ಕೆ ಹಾನಿಕಾರಕವಾಗಿದ್ದು, ಪರಿಸರದ ಮೇಲೂ ದುಷ್ಪರಿಣಾಮ ಬೀರುತ್ತದೆ. ಹೀಗಾಗಿ, ಕೊನೊಕಾರ್ಪಸ್ ಗಿಡಗಳನ್ನು ನೆಡಬಾರದು ಹಾಗೂ ನರ್ಸರಿಯಲ್ಲೂ ಉಳಿಸಿಕೊಳ್ಳಬಾರದು. ನೆಟ್ಟಿರುವ ಗಿಡಗಳನ್ನು ತೆರವು ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಹಸಿರು ಸೇನಾ ಪಡೆಯ ಪರಿಸರಪ್ರೇಮಿ ಮಂಜು ಮನವಿ ಮಾಡಿದರು.

'ಪ್ರಜಾವಾಣಿ' ಜೂನ್ 5ರಂದು 'ಆರೋಗ್ಯಕ್ಕೆ ಮಾರಕವಾದ 'ದುಬೈ

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಹಸಿರು ಸೇನಾ ಪಡೆಯ ಪರಿಸರಮಂಜು, ಕಿರಣ್‌ಕುಮಾರ್ ಮನವಿ ಸಲ್ಲಿಸಿದರು

ಗಿಡ' ಶೀರ್ಷಿಕೆಯಡಿ ವರದಿ ಪ್ರಕಟಿಸಿ, ಕೊನೊಕಾರ್ಪಸ್ ಗಿಡಗಳು ಆರೋಗ್ಯದ ಮೇಲೆ ಉಂಟು ಮಾಡುವ ದುಷ್ಪರಿಣಾಮವನ್ನು ವಿವರಿಸಿತ್ತು. ಹಸಿರು ಸೇನಾ ಪಡೆ ಮನವಿಯೊಂದಿಗೆ ಈ ವರದಿಯನ್ನೂ ಲಗತ್ತಿಸಿದೆ.

'ಕೊನೊಕಾರ್ಪಸ್ ಸಸಿಗಳನ್ನು ಇನ್ನು ಮುಂದೆ ನೆಡುವುದಿಲ್ಲ, ನೆಟ್ಟಿರುವ ಗಿಡಗಳ ತೆರವಿಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅಧಿಕಾರಿಗಳು ಭರವಸೆ ನೀಡಿದರು' ಎಂದು ಪರಿಸರಪ್ರೇಮಿ ಮಂಜು ತಿಳಿಸಿದರು.

## ವೇತನ ಪರಿಷ್ಕರಣೆಗೆ ನಿವೃತ್ತ ನೌಕರರ ಆಗ್ರಹ

ಎಲ್.ಭೈರಪ್ಪ

**ಬೆಂಗಳೂರು:** ನೌಕರರ ವೇತನ ಪರಿಷ್ಕರಣೆಗೆ ರಚಿಸಲಾಗಿದ್ದ ಏಳನೇ ವೇತನ ಆಯೋಗದ ಶಿಫಾರಸುಗಳನ್ನು ತಕ್ಷಣ ಜಾರಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಒತ್ತಾಯಿಸಿದೆ. 70ರಿಂದ 80 ವರ್ಷದ ವಯೋಮಿತಿ ಇರುವ ನಿವೃತ್ತ ನೌಕರರು ಹಾಗೂ ಕುಟುಂಬ ಪಿಂಚಣಿದಾರರಿಗೆ ಶೇ 10ರಷ್ಟು ನಿವೃತ್ತಿವೇತನ, ಮೃತಪಟ್ಟಾಗ ಅಂತಿಮ ಸಂಸ್ಕಾರಕ್ಕಾಗಿ ₹10 ಸಾವಿರ ಮೊತ್ತ ಪಾವತಿಸುವುದೂ ಸೇರಿದಂತೆ ಹಲವು ಶಿಫಾರಸುಗಳನ್ನು ವೇತನ ಆಯೋಗ ಶಿಫಾರಸು ಮಾಡಿದೆ. ಅಲ್ಲದೆ, ಆಯೋಗವು 'ಸಂಧ್ಯಾ ಕಿರಣ' ಯೋಜನೆ ಜಾರಿಗೆ ಶಿಫಾರಸು ಮಾಡಿದೆ. ಈ ಎಲ್ಲ ಶಿಫಾರಸುಗಳನ್ನು ಜಾರಿಗೊಳಿಸಬೇಕು ಎಂದು ಸಂಘದ ಅಧ್ಯಕ್ಷ ಎಲ್.ಭೈರಪ್ಪ ಆಗ್ರಹಿಸಿದ್ದಾರೆ.


ಉಲ್ಲೇಖ.ಜಾಹೀರಾತು. ಸಂ. 6–2(9)/2023–ಎಸ್ಟಾ/ಇ–ಒ 168048
**ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್**
ಖಾಲಿ ಹುದ್ದೆಗಳ ಸುತ್ತೋಲೆ
ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಡಿಯಲ್ಲಿನ ಒಂದು ಸ್ವಾಯುತ್ತ ಸಂಸ್ಥೆಯಾಗಿರುವ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ಇವರು, ಸೀ. ಫೈನಾನ್ಶಿಯಲ್ ಅಡ್ವೈಸರ್ ಎಂಬ ಹುದ್ದೆಯನ್ನು 14ನೇ ಹಂತದ ವೇತನ ಶ್ರೇಣಿಯಲ್ಲಿ **(ರೂ.1,44,200–2,18,200)** ಫಾರೇನ್ ಸೇವೆಗಳ ಡೆಪ್ಯೂಟೇಶನ್ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದ್ದಾರೆ.
2. ಆಸಕ್ತಿಯುಳ್ಳ ಮತ್ತು ಅರ್ಹ ಅಧಿಕಾರಿಗಳು ಕೇಡರ್ ಕಂಟ್ರೋಲಿಂಗ್ ಅಥಾರಿಟಿ ಮುಖಾಂತರ ನಿರ್ದಿಷ್ಟ ನಮೂನೆಯಲ್ಲಿ ಭರ್ತಿ ಮಾಡಿದ ತಮ್ಮ ಅರ್ಜಿಯನ್ನು, ಸಹಾಯಕ ನಿರ್ದೇಶಕರು (ಆಡಳಿತ), ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್, ವಿ. ರಾಮಲಿಂಗಸ್ವಾಮಿ ಭವನ, ಅನ್ಸಾರಿ ನಗರ, ನವದೆಹಲಿ–110029 ವಿಳಾಸಕ್ಕೆ, ದಿನಾಂಕ **30.06.2024** ರೊಳಗೆ ತಲುಪುವಂತೆ ರವಾನಿಸಬೇಕು. ಮುಂಚಿತವಾಗಿಯೇ ಪ್ರತಿ ಸಲ್ಲಿಸಬಹುದು, ಆದರೆ ಕೇಡರ್ ಕಂಟ್ರೋಲಿಂಗ್ ಅಥಾರಿಟಿಯ ಅನುಮೋದನೆ ಪಡೆದಿರುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.
3. ನಿರ್ದಿಷ್ಟ ನಮೂನೆಗಾಗಿ, ಅರ್ಹತಾ ಷರತ್ತುಗಳಿಗಾಗಿ, ಪ್ರಾಯ, ಇನ್ನಿತರ ಮಾಹಿತಿ ಹಾಗೂ ಷರತ್ತು ಮುಂತಾದವುಗಳಿಗಾಗಿ, ದಯವಿಟ್ಟು ಐಸಿಎಂಆರ್ ವೆಬ್‌ಸೈಟ್‌ಗೆ ಭೇಟಿ ಕೊಡಿ http://icmr.nic.in. >Career Opportunity>detailed advertisement for the post of Senior Financial Advisor (Pay Level-14).
4. ಅಂತಿಮ ದಿನಾಂಕದ ನಂತರ ಸಲ್ಲಿಕೆಯಾಗುವ ಅಥವಾ ಅಪೂರ್ಣವಾಗಿ ಭರ್ತಿಯಾಗಿರುವ ಅಥವಾ ಸೂಕ್ತ ವಿಧಾನದಲ್ಲಿ ಸಲ್ಲಿಕೆಯಾಗದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಾಯಕ ಮಹಾ ನಿರ್ದೇಶಕರು (ಆಡಳಿತ), ಐಸಿಎಂಆರ್
CBC 17152/12/0005/2425



**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗೇಪಲ್ಲಿ**
ಸಂಖ್ಯೆ:ಕೃಉಮಾಸ(ಬಾಪ):57:2024–25 ದಿನಾಂಕ:11.06.2024
**ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ**
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗೇಪಲ್ಲಿ ಮುಖ್ಯ ಮಾರುಕಟ್ಟೆ ಪ್ರಾಂಗಣದ ಮುಂಭಾಗದಲ್ಲಿ ಕೃಷಿಯೇತರ ಚಟುವಟಿಕೆಗಳಿಗಾಗಿ ಹೆಚ್ ಬ್ಲಾಕ್‌ನಲ್ಲಿ 1, 2, 3, 4, 5, 6, 7, 8 ಹಾಗೂ ಜಿ ಬ್ಲಾಕ್‌ನ 4ನೇ ಅಂಗಡಿ (ಒಂದು) ಒಟ್ಟು 09 ಅಂಗಡಿ / ಗೋದಾಮುಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣಗಳಲ್ಲಿ ಆಸ್ತಿ–ಹಂಚಿಕೆ ನಿಯಂತ್ರಣ) ನಿಯಮಗಳು 2004 ರ ನಿಯಮ 14ರನ್ವಯ ನಿಯಮಾನುಸಾರ 11 ತಿಂಗಳ ಅವಧಿಗೆ ಮಾಸಿಕ ಲೀವ್ & ಲೈಸನ್ಸ್ ಶುಲ್ಕದ ಆಧಾರದ ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ ನೀಡಲು ಪ್ರಕಟಣೆ ಹೊರಡಿಸಲಾಗಿದೆ.

| ಕ್ರ. ಸಂ | ವಾಣಿಜ್ಯ ಮಳಿಗೆಗಳ ವಿವರ | ಕಟ್ಟಡಗಳ ಒಟ್ಟು ಸಂಖ್ಯೆ | ಮಾಹೆಯಾನ ಲೀವ್ ಅಂಡ್ ಲೈಸೆನ್ಸ್ ಶುಲ್ಕ (ರೂ.ಗಳಲ್ಲಿ) | ಟೆಂಡರ್ ಫಾರಂ ಶುಲ್ಕ (ರೂ. ಗಳಲ್ಲಿ | ಇ.ಎಂ.ಡಿ ಮೊತ್ತ (ರೂ. ಗಳಲ್ಲಿ | ಹಂಚಿಕೆ ವಿಧಾನ |
|---|---|---|---|---|---|---|
| 1 | ಬಾಗೇಪಲ್ಲಿ ಮುಖ್ಯ ಮಾರುಕಟ್ಟೆ ಪ್ರಾಂಗಣದ ಮುಂಭಾಗದಲ್ಲಿ ಕೃಷಿ ಯೇತರ ಚಟುವಟಿಕೆಗಳಿಗಾಗಿ ನಿರ್ಮಿಸಿದ ಹೆಚ್ ಬ್ಲಾಕ್‌ನಲ್ಲಿನ 1, 2, 3, 4, 5, 6, 7, 8 ಮಳಿಗೆಗಳು | 8 | 4436 | 500 | 8872 | ಟೆಂಡರ್ ಕಂ ಬಹಿರಂಗ ಹರಾಜು |
| 2 | ಜಿ ಬ್ಲಾಕ್‌ನ 4 ನೇ ಅಂಗಡಿ | 1 | 3850 | 500 | 7700 | |

**ಷರತ್ತು ಮತ್ತು ನಿಬಂಧನೆಗಳು:** (1) ಒಟ್ಟು 09 ವಾಣಿಜ್ಯ ಮಳಿಗೆಗಳನ್ನು ಪಡೆಯಲಿಚ್ಛಿಸುವವರು ಪ್ರತ್ಯೇಕವಾಗಿ **ರೂ.500–00 ಗಳನ್ನು** (ಹಿಂತಿರುಗಿಸಲಾಗದ ಹಣ)ಹಾಗೂ ಡಿ.ಡಿ./ನಗದಾಗಿ ಪಾವತಿಸಿ **ದಿನಾಂಕ: 14.06.2024 ರಿಂದ ದಿನಾಂಕ: 03.07.2024 ರ ಸಂಜೆ 05.00 ಗಂಟೆಯವರೆಗೆ** ಟೆಂಡರ್ ಅರ್ಜಿ ಫಾರಂಗಳನ್ನು ಮತ್ತು ವಿವರಗಳನ್ನು ಸಮಿತಿಯಲ್ಲಿ ಪಡೆಯತಕ್ಕದ್ದು. (2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಮುಚ್ಚಿದ ಲಕೋಟೆಯಲ್ಲಿ **ದಿನಾಂಕ: 05.07.2024 ರಂದು ಬೆಳಿಗ್ಗೆ ಸಮಿತಿಯ ಸಭಾಂಗಣದಲ್ಲಿ 10.30 ರಿಂದ 11.30 ಗಂಟೆಯೊಳಗೆ** ಟೆಂಡರ್ ಬಾಕ್ಸ್‌ನಲ್ಲಿ ಹಾಕತಕ್ಕದ್ದು. ನಂತರ ಬಂದ ಟೆಂಡರ್ ಫಾರಂಗಳನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರ್‌ನಲ್ಲಿ ಭಾಗವಹಿಸಿದ ಟೆಂಡರ್‌ದಾರರಿಗೆ ಅಂದೇ **ಮಧ್ಯಾಹ್ನ: 12.30 ಕ್ಕೆ ಬಹಿರಂಗ ಹರಾಜು ನಡೆಸಲಾಗುವುದು.** (3) ಇನ್ನುಳಿದ ಷರತ್ತು & ನಿಬಂಧನೆಗಳನ್ನು ಮತ್ತು ಹೆಚ್ಚಿನ ಮಾಹಿತಿಯನ್ನು ಅರ್ಜಿ ಫಾರ್ಮ್ ಪಡೆಯುವಾಗ ಪಡೆದುಕೊಳ್ಳಬಹುದಾಗಿದೆ ಹಾಗೂ ಕಛೇರಿ ವೇಳೆಯಲ್ಲಿ ಕಾರ್ಯದರ್ಶಿಯವರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗೇಪಲ್ಲಿ
ಸಹಿ/– ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗೇಪಲ್ಲಿ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:23/ಕೆಎಸ್‌ಎಂಸಿಎ/2024–25

# ನಿರ್ಮಾಣ ಪ್ರಕ್ರಿಯೆಗೆ ಸೂಚನೆ

## ವಸಂತ ನರಸಾಪುರದಲ್ಲಿ ಟೌನ್‌ಶಿಪ್: ಕಾಮಗಾರಿ ಪ್ರಗತಿಯ ವಿವರ ಕೇಳಿದ ಸಚಿವ ಬೈರತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತುಮಕೂರು ಜಿಲ್ಲೆ ವಸಂತನರಸಾಪುರ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತೆ ನಗರಾಭಿವೃದ್ಧಿ ಇಲಾಖೆಯಿಂದ ಸಂಯೋಜಿತ ಟೌನ್‌ಶಿಪ್ ಮಾಡಲು ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಇಲಾಖಾ ಅಧಿಕಾರಿಗಳ ಸಭೆ ನಡೆಸಿದ ಅವರು, ಕಳೆದ ಮೂರು ತಿಂಗಳಲ್ಲಿ ನಡೆದಿರುವ ಕಾಮಗಾರಿಗಳು ಮತ್ತು ಕೈಗೊಂಡಿರುವ ಯೋಜನೆಗಳ ಪ್ರಗತಿಯ ವಿವರ ಪಡೆದರು.

ವಸಂತನರಸಾಪುರದ ಬಳಿ ಸುಮಾರು 500 ಎಕರೆ ಪ್ರದೇಶದಲ್ಲಿ ಸಂಯೋಜಿತ ಟೌನ್‌ಶಿಪ್ ನಿರ್ಮಾಣ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಭಾಷಣದಲ್ಲಿ ಘೋಷಿಸಿದ್ದರು. ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿತ್ತು. ನೀತಿ ಸಂಹಿತೆ ಮುಕ್ತಾಯ ಆಗಿರುವುದರಿಂದ ಇನ್ನು ಟೌನ್‌ಶಿಪ್ ನಿರ್ಮಾಣದ ಬಗ್ಗೆ ಗಮನಹರಿಸ-ಬೇಕು ಎಂದು ಹೇಳಿದರು.

ಹಾಸನ, ಚಿಕ್ಕಮಗಳೂರು, ಬೆಳಗಾವಿ ಮತ್ತು ಕೋಲಾರ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದು, ರಸ್ತೆಗೆ ಡಾಂಬರೀಕರಣ, ರಸ್ತೆ ನಿರ್ಮಾಣ ಹಾಗೂ ರಿಂಗ್ ರಸ್ತೆ ನಿರ್ಮಾಣ ಮಾಡಲು ಕೆಲ ಅಡೆತಡೆಗಳು ಎದುರಾಗಿವೆ. ಮತ್ತೆ ಅಲ್ಪಾವಧಿಯ ಮರು ಟೆಂಡರ್ ಕರೆಯುವಂತೆ ಅವರು ನಿರ್ದೇಶನ ನೀಡಿದರು.

ಮಹಾನಗರ ಪಾಲಿಕೆಗಳಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಹೆಚ್ಚು ಇದ್ದರೆ, ಕಡಿಮೆ ಮಾನವ ಸಂಪನ್ಮೂಲ ಇರುವ ಜಾಗಕ್ಕೆ ನಿಯೋಜನೆ ಮಾಡಲು ಸಾಧ್ಯವೇ ಎನ್ನುವುದನ್ನು ಪರಿಶೀಲಿಸಿ ಎಂದು ಇಲಾಖಾ ಕಾರ್ಯದರ್ಶಿಯವರಿಗೆ ಸುರೇಶ್ ಸೂಚಿಸಿದರು.

**ಎರವಲು ಸೇವೆ ಪಡೆಯಲು ಸಲಹೆ:** ಸಹಾಯಕ ಎಂಜಿನಿಯರ್‌ಗಳು, ಕಿರಿಯ ಎಂಜಿನಿಯರ್‌ಗಳು ಸೇರಿ ತಾಂತ್ರಿಕ ಸಿಬ್ಬಂದಿಯನ್ನು ಎರವಲು ಸೇವೆ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ಬಾಕಿ ಉಳಿದಿರುವ ಕಾಮಗಾರಿಗಳು ಹಾಗೂ ಯೋಜನೆಗಳನ್ನು ಪೂರ್ಣಗೊಳಿಸಬೇಕು ಎಂದು ಅವರು ಹೇಳಿದರು.

ಅಮೃತ್ 2.0 ಯೋಜನೆಯಡಿ ರಾಜ್ಯದ ನಗರ ಪ್ರದೇಶಗಳಲ್ಲಿ ಕೈಗೊಳ್ಳಬೇಕಾಗಿ-ರುವ ಅಭಿವೃದ್ಧಿ ಕಾಮಗಾರಿಗಳಿಗೆ ತಗಲುವ ಹಣದ ವೆಚ್ಚ ಕುರಿತಂತೆ ಕ್ರಿಯಾ ಯೋಜನೆ ರೂಪಿಸುವಂತೆಯೂ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೆ ಸೂಚಿಸಿದರು.

ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಶರತ್.ಬಿ, ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ನಿಗಮದ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮೀಕಾಂತ ರೆಡ್ಡಿ ಅವರು ಹಾಜರಿದ್ದರು.

### ವಿವಿಧ ನಗರಗಳಲ್ಲೂ ಪಾಲಿಕೆ ಶಾಲೆ?

ಬಿಬಿಎಂಪಿ ವ್ಯಾಪ್ತಿಯಲ್ಲಿ ಇರುವಂತೆ ಇತರೆ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲೂ ಪಾಲಿಕೆ ಶಾಲೆಗಳನ್ನು ಆರಂಭಿಸಲು ಸರ್ಕಾರ ಚಿಂತನೆ ನಡೆಸಿದ್ದು, ಎಲ್ಲೆಲ್ಲಿ ತೆರೆಯಲು ಸಾಧ್ಯವಿದೆ ಎಂಬುದನ್ನು ಪರಿಶೀಲಿಸಲು ಸಚಿವ ಬೈರತಿ ಸುರೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ಈ ರೀತಿಯ ಶಾಲೆಗಳನ್ನು ತೆರೆಯಲು ಸಾಧ್ಯವೇ ಎಂಬುದನ್ನು ಪರಿಶೀಲಿಸಿ ತಿಳಿಸುವಂತೆ ಅವರು ಸಲಹೆ ನೀಡಿದರು.

# ಟೌನ್‌ಶಿಪ್ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ

## ದೊಡ್ಡಬಳ್ಳಾಪುರ, ದೊಡ್ಡಬೆಳವಂಗಲಕ್ಕೆ ಡಿ.ಕೆ.ಶಿವಕುಮಾರ್ ಭೇಟಿ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲ ಹೋಬಳಿಯ ಸಕ್ಕರೆಗೊಲ್ಲಹಳ್ಳಿ ಸಮೀಪ ಟೌನ್‌ಶಿಪ್ ನಿರ್ಮಾಣಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಥಳ ಪರಿಶೀಲನೆ ನಡೆಸಿದರು. ದೊಡ್ಡಬಳ್ಳಾಪುರ ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಚುಂಚೇಗೌಡ ಇದ್ದರು

**ದೊಡ್ಡಬಳ್ಳಾಪುರ:** ಬೆಂಗಳೂರಿನ ಸುತ್ತ ಟೌನ್‌ಶಿಪ್ ಅಭಿವೃದ್ಧಿಪಡಿಸಲು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬುಧವಾರ ಅಧಿಕಾರಿಗಳೊಂದಿಗೆ ತಾಲ್ಲೂಕಿನ ಕಸಬಾ ಹೋಬಳಿ ಹಾಗೂ ದೊಡ್ಡಬೆಳವಂಗಲ ಹೋಬಳಿಯಲ್ಲಿ ಸ್ಥಳ ಪರಿಶೀಲನೆ ನಡೆಸಿದರು.

ಬೆಂಗಳೂರಿನಲ್ಲಿ ವಸತಿ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ರಾಜಧಾನಿಯ ಸುತ್ತಲಿನ ತಾಲ್ಲೂಕುಗಳಲ್ಲಿ ಹೈಟೆಕ್ ಸೌಲಭ್ಯ ಒಳಗೊಂಡ ಟೌನ್‌ಶಿಪ್ ನಿರ್ಮಿಸುವ ಸರ್ಕಾರದ ಯೋಜನೆ ಭಾಗವಾಗಿ ಕಸಬಾ ಹೋಬಳಿಯ ರಾಜಘಟ್ಟ, ತಿಮ್ಮಸಂದ್ರ, ದೊಡ್ಡಬೆಳವಂಗಲ ಹೋಬಳಿಯ ಸಕ್ಕರೆಗೊಲ್ಲಹಳ್ಳಿ, ಸೊಣ್ಣೇನಹಳ್ಳಿ ಸಮೀಪ ಸ್ಥಳ ವೀಕ್ಷಿಸಲಾಗಿದೆ ಎಂದು ದೊಡ್ಡ-ಬಳ್ಳಾಪುರ ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಚುಂಚೇಗೌಡ ತಿಳಿಸಿದ್ದಾರೆ.

ಈ ಹಿಂದಿನ ಸರ್ಕಾರದಲ್ಲಿ ಬೆಂಗಳೂರು ಸುತ್ತಲಿನ ತಾಲ್ಲೂಕುಗಳಲ್ಲಿ ಹಾಯ್ದು ಹೋಗುವಂತೆ ರಿಂಗ್ ರಸ್ತೆ ನಿರ್ಮಾಣಕ್ಕೆ ನೀಲನಕ್ಷೆ ಸಿದ್ಧಪಡಿಸಲಾಗಿತ್ತು. ಈ ರಿಂಗ್ ರಸ್ತೆ ರಾಮನಗರ ಜಿಲ್ಲೆಯ ಸಾತನೂರು ಸಮೀಪದಿಂದ ಪ್ರಾರಂಭವಾಗಿ ಬಿಡದಿ, ಮಾಗಡಿ, ಸೋಲೂರು, ದಾಬಸ್‌ಪೇಟೆ, ದೊಡ್ಡಬಳ್ಳಾಪುರ,ದೇವನಹಳ್ಳಿ, ನಂದಗುಡಿ, ಆನೇಕಲ್ ತಾಲ್ಲೂಕಿನ ಮೂಲಕ ಮತ್ತೆ ಸಾತನೂರು ಸೇರುತ್ತದೆ.

ರಿಂಗ್ ರಸ್ತೆ ನಿರ್ಮಾಣದಿಂದ ಅಂತರ ರಾಜ್ಯಗಳ ಹೆದ್ದಾರಿ, ವಿಮಾನ ನಿಲ್ದಾಣವನ್ನು ಸುಲಭವಾಗಿ ತಲುಪಬಹುದಾಗಿದೆ. ನೂತನ ಟೌನ್‌ಶಿಪ್‌ಗಳನ್ನು ಸಹ ಈ ರಿಂಗ್ ರಸ್ತೆ ಸಮೀಪದಲ್ಲೇ ನಿರ್ಮಿಸುವ ಉದ್ದೇಶದೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಥಳ ಪರಿಶೀಲನೆ ನಡೆಸಿದ್ದಾರೆ. ಇನ್ನೂ ಯಾವುದನ್ನೂ ಅಂತಿಮಗೊಳಿಸಿಲ್ಲ. ಟೌನ್‌ಶಿಪ್ ನಿರ್ಮಾಣದ ಸಾಧ್ಯತೆ ಕುರಿತಂತೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳೊಂದಿಗೆ ಚರ್ಚಿಸಿದ ನಂತರ ಶೀಘ್ರದಲ್ಲೇ ಅಂತಿಮಗೊಳ್ಳಲಿದೆ ಎಂದು ಅವರು ತಿಳಿಸಿದ್ದಾರೆ. ನಗರಾಭಿವೃದ್ಧಿ ಹಾಗೂ ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳು ಇದ್ದರು.

# ‘ಹೆಚ್ಚಿದ ಮಹಿಳೆಯರ ಕೊಲೆ: ಸಮಿತಿ ರಚಿಸಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇತ್ತೀಚೆಗೆ ರಾಜ್ಯದಲ್ಲಿ ಮಹಿಳೆಯರು, ವಿದ್ಯಾರ್ಥಿನಿಯರ ಕೊಲೆ, ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿವೆ. ಇದರ ನಿಯಂತ್ರಣಕ್ಕೆ ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಬೇಕು ಎಂದು ‘ನಾವೆದ್ದು ನಿಲ್ಲದಿದ್ದರೆ ಒಕ್ಕೂಟ’, ‘ಮಹಿಳಾ ಮುನ್ನಡೆ’, ‘ಜನವಾದಿ ಮಹಿಳಾ ಸಂಘಟನೆ’ಯ ಸದಸ್ಯರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಹಕ್ಕೊತ್ತಾಯ ಸಭೆ ನಡೆಸಿದರು.

‘ರಾಜ್ಯದಲ್ಲಿ ಇತ್ತೀಚೆಗೆ ನಡೆದ ಎಲ್ಲ ರೀತಿಯ ಪ್ರಕರಣಗಳನ್ನು ಅಧ್ಯಯನ ಮಾಡಲು ತಜ್ಞರು, ಕಾನೂನು ಪರಿಣತರು, ಅಧಿಕಾರಿಗಳು ಹಾಗೂ ಸಾಮಾಜಿಕ ಹೋರಾಟಗಾರರನ್ನು ಒಳಗೊಂಡ ಸಮಿತಿ ರಚಿಸಬೇಕು’ ಎಂದು ಹೋರಾಟಗಾರರು ಸಭೆಯಲ್ಲಿ ಒತ್ತಾಯಿಸಿದರು.

ಹೋರಾಟಗಾರ್ತಿ ಬೃಂದಾ ಅಡಿಗೆ, ‘ಇತ್ತೀಚೆಗೆ ನಡೆದ ಬಿಬಿಎ ವಿದ್ಯಾರ್ಥಿನಿ ಆರ್. ಪ್ರಬುದ್ಧಾ ಅವರ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ 14 ವರ್ಷದ ಬಾಲಕನನ್ನು ಬಂಧಿಸಲಾಗಿತ್ತು. ಆರೋಪಿಯು ಬಾಲಕ ಎಂಬ ಕಾರಣಕ್ಕೆ ಜಾಮೀನು ನೀಡಲಾಗಿದೆ. ಆದರೆ, ಅವನು ಮಾಡಿರುವ ಕೃತ್ಯ ಆತನ ವಯಸ್ಸಿಗೂ ಮೀರಿದ್ದು, ಈ ಪ್ರಕರಣದಲ್ಲಿ ಆರೋಪಿಗೆ ಸಾಮಾನ್ಯರಿಗೆ ಆಗುವ ಶಿಕ್ಷೆ ಆಗಬೇಕಿತ್ತು’ ಎಂದರು.

ಸಾಮಾಜಿಕ ಹೋರಾಟಗಾರ್ತಿ ಸೌಮ್ಯ, ‘ನನ್ನ ಮಗಳು ಪ್ರಬುದ್ಧಾಳನ್ನು ಕೊಲೆ ಮಾಡಿರುವ ಆರೋಪಿ ಬಾಲಕ ಎಂಬ ಕಾರಣಕ್ಕೆ ಅವನ ಹೆಸರು ಸಾರ್ವಜನಿಕವಾಗಿ ಹೇಳಲು ಕಾನೂನಿನಲ್ಲಿ ಅವಕಾಶವಿಲ್ಲ. ಕೊಲೆ ಮಾಡಿದ ಹತ್ತು ದಿನಗಳಲ್ಲಿ ಆರೋಪಿಗೆ ಜಾಮೀನು ಸಿಕ್ಕಿರುವುದು ದುರಂತ. ಇಂತಹ ಕಾನೂನಿಗೆ ತಿದ್ದುಪಡಿ ತರುವ ಮೂಲಕ ನನ್ನ ಮಗಳನ್ನು ಕೊಲೆ ಮಾಡಿದ ಆರೋಪಿಗೆ ಕಠಿಣ ಶಿಕ್ಷೆ ನೀಡಬೇಕು’ ಎಂದು ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅವರಿಗೆ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿದ ನಾಗಲಕ್ಷ್ಮಿ ಅವರು, ‘ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಗೃಹ ಸಚಿವರೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಲೇಖಕಿಯರಾದ ದು. ಸರಸ್ವತಿ, ಕೆ. ಶರೀಫಾ, ಬಿ.ಟಿ. ಲಲಿತಾ ನಾಯಕ್ ಅವರು ಸೇರಿದಂತೆ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ ಹಕ್ಕೊತ್ತಾಯ ಸಭೆಯಲ್ಲಿ ‘ನಾವೆದ್ದು ನಿಲ್ಲದಿದ್ದರೆ ಒಕ್ಕೂಟ’, ‘ಮಹಿಳಾ ಮುನ್ನಡೆ’, ‘ಜನವಾದಿ ಮಹಿಳಾ ಸಂಘಟನೆ’ಯ ಸದಸ್ಯರು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

### ಹಕ್ಕೊತ್ತಾಯಗಳು

- ವಿದ್ಯಾರ್ಥಿನಿಯರು, ಮಹಿಳೆಯರು ಮತ್ತು ಸಾರ್ವಜನಿಕರು ಯಾವುದೇ ರೀತಿಯ ಸಮಸ್ಯೆಗಳಿಗೆ ಸಿಲುಕಿದ್ದರೆ, ಧೈರ್ಯದಿಂದ ಪೊಲೀಸ್ ಇಲಾಖೆ, ಸಂಬಂಧಪಟ್ಟ ಇತರೆ ಸರ್ಕಾರದ ಘಟಕಗಳನ್ನು ಸಂಪರ್ಕಿಸಲು ಉತ್ತೇಜಿಸುವಂತೆ ಜಾಗೃತಿ ಮೂಡಿಸಬೇಕು.
- ಹದಿಹರೆಯದವರು, ವಿದ್ಯಾರ್ಥಿಗಳು ಸೇರಿದಂತೆ ಸಾರ್ವಜನಿಕರಲ್ಲಿ ಮಹಿಳೆಯರ ಮೇಲೆ ಆಗುತ್ತಿರುವ ದಾಳಿಗಳಾಗದಂತೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಇದರಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ ಮತ್ತು ಸಾಮಾಜಿಕ ಸಂಘಟನೆಗಳು ಸಕ್ರಿಯವಾಗಿ ಭಾಗವಹಿಸಬೇಕು.
- ಭೀಕರ ದಾಳಿಗಳು, ದೌರ್ಜನ್ಯ ಪ್ರಕರಣಗಳು ನಡೆದಾಗ ಜವಾಬ್ದಾರಿಯುತ ಸ್ಥಾನದಲ್ಲಿ-ರುವವರು ಹಗುರವಾದ ಹೇಳಿಕೆಗಳನ್ನು ನೀಡಬಾರದು. ಸಮಾಜವು ಮೌನ ವಹಿಸದೇ ಇದರ ಬಗ್ಗೆ ಧ್ವನಿ ಎತ್ತಬೇಕು. ನಮ್ಮ ಹೆಣ್ಣುಮಕ್ಕಳನ್ನು ರಕ್ಷಿಸಿಕೊಳ್ಳಲು ಎಲ್ಲರೂ ಹೋರಾಟಕ್ಕೆ ಮುಂದಾಗಬೇಕು.

## ಡಾ. ಟಿ ಕೆ. ಬೆಹೆರಾ ಐಐಹೆಚ್‌ಆರ್ ನಿರ್ದೇಶಕ

**ಬೆಂಗಳೂರು:** ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ನಿರ್ದೇಶಕರಾಗಿ ಡಾ.ಟಿ.ಕೆ ಬೆಹೆರಾ ನೇಮಕಗೊಂಡಿದ್ದಾರೆ ಎಂದು ಐಐಹೆಚ್‌ಆರ್ ಸಂಸ್ಥೆ ಬುಧವಾರ ಪ್ರಕಟಣೆಯಲ್ಲಿ ತಿಳಿಸಿದೆ.


ಡಾ. ಟಿ ಕೆ. ಬೆಹೆರಾ

ಸುಧಾ ಮಯೂರ ಓದಿರಿ

## ‘ನೀಟ್’: 23 ಅಭ್ಯರ್ಥಿಗಳು ಡಿಬಾರ್

**ನವದೆಹಲಿ (ಪಿಟಿಐ):** ಪ್ರಸಕ್ತ ಸಾಲಿನ ‘ನೀಟ್–ಯುಜಿ’ನಲ್ಲಿ ನಿಯಮಗಳನ್ನು ಉಲ್ಲಂಘಿಸಿ ಪರೀಕ್ಷಾ ಅಕ್ರಮಗಳನ್ನು ಎಸಗಿದ 63 ಪ್ರಕರಣಗಳು ವರದಿಯಾಗಿದ್ದು, ಅವುಗಳಲ್ಲಿ 23 ಅಭ್ಯರ್ಥಿ-ಗಳನ್ನು ಡಿಬಾರ್ ಮಾಡಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ವೈದ್ಯಕೀಯ ಪ್ರವೇಶ ಪರೀಕ್ಷೆಯ ಪಾವಿತ್ರ್ಯತೆಗೆ ಧಕ್ಕೆಯಾಗಿಲ್ಲ ಎಂದು ಪುನರುಚ್ಚರಿಸಿರುವ ಅವರು, ಯಾವುದೇ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿಲ್ಲ ಎಂದಿದ್ದಾರೆ. ಅಕ್ರಮ ಎಸಗಿದ ಉಳಿದ 40 ಅಭ್ಯರ್ಥಿಗಳ ಫಲಿತಾಂಶ ತಡೆಹಿಡಿಯಲಾಗಿದೆ ಎಂದು ಎನ್‌ಟಿಎ ಮಹಾನಿರ್ದೇಶಕರು ತಿಳಿಸಿದರು.

ನಕಲಿ ಅಭ್ಯರ್ಥಿ, ವಂಚನೆ, ಒಎಂಆರ್ ಶೀಟ್ ತಿದ್ದುವಿಕೆ ಮುಂತಾದ ಪ್ರಕರಣಗಳ ಪರಿಶೀಲನೆಗಾಗಿ ಮೂವರು ಪರೀಕ್ಷಾ ತಜ್ಞರು, ಶಿಕ್ಷಣ ತಜ್ಞರನ್ನು ಒಳಗೊಂಡ ಸಮಿತಿ ರಚಿಸಲಾಗಿತ್ತು. ಸಮಿತಿಯ ಶಿಫಾರಸಿನ ಮೇರೆಗೆ 12 ಅಭ್ಯರ್ಥಿಗಳನ್ನು 3 ವರ್ಷ-ಗಳವರೆಗೆ, ಒಂಬತ್ತು ಅಭ್ಯರ್ಥಿಗಳನ್ನು ಎರಡು ವರ್ಷಗಳ ವರೆಗೆ ಮತ್ತು ಇಬ್ಬರು ಅಭ್ಯರ್ಥಿಗಳನ್ನು ತಲಾ ಒಂದು ವರ್ಷಕ್ಕೆ ಪರೀಕ್ಷೆ ತೆಗೆದುಕೊಳ್ಳದಂತೆ ಡಿಬಾರ್ ಮಾಡಲಾಗಿದೆ. ಉಳಿದ ಅಭ್ಯರ್ಥಿಗಳ ಫಲಿತಾಂಶ ತಡೆಹಿಡಿಯಲಾಗಿದೆ ಎಂದರು.

### ನಗರದಲ್ಲಿ ಇಂದು

**‘ಸಾಮರ್ಥ್ಯ’ ರಾಷ್ಟ್ರೀಯ ಅಂತರ ಕಾಲೇಜು ಉತ್ಸವ–2024: ಉದ್ಘಾಟನೆ:** ರಿಜ್ವಾನ್ ಅರ್ಷದ್, ಅತಿಥಿಗಳು: ಲಿಂಗರಾಜ ಗಾಂಧಿ, ಜಗದೀಶ ಜಿ., ರಾಘವೇಂದ್ರ ರಾವ್, ಗುರುನಂದನ್, ಅಧ್ಯಕ್ಷತೆ: ಚಂದ್ರಶೇಖರ ಬಿ., ಆಯೋಜನೆ ಮತ್ತು ಸ್ಥಳ: ಸರ್ಕಾರಿ ರಾಮನಾರಾಯಣ ಚೆಲ್ಲಾರಾಮ್ ಕಾಲೇಜ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್, ಅರಮನೆ ರಸ್ತೆ, ಬೆಳಿಗ್ಗೆ 10

**‘ಚತುರ್ಭುಜಗಳು’ ಕುರಿತು ಪ್ರೌಢಶಾಲಾ ಶಿಕ್ಷಕರಿಗಾಗಿ ಗಣಿತ ಕಮ್ಮಟ:** ಆಯೋಜನೆ ಮತ್ತು ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಬೆಳಿಗ್ಗೆ 10.30

**ರಾಷ್ಟ್ರೀಯ ಲೈವ್ ಶೆಫ್ ಸ್ಪರ್ಧೆ:** ಅತಿಥಿಗಳು: ಎನ್. ಚಲುವರಾಯಸ್ವಾಮಿ, ಕೆ.ಎಚ್. ಮುನಿಯಪ್ಪ, ಆಯೋಜನೆ: ವರ್ಲ್ಡ್ ಹಾಸ್ಪಿಟಾಲಿಟಿ, ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11.30

**ಹರಿದಾಸ ವಾಣಿ:** ಗಾಯನ: ರಾಗಿಣಿ ರೋಹಿತ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 1ನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

**‘ಶ್ರೀನಿವಾಸ ಕಲ್ಯಾಣ’ ಪ್ರವಚನ:** ಕೆ.ಪಿ. ವಾದಿರಾಜ ಆಚಾರ್ಯ, ಆಯೋಜನೆ ಮತ್ತು ಸ್ಥಳ: ಅಭಯ ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನ, 7ನೇ ಮುಖ್ಯರಸ್ತೆ, ತ್ಯಾಗರಾಜನಗರ, ಸಂಜೆ 7

**ಭರತನಾಟ್ಯ ಪ್ರದರ್ಶನ:** ಪ್ರಸ್ತುತಿ: ನಾಟ್ಯಂ ಕಲಾ ಕೇಂದ್ರದ ವಿದ್ಯಾರ್ಥಿಗಳು, ನಿರ್ದೇಶನ: ಪುಷ್ಪಲತಾ ಮಂಜುನಾಥ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 5ನೇ ಬಡಾವಣೆ, ಜಯನಗರ, ಸಂಜೆ 7.30

**ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.**
**nagaradalli_indu@prajavani.co.in**

TRUSTED PARTNERS
Incredible world of hospitality news | INCREDIBLE HOSPITALITY | I LOVE FOOD | INCREDIBLE FAIRS AND MEDIA
WORLD OF HOSPITALITY
BUSINESS EVENTS FOR HORECA PROFESSIONALS
13 14 15 ಜೂನ್ 2024 | ತ್ರಿಪುರ ವಾಸಿನಿ, ಪ್ಯಾಲೇಸ್ ಗ್ರೌಂಡ್ ಮೇಕ್ರಿ ಸರ್ಕಲ್, ಬೆಂಗಳೂರು, ಭಾರತ
ದಕ್ಷಿಣ ಭಾರತದ
ಸಮಗ್ರ ಬಿ2ಬಿ ಆಹಾರ, ಪಾನೀಯ ಮತ್ತು ಹೋಟೆಲ್ ವಸ್ತು ಪ್ರದರ್ಶನ
ಹೋಟೆಲ್ /ರೆಸ್ಟೋರೆಂಟ್ /ಕ್ಯಾಟರರ್‌ಗಳು /ಕೆಫೆ /ಬೇಕರಿ /ಕ್ಯೂಎಸ್‌ಆರ್ / ಮಾಲೀಕರು ಮತ್ತು ವೃತ್ತಿಪರರು ಪ್ರದರ್ಶನಕ್ಕೆ ಭೇಟಿ ನೀಡಲಿದ್ದಾರೆ.
WOHXpo 2024 FEATURES
150+ ವಸ್ತು ಪ್ರದರ್ಶನ | 500+ ಉತ್ಪನ್ನ | 10+ ಕಾರ್ಯಕ್ರಮ ಮತ್ತು ಸ್ಪರ್ಧೆಗಳು | 8000+ ವ್ಯಾವಹಾರಿಕ ಸಂದರ್ಶಕರು | 200+ ಆಯೋಜಿಸಿದ ಖರೀದಿದಾರರು
ಸಂದರ್ಶಕರ ನೋಂದಣಿಗಾಗಿ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ www.worldofhospitality.in
RSVP:ರಾಜನ್ ನಾಯರ್-9821076065
ಇಮೇಲ್ : rajan@worldofhospitality.in
* ಇದು ಒಂದು ವ್ಯಾಪಾರ ಪ್ರದರ್ಶನ, 18 ವರ್ಷ ವಯಸ್ಸಿನೊಳಗಿನವರಿಗೆ ಪ್ರವೇಶ ನಿಷೇಧಿಸಲಾಗಿದೆ. ಪ್ರವೇಶದ ಹಕ್ಕುಗಳನ್ನು ಇನ್‌ಕ್ರಿಡಿಬಲ್ ಫೇರ್ಸ್ ಮತ್ತು ಮೀಡಿಯಾ ಪ್ರೈ. ಲಿ., ನವರು ಕಾಯ್ದಿರಿಸಿದ್ದಾರೆ.

sminco
YOUR WINDOW TO THE SOCIAL MEDIA WORLD
ಅತಿ ದೊಡ್ಡ Influencer MARKETING PLATFORM-ನ ಭಾಗಿಯಾಗಿ.
SMINCO.IN
ಇದು Jinn! ಅಂತೇ ಕೆಲಸ ಮಾಡುತ್ತೆ.
ನಿಮ್ಮ social presence ಅನ್ನು powerful connection ಆಗಿಸಲು QR code scan ಮಾಡಿ.
ಇಂದೇ ಶುರು ಮಾಡಿ.

ಇದೀಗ ನಿಮ್ಮ ಮನೆಯನ್ನು ಅಪ್‌ಡೇಟ್ ಮಾಡುವ ಸಮಯ ಬಂದಿದೆ! | ಇಂದಿನಿಂದ ಪ್ರಾರಂಭ
ಬೆಳಗ್ಗೆ 10.00–ರಾತ್ರಿ 8.30 ಗಂಟೆ
THE GREAT INDIAN FURNITURE SALE
ನಮ್ಮ ಸ್ಥಳವನ್ನು ಇಲ್ಲಿ ಗುರುತಿಸಿ
13 | 14 | 15 | 16 ಜೂನ್ 2024
ತ್ರಿಪುರವಾಸಿನಿ ಅರಮನೆ ಮೈದಾನ
ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು

ಸೋಫಾ ಸೆಟ್ಸ್ • ಡೈನಿಂಗ್ ಸೆಟ್ • ಕಾಟ್ಸ್ & ವಾರ್ಡ್‌ರೋಬ್ • ಔಟ್‌ಡೋರ್ ಫರ್ನೀಚರ್ • ಹೋಮ್ ಡೆಕೋರ್ ಪ್ರಾಡಕ್ಟ್ಸ್• ಮಸಾಜ್ ಚೇರ್• ಟೀಕ್‌ವುಡ್ ಫರ್ನೀಚರ್ • ವುಡನ್ ಸೋಫಾ ಸೆಟ್ಸ್ • ಲೆದರ್ ಸೋಫಾ ಸೆಟ್ಸ್ • ಕಾರ್ಪೆಟ್ & ರಗ್ಸ್ • ಕುಷನ್ & ಪಿಲ್ಲೋವ್ಸ್ • ರಿಕ್ಲೈನರ್ ಸೋಫಾ ಸೆಟ್ಸ್ & ಇನ್ನೂ ಅನೇಕ...
ಇಎಂಐ ಸೌಲಭ್ಯ ದೊರೆಯುತ್ತದೆ | ಪ್ರವೇಶ ಉಚಿತ | +91 93425 77908
AN EVENT BY iads & events COMPLETE BUSINESS SOLUTIONS

ಲೈಫ್‌ಸ್ಟೈಲ್ ಶಾಪಿಂಗ್ ಎಕ್ಸಿಬಿಷನ್ | ಇಂದು ಆರಂಭ
fb Fashion Bazaar
ನಮ್ಮ ಸ್ಥಳವನ್ನು ಇಲ್ಲಿ ಗುರುತಿಸಿ
13 | 14 | 15 | 16 ಜೂನ್ 2024
ಬೆಳಗ್ಗೆ 10.00–ರಾತ್ರಿ 8.30 ಗಂಟೆ
ತ್ರಿಪುರವಾಸಿನಿ ಅರಮನೆ ಮೈದಾನ
ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು
• ರೆಡಿಮೇಡ್ ಸೂಟ್ಸ್ • ಸ್ಟಿಚ್ಡ್ / ಅನ್‌ಸ್ಟಿಚ್ಡ್ ಡಿಸೈನರ್ ಉಡುಪು • ವೆಸ್ಟರ್ನ್ ಉಡುಪು • ಪಾದರಕ್ಷೆಗಳು • ಲೆದರ ಬ್ಯಾಗ್ಸ್ & ಅಕ್ಸೆಸರಿಗಲು •ಸುಗಂಧ ದ್ರವ್ಯಗಳು •ಸೀರೆಗಳು •ಮಹಿಳೆಯರ ಅಕ್ಸೆಸರಿಗಳು • ಮುತ್ತಿನ ಆಭರಣ • ಫ್ಯಾಷನ್ ಜ್ಯುವೆಲ್ಲರಿ & ಇನ್ನೂ ಅನೇಕ

www.iadsandevents.com | exhibitions_iadsnevents | iadsnevents | ಪ್ರವೇಶ ಉಚಿತ | +91 93425 77908
AN EVENT BY iads & events COMPLETE BUSINESS SOLUTIONS

### ಮೆಟ್ರೊ ಹಳದಿ ಮಾರ್ಗ: ಇನ್ನೂ ತಲುಪದ ಚಾಲಕ ರಹಿತ ಕೋಚ್‌ನ ಎರಡನೇ ಸೆಟ್

# ಒಂದೇ ಸೆಟ್ ಕೋಚ್ ಬಳಸಿ ಪರೀಕ್ಷೆ

• ಬಾಲಕೃಷ್ಣ ಪಿ.ಎಚ್.

ಚಾಲಕ ರಹಿತ ಎಂಜಿನ್‌ನ ನೋಟ

**ಬೆಂಗಳೂರು:** ಚಾಲಕ ರಹಿತ ಎಂಜಿನ್ ಹೊಂದಿರುವ ಕೋಚ್‌ನ ಎರಡನೇ ಸೆಟ್ ಇನ್ನೂ ತಲುಪಿಲ್ಲ. ಹೀಗಾಗಿ 'ನಮ್ಮ ಮೆಟ್ರೊ' ಹಳದಿ ಮಾರ್ಗದಲ್ಲಿ ಒಂದೇ ಪ್ರೊಟೊ ಟೈಪ್ (ಮೂಲ ಮಾದರಿ) ರೋಲಿಂಗ್ ಸ್ಟಾಕ್‌ನಲ್ಲಿಯೇ (ಕೋಚ್‌ಗಳು) ಜೂನ್ 13ರಿಂದ ಪ್ರಮುಖ ಪರೀಕ್ಷೆಗಳನ್ನು ನಡೆಸಲು ಬಿಎಂಆರ್‌ಸಿಎಲ್ ಮುಂದಾಗಿದೆ.

ಚೀನಾದ ಸಿಆರ್‌ಆರ್‌ಸಿ ತಯಾರಿಸಿರುವ ಮೂಲ ಮಾದರಿಯ ಆರು ಕೋಚ್‌ಗಳು (ಒಂದು ಸೆಟ್) ಫೆಬ್ರುವರಿ ಎರಡನೇ ವಾರದಲ್ಲಿ ಬೆಂಗಳೂರಿಗೆ ತಲುಪಿದ್ದವು. ಹೆಬ್ಬಗೋಡಿಯಲ್ಲಿರುವ ಮೆಟ್ರೊ ಡಿಪೊದಲ್ಲಿ ಕೋಚ್‌ಗಳನ್ನು ಜೋಡಿಸಲಾಗಿತ್ತು. ಮಾರ್ಚ್‌ನಲ್ಲಿ ರೈಲನ್ನು ಹಳಿಗೆ ಇಳಿಸಿ ಪರೀಕಾರ್ಥ ಸಂಚಾರ ನಡೆಸಬೇಕಿತ್ತು. ಪ್ರಮುಖ ಪರೀಕ್ಷೆಗಳನ್ನು ನಡೆಸಲು ಎರಡು ಕೋಚ್‌ಗಳ ಅವಶ್ಯವಿದ್ದು, ಏಪ್ರಿಲ್ ಕೊನೆಗೆ ಅಥವಾ ಮೇ ತಿಂಗಳಲ್ಲಿ ಇನ್ನೊಂದು ಸೆಟ್ ಬರುವುದಾಗಿ ಬಿಎಂಆರ್‌ಸಿಎಲ್ ತಂತ್ರಜ್ಞರು ನಿರೀಕ್ಷಿಸಿದ್ದರು. ಆದರೆ, ಎರಡನೇ ಸೆಟ್ ಬಂದಿಲ್ಲ.

ಎರಡು ಸೆಟ್‌ಗಳು ಚೀನಾದಿಂದ ಬರಬೇಕಿದ್ದವು. ಆದರೆ ಒಂದೇ ಸೆಟ್ ಬಂತು. ಎರಡನೇ ಸೆಟ್ ಪಶ್ಚಿಮ ಬಂಗಾಳದ ಟಿಟಾಗಢ್ ರೈಲ್ವೆ ಸಿಸ್ಟಮ್ ಲಿಮಿಟೆಡ್‌ನಿಂದ ಬರಲಿದೆ. ಆಗಸ್ಟ್‌ನಲ್ಲಿ ನಗರಕ್ಕೆ ತಲುಪಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.

ಸ್ಟ್ಯಾಟಿಕ್ ಮತ್ತು ಎಲೆಕ್ಟ್ರಿಕಲ್ ಸರ್ಕಿಟ್ ಪರೀಕ್ಷೆಗಾಗಿ ಬೋಗಿಗಳನ್ನು ಜೋಡಿಸಿ, ಪರೀಕ್ಷಾ ಟ್ರ್ಯಾಕ್‌ಗೆ ಇಳಿಸಲಾಗಿದೆ. ಜೂನ್ 13ರಿಂದ ಮುಖ್ಯ ಪರೀಕ್ಷೆಗಳನ್ನು ಆರಂಭಿಸಲಾಗುವುದು. 37 ಮಾದರಿಯ ಪರೀಕ್ಷೆಗಳು ನಡೆಯಲಿವೆ. ಆ ಬಳಿಕ ಸಿಗ್ನಲಿಂಗ್, ದೂರಸಂಪರ್ಕ, ವಿದ್ಯುತ್ ಸರಬರಾಜು ವ್ಯವಸ್ಥೆಗಳೊಂದಿಗೆ ಸಿಸ್ಟಂ ಸಂಯೋಜನೆ ಮಾಡಲಾಗುತ್ತದೆ. ಡಿಸೆಂಬರ್ ಒಳಗೆ ವಾಣಿಜ್ಯ ಸಂಚಾರ ಆರಂಭಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ನಮ್ಮ ಮೆಟ್ರೊ' ಇತರ ಮಾರ್ಗಗಳಲ್ಲಿ 'ಡಿಸ್ಟೆನ್ಸ್ ಟು ಗೊ' (ಡಿಟಿಜಿ) ವ್ಯವಸ್ಥೆಯ ಲೋಕೊ ಪೈಲೆಟ್ ಮೆಟ್ರೊಗಳೇ ಸಂಚರಿಸುತ್ತಿವೆ. ಆರ್.ವಿ.ರಸ್ತೆ–ಬೊಮ್ಮಸಂದ್ರ ಸಂಪರ್ಕಿಸುವ ಹಳದಿ ಮಾರ್ಗದಲ್ಲಿ ಮಾತ್ರ ಚಾಲಕ ರಹಿತ ರೈಲು ಸಂಚರಿಸಲು, ಸಂವಹನ ಆಧಾರಿತ ರೈಲು ನಿಯಂತ್ರಣ ವ್ಯವಸ್ಥೆ (ಸಿಬಿಟಿಸಿ) ಅಳವಡಿಸಲಾಗಿದೆ. ವಾಣಿಜ್ಯ ಸಂಚಾರ ಆರಂಭಿಸುವಾಗ ಲೋಕೊ ಮಾದರಿಯ ರೈಲುಗಳ ಪೈಲೆಟ್‌ಗಳನ್ನು (ಚಾಲಕರನ್ನು) ನಿಯೋಜಿಸಲಾಗುವುದು. ಯಾವುದೇ ಸಮಸ್ಯೆ ಉಂಟಾಗದಿರುವುದು ಖಾತ್ರಿಯಾದ ಮೇಲೆ ಲೋಕೊ ಪೈಲೆಟ್‌ಗಳಿಲ್ಲದೇ ಕಾರ್ಯಾಚರಣೆ ನಡೆಸಲಾಗುವುದು ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದರು.

ಹಳದಿ ಮಾರ್ಗದಲ್ಲಿ ರೈಲು ಸಂಚಾರ ಆರಂಭಗೊಂಡರೆ ಎಲೆಕ್ಟ್ರಾನಿಕ್ ಸಿಟಿ, ಸುತ್ತಮುತ್ತಲ ಪ್ರದೇಶಗಳಲ್ಲಿ ವಾಹನ ದಟ್ಟಣೆಯನ್ನು ಕಡಿಮೆಗೊಳಿಸಲಿದೆ.

#### ಅಂಕಿ ಅಂಶ

**18.82** ಕಿ.ಮೀ.
ಹಳದಿ ಮಾರ್ಗದ ಉದ್ದ

**16** ನಿಲ್ದಾಣಗಳು

**34**
ಈ ಮಾರ್ಗದಲ್ಲಿ ಸಂಚರಿಸಲಿರುವ ಮೆಟ್ರೊ ರೈಲುಗಳು

**2.5** ಲಕ್ಷ
ಈ ಮಾರ್ಗದಲ್ಲಿ ಮೆಟ್ರೊ ಪ್ರಯಾಣಿಕರ ಪ್ರಮಾಣದ ನಿರೀಕ್ಷೆ

#### ನಿಲ್ದಾಣಗಳು

ಹಳದಿ ಮಾರ್ಗದಲ್ಲಿ ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರ್ ರಸ್ತೆ, ಇನ್ಫೊಸಿಸ್ ಫೌಂಡೇಶನ್ (ಕೋಣಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬಿರಿಟೆನ ಅಗ್ರಹಾರ, ಹೊಸರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್‌ವಿ. ರಸ್ತೆ ಸೇರಿ ಒಟ್ಟು 16 ನಿಲ್ದಾಣಗಳಿವೆ.

#### 'ಅವಸರ ಮಾಡಬೇಡಿ'

ಆರಂಭಿಕ ನಿಲ್ದಾಣ ಆರ್.ವಿ. ರಸ್ತೆಯಲ್ಲಿಯೇ ಮೆಟ್ರೊ ನಿಲ್ದಾಣ ಪೂರ್ಣಗೊಂಡಿಲ್ಲ. ಜಯದೇವ ಮೆಟ್ರೊ ನಿಲ್ದಾಣದ ಕಾಮಗಾರಿಯೂ ಮುಗಿದಿಲ್ಲ. ಹಳಿ ಕಾಮಗಾರಿ ಮುಗಿದಿದೆ ಎಂದು ಪರೀಕ್ಷೆಗಳನ್ನು ಮಾಡಬಹುದು. ಆದರೆ, ವಾಣಿಜ್ಯ ಸಂಚಾರ ಹೇಗೆ ಆರಂಭಿಸುತ್ತಾರೆ? ಹಳಿಯಲ್ಲಿಯೂ ಪರೀಕ್ಷೆ ಮಾಡಲು ಅಗತ್ಯ ರೈಲು ಕೋಚ್‌ಗಳು ಬಾರದೇ ಇರುವಾಗ ಅವಸರ ಏಕೆ ಮಾಡುತ್ತಾರೆ ಎಂಬುದು ಗೊತ್ತಾಗುತ್ತಿಲ್ಲ ಎಂದು ಸಿಬ್ಬಂದಿಯೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

ಇತ್ತೀಚೆಗೆ ಹಳಿಗೆ ಒಬ್ಬರು ಹಾರಿದ್ದರು. ಇನ್ನೊಮ್ಮೆ ಹಳಿಯ ಮೇಲೆ ಮರದ ಕೊಂಬೆ ಬಿದ್ದಿತ್ತು. ಇಂಥ ಸಂದರ್ಭದಲ್ಲಿ ಲೋಕೊ ಪೈಲೆಟ್‌ಗಳು ತಕ್ಷಣಕ್ಕೆ ಮೆಟ್ರೊ ರೈಲುಗಳನ್ನು ಸ್ಥಗಿತಗೊಳಿಸಿದ್ದರು. ಚಾಲಕ ರಹಿತ ಎಂಜಿನ್ ರೈಲು ಚಲಾಯಿಸುವಾಗ ಇಂಥ ಅಡೆತಡೆಗಳು ಉಂಟಾದರೆ ತಕ್ಷಣ ನಿಲ್ಲಿಸಲು ಹೇಗೆ ಕ್ರಮ ಕೈಗೊಳ್ಳುತ್ತಾರೆ? ಎಲ್ಲೋ ಇರುವ ಕಂಟ್ರೋಲ್ ವ್ಯವಸ್ಥೆಗೆ ಮಾಹಿತಿ ರವಾನಿಸಿ, ಅವರು ಕ್ರಮ ಕೈಗೊಳ್ಳುವ ಹೊತ್ತಿಗೆ ಇಲ್ಲಿ ರೈಲುಗಳು ಮುಂದಕ್ಕೆ ಚಲಿಸಿದ್ದರೆ ಇನ್ನಷ್ಟು ಅವಘಡಗಳು ಉಂಟಾಗಬಹುದು. ಮೊದಲು ಇದಕ್ಕೆಲ್ಲ ಪರಿಹಾರ ಕಂಡುಕೊಳ್ಳಬೇಕು. ಅದಕ್ಕಾಗಿ ಅಗತ್ಯ ಇರುವ ಕೋಚ್ ಸೆಟ್‌ಗಳು ಬಂದ ಬಳಿಕವೇ ಪರೀಕ್ಷೆ ಆರಂಭಿಸುವುದು ಒಳಿತು ಎಂಬುದು ಅವರ ಸಲಹೆ.

## ಲೇಕ್ ವ್ಯೂ ರಸ್ತೆ ದುರಸ್ತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ವಿಭೂತಿಪುರದ ಲೇಕ್ ವ್ಯೂ ರಸ್ತೆಯು (ದೊಡ್ಡನೆಕ್ಕುಂದಿ) ಸಂಪೂರ್ಣವಾಗಿ ಹಾಳಾಗಿದೆ. ಇದರಿಂದಾಗಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿದೆ. ಬಿಬಿಎಂಪಿ ಕೂಡಲೇ ರಸ್ತೆ ದುರಸ್ತಿ ಕಾರ್ಯ ಕೈಗೊಳ್ಳಬೇಕು' ಎಂದು ಬೆಂಗಳೂರು ನವನಿರ್ಮಾಣ ಪಕ್ಷ(ಬಿಎನ್‌ಪಿ) ಆಗ್ರಹಿಸಿದೆ.

'ಇದೇ ಮಾರ್ಚ್ ತಿಂಗಳಲ್ಲಿ ರಸ್ತೆ ನಿರ್ಮಿಸಲಾಗಿದೆ. ಕಳಪೆ ಕಾಮಗಾರಿಯಿಂದಾಗಿ ಮುಂಗಾರು ಮಳೆಗೂ ಮುಂಚಿತವಾಗಿಯೇ ರಸ್ತೆಗೆ ಹಾಕಿದ್ದ ಡಾಂಬರು ಕಿತ್ತುಕೊಂಡು ಬಂದಿದೆ. ಹೀಗಾಗಿ, ಈ ಭಾಗದಲ್ಲಿ ವಾಹನ ಸಂಚಾರಕ್ಕೆ ಕಷ್ಟವಾಗುತ್ತಿದೆ' ಎಂದು ಪಕ್ಷದ ಸದಸ್ಯೆ ಲಲಿತಾಂಬ ಬಿ.ವಿ. ದೂರಿದ್ದಾರೆ.

'ಮಳೆ ಬಂದರೆ ರಸ್ತೆಯೆಲ್ಲ ಕೆಸರು ಗದ್ದೆಯಂತಾಗುತ್ತದೆ. ಈ ರಸ್ತೆಯಲ್ಲಿ ಪಾದಚಾರಿ ಮಾರ್ಗವಿಲ್ಲದ ಕಾರಣ ಮಳೆ ನೀರಿನಲ್ಲಿ ನಡೆದುಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಚುನಾವಣೆಯ ವೇಳೆ ಕಳಪೆ ಕಾಮಗಾರಿ ನಡೆಸಲಾಗಿದೆ. ಇದರಿಂದ, ಸ್ಥಳೀಯರು ಪ್ರತಿನಿತ್ಯ ನರಕ ಯಾತನೆ ಅನುಭವಿಸುತ್ತಿದ್ದಾರೆ. ರಸ್ತೆಯನ್ನು ದುರಸ್ತಿಗೊಳಿಸುವಂತೆ ಈಗಾಗಲೇ ಬಿಬಿಎಂಪಿಗೆ ಹಲವು ಬಾರಿ ಮನವಿ ಸಲ್ಲಿಸಲಾಗಿದ್ದರೂ, ಇದುವರೆಗೂ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸುದ್ದಿ 2 ನಿಮಿಷ

### '11,400 ಮನೆ ಬೇಗ ಹಂಚಿ'

**ಬೆಂಗಳೂರು:** ರಾಜೀವ್‌ಗಾಂಧಿ ವಸತಿ ನಿಗಮದ ವಸತಿ ಯೋಜನೆಯಡಿ 52 ಸಾವಿರ ಮನೆಗಳ ಪೈಕಿ 11,400 ಮನೆಗಳನ್ನು ಆದಷ್ಟು ಬೇಗ ಹಂಚಿಕೆ ಮಾಡಬೇಕು ಎಂದು ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಸೂಚನೆ ನೀಡಿದರು.

ರಾಜೀವ್‌ಗಾಂಧಿ ವಸತಿ ನಿಗಮದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಪ್ರಧಾನಮಂತ್ರಿ ನಗರ ಆವಾಸ್ ಯೋಜನೆಯಡಿ ಬಡ ಕುಟುಂಬಗಳಿಗೆ ಮನೆ ನಿರ್ಮಾಣ ಮಾಡಿ ಕೊಡುವ ಕಾಮಗಾರಿಗಳಿಗೆ ವೇಗ ನೀಡಬೇಕು. ವಸತಿ ಸಮುಚ್ಚಯ ಮತ್ತು ಮೂಲಸೌಕರ್ಯ

ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು ಎಂದು ನಿರ್ದೇಶನ ನೀಡಿದರು.

'ಬಸವ, ಅಂಬೇಡ್ಕರ್, ದೇವರಾಜ ಅರಸು, ವಾಜಪೇಯಿ ನಗರ ಹಾಗೂ ಪ್ರಧಾನಮಂತ್ರಿ ಆವಾಸ್ ಗ್ರಾಮೀಣ ಮನೆಗಳ ವಿಚಾರದಲ್ಲಿ ಫಲಾನುಭವಿಗಳ ಆಯ್ಕೆ ಬಗ್ಗೆ ದೂರುಗಳಿದ್ದು, ಶಾಸಕರ ಜತೆ ಪತ್ರ ವ್ಯವಹಾರ ನಡೆಸಿ ಸಮಸ್ಯೆ ಬಗೆಹರಿಸಿಕೊಳ್ಳಿ. ಸಹಾಯಧನ ಮೊತ್ತ ಸಕಾಲಕ್ಕೆ ತಲುಪುವಂತೆ ನೋಡಿಕೊಳ್ಳಿ' ಎಂದು ಅವರು ತಿಳಿಸಿದರು.

ಬೆಂಗಳೂರು ನಗರದಲ್ಲಿ ರೂಪಿಸಿರುವ ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಕಾಮಗಾರಿ ಶೀಘ್ರ ಪೂರ್ಣಗೊಳಿಸಬೇಕು. ಫಲಾನುಭವಿಗಳು ಹಲವು ವರ್ಷಗಳಿಂದ ಕಾಯುತ್ತಿದ್ದು ಶೀಘ್ರ ಹಂಚಿಕೆಗೆ ಕ್ರಮ ಕೈಗೊಳ್ಳಬೇಕು ಎಂದೂ ಸೂಚನೆ ನೀಡಿದರು.

ಪ್ರಧಾನಮಂತ್ರಿ ನಗರ ಮತ್ತು ಗ್ರಾಮೀಣ ಆವಾಸ್ ಯೋಜನೆಯಡಿ ಕೇಂದ್ರ ಸರ್ಕಾರದ ಪಾಲುದಾರಿಕೆ ಇರುವುದರಿಂದ ಹೆಚ್ಚಿನ ಅನುದಾನ ಪಡೆಯಲು ಸದ್ಯದಲ್ಲೇ ದೆಹಲಿಗೆ ತೆರಳಿ ಕೇಂದ್ರ ಸಚಿವರನ್ನು ಭೇಟಿ ಮಾಡುವುದಾಗಿ ಜಮೀರ್ ಹೇಳಿದರು.

### ಹೇಮಾಗೆ ಷರತ್ತುಬದ್ಧ ಜಾಮೀನು

**ಬೆಂಗಳೂರು:** ಆನೇಕಲ್ ತಾಲ್ಲೂಕಿನ ಜಿ.ಆರ್.ಫಾರ್ಮ್‌ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ತೆಲುಗು ಚಿತ್ರನಟಿ ಹೇಮಾ ಅವರಿಗೆ ಬೆಂಗಳೂರು ಗ್ರಾಮಾಂತರ ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯ ಬುಧವಾರ ಜಾಮೀನು ಮಂಜೂರು ಮಾಡಿದೆ.

ರೇವ್ ಪಾರ್ಟಿಯಲ್ಲಿ ಡ್ರಗ್ಸ್ ಸೇವಿಸಿದ್ದ ಆರೋಪದಡಿ ಹೇಮಾ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ವಿಚಾರಣೆಯ ಬಳಿಕ ಹೇಮಾ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಜೂನ್ 14ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಹೇಮಾ ಅವರು ವಕೀಲರ ಮೂಲಕ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು. ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯ ಬುಧವಾರ ಅರ್ಜಿ ವಿಚಾರಣೆ ನಡೆಸಿ ಹೇಮಾಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಹೇಮಾ ಅವರಿಂದ ಪೊಲೀಸರು ಯಾವುದೇ ಮಾದಕ ವಸ್ತು ವಶಕ್ಕೆ ಪಡೆದುಕೊಂಡಿಲ್ಲ. ಹಲವು ದಿನಗಳ ನಂತರ ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ. ಹೀಗಾಗಿ, ತಮ್ಮ ಕಕ್ಷಿದಾರರಿಗೆ ಜಾಮೀನು ಮಂಜೂರು ಮಾಡುವಂತೆ ವಕೀಲರು ಕೋರಿದರು. ನ್ಯಾಯಾಲಯ ಮನವಿ ಪುರಸ್ಕರಿಸಿತು.

## ಅಭ್ಯರ್ಥಿಗಳ ನೇರ ಸಂದರ್ಶನ

**ಬೆಂಗಳೂರು:** ಅಂಚೆ ಜೀವವಿಮೆ ಹಾಗೂ ಗ್ರಾಮೀಣ ಜೀವವಿಮೆಗಳನ್ನು ಮಾರಾಟ ಮಾಡಲು ನೇರ ಪ್ರತಿನಿಧಿಗಳ ನಿಯುಕ್ತಿಗಾಗಿ ಅಂಚೆ ಇಲಾಖೆಯು ಇದೇ 18ರಂದು ಬೆಳಿಗ್ಗೆ 11ಕ್ಕೆ ಅಭ್ಯರ್ಥಿಗಳ ನೇರ ಸಂದರ್ಶನ ಏರ್ಪಡಿಸಿದೆ.

ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರಗಳೊಂದಿಗೆ ಸ್ವವಿವರ, ಶೈಕ್ಷಣಿಕ ಪ್ರಮಾಣಪತ್ರದ ಛಾಯಾ ಪ್ರತಿಗಳೊಂದಿಗೆ ಮಹಾಲಕ್ಷ್ಮಿಪುರ ಪೊಲೀಸ್ ಠಾಣೆ ಬಳಿ ಇರುವ ಬೆಂಗಳೂರು ಪಶ್ಚಿಮ ಅಂಚೆ ವಿಭಾಗ, ವರಿಷ್ಠ ಅಂಚೆ ಅಧೀಕ್ಷಕರ ಕಾರ್ಯಾಲಯ, ಬೆಂಗಳೂರು ಇಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ನಗರದ ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ 'ವಿಕಸಿತ ಭಾರತ 2047' ಕಾರ್ಯಕ್ರಮದಲ್ಲಿ ಮಾಜಿ ರಾಯಭಾರಿ ದೀಪಕ್ ವೋಹ್ರಾ ಅವರನ್ನು ಸನ್ಮಾನಿಸಲಾಯಿತು

## 'ಭಾರತ ಆಗಲಿದೆ ವಿಶ್ವಗುರು'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತವು 2047ರ ವೇಳೆಗೆ ವಿಶ್ವಗುರು ಸ್ಥಾನದಲ್ಲಿ ನಿಲ್ಲಲಿದೆ ಎಂದು ಮಾಜಿ ರಾಯಭಾರಿ ದೀಪಕ್ ವೋಹ್ರಾ ಹೇಳಿದರು.

ನಗರದ ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ 'ವಿಕಸಿತ ಭಾರತ -2047' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿದ್ಯಾರ್ಥಿ ಸಮುದಾಯ ಭಾರತದ ಇತಿಹಾಸ, ಪರಂಪರೆ, ಸಂಸ್ಕೃತಿ, ಸನಾತನ ಧರ್ಮದ ಬಗ್ಗೆ ತಿಳಿವಳಿಕೆ ಹೊಂದಿರಬೇಕು. ಪ್ರಸ್ತುತ ಭಾರತ ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ವೈದ್ಯಕೀಯ, ಸೇನೆ ಒಳಗೊಂಡಂತೆ ಎಲ್ಲ ಕ್ಷೇತ್ರಗಳಲ್ಲಿ ಉತ್ಕೃಷ್ಟ ಸ್ಥಾನದಲ್ಲಿದೆ. ಪ್ರಗತಿಯ ಚಿತ್ರಣದಿಂದಾಗಿ ಜಾಗತಿಕ ಮಟ್ಟದಲ್ಲಿ ಭಾರತ ಕುರಿತಾದ ಪರಿಕಲ್ಪನೆ, ಆಲೋಚನೆಗಳು ಬದಲಾಗಿವೆ' ಎಂದು ಅವರು ಅಭಿಪ್ರಾಯಪಟ್ಟರು.

ಎಪಿಎಸ್ ಸಂಸ್ಥೆಯ ಅಧ್ಯಕ್ಷ ವಿಷ್ಣು ಭರತ್ ಅಲ್ಲಪಲ್ಲಿ, ಪ್ರಧಾನಮಂತ್ರಿಯವರ ಸಲಹೆಗಾರರಾದ ಆರ್.ಟಿ.ಎನ್. ಉದಯಕುಮಾರ್, ಭಾಸ್ಕರ್, ಎ. ಪ್ರಕಾಶ್, ಎ.ಎಸ್. ಶ್ರೀಕಾಂತ್ ಉಪಸ್ಥಿತರಿದ್ದರು.

## ಫ್ಲೆಕ್ಸ್, ಬ್ಯಾನರ್ ಹಾವಳಿ: ತೆರವಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳಿಗೆ ನಿಷೇಧವಿದ್ದರೂ, ಎಲ್ಲೆಡೆ ಅವುಗಳು ರಾರಾಜಿಸುತ್ತಿವೆ, ನಗರದ ಸೌಂದರ್ಯವನ್ನು ಹಾಳು ಮಾಡುತ್ತಿವೆ ಎಂದು ನಾಗರಿಕರು ದೂರಿದ್ದಾರೆ.

ಸುಮನಹಳ್ಳಿಯಿಂದ ಕೊಟ್ಟಿಗೆಪಾಳ್ಯ, ಮಾಗಡಿ ರಸ್ತೆಯ ವರ್ತುಲ ರಸ್ತೆಯಿಂದ ಕೊಟ್ಟಿಗೆಪಾಳ್ಯ, ಬಿಡಿಎ ಕಾಂಪ್ಲೆಕ್ಸ್ ವೃತ್ತ, ಕೆಂಗುಂಟೆ ಸರ್ಕಲ್, ಮಲ್ಲತಹಳ್ಳಿ, ಬೆಂಗಳೂರು ವಿಶ್ವವಿದ್ಯಾಲಯ ಕ್ವಾರ್ಟರ್ಸ್ ಸುತ್ತಮುತ್ತಲಿನ ರಸ್ತೆ, ಸರ್ಕಲ್‌ಗಳಲ್ಲಿ ರಾಜಕೀಯ ನಾಯಕರಿಗೆ ಶುಭ ಕೋರಿರುವ ನೂರಾರು ಫ್ಲೆಕ್ಸ್ ರಾರಾಜಿಸುತ್ತಿವೆ.

ನಗರದ ಹೊಯ್ಸಳ ಸರ್ಕಲ್ ಬಳಿ ಅಳವಡಿಸಿರುವ ಫ್ಲೆಕ್ಸ್

ಫ್ಲೆಕ್ಸ್ ತೆರವುಗೊಳಿಸುವ ಬಗ್ಗೆ ಬಿಬಿಎಂಪಿ ಇದುವರೆಗೆ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರು ದೂರಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಬಿಬಿಎಂಪಿ ರಾಜರಾಜೇಶ್ವರಿನಗರ ವಲಯ ಆಯುಕ್ತ ಶಿವಾನಂದ ಕಾಪಸಿ, 'ಅನಧಿಕೃತ ಫ್ಲೆಕ್ಸ್ ಅಳವಡಿಸಿರುವ ಕುರಿತು ಮಾಹಿತಿಗಳು ಬಂದಿವೆ. ಮುಂದಿನ ಎರಡು ದಿನಗಳ ಒಳಗೆ ಫ್ಲೆಕ್ಸ್ ತೆರವುಗೊಳಿಸಲು ಸಹಾಯಕ ಕಂದಾಯ ಅಧಿಕಾರಿ, ಎಂಜಿನಿಯರ್‌ಗಳಿಗೆ ಆದೇಶಿಸಲಾಗಿದೆ. ಫ್ಲೆಕ್ಸ್ ಅಳವಡಿಸಿರುವವರ ಮೇಲೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ' ಎಂದು ತಿಳಿಸಿದರು.

**ಕರಗ...** ಮೈಸೂರು ರಸ್ತೆಯ ಮಹಾದೇವಿ ರಾಜರಾಜೇಶ್ವರಿ, ಪೂಜಮ್ಮ, ದಾಳಮ್ಮ, ಜೋತಮ್ಮನವರ ದೇವಸ್ಥಾನದಲ್ಲಿ ಹೂವಿನ ಪಲ್ಲಕ್ಕಿ ಮತ್ತು ಕರಗ ಮಹೋತ್ಸವದ ಅಂಗವಾಗಿ ಚಾಮರಾಜಪೇಟೆಯ ಮಧ್ವಾಚಾರ್ಯ ಮಠದಿಂದ ಜ್ಯೋತಿಶ್ವರ ಅವರ ಮಗ ಕಿರಣ್ ಕುಮಾರ್ ಕರಗವನ್ನು ಹೊತ್ತಿದ್ದರು

## ನೀಟ್: ವಿಷನ್ ಅಕಾಡೆಮಿ ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿ (ನೀಟ್ ಯುಜಿ) ವಿಷನ್ ನೀಟ್ ಅಕಾಡೆಮಿಯ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಗಳಿಸುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ.

ಅಕಾಡೆಮಿಯ ಚೇತನ್ ಎಸ್.ವೈ. (690), ಸುದರ್ಶನ್ ಟಿ.ಆರ್. (685), ಸೃಜನ್ ಎನ್. (677), ವಿವೇಕ್ ಎಸ್. ಗೌಡ (675), ಸಂತೋಷ್ ಎನ್.ಕೆ. (675) ಹಾಗೂ ಅಕ್ಷಯ್ ಕಲ್ಮಠ (675) ಉತ್ತಮ ಅಂಕಗಳನ್ನು ಪಡೆದಿದ್ದಾರೆ.

ಪ್ರತಿವರ್ಷ 350ರಿಂದ 400 ವಿದ್ಯಾರ್ಥಿಗಳು ವಿಷನ್ ಸಂಸ್ಥೆಯಿಂದ ನೀಟ್ ಕೋಚಿಂಗ್ ಪಡೆದು, ಉತ್ತಮ ರ್‍ಯಾಂಕ್ ಪಡೆದು ಸರ್ಕಾರಿ (ಉಚಿತ) ವೈದ್ಯಕೀಯ ಸೀಟ್ ಪಡೆಯುತ್ತಿದ್ದಾರೆ. ಇದುವರೆಗೂ 4,350ಕ್ಕೂ ಅಧಿಕ ವಿದ್ಯಾರ್ಥಿಗಳು ಸಂಸ್ಥೆಯಲ್ಲಿ ತರಬೇತಿ ಪಡೆದು ವೈದ್ಯರಾಗಿದ್ದಾರೆ. ರಾಜ್ಯದ ವಿವಿಧ ಭಾಗಗಳಿಂದ ನೀಟ್ ತರಬೇತಿ ಪಡೆಯಲು ಇಲ್ಲಿಗೆ ಬರುತ್ತಾರೆ. ಅವರಿಗೆ ಅನುಭವಿ ಅಧ್ಯಾಪಕರಿಂದ 10 ತಿಂಗಳ ತರಬೇತಿ ನೀಡಲಾಗುತ್ತಿದೆ ಎಂದು ಸಂಸ್ಥೆ ತಿಳಿಸಿದೆ.

'ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿನಿಲಯದ ಸೌಲಭ್ಯವಿದೆ. ಉತ್ತಮ ರ್‍ಯಾಂಕ್ ಪಡೆದಿರುವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಸೌಲಭ್ಯವೂ ಇರಲಿದೆ' ಎಂದು ವಿಷನ್ ನೀಟ್ ಅಕಾಡೆಮಿ ತನ್ನ ಪ್ರಕಟಣೆ ತಿಳಿಸಿದೆ.

ಆಸಕ್ತರು ಹೆಚ್ಚಿನ ಮಾಹಿತಿಗೆ www.neet.visionedu.in ಅಥವಾ 080-47185111 ಗೆ ಸಂಪರ್ಕಿಸಬಹುದು.


ಚೇತನ ಎಸ್.ವೈ.

ಸೃಜನ್ ಎನ್.


ಸುದರ್ಶನ್

ವಿವೇಕ್ ಗೌಡ


ಅಕ್ಷಯ್ ಕಲ್ಮಠ


ಸಂತೋಷ್ ಎನ್.ಕೆ.

### ಅಪಘಾತದಲ್ಲಿ ಮೃತಪಟ್ಟ ಕೆಎಸ್‌ಆರ್‌ಟಿಸಿಯ ನಾಲ್ವರು ನೌಕರರ ಕುಟುಂಬಕ್ಕೆ ಪರಿಹಾರ ಚೆಕ್ ಹಸ್ತಾಂತರ

# ತಲಾ ₹1 ಕೋಟಿ ವಿಮೆ ಹಣ ವಿತರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಪಘಾತದಲ್ಲಿ ಮೃತಪಟ್ಟ ಕೆಎಸ್‌ಆರ್‌ಟಿಸಿಯ ನಾಲ್ವರು ನೌಕರರ ಅವಲಂಬಿತರಿಗೆ ತಲಾ ₹1 ಕೋಟಿ ವಿಮೆಯನ್ನು ಬುಧವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ್ ವಿತರಿಸಿದರು.

'ಕಾರ್ಮಿಕರ ಕಲ್ಯಾಣಕ್ಕಾಗಿ ಹಾಗೂ ಪ್ರಯಾಣಿಕರಿಗಾಗಿ ಕೆಎಸ್‌ಆರ್‌ಟಿಸಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಮೃತಪಟ್ಟವರ ಜೀವ ಅಮೂಲ್ಯವಾದದ್ದು. ಅದನ್ನು ಮರಳಿ ತರಲಾಗುವುದಿಲ್ಲ. ಆದರೆ, ಅವರ ಕುಟುಂಬದ ಆರ್ಥಿಕ ಸ್ವಾವಲಂಬನೆಗಾಗಿ ನಿಗಮವು ರೂಪಿಸಿರುವ ₹1 ಕೋಟಿ ಯೋಜನೆ ದೂರದೃಷ್ಟಿಯನ್ನು ಹೊಂದಿದೆ. ಇಲ್ಲಿಯವರೆಗೆ ಅಪಘಾತದಲ್ಲಿ ಮೃತಪಟ್ಟ 17 ಮಂದಿಯ ಕುಟುಂಬಕ್ಕೆ ಈ ವಿಮೆ ತಲುಪಿದೆ' ಎಂದು ರಾಮಲಿಂಗಾರೆಡ್ಡಿ ವಿವರಿಸಿದರು.

ನಿಗಮದಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿ ಶ್ರಮಜೀವಿಗಳು. ಅವರಿಗೆ ಸಲ್ಲಬೇಕಾದ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕು. ಇಂದು ಪರಿಹಾರ ಮೊತ್ತವನ್ನು ಪಡೆದವರು ಅದನ್ನು ಸಮರ್ಪಕವಾಗಿ ಬಳಕೆ ಮಾಡಿ ಕುಟುಂಬವನ್ನು ಸ್ವಾವಲಂಬಿಯನ್ನಾಗಿ ಮಾಡಬೇಕು ಎಂದು ಎಸ್.ಆರ್. ಶ್ರೀನಿವಾಸ್ ಸಲಹೆ ನೀಡಿದರು.

ಅಪಘಾತ ಹೊರತುಪಡಿಸಿ ಅನಾರೋಗ್ಯದಿಂದ ಮೃತಪಟ್ಟ 23 ಸಿಬ್ಬಂದಿಯ ಕುಟುಂಬಕ್ಕೆ ತಲಾ ₹10 ಲಕ್ಷ ವಿತರಿಸಲಾಯಿತು. ಈ ಯೋಜನೆ ಜಾರಿಯಾದ ಮೇಲೆ ಒಟ್ಟು 39 ನೌಕರರಿಗೆ ಈ ವಿಮೆ ಪರಿಹಾರ ನೀಡಲಾಗಿದೆ. ನಿಗಮದ ಬಸ್‌ಗಳು ಅಪಘಾತಕ್ಕೀಡಾಗಿ ಮೃತಪಟ್ಟ ನಾಲ್ವರು ಪ್ರಯಾಣಿಕರ ಕುಟುಂಬಕ್ಕೆ ಅಪಘಾತ ಪರಿಹಾರ ವಿಮೆ ತಲಾ ₹10 ಲಕ್ಷ ನೀಡಲಾಯಿತು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ಕಾರ್ಮಿಕ ಸಂಘಟನೆಗಳ ಮುಖಂಡರಾದ ಅನಂತಸುಬ್ಬರಾವ್, ವಿಜಯಭಾಸ್ಕರ್, ರೇವಪ್ಪ, ಮಂಜುನಾಥ್, ಚಂದ್ರಶೇಖರ್, ನಾಗರಾಜು, ವೆಂಕಟರಮಣಪ್ಪ, ಜಯರಾಜ ಅರಸು ಭಾಗವಹಿಸಿದ್ದರು.


ಅಪಘಾತದಲ್ಲಿ ಮೃತಪಟ್ಟ ಕೆಎಸ್‌ಆರ್‌ಟಿಸಿಯ ನೌಕರರ ಅವಲಂಬಿತರಿಗೆ ವಿಮಾ ಪರಿಹಾರವನ್ನು ಬುಧವಾರ ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವಿತರಿಸಿದರು. ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಉಪಸ್ಥಿತರಿದ್ದರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
Public are hereby informed that our client intend to purchase the below mentioned property from the legal heirs of Late S. Cecil Xavier S/o Mr. Simon and Mrs. Rosline Rubina Regina W/o Sri A. Sagayanathan
Persons objecting for the said purchase or having any claim in the said property may lodge their objections and/or claims with the undersigned along with supporting documentary evidence within 15 days from the date of publication, failing which we will proceed to complete the transaction of the below mentioned property and objections and/or claims received thereafter will not be binding on our clients.
Further notice is hereby given that the following documents of below mentioned property are lost finder contact the undersigned
1. Sale Deed registered as No.3127 of 1964-65, pages 109 to112, Volume 2426 of Book-I dated 23-7-64 registered in the Office of the Sub Registrar, Bangalore North Taluk executed by Sri R. Venkataswamy in favour of Sri P. Venkata Krishna Aithol;
2. Sale Deed registered as document No.7904 in Book-1, Volume 2565 pages 58 to 61, dated 19-3-1966 registered in the Office of the Sub Registrar, Bangalore North Taluk executed by Sri P. Venkata Krishna Aithol in favour of Sri T. Govindan
3. Sale Deed registered as document No.5705 in Book-1, volume 2608 pages 240 to 242, dated 28-2-67 registered in the Office of the Sub Registrar, Bangalore North Taluk executed by Sri Ethiraj in favour of Sri Jaganathan
4. Sale Deed registered as document No.3463 of 1970-71 Book-1, volume 2766 pages 103 to 105, dated 20-3-1971 registered in the Office of the Sub Registrar, Bangalore North Taluk executed by Sri Jaganathan in
SCHEDULE
Property bearing Plot No.14, Kariyanna Palya, Kacharkanahalli Dakhle, Bangalore North Taluk now bearing New Municipal Nos.23 & 24, PID No.90-32-23 and 90-32-24, 2nd Cross, Hennur Road, Sagayapuram, Bangalore, measuring East to West 45 feet and North to South 60 feet
RIZWAN ASSOCIATES
No.5/1, Bilal Complex, Nagawara Main Road, Bilal Nagar, Pillanna Garden, 3rd Stage, Bengaluru-560 005, Cell # 9448988445

PERSONAL

Change of Name

I,VAISHNAVI AKA SUJATA VIJAY_KARIKATTI Resi/at No.A 716, Mayflower Block, Brigade Millenium, J.P.Nagar 7th-Phase, Bangalore-560078 have changed-my Name_to VAISHNAVI_KARIKATTI vide Affidavit Dtd:12.06.2024 Sworn_Before Notary G.R.Rajanna, Bangalore

I, SYED JAHIR Residng at No. 98, P.K Store Road, Kadugodi Platation, Bengaluru-67, have changed my name to SYED ZAHEER vide affidavit dated 12.06.2024, before notary G. Rajendra, Bangalore.

REAL ESTATE SELLING

Home Finance

General

BEST INVESTMENT OPPORTUNITY For Middle Income Group. Buy Sites in Pre-Launch Cost to Cost Bank Loans/ Installments: 9952936298

DH Classifieds More value, more impact
ಪ್ರಜಾವಾಣಿ
EDUCATION
*Conditions apply
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
9731810277
9886213331
9845114560

JOB OPPORTUNITIES

General

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PARTNER WITH US IN
DELIVERING HAPPINESS
Hindustan Petroleum Corporation Limited is a Maharatna Central Public Sector Enterprise (CPSE) with strong presence in Refining & Marketing petroleum products supported by its State-of-the-Art Research & Development Centre named 'HP Green R&D Centre' in Bengaluru.
We are committed to conducting business to preserve the environment and sustainable development. We offer meaningful work profiles, immense growth opportunities, inclusive culture and recognition of superior employee performance, delivering happiness along the way by contributing towards nation development and fulfilling energy needs of the country.
Join our team of talented professionals and drive your career to new heights and delivering happiness. Visit our career page on http://hindustanpetroleum.com for detailed advertisement.
Positions Available
R&D Professionals | Engineers | Chartered Accountants | Petrochemical Professionals | Non-Fuel Business Professionals | City Gas Distribution Operations & Maintenance / Projects Professionals | Information Systems | Quality Control Professionals
IMPORTANT DATES
Commencement of online application: 5th June 2024
Last date of online application
All Other Positions: 30th June 2024
R&D Professionals: 20th July 2024
Meaningful Work | Growth Opportunity | Cutting Edge Technology | Inclusive Culture | Rewards And Recognition | Sustainability And Responsibility | Team Spirit
Regd.Office: 17, Jamshedji Tata Road Mumbai - 400020
CIN NO: L23201MH1952GOI008858
Delivering Happiness
/hpcl | /hpcl | /hpcl
www.hindustanpetroleum.com

ಬಿಬಿಎಂಪಿ: ಕೇಂದ್ರೀಕೃತ ವ್ಯವಸ್ಥೆಗೇ ಮಣೆ • ಮುಖ್ಯ ಆಯುಕ್ತರಿಂದಲೇ ನಿಯಂತ್ರಣ

# ವಲಯ ಎಂಟು ಅಭಿವೃದ್ಧಿಗಿಲ್ಲ ಗಂಟು

| ವಲಯ | ಯಲಹಂಕ | ಮಹದೇವಪುರ | ದಾಸರಹಳ್ಳಿ | ರಾಜರಾಜೇಶ್ವರಿನಗರ | ಪಶ್ಚಿಮ | ದಕ್ಷಿಣ | ಪೂರ್ವ | ಬೊಮ್ಮನಹಳ್ಳಿ |
|---|---|---|---|---|---|---|---|---|
| ವಿಧಾನಸಭೆ ಕ್ಷೇತ್ರ | ಯಲಹಂಕ, ಬ್ಯಾಟರಾಯನಪುರ | ಕೆ.ಆರ್. ಪುರ, ಮಹದೇವಪುರ | ದಾಸರಹಳ್ಳಿ | ರಾಜರಾಜೇಶ್ವರಿನಗರ, ಯಶವಂತಪುರ | ಮಲ್ಲೇಶ್ವರ, ರಾಜಾಜಿನಗರ, ಗಾಂಧಿನಗರ, ಚಾಮರಾಜಪೇಟೆ, ಗೋವಿಂದರಾಜನಗರ, ಮಹಾಲಕ್ಷ್ಮಿ | ವಿಜಯನಗರ, ಬಸವನಗುಡಿ, ಪದ್ಮನಾಭನಗರ, ಬಿಟಿಎಂ ಲೇಔಟ್, ಜಯನಗರ, ಚಿಕ್ಕಪೇಟೆ | ಹೆಬ್ಬಾಳ, ಪುಲಕೇಶಿನಗರ, ಸರ್ವಜ್ಞನಗರ, ಸಿ.ವಿ. ರಾಮನ್ ನಗರ, ಶಾಂತಿನಗರ, ಶಿವಾಜಿನಗರ | ಬೊಮ್ಮನಹಳ್ಳಿ, ಬೆಂಗಳೂರು ದಕ್ಷಿಣ, ಆನೇಕಲ್ |
| ವಾರ್ಡ್‌ಗಳು | 14 | 22 | 11 | 20 | 44 | 44 | 46 | 24 |

• ಆರ್. ಮಂಜುನಾಥ್

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯ 800 ಚದರ ಕಿಲೋಮೀಟರ್ ಪ್ರದೇಶವನ್ನು ಒಂದು ಕೇಂದ್ರ ಕಚೇರಿ ನಿರ್ವಹಿಸಲು ಸಾಧ್ಯವಿಲ್ಲವೆಂದು ಅರಿತು ಎಂಟು ವಲಯಗಳನ್ನಾಗಿ ಮಾಡಲಾಗಿದೆಯಷ್ಟೆ. ದಶಕ ಕಳೆದರೂ ಈ ವಲಯಗಳ ವಿಶೇಷ ಆಯುಕ್ತರಿಗೆ ಅಧಿಕಾರ ಕೊಟ್ಟಿಲ್ಲ ಹಾಗೂ ಅಭಿವೃದ್ಧಿ ನಿಧಿಯೂ ಸಿಕ್ಕಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚಿಸಿದಾಗ ನಗರದ ವ್ಯಾಪ್ತಿಗೆ ಬಂದ 'ಬೃಹತ್ ಪ್ರದೇಶವನ್ನು' ನರಸಿಂಹರಾಜ ಚೌಕದಲ್ಲಿರುವ ಕೇಂದ್ರ ಕಚೇರಿಯಲ್ಲಿ ಕುಳಿತು ನಿರ್ವಹಿಸದೆ ಸ್ಥಳೀಯ ಆಡಳಿತಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನಿಯಮ ರೂಪಿಸಲಾಗಿತ್ತು. ಆದರೆ, ಹಿರಿಯ ಐಎಎಸ್ ಅಧಿಕಾರಿಗಳು ವಲಯ ಆಯುಕ್ತರಾಗಿ ನೇಮಕವಾಗಿದ್ದರೂ ಸ್ವತಂತ್ರವಾಗಿ ಯಾವ ಕಾರ್ಯ ನಿರ್ವಹಿಸಲೂ ಸಾಧ್ಯವಾಗಿಲ್ಲ. ಬದಲಿಗೆ ಮುಖ್ಯ ಆಯುಕ್ತರೇ ಕೇಂದ್ರ ಕಚೇರಿಯಲ್ಲಿ ಕುಳಿತು ಎಲ್ಲವನ್ನೂ ನಿಯಂತ್ರಿಸುತ್ತಿದ್ದಾರೆ.

ಬಿಬಿಎಂಪಿ ರಚನೆಯಾದ ಮೇಲೆ ಎಂಟು ವಲಯಕ್ಕೆ ಜಂಟಿ ಆಯುಕ್ತರನ್ನು ನೇಮಿಸಲಾಗಿತ್ತು. ವಲಯವಾರು ಉಪ ಕಂದಾಯ ವಿಭಾಗಗಳನ್ನು ರಚಿಸಿ, ಅಧಿಕಾರ ನೀಡಲಾಯಿತು. ವಾರ್ಡ್ ಕಾಮಗಾರಿಗಳೆಂದು ಗುರುತಿಸಿ, ಅವುಗಳನ್ನು ನಿರ್ವಹಿಸಲು ಸೂಚಿಸಲಾಯಿತು. ಆದರೆ, ಬಜೆಟ್‌ನಲ್ಲಿ ವಾರ್ಡ್‌ಗಳಿಗೆ ತಲಾ ₹2 ಕೋಟಿ ಬಿಟ್ಟರೆ ಇನ್ನು ಯಾವುದೇ ಅನುದಾನ ಇರುತ್ತಿರಲಿಲ್ಲ. ಯೋಜನೆ, ರಸ್ತೆ ಮೂಲಸೌಕರ್ಯ, ಬೃಹತ್ ನೀರುಗಾಲುವೆ, ತಾಂತ್ರಿಕ ಕೋಶ, ಅರಣ್ಯ, ಕೆರೆ, ನಗರ ಯೋಜನೆ ಸೇರಿದಂತೆ ಮೇಲ್ಸೇತುವೆ, ಅಂಡರ್ ಪಾಸ್‌ಗಳೆನ್ನೆಲ್ಲ ಕೇಂದ್ರ ಕಚೇರಿಯಲ್ಲಿ ಕುಳಿತಿರುವ ಎಂಜಿನಿಯರ್‌ಗಳೇ ನಿರ್ವಹಿಸುತ್ತಿದ್ದರೇ ವಿನಾ ಎಂಟು ವಲಯಗಳಲ್ಲಿ ಇದ್ದವರಲ್ಲ. ಇಂದಿಗೂ ಇದೇ ಮುಂದುವರಿದಿದೆ.

ವಲಯಗಳು ಹೀಗೆಯೇ ಇದ್ದರೆ ಅಭಿವೃದ್ಧಿ ಸಾಧ್ಯವಾಗುವುದಿಲ್ಲ ಎಂದು ಪುನರ್‌ರಚಿಸಲು ಸರ್ಕಾರ ನಿರ್ಧರಿಸಿತು. ಜಂಟಿ ಆಯುಕ್ತರ ಬದಲು ಹಿರಿಯ ಐಎಎಸ್ ಅಧಿಕಾರಿಗಳನ್ನು ವಲಯ ಆಯುಕ್ತರನ್ನಾಗಿಸಿತು. ಜಂಟಿ ಆಯುಕ್ತರಿಗೆ ಕಂದಾಯ ವಿಭಾಗ ಮಾತ್ರ ನಿರ್ವಹಿಸಲು ಸೂಚಿಸಲಾಯಿತು. ಆದರೆ, ವಲಯ ಆಯುಕ್ತರಿಗೆ ಕೆಲಸವೇ ಇಲ್ಲದಂತಾಗಿದೆ. ವಾರ್ಡ್‌ಗಳಲ್ಲಿನ ಕೆಲವೇ ಕೋಟಿ ಮೊತ್ತದ ಕಾಮಗಾರಿಗಳು, ಮಳೆ ನೀರು ನಿಯಂತ್ರಣ, ಆಸ್ತಿ ತೆರಿಗೆ ಸಂಗ್ರಹವಷ್ಟೇ ಅವರ ಕಾರ್ಯವಾಗಿದೆ.

ಹಿರಿಯ ಐಎಎಸ್ ಅಧಿಕಾರಿಗಳನ್ನೇ ತುಂಬಿಸಿಕೊಂಡಿರುವ ಬಿಬಿಎಂಪಿಯಲ್ಲಿ ಕೆಲಸ ಮಾಡಲು ಸಿಬ್ಬಂದಿ ಇಲ್ಲದಂತಾಗಿದೆ. ಎಂಟು ವಲಯಗಳಿಗೆ ಆಯುಕ್ತರಲ್ಲದೆ ಕಂದಾಯ, ಜಾಹೀರಾತು, ಟಿಡಿಆರ್, ಹವಾಮಾನ ಬದಲಾವಣೆ, ಯೋಜನೆ, ಆಡಳಿತ, ಹಣಕಾಸು, ಐಟಿ, ಚುನಾವಣೆ, ಶಿಕ್ಷಣ ವಿಭಾಗಗಳಿಗೂ ಐಎಎಸ್ ಅಧಿಕಾರಿಗಳನ್ನೇ ನಿಯೋಜಿಸಲಾಗಿದೆ. ಇಷ್ಟಾದರೂ ಬಿಬಿಎಂಪಿಯಲ್ಲಿ ಅಭಿವೃದ್ಧಿ ಕಾರ್ಯಗಳ ನಿರ್ವಹಣೆಯಾಗುತ್ತಿಲ್ಲ. ಹೊಸ ಪಾಲಿಕೆಗಳಾದರೆ ಈ ಐಎಎಸ್‌ಗಳ ಸಂಖ್ಯೆ ಮತ್ತಷ್ಟು ವೃದ್ಧಿಯಾಗುತ್ತದೆ ಅಷ್ಟೇ.

**ಸಂಘರ್ಷವೇ ಹೆಚ್ಚು:** ಎಂಟು ವಲಯಗಳಿಗೆ ಐಎಎಸ್ ಅಧಿಕಾರಿಗಳೇ ಇದ್ದರೂ ಸಾಧಿಸಲಾಗದ ಅಭಿವೃದ್ಧಿ, ನಿಯಂತ್ರಿಸಲಾಗದ ಸಮಸ್ಯೆಗಳು ಐದು ಪಾಲಿಕೆಗಳು ಕಾರ್ಯಾರಂಭ ಮಾಡಿದರೆ ನಿವಾರಣೆಯಾಗುತ್ತವೆಯೇ ಎಂಬುದು ಮೂಲಪ್ರಶ್ನೆ. ಮೇಯರ್, ಉಪಮೇಯರ್, ಸಮಿತಿ, ಅಧಿಕಾರಿಗಳು ಎಂದು ಎಲ್ಲ ವೆಚ್ಚಗಳೂ ಅತಿಯಾಗುತ್ತವೆಯೇ ಹೊರತು ಜನರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ನಿಧಿ ಹಂಚಿಕೆ ಹಾಗೂ ವರಮಾನದಲ್ಲಿ ತಾರತಮ್ಯ ಉಂಟಾಗಿ ನಿತ್ಯ ಸಂಘರ್ಷವೇ ಹೆಚ್ಚಾಗುವ ಸಾಧ್ಯತೆ ಇದೆ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ.

## ಬಿಬಿಎಂಪಿ ಚುನಾವಣೆ ಯಾವಾಗ?

8
ಬಿಬಿಎಂಪಿಯಲ್ಲಿರುವ ವಲಯ

28
ವಿಧಾನಸಭೆ ಕ್ಷೇತ್ರಗಳು

225
ವಾರ್ಡ್‌ಗಳ ಸಂಖ್ಯೆ



## ಬಿಬಿಎಂಪಿ ವಿಭಜನೆ: ನೀವೇನನ್ನುತ್ತೀರಿ?

ಬಿಬಿಎಂಪಿಯನ್ನು ಭಾಗ ಮಾಡಿ, ತಲಾ 80 ವಾರ್ಡ್‌ಗಳ ಐದು ಪಾಲಿಕೆಯನ್ನಾಗಿ ಮಾಡಲು ರಾಜ್ಯ ಸರ್ಕಾರ ಚಿಂತಿಸುತ್ತಿದೆ. ಈ ಬಗ್ಗೆ ನಾಗರಿಕರಾದ ನಿಮ್ಮ ಅಭಿಪ್ರಾಯವನ್ನು 50 ಪದಗಳಲ್ಲಿ ವಾಟ್ಸ್‌ಆ್ಯಪ್ ಮಾಡಿ. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರವೂ ಜೊತೆಗಿರಲಿ.

ಪ್ರಜಾವಾಣಿ 96060 38256

## ವಲಯಕ್ಕಿಲ್ಲ ಪ್ರತ್ಯೇಕ ಬಜೆಟ್

ಎಂಟು ವಲಯಗಳಿಗೆ ಪ್ರತ್ಯೇಕವಾಗಿ ಬಜೆಟ್ ಮಂಡಿಸಿ, ಅವರಿಗೆ ಅಗತ್ಯವಾದ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ಅವಕಾಶ ಮಾಡಿಕೊಡುವ ನಿರ್ಧಾರವನ್ನು ಸರ್ಕಾರ ಕೈಗೊಂಡಿತು. ಅದರಂತೆ, ಹಿರಿಯ ಐಎಎಸ್ ಅಧಿಕಾರಿಗಳನ್ನು ವಲಯಗಳಿಗೆ ನೇಮಿಸಲಾಯಿತು. ಆದರೆ, ಎರಡು ವರ್ಷಗಳಾದರೂ ಪ್ರತ್ಯೇಕ ಬಜೆಟ್ ಜಾರಿಗೆ ಬಂದೇ ಇಲ್ಲ. ಬಜೆಟ್ ಸಿದ್ಧಪಡಿಸುವ ಸಂದರ್ಭದಲ್ಲಿ ವಲಯಗಳಿಂದ ಅಗತ್ಯ ಕಾಮಗಾರಿ ಹಾಗೂ ಅನುದಾನದ ಬಗ್ಗೆ ಪ್ರಸ್ತಾವ ಸಲ್ಲಿಸಲಾಗುತ್ತದೆ. ಅವುಗಳನ್ನು ಯಾರೂ ಪರಿಗಣಿಸುವುದೇ ಇಲ್ಲ. ಎಲ್ಲವನ್ನೂ ಕೇಂದ್ರ ಕಚೇರಿಯಲ್ಲಿ ಕುಳಿತಿರುವ ಅಧಿಕಾರಿಗಳು ಹಾಗೂ ಸಚಿವರ ಮನೆಯಲ್ಲೇ ನಿರ್ಧರಿಸಿ, ಬಜೆಟ್ ತಯಾರಿಸಲಾಗುತ್ತಿದೆ.

## ವಾರ್ಡ್‌ಗಳ ಹಂಚಿಕೆಯಲ್ಲೇ ಗೊಂದಲ

ವಲಯಗಳಿಗೆ ವಾರ್ಡ್‌ಗಳನ್ನು ಹಂಚುವ ಸಂದರ್ಭದಲ್ಲಾಗಿರುವ ಗೊಂದಲ ದಶಕ ಕಳೆದರೂ ನಿವಾರಣೆಯಾಗಿಲ್ಲ. 198 ವಾರ್ಡ್‌ಗಳಿದ್ದಾಗಲೂ ಅದೇ ಸ್ಥಿತಿ, ಇದೀಗ 225 ವಾರ್ಡ್‌ಗಳಾದ ಮೇಲೂ ಅದೇ ದುಃಸ್ಥಿತಿ ಮುಂದುವರಿದಿದೆ. ಪೂರ್ವ, ದಕ್ಷಿಣ ವಲಯಗಳ ವ್ಯಾಪ್ತಿಯಲ್ಲಿ ತಲಾ 44 ವಾರ್ಡ್‌ಗಳಿದ್ದರೆ, ಪಶ್ಚಿಮ ವಲಯದಲ್ಲಿ 46 ವಾರ್ಡ್‌ಗಳಿವೆ. ಉಳಿದ ಐದೂ ವಲಯಗಳಲ್ಲಿನ ತಲಾ ವಾರ್ಡ್ ಸಂಖ್ಯೆ 24 ಮೀರುವುದಿಲ್ಲ. ದಾಸರಹಳ್ಳಿ ವಿಧಾನಸಭೆ ಕ್ಷೇತ್ರವನ್ನೇ ಒಂದು ವಲಯವನ್ನಾಗಿ ವಿಂಗಡಿಸಲಾಗಿದೆ. 11 ವಾರ್ಡ್‌ಗಳಿರುವ ಈ ವಲಯದಲ್ಲಿ ಹೆಚ್ಚು ಅಭಿವೃದ್ಧಿಯಾಗಬೇಕಿತ್ತು. ಆದರೆ, ಅಧಿಕಾರಿಗಳ ಸಂಖ್ಯೆ ಇರುವಷ್ಟೂ ಕಾಮಗಾರಿಗಳು ಇಲ್ಲಿ ನಡೆಯುತ್ತಿಲ್ಲ. ಅಭಿವೃದ್ಧಿಯ ಗೊತ್ತುಗುರಿ ಇಲ್ಲದೆ, ಶಾಸಕರು ತರುವ ನಿಧಿಯಲ್ಲಿ ವಲಯ ಅಧಿಕಾರಿಗಳು ರಸ್ತೆ, ಚರಂಡಿ ಮಾಡಿ, ಡಾಂಬರು ಹಾಕುತ್ತಿದ್ದಾರೆ.

## ನಗರಕ್ಕೆ ಕೇಂದ್ರದ ನೆರವೂ ಅಗತ್ಯ: ಉಮಾಶಂಕರ್

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಆಡಳಿತಾಧಿಕಾರಿಯಾಗಿ ಎಸ್.ಆರ್. ಉಮಾಶಂಕರ್ ಅವರು ಬುಧವಾರ ಅಧಿಕಾರ ಸ್ವೀಕರಿಸಿದರು

**ಬೆಂಗಳೂರು:** ಜಾಗತಿಕ ಮಟ್ಟದಲ್ಲಿ 'ಬ್ರ್ಯಾಂಡ್ ಬೆಂಗಳೂರು' ಹೆಸರಿಗೆ ತಕ್ಕಂತೆ ಮೂಲಸೌಕರ್ಯ ಒದಗಿಸಲು ಕೇಂದ್ರ ಸರ್ಕಾರದ ನೆರವೂ ಅಗತ್ಯ ಎಂದು ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್ ಹೇಳಿದರು.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾದ ಅವರು ಹೆಚ್ಚುವರಿಯಾಗಿ ಆಡಳಿತಾಧಿಕಾರಿ ಹುದ್ದೆಯನ್ನು ಬುಧವಾರ ವಹಿಸಿಕೊಂಡು ಸುದ್ದಿಗಾರರೊಂದಿಗೆ ಮಾತನಾಡಿದರು.

'ಬ್ರ್ಯಾಂಡ್ ಬೆಂಗಳೂರು ಹೆಸರಿಗೆ ತಕ್ಕಂತೆ ಮೂಲಸೌಕರ್ಯ ಇಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಈ ನಿಟ್ಟಿನಲ್ಲಿ ಜನರ ಸಮಸ್ಯೆಗಳನ್ನು ಪರಿಹರಿಸುವುದು ಸರ್ಕಾರದ ಉದ್ದೇಶ. ನಗರದಿಂದ ಸಾಕಷ್ಟು ಕಾರ್ಪೊರೇಟ್ ತೆರಿಗೆ ಸಂಗ್ರಹವಾಗುತ್ತಿದೆ. ಹೀಗಾಗಿ, ನಗರದ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ನೆರವೂ ಅಗತ್ಯ' ಎಂದರು.

'ನಗರದ ವ್ಯಾಪ್ತಿಯಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಗುಣಮಟ್ಟದ ಕಾಮಗಾರಿಗೆ ಒತ್ತು ನೀಡಬೇಕು. ಮಳೆಗಾಲದಲ್ಲಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗುವುದನ್ನು ತಡೆಯಬೇಕು. ಇದಕ್ಕಾಗಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ತೀರ್ಮಾನಗಳೂ ಆಗಿವೆ. ಬೃಹತ್ ಮಳೆ ನೀರುಗಾಲುವೆ ಕೆಲಸ ನಗರದಲ್ಲಿ ಪೂರ್ಣಗೊಂಡಿಲ್ಲ. 330 ಕಿ.ಮೀನಷ್ಟು ರಾಜಕಾಲುವೆ ನಿರ್ಮಾಣವಾದರೆ ಶಾಶ್ವತ ಪರಿಹಾರ ಸಿಗಬಹುದು' ಎಂದರು.

ಉಮಾಶಂಕರ್ ಅವರು ಪಾಲಿಕೆ 29ನೇ ಆಡಳಿತಾಧಿಕಾರಿಯಾಗಿದ್ದಾರೆ. ಈ ಹಿಂದೆ ರಾಕೇಶ್ ಸಿಂಗ್ ಅವರು ಮೂರು ವರ್ಷ ಆಡಳಿತಾಧಿಕಾರಿಯಾಗಿದ್ದು, ಈವರೆಗಿನ ಅತಿ ಹೆಚ್ಚಿನ ಅವಧಿಯ ಅವರದ್ದಾಗಿದೆ.

## ಇಟಲಿ: ಮಹಾತ್ಮ ಗಾಂಧಿ ಪ್ರತಿಮೆ ಭಗ್ನಗೊಳಿಸಿದ ಖಾಲಿಸ್ತಾನಿಗಳು?

ಪ್ರಜಾವಾಣಿ ವಾರ್ತೆ

**ನವದೆಹಲಿ:** ಶಂಕಿತ ಖಾಲಿಸ್ತಾನಿ ಸಿಖ್ ಕಾರ್ಯಕರ್ತರು ಇಟಲಿಯಲ್ಲಿ ಮಹಾತ್ಮ ಗಾಂಧೀಜಿ ಅವರ ಪ್ರತಿಮೆಯನ್ನು ಧ್ವಂಸಗೊಳಿಸಿದ್ದಾರೆ ಎಂದು ತಿಳಿದುಬಂದಿದೆ.

ಜಿ–5 ರಾಷ್ಟ್ರಗಳ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ಮೋದಿ ಅವರು ದಕ್ಷಿಣ ಯುರೋಪ್ ರಾಷ್ಟ್ರಕ್ಕೆ ಭೇಟಿ ನೀಡಬೇಕಿರುವ ಕೆಲವೇ ದಿನದ ಮುಂಚಿತವಾಗಿ ಈ ಘಟನೆ ನಡೆದಿದೆ.

ಈ ಘಟನೆ ಕುರಿತು ಭಾರತ, ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರ ಬಳಿ ಅಸಮಾಧಾನ ವ್ಯಕ್ತಪಡಿಸಿದೆ. ಇದರಿಂದ ಎಚ್ಚೆತ್ತಿರುವ ಅಲ್ಲಿನ ಸ್ಥಳೀಯ ಸರ್ಕಾರವು, ಗಾಂಧೀಜಿ ಪ್ರತಿಮೆಯನ್ನು ಸರಿಪಡಿಸುವ ಕೆಲಸ ಮಾಡುತ್ತಿದೆ. ಅಲ್ಲದೆ, ಪ್ರತಿಮೆ ಮೇಲೆ ಶಂಕಿತ ಖಾಲಿಸ್ತಾನಿ ಸಿಖ್ ಕಾರ್ಯಕರ್ತರು ಎರಚಿದ್ದಾರೆ ಎನ್ನಲಾದ ಪೇಂಟ್ ಅನ್ನು ಅಳಿಸಿಹಾಕಲಾಗಿದೆ.

## ಪದ್ಮಪ್ರಿಯ ಆತ್ಮಹತ್ಯೆ ಪ್ರಕರಣ: ಅತುಲ್ ರಾವ್ ಖುಲಾಸೆ

ಪ್ರಜಾವಾಣಿ ವಾರ್ತೆ

**ಉಡುಪಿ:** ಮಾಜಿ ಶಾಸಕ ಕೆ. ರಘುಪತಿ ಭಟ್ ಅವರ ಪತ್ನಿ ಪದ್ಮಪ್ರಿಯ ನಾಪತ್ತೆ ಹಾಗೂ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿ, ಮೋಸ, ವಂಚನೆ ಹಾಗೂ ನಕಲಿ ದಾಖಲೆ ಸೃಷ್ಟಿಸಿರುವ ಪ್ರಕರಣದ ಆರೋಪಿಯಾಗಿದ್ದ ಅತುಲ್ ರಾವ್ ಅವರನ್ನು ಖುಲಾಸೆಗೊಳಿಸಿ ಎರಡನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯವು ಆದೇಶ ನೀಡಿದೆ.

2008 ಜೂನ್ 10ರಂದು ಪದ್ಮಪ್ರಿಯ ಅವರು ಕರಂಬಳ್ಳಿಯ ಮನೆಯಿಂದ ನಾಪತ್ತೆಯಾಗಿದ್ದರು. ಈ ಸಂಬಂಧ ರಘುಪತಿ ಭಟ್ ಸ್ನೇಹಿತ ಅತುಲ್ ರಾವ್ ಅವರ ವಿರುದ್ಧ 2008 ಜೂನ್ 19ರಂದು ಮಣಿಪಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಕುರಿತು ತನಿಖೆ ನಡೆಸಿದ್ದ ಸಿಒಡಿ ಅಧಿಕಾರಿಗಳು ಅತುಲ್ ಅವರ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಉಡುಪಿ ಸಿಜೆಎಂ ನ್ಯಾಯಾಲಯವು 2023ರ ನ.10ರಂದು ಅತುಲ್ ರಾವ್‌ಗೆ 1 ವರ್ಷ ಜೈಲು ಶಿಕ್ಷೆ ವಿಧಿಸಿ ಆದೇಶ ನೀಡಿತ್ತು. ಇದರ ವಿರುದ್ಧ ಅತುಲ್ ಅವರು ಡಿಸೆಂಬರ್ ತಿಂಗಳಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

ಎರಡನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶ ದಿನೇಶ್ ಹೆಗ್ಡೆ ಅವರು ಅತುಲ್ ಅವರನ್ನು ದೋಷಮುಕ್ತಗೊಳಿಸಿ ಆದೇಶ ನೀಡಿದರು. ಅತುಲ್ ಪರವಾಗಿ ವಕೀಲರಾದ ಅರುಣ್ ಬಂಗೇರ ಹಾಗೂ ಸ್ಟೀವನ್ ಲೂಯಿಸ್ ವಾದ ಮಂಡಿಸಿದ್ದರು.

## ಹೋಮಿಯೋಪಥಿ ದಿನಾಚರಣೆ

ಬೆಂಗಳೂರಿನ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಖಾಸಗಿ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯ ಆಡಳಿತ ಸಂಘ ಬುಧವಾರ ಆಯೋಜಿಸಿದ್ದ ವಿಶ್ವ ಹೋಮಿಯೋಪಥಿ ದಿನಾಚರಣೆ ಮತ್ತು ವಿಚಾರಸಂಕಿರಣದಲ್ಲಿ ಗಣ್ಯರು ಹೋಮಿಯೋಪಥಿಯ ಪಿತಾಮಹ ಡಾ. ಸ್ಯಾಮ್ಯುಯೆಲ್ ಹ್ಯಾನೆಮನ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಚಂದ್ರಶೇಖರ್, ಖಜಾಂಚಿ ಡಿ.ಟಿ.ಬಾಮನೆ, ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉಪಸ್ಥಿತರಿದ್ದರು–ಪ್ರಜಾವಾಣಿ ಚಿತ್ರ

## ₹2.95 ಲಕ್ಷ ಮೌಲ್ಯದ ವಾಹನಗಳು ಜಪ್ತಿ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪುಲಕೇಶಿ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.



ಎಸ್.ಎಂ. ಜಸೀಂ

ಆರೋಪಿಯಿಂದ ₹2.95 ಲಕ್ಷ ಮೌಲ್ಯದ ಮೂರು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ.

'ಎಚ್‌ಬಿಆರ್ ಲೇಔಟ್‌ನ ಇಲಾಲ್‌ನಗರದ ನಿವಾಸಿ ಎಸ್.ಎಂ. ಜಸೀಂ (27) ಬಂಧಿತ ಆರೋಪಿ. ಜಸೀಂ, ರ್‍ಯಾಪಿಡೊ, ಸ್ವಿಗ್ಗಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ತಾನು ಮಾಡುವ ಕೆಲಸದಿಂದ ಬರುತ್ತಿದ್ದ ಐಶಾರಾಮಿ ಜೀವನ ನಡೆಸುವ ಉದ್ದೇಶದಿಂದ ಆರೋಪಿಯು ಕಳ್ಳತನ ಮಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಆರೋಪಿಯು ಕಳ್ಳತನ ಮಾಡಿದ್ದ ವಾಹನಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ. ಆದರೆ, ವಾಹನಗಳ ದಾಖಲಾತಿ ಇಲ್ಲದ ಕಾರಣ ಮಾರದೇ ತನ್ನ ಬಳಿಯೇ ಇಟ್ಟುಕೊಂಡಿದ್ದ. ಖಚಿತ ಮಾಹಿತಿಗೆ ಮೇರೆಗೆ ದಾಳಿ ನಡೆಸಿ ವಾಹನಗಳ ಸಮೇತ ಆರೋಪಿಯನ್ನು ಬಂಧಿಸಲಾಗಿದೆ'.

## 'ಮಷಿನ್ ಟೂಲ್ ಸಂಶೋಧನಾ ಕೇಂದ್ರ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಷಿನ್ ಟೂಲ್ ವಲಯದ ಸಂಶೋಧನಾ ಅನ್ವಯಿಕತೆಗೆ ಮದ್ರಾಸ್ ಐಐಟಿಯಲ್ಲಿ ವಿಶೇಷ ಕೇಂದ್ರವಿದೆ. ಅದರ ವೆಚ್ಚದಲ್ಲಿ ಶೇ 80ರಷ್ಟನ್ನು ಸರ್ಕಾರ, ಶೇ 20ರಷ್ಟನ್ನು ಉದ್ಯಮ ವಲಯ ಭರಿಸುತ್ತಿವೆ. ಕರ್ನಾಟಕದಲ್ಲೂ ಇಂಥದೊಂದು ಕೇಂದ್ರವನ್ನು ಸ್ಥಾಪಿಸಬೇಕು ಎಂದು ಮಷಿನ್ ಟೂಲ್ಸ್ ವಲಯದ ವಿಷನ್ ಗ್ರೂಪಿನ ಉದ್ಯಮಿಗಳು ಸಲಹೆ ನೀಡಿದರು.

ಮಷಿನ್ ಟೂಲ್ಸ್ ವಲಯದ ವಿಷನ್ ಗ್ರೂಪಿನ ಉದ್ಯಮಿಗಳ ಜೊತೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸಭೆ ನಡೆಸಿದರು

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ವಿಷನ್ ಗ್ರೂಪಿನ ಮೊದಲ ಸಭೆ ಮಂಗಳವಾರ ನಡೆಯಿತು. ಉದ್ಯಮಿಗಳ ಸಲಹೆಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು, 'ಮಷಿನ್ ಟೂಲ್ ವಲಯದ ಉತ್ಕರ್ಷಕ್ಕೆ ಅಗತ್ಯವಿರುವ ನೀಲನಕಾಶೆಯನ್ನು ಒದಗಿಸಬೇಕು' ಎಂದು ಉದ್ಯಮಿಗಳಿಗೆ ಮನವಿ ಮಾಡಿದರು.

'ಮಷಿನ್ ಟೂಲ್ಸ್ ತಯಾರಿಕೆಯಲ್ಲಿ ಪುಣೆ ಮತ್ತು ರಾಜಕೋಟ್ ಕೂಡ ಮುಂಚೂಣಿಯಲ್ಲಿವೆ. ರಾಜ್ಯದಲ್ಲಿ ಈ ವಲಯದಲ್ಲಿ ಹೂಡಿಕೆ ಆಕರ್ಷಣೆ, ಉದ್ಯೋಗ ಸೃಷ್ಟಿ ಮುಂತಾದವುಗಳ ಕಡೆ ಗಮನ ಕೊಡಬೇಕಾಗಿದೆ' ಎಂದೂ ಉದ್ಯಮಿಗಳು ಸಲಹೆ ನೀಡಿದರು.

ಸಚಿವರು ಮಾತನಾಡಿ, 'ಮಷಿನ್ ಟೂಲ್ ವಲಯವು ಜಾಗತಿಕ ಸ್ಪರ್ಧೆಯನ್ನು ಗಮನದಲ್ಲಿ ಇಟ್ಟುಕೊಂಡು ಸೂಕ್ಷ್ಮಾತಿಸೂಕ್ಷ್ಮ ಬಿಡಿಭಾಗಗಳನ್ನೂ ತಯಾರಿಸುವಂತಹ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕಾಗಿದೆ. ಈ ಕುರಿತು ಉದ್ಯಮಿಗಳು ನೀಡುವ ರಚನಾತ್ಮಕ ಸಲಹೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ' ಎಂದರು.

'ಸದ್ಯಕ್ಕೆ ತುಮಕೂರಿನ ವಸಂತ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಮಷಿನ್ ಟೂಲ್ಸ್ ಪಾರ್ಕ್ ಇದೆ. ಅದರ ಜೊತೆಗೆ ಇನ್ನೂ ಹಲವು ಉಪಕ್ರಮಗಳು ಆಗಬೇಕಾಗಿದೆ. ಅಲ್ಲದೆ, ನಮ್ಮ ಉದ್ಯಮಿಗಳು ತಯಾರಿಸುವ ಉತ್ಪನ್ನಗಳನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸಿ, ಗಮನ ಸೆಳೆಯುವಂತೆ ಮಾಡಬೇಕು. ಇದಕ್ಕೆ ಸರ್ಕಾರ ಬೆಂಬಲ ನೀಡಲಿದೆ. ವಿಷನ್ ಗ್ರೂಪ್ ಅನ್ನು ಕೇವಲ ಸಲಹಾ ಸಂಸ್ಥೆ ಎಂದು ಉದ್ಯಮಿಗಳು ಭಾವಿಸಬಾರದು' ಎಂದರು.

ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ವಿಷನ್ ಗ್ರೂಪ್ ಉಪಾಧ್ಯಕ್ಷ ಸೆಲ್ವಕುಮಾರ್, ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ, ಸದಸ್ಯರಾದ ಟಿಮ್ ಕೆನ್ ವ್ಯವಸ್ಥಾಪಕ ನಿರ್ದೇಶಕ ಸಂಜಯ್ ಕೌಲ್, ವೈಜಿ-1 ವ್ಯವಸ್ಥಾಪಕ ನಿರ್ದೇಶಕ ಸಾರಂಗ್ ವಿ ಪಾರೀಖ್, ಇಂಡಿಯನ್ ಮಶೀನ್ ಟೂಲ್ಸ್ ಮ್ಯಾನ್ಯುಫ್ಯಾಕ್ಚರರ್ಸ್ ಅಸೋಸಿಯೇಶನ್ ಅಧ್ಯಕ್ಷ ರಾಜೇಂದ್ರ ಎಸ್ ರಾಜಮಾನೆ, ಹಿರಿಯ ಸಲಹೆಗಾರ ಸತೀಶಕುಮಾರ್, ಕೆಐಎಡಿಬಿ ತಾಂತ್ರಿಕ ಸಲಹೆಗಾರ ಅರವಿಂದ ಗಲಗಲಿ ಸಭೆಯಲ್ಲಿ ಇದ್ದರು.

## ಎಚ್‌ಎಸ್‌ಆರ್‌ಪಿ ಗಡುವು: ಇಂದು ನಿರ್ಧಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಳೇ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಅಳವಡಿಸುವ ಗಡುವು ವಿಸ್ತರಿಸಲು ಹೈಕೋರ್ಟ್ ಅನುಮತಿ ನೀಡಿದ್ದು, ಈ ಬಗ್ಗೆ ಜೂನ್ 13ರಂದು ಅಧಿಕಾರಿಗಳೊಂದಿಗೆ ಚರ್ಚಿಸಿ ಅಂತಿಮ ದಿನಾಂಕವನ್ನು ನಿಗದಿಪಡಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

'ಎಷ್ಟು ದಿನ ವಿಸ್ತರಿಸಬೇಕು. ಗಡುವು ಮುಗಿದ ಮೇಲೆ ಯಾವ ಕ್ರಮ ಕೈಗೊಳ್ಳ ಬೇಕು ಎಂದು ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

2019ರ ಏಪ್ರಿಲ್ 1ಕ್ಕಿಂತ ಹಿಂದಿನ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸಬೇಕಿದ್ದು, ರಾಜ್ಯದಲ್ಲಿ 2 ಕೋಟಿ ವಾಹನಗಳಿವೆ. ಅದರಲ್ಲಿ ಇಲ್ಲಿವರೆಗೆ 40 ಲಕ್ಷ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸಲಾಗಿದೆ.

**ಹೈಕೋರ್ಟ್ ಅನುಮತಿ:** ರಾಜ್ಯದಲ್ಲಿ ವಾಹನಗಳಿಗೆ ಎಚ್‌ಎಸ್‌ಆರ್‌ಪಿ (ಹೈಸೆಕ್ಯುರಿಟಿ ರಿಜಿಸ್ಟ್ರೇಷನ್ ಪ್ಲೇಟ್) ಅಳವಡಿಸುವ ಗಡುವನ್ನು ಆಗಸ್ಟ್ ಅಥವಾ ಸೆಪ್ಟೆಂಬರ್‌ವರೆಗೆ ವಿಸ್ತರಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಅನುಮತಿ ನೀಡಿದೆ.

'ಎಚ್‌ಎಸ್‌ಆರ್‌ಪಿ ಅಳವಡಿಕೆಗೆ ವಿಧಿಸಿರುವ ಗಡುವು ವಿಸ್ತರಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಬಿಎನ್‌ಡಿ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಆದಿತ್ಯ ಸೋಂಧಿ ಈ ಸಂಬಂಧ ಸಲ್ಲಿಸಿದ ಕೋರಿಕೆಗೆ ಸಮ್ಮತಿಸಿದ ನ್ಯಾಯಾಪೀಠ ವಿಚಾರಣೆಯನ್ನು ಜುಲೈ 4ಕ್ಕೆ ಮುಂದೂಡಿತು.

## 'ಬಹುತ್ವ ಭಾರತ'ಕ್ಕೆ 'ಸಾಹಿತ್ಯ ರತ್ನ ಪ್ರಶಸ್ತಿ'



ಅಭಿರುಚಿ ಗಣೇಶ್



ಜಗದೀಶ್ ಕೊಪ್ಪ

ರಂಜನಿ ರಾಘವಾನ್



ಟಂಕಸಾಲಿ ಎಸ್. ನಾಗರಾಜ್

**ಬೆಂಗಳೂರು:** ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು 2023ನೇ ಸಾಲಿನ ವಿವಿಧ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, , 'ಸಾಹಿತ್ಯ ರತ್ನ ಪ್ರಶಸ್ತಿ'ಗೆ ಲೇಖಕ ಎನ್. ಜಗದೀಶ್ ಕೊಪ್ಪ ಅವರ 'ಬಹುತ್ವದ ಭಾರತ' ಕೃತಿ ಆಯ್ಕೆಯಾಗಿದೆ.

'ಯುವ ಸಾಹಿತ್ಯ ರತ್ನ ಪ್ರಶಸ್ತಿ'ಗೆ ರಂಜಿನಿ ರಾಘವನ್ ಅವರ 'ಸ್ವೈಪ್ ರೈಟ್' ಕೃತಿ, 'ಪುಸ್ತಕ ರತ್ನ ಪ್ರಶಸ್ತಿ'ಗೆ ಅಭಿರುಚಿ ಪ್ರಕಾಶನ ಹಾಗೂ 'ಮುದ್ರಣರತ್ನ ಪ್ರಶಸ್ತಿ'ಗೆ ಗೌರಿ ಲ್ಯಾಮಿನೇಟರ್ಸ್ ಆಯ್ಕೆಯಾಗಿದೆ.

ಈ ಪ್ರಶಸ್ತಿಗಳು ತಲಾ ₹10 ಸಾವಿರ ನಗದು, ಸ್ಮರಣಿಕೆ ಹಾಗೂ ಪ್ರಶಸ್ತಿಪತ್ರ ಒಳಗೊಂಡಿವೆ. 2024ರ ಜುಲೈ 6ರಂದು ಬೆಂಗಳೂರಿನಲ್ಲಿ ಗಾಂಧಿಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚಿತ್ರಾವಳಿ

ಮಳೆ–ಗಾಳಿಗೆ ಬಿದ್ದ ಮರದ ಕೊಂಬೆಗಳನ್ನು ನಗರದ ನೃಪತುಂಗ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಹಾಕಿರುವುದರಿಂದ ಜನರು ಓಡಾಡಲು ಕಷ್ಟ ಪಡುವಂತಾಗಿದೆ –ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ವಿಶ್ವ ಬಾಲಕಾರ್ಮಿಕ ವಿರೋಧಿ ದಿನದ ಅಂಗವಾಗಿ ಕಾರ್ಮಿಕ ಇಲಾಖೆ ಬುಧವಾರ ಆಯೋಜಿಸಿದ್ದ ಜಾಗೃತಿ ಜಾಥಾದಲ್ಲಿ ಮಕ್ಕಳು ಭಾಗವಹಿಸಿದ್ದರು

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಿಂದ ನಟ ದರ್ಶನ್ ಅವರನ್ನು ಅಮಾನತು ಮಾಡಬೇಕೆಂದು ಒತ್ತಾಯಿಸಿ ಸರ್ವ ಸಂಘಟನೆಗಳ ಒಕ್ಕೂಟದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು

ವರ್ಷದ ಹಿಂದೆಯಷ್ಟೇ ವೈಟ್‌ಟಾಪಿಂಗ್ ಮಾಡಿದ್ದ ಅವೆನ್ಯೂ ರಸ್ತೆ, ಇತ್ತೀಚೆಗೆ ಸುರಿದ ಮಳೆಗೆ ಕಿತ್ತುಹೋಗಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿದೆ –ಪ್ರಜಾವಾಣಿ ಚಿತ್ರ/ ರಂಜು ಪಿ.

ರೇಣುಕಸ್ವಾಮಿ ಹತ್ಯೆ ಮಾದರಿಯಲ್ಲೇ ಕೋಲಾರದಲ್ಲೊಂದು ಪ್ರಕರಣ

## ಪತ್ನಿ ಹೀಯಾಳಿಸಿದ್ದಕ್ಕೆ ಗೆಳೆಯನ ಕೊಲೆ

ಪ್ರಜಾವಾಣಿ ವಾರ್ತೆ

**ಕೋಲಾರ:** ಚಿತ್ರದುರ್ಗದ ರೇಣುಕಸ್ವಾಮಿ ಹತ್ಯೆ ಮಾದರಿಯಲ್ಲೇ ಕೋಲಾರದಲ್ಲೊಂದು ಪ್ರಕರಣ ನಡೆದಿದ್ದು, ಪತ್ನಿ ಬಗ್ಗೆ ಅಶ್ಲೀಲವಾಗಿ ಮಾತನಾಡಿದ್ದಕ್ಕೆ ವ್ಯಕ್ತಿಯೊಬ್ಬ ತನ್ನ ಗೆಳೆಯನನ್ನು ಬರ್ಬರವಾಗಿ ಕೊಲೆ ಮಾಡಿರುವುದು ಬೆಳಕಿಗೆ ಬಂದಿದೆ.

ಎಂ.ನಾರಾಯಣ

ಹತ್ಯೆಯನ್ನು ಅಪಘಾತ ಎಂದು ಬಿಂಬಿಸಲು ಪ್ರಯತ್ನಿಸಿದ ಆರೋಪಿ, ಆಂಧ್ರಪ್ರದೇಶದ ಗಂಧರ್ವಮಾಕನ ಪಲ್ಲಿ ಗ್ರಾಮದ ಆನಂದ್ ಎಂಬಾತನನ್ನು ಕೋಲಾರ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಕೆಜಿಎಫ್ ತಾಲ್ಲೂಕಿನ ಜೇಡ ಮಾಕನಪಲ್ಲಿ ಗ್ರಾಮದ ಶಂಕರ್ ಮೃತ ವ್ಯಕ್ತಿ. ಅವರ ಸಂಬಂಧಿ ಆಂಧ್ರಪ್ರದೇಶದ ಗಂದಾರಮಾಕನಪಲ್ಲಿ ಶಂಕರ್ ಅಲಿಯಾಸ್ ಶೇಖರ್ ಹಲ್ಲೆಗೊಳಾಗಿದ್ದು, ತೀವ್ರ ಗಾಯಗೊಂಡಿದ್ದಾರೆ.

**ಘಟನೆ ಹಿನ್ನೆಲೆ:** 'ಶಂಕರ್ ಹಾಗೂ ಶಂಕರ್ ಅಲಿಯಾಸ್ ಶೇಖರ್ ಸಂಬಂಧಿಗಳು. ಇವರಿಬ್ಬರಿಗೂ ಆನಂದ್ ಸ್ನೇಹಿತನಾಗಿದ್ದ. ಇವರು ಬೆಂಗಳೂರಿನಲ್ಲಿ ವಿವಿಧ ಕೆಲಸ ಮಾಡಿಕೊಂಡಿದ್ದರು.

'ಮೂವರು ಜೊತೆಗೂಡಿ ಜೂನ್ 7ರಂದು ರಾತ್ರಿ ಆಂಧ್ರಪ್ರದೇಶದ ಗಂಧರ್ವಮಾಕನಪಲ್ಲಿಗೆ ಕಾರಿನಲ್ಲಿ ತೆರಳಲು ನಿರ್ಧರಿಸಿದ್ದಾರೆ. ಈ ಹಾದಿಯಲ್ಲಿ ಹೊಸಕೋಟೆ ಬಾರೊಂದರಲ್ಲಿ ಮದ್ಯಪಾನ ಮಾಡಿದ್ದಾರೆ.

'ಈ ಸಂದರ್ಭದಲ್ಲಿ ಪತ್ನಿ ಜೊತಗಿನ ಸಮಸ್ಯೆಯನ್ನು ಆರೋಪಿ ಆನಂದ್ ಗೆಳೆಯರ ಬಳಿ ಹೇಳಿಕೊಂಡಿದ್ದಾನೆ. ಆಗ ಆತನ ಪತ್ನಿಯನ್ನು ಶಂಕರ್ ಅಲಿಯಾಸ್ ಶೇಖರ್ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಇದರಿಂದ ಆಕ್ರೋಶ ಭರಿತನಾದ ಆನಂದ್ ಕೊಲೆ ಮಾಡುವ ಉದ್ದೇಶದಿಂದ ರಾಷ್ಟ್ರೀಯ ಹೆದ್ದಾರಿ–75ರ ಚುಂಚದೇನಹಳ್ಳಿ ಗೇಟ್ ಬಳಿ ಕಾರು ನಿಲ್ಲಿಸಿದ್ದಾನೆ. ಜಾಕ್ ರಾಡ್‌ನಿಂದ ಶಂಕರ್ ಅಲಿಯಾಸ್ ಶೇಖರ್‌ಗೆ ಬೀಸಿದ್ದಾನೆ. ಆತ ತಪ್ಪಿಸಿಕೊಂಡಿದ್ದರಿಂದ ಆ ರಾಡಿನ ಏಟು ಕೆಜಿಎಫ್ ತಾಲ್ಲೂಕಿನ ಶಂಕರ್ ತಲೆಗೆ ಬಿದ್ದಿದೆ. ಮತ್ತೆ ಅದೇ ರಾಡ್‌ನಿಂದ ಶಂಕರ್ ಅಲಿಯಾಸ್ ಶೇಖರ್‌ಗೂ ಹೊಡೆದಿದ್ದಾನೆ. ಅದರಲ್ಲಿ ಕೆಜಿಎಫ್‌ನ ಶಂಕರ್ ಮೃತಪಟ್ಟಿದ್ದಾನೆ. ಕೊಲೆ ಮಾಡಿದ ಆನಂದ್ ಪರಾರಿಯಾಗಿದ್ದ. ಪ್ರಕರಣದ ತನಿಖೆ ಕೈಗೊಂಡು 24 ಗಂಟೆಯಲ್ಲಿ ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ತಿಳಿಸಿದರು.

ಆರೋಪಿ ಆನಂದ್ ಪ್ರಕರಣವನ್ನು ಅಪಘಾತವೆಂದು ಬಿಂಬಿಸಲು ಪ್ರಯತ್ನಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಘಟನೆಯ ದಿನವೇ ಆ್ಯಂಬುಲೆನ್ಸ್‌ಗೆ ಕರೆ ಮಾಡಿ ಅಪಘಾತವಾಗಿದೆ ಎಂಬುದಾಗಿ ಹೇಳಿರುವುದು ತಿಳಿದುಬಂದಿದೆ. ಕಾರಿನಲ್ಲಿದ್ದ ಒಬ್ಬ ಮೃತಪಟ್ಟು, ಇನ್ನೊಬ್ಬ ಗಾಯಗೊಂಡು ಆಸ್ಪತ್ರೆ ಸೇರಿದ್ದರೆ, ಮತ್ತೊಬ್ಬರು ತಲೆಮರೆಸಿಕೊಂಡಿದ್ದು, ಆ್ಯಂಬುಲೆನ್ಸ್‌ಗೆ ಕರೆ ಮಾಡಿದ್ದ ಬಗ್ಗೆ ಹಾಗೂ ಘಟನೆ ನಡೆದ ಸ್ಥಳದಲ್ಲಿನ ಪರಿಸ್ಥಿತಿ ಬಗ್ಗೆ ಅನುಮಾನ ಬಂದಿದ್ದರಿಂದ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು. ಜೊತೆಗೆ ಮೃತ ಶಂಕರ್ ಸಂಬಂಧಿಕರು ಪೊಲೀಸರಿಗೆ ಸಾವಿನ ಕುರಿತು ಅನುಮಾನ 0ವ್ಯಕ್ತಪಡಿಸಿದ್ದರು. ಆಗ ಆನಂದ್‌ನನ್ನು ಆಂಧ್ರಪ್ರದೇಶದ ವಿ.ಕೋಟಾ ಬಳಿ ಬಂಧಿಸಿ ವಿಚಾರಿಸಿದಾಗ ಪ್ರಕರಣ ಬಯಲಾಗಿದೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

### ಪೊಲೀಸರ ಕಾರ್ಯ: ಐಜಿಪಿ, ಎಸ್‌ಪಿ ಪ್ರಶಂಸೆ

ಡಿವೈಎಸ್ಪಿ ಎಚ್.ಎಂ.ನಾಗ್ತೆ ಮಾರ್ಗದರ್ಶನದಲ್ಲಿ ಕೋಲಾರ ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಕೆ.ಕಾಂತರಾಜ್, ತಂಡದ ಸದಸ್ಯರಾದ ಪಿಎಸ್‌ಐ ವಿ.ಭಾರತಿ, ಸಿಬ್ಬಂದಿ ಮುರಳಿ, ಶೇಕ್ ಸಾದಿಕ್ ಪಾಷಾ, ಮಂಜುನಾಥ್, ರವಿಕುಮಾರ್, ರಾಜೇಶ್, ವಿನಾಯಕ, ಜಿಲ್ಲಾ ಪೊಲೀಸ್ ತಾಂತ್ರಿಕ ವಿಭಾಗದ ನಾಗರಾಜ, ಮುರಳಿ, ಜಿಲ್ಲಾ ಅಪರಾಧ ವಿಭಾಗದ ರಾಘವೇಂದ್ರ, ಆಂಜಿನಪ್ಪ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದವರನ್ನು ಕೇಂದ್ರ ವಲಯ ಐಜಿಪಿ ಬಿ.ಆರ್.ರವಿಕಾಂತೇಗೌಡ, ಎಸ್ಪಿ ಎಂ.ನಾರಾಯಣ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ರವಿಶಂಕರ್, ಜಗದೀಶ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

## ಪ್ರಿಲಿಮ್ಸ್ ಬೂಸ್ಟರ್

ಯು.ಟಿ.ಆಯಿಷಾ ಫರ್ಝಾನ

### 1.ದೇವಿಕಾ ನದಿ ರಾಷ್ಟ್ರೀಯ ಯೋಜನೆ

**ಫೆಬ್ರುವರಿ** 2019ರಲ್ಲಿ ಪ್ರಾರಂಭವಾದ ಈ ಯೋಜನೆಯು 'ನಮಾಮಿ ಗಂಗಾ' ಉಪಕ್ರಮದ ಮಾದರಿಯಲ್ಲಿದ್ದು, ಜಮ್ಮು ಮತ್ತು ಕಾಶ್ಮೀರದಲ್ಲಿ ಹರಿಯುತ್ತಿರುವ ದೇವಿಕಾ ನದಿಯ ಪುನರುಜ್ಜೀವನ ಯೋಜನೆಯಾಗಿದೆ. ಇದು ಉತ್ತರ ಭಾರತದ ಮೊದಲ ನದಿ ಪುನರುಜ್ಜೀವನ ಯೋಜನೆಯಾಗಿದೆ. 190 ಕೋಟಿ ವೆಚ್ಚದ ಈ ಯೋಜನೆಯು ಕೇಂದ್ರ ಅನುದಾನಿತ ಯೋಜನೆಯಾಗಿದ್ದು ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆ (ಎನ್‌ಆರ್‌ಸಿಪಿ) ದೇವಿಕಾ ಯೋಜನೆಯಡಿ, ದೇವಿಕಾ ನದಿಯ ದಡದಲ್ಲಿರುವ ಸ್ನಾನದ 'ಘಾಟ್‌ಗಳನ್ನು'(ಸ್ಥಳಗಳು) ಅಭಿವೃದ್ಧಿಪಡಿಸುವಿಕೆ, ಅತಿಕ್ರಮಣಗಳನ್ನು ತೆಗೆದುಹಾಕುವುದು, ನೈಸರ್ಗಿಕ ಜಲಮೂಲಗಳನ್ನು ಪುನಃಸ್ಥಾಪಿಸುವುದು ಮತ್ತು ಜಲಾನಯನ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಈ ಯೋಜನೆಯ ಮುಖ್ಯ ಗುರಿಗಳಾಗಿವೆ. ಈ ಯೋಜನೆಯು 8 MLD, 4 MLD ಮತ್ತು 1.6 MLD ಸಾಮರ್ಥ್ಯದ ಮೂರು ಒಳಚರಂಡಿ ಸಂಸ್ಕರಣಾ ಘಟಕಗಳ ನಿರ್ಮಾಣ, 129.27 ಕಿಮೀ ಒಳಚರಂಡಿ ಜಾಲ, ಎರಡು ಸ್ಮಶಾನ ಘಾಟ್‌ಗಳ ಅಭಿವೃದ್ಧಿ, ರಕ್ಷಣಾ ಬೇಲಿಗಳು, ಸಣ್ಣ ಜಲವಿದ್ಯುತ್ ಸ್ಥಾವರಗಳು ಮತ್ತು ಮೂರು ಸೌರ ವಿದ್ಯುತ್ ಸ್ಥಾವರಗಳನ್ನು ಒಳಗೊಂಡಿದೆ. ಯೋಜನೆ ಪೂರ್ಣಗೊಂಡ ನಂತರ, ನದಿಯ ಮಾಲಿನ್ಯದಲ್ಲಿ ಇಳಿಕೆ ಮತ್ತು ನೀರಿನ ಗುಣಮಟ್ಟದಲ್ಲಿ ಸುಧಾರಣೆ ಕಾಣುತ್ತದೆ ಎಂದು ಅಂದಾಜಿಸಲಾಗಿದೆ.

#### ದೇವಿಕಾ ನದಿ

ಜಮ್ಮು ಮತ್ತು ಕಾಶ್ಮೀರದ ಉಧಂಪುರ್ ಜಿಲ್ಲೆಯಲ್ಲಿ ನೆಲೆಸಿರುವ ಪವಿತ್ರ ಸುದ್ಧ ಮಹಾದೇವ ದೇವಸ್ಥಾನದ ತಟದಲ್ಲಿ ಹುಟ್ಟುವ ದೇವಿಕಾ ನದಿಯು ಪಶ್ಚಿಮ ಪಂಜಾಬ್ ಕಡೆಗೆ ಹರಿಯುತ್ತಾ ಅಂತಿಮವಾಗಿ ರಾವಿ ನದಿಯೊಂದಿಗೆ ಸಂಗಮಿಸುತ್ತದೆ.

ಸಾಂಸ್ಕೃತಿಕ ಪ್ರಾಮುಖ್ಯತೆಯ ದೃಷ್ಟಿಯಿಂದ ನೋಡುವುದಾದರೆ ಈ ನದಿಯನ್ನು ಪವಿತ್ರ ಗಂಗಾ ನದಿಯ ಸಹೋದರಿ ನದಿ ಎಂದು ಪರಿಗಣಿಸಲಾಗುತ್ತದೆ. ಹಿಂದೂ ಸಂಸ್ಕೃತಿಯಲ್ಲಿ ದೇವಿಕಾ ನದಿಯನ್ನು ಕೂಡಾ ಪವಿತ್ರ ನದಿ ಎಂದು ಪೂಜಿಸುತ್ತಾರೆ. ದಂತಕಥೆಯ ಪ್ರಕಾರ, ದೇವಿಕಾ ನದಿಯು ದೇವಿ ಪಾರ್ವತಿಯ ಭೌತಿಕ ಅಭಿವ್ಯಕ್ತಿಯಾಗಿದ್ದು ಪಾರ್ವತಿಯೇ ನದಿಯಾಗಿ ಹರಿಯುತ್ತಾಳೆ. ಇದು ರಾವಿ ಮತ್ತು ಚೆನಾಬ್ ನದಿಗಳ ನಡುವಿನ ಪ್ರದೇಶಗಳನ್ನು ಒಳಗೊಂಡಿರುವ ಮದರ್ ದೇಶ ಪ್ರದೇಶದ ನಿವಾಸಿಗಳ ಕಲ್ಯಾಣ ಮತ್ತು ಸಮೃದ್ಧಿಗಾಗಿ ದೇವರು ನೀಡಿದ ವರ ಎಂಬ ಪ್ರತೀತಿಯಿದೆ. ಇದನ್ನು ಗುಪ್ತ ಗಂಗಾ ಎಂದೂ ಕರೆಯುತ್ತಾರೆ.

### 2.ಬ್ಲೂ ಓಷನ್ ಈವೆಂಟ್

ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಜಗತ್ತಿನಾದ್ಯಂತ ಸಾಕಷ್ಟು ಪ್ರಯತ್ನಗಳ ಹೊರತಾಗಿಯೂ, 2030ರ ದಶಕದ ಆರಂಭದಲ್ಲಿ, ಬೇಸಿಗೆಯ ತಿಂಗಳುಗಳಲ್ಲಿ ಆರ್ಕ್ಟಿಕ್ ಮಹಾಸಾಗರವು ಮಂಜುಗಡ್ಡೆಯಿಲ್ಲದೇ ಇರುವ ಸಂದರ್ಭವನ್ನು ಎದುರಿಸುವ ಸಾಧ್ಯತೆಯಿದೆ ಎಂದು ನೇಚರ್ ಕಮ್ಯುನಿಕೇಷನ್ಸ್ ತನ್ನ ಇತ್ತೀಚಿನ ಪ್ರಕಟಣೆಯ ಮೂಲಕ ಎಚ್ಚರಿಸಿದೆ.

'ಬ್ಲೂ ಓಷನ್ ಈವೆಂಟ್'ಎಂಬ ಪದವು ಬೇಸಿಗೆಯ ತಿಂಗಳಲ್ಲಿ ಆರ್ಕ್ಟಿಕ್ ಮಹಾಸಾಗರವು ಮಂಜುಗಡ್ಡೆಯಿಂದ ಮುಕ್ತವಾಗುವ ಒಂದು ಕಾಲ್ಪನಿಕ ಸನ್ನಿವೇಶವನ್ನು ಸೂಚಿಸುತ್ತದೆ. ಇದು ಹವಾಮಾನ ಬದಲಾವಣೆ ಮತ್ತು ಧ್ರುವಪ್ರದೇಶದ ಹಿಮ ಕರಗುವಿಕೆಯಲ್ಲಿ ಮಹತ್ವದ ಹಾಗೂ ಅಪಾಯಕಾರಿ ಬದಲಾವಣೆಯನ್ನು ಸೂಚಿಸುತ್ತದೆ. ತನ್ನ ಹುಟ್ಟಿನಿಂದಲೂ ಆರ್ಕ್ಟಿಕ್ ಸಮುದ್ರವು ಮಂಜುಗಡ್ಡೆಯ ಪದರದಿಂದ ಆವರಿಸಲ್ಪಟ್ಟಿದೆ. ಬೇಸಿಗೆಯಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುತ್ತಿತ್ತು.

ಜಾಗತಿಕ ತಾಪಮಾನ ಏರಿಕೆಯಿಂದಾಗಿ ಧ್ರುವೀಯ ಮಂಜುಗಡ್ಡೆಗಳು ವೇಗವಾಗಿ ಕರಗುತ್ತಾ ಆರ್ಕ್ಟಿಕ್ ಮಹಾಸಾಗರವು ಮುಂದೊಂದು ದಿನ ಸಮುದ್ರದ ಮಂಜುಗಡ್ಡೆಯೇ ಇಲ್ಲದ ಪರಿಸ್ಥಿತಿಯನ್ನು ಅನುಭವಿಸುವ ಸಮಯ ಬರಬಹುದು ಎಂದು ವಿಜ್ಞಾನಿಗಳು ಊಹಿಸಿದ್ದಾರೆ.

'ಬ್ಲೂ ಓಷನ್ ಈವೆಂಟ್' ಎಂಬ ಪದವು ಹವಾಮಾನ ಬದಲಾವಣೆಯಿಂದಾಗಿ ಆರ್ಕ್ಟಿಕ್‌ನಲ್ಲಿ ಸಂಭವಿಸುವ ಒಂದು ರೂಪಾಂತರ ಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಸಮುದ್ರದ ಮಂಜುಗಡ್ಡೆಯ ನಷ್ಟವಾಗುವುದರಿಂದ ಆರ್ಕ್ಟಿಕ್ ಪರಿಸರ ವ್ಯವಸ್ಥೆಗಳು ಮತ್ತು ವನ್ಯಜೀವಿಗಳಿಗೆ ಹಾನಿಯಾಗುವಂಥ ಪರಿಸರ ಪರಿಣಾಮಗಳನ್ನು ಮಾತ್ರವಲ್ಲದೆ, ಜಾಗತಿಕ ಹವಾಮಾನ ಮಾದರಿಗಳು ಮತ್ತು ಜಗತ್ತಿನ ಸಮುದ್ರ ಮಟ್ಟಗಳಲ್ಲಿ ಕೂಡಾ ವ್ಯಾಪಕ ಪರಿಣಾಮಗಳನ್ನು ಹೊಂದಿದೆ. ಈ ಮೂಲಕ ಸಾಗರಗಳು ಹೆಚ್ಚುಹೆಚ್ಚು ಸೌರ ವಿಕಿರಣವನ್ನು ಹೀರಿಕೊಳ್ಳಲು ಕಾರಣವಾಗುತ್ತಾ ಇನ್ನಷ್ಟು ತಾಪಮಾನ ಏರಿಕೆಯಾಗಬಹುದು. ಹವಾಮಾನ ಪ್ರವೃತ್ತಿಗಳನ್ನು ಬದಲಾಯಿಸಬಹುದು ಮತ್ತು ಅಂತಿಮವಾಗಿ ಜಾಗತಿಕ ಸಾಗರ ಪರಿಚಲನೆಯ ಮೇಲೆ ಪರಿಣಾಮ ಬೀರಬಹುದು ಎಂದು ಪರಿಸರತಜ್ಞರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಸಂಶೋಧಕರು ಮತ್ತು ನೀತಿ ನಿರೂಪಕರಿಗೆ ಈ ಬ್ಲೂ ಓಷನ್ ಈವೆಂಟ್‌ನ ಪರಿಕಲ್ಪನೆಯು ಆರ್ಕ್ಟಿಕ್‌ನಲ್ಲಿ ಸಂಭವಿಸುವ ಕ್ಷಿಪ್ರ ಬದಲಾವಣೆಗಳ ಎಚ್ಚರಿಕೆಯ ಸಂಕೇತ ಎನ್ನಲಾಗುತ್ತದೆ ಮತ್ತು ಸ್ಥಳೀಯ ಮತ್ತು ಜಾಗತಿಕ ಮಾಪಕಗಳ ಮೇಲೆ ಅದರ ಪರಿಣಾಮಗಳನ್ನು ತಗ್ಗಿಸಲು ಹವಾಮಾನ ಬದಲಾವಣೆಯನ್ನು ಪರಿಹರಿಸುವ ತುರ್ತುಸ್ಥಿತಿಯನ್ನು ಒತ್ತಿಹೇಳುತ್ತದೆ. ❖

### 3. ಕೆಲ್ಪ್ ಅರಣ್ಯಗಳು

ಕೆಲ್ಪ್ ಕಾಡುಗಳು ನೀರೊಳಗಿನ ಪರಿಸರ ವ್ಯವಸ್ಥೆಗಳಾಗಿದ್ದು, ಕೆಲ್ಪ್ ಎಂದು ಕರೆಯಲಾಗುವ ದೊಡ್ಡ ಕಂದು ಆಲ್ಗೆಗಳ ದಟ್ಟವಾದ ಗುಂಪುಗಳ ರಚನೆಯಾಗಿದೆ. ಈ ಕಾಡುಗಳು ಸಾಮಾನ್ಯವಾಗಿ ಆಳವಿಲ್ಲದ, ಪೌಷ್ಟಿಕವಾಗಿ ಸಮೃದ್ಧವಾದ ಕರಾವಳಿ ನೀರಿನಲ್ಲಿ, ವಿಶೇಷವಾಗಿ ಪ್ರಪಂಚದಾದ್ಯಂತ ಶೀತ ಮತ್ತು ಸಮಶೀತೋಷ್ಣ ಪ್ರದೇಶಗಳಲ್ಲಿ ಬೆಳೆಯುತ್ತವೆ.

ಕೆಲ್ಪ್ ಪಾಚಿಗಳು ಸಾಗರ ತಳಗಳಲ್ಲಿ ಕೆಲವು ಇಂಚುಗಳಿಂದ ಹಿಡಿದು ನೂರು ಅಡಿ ಎತ್ತರಕ್ಕೆ ಬೆಳೆಯಬಲ್ಲದು. ಇವು ಕಾಡಿನಲ್ಲಿರುವ ದಟ್ಟವಾದ ಮರಗಳನ್ನು ಹೋಲುವ ರೀತಿಯಲ್ಲಿ, ನೀರಿನ ಅಡಿಯಲ್ಲಿ ಕಂಡುಬರುವ ಎತ್ತರದ ರಚನೆಗಳಾಗಿವೆ. ಆದ್ದರಿಂದ ಇದನ್ನು 'ಕೆಲ್ಪ್ ಕಾಡುಗಳು'ಎಂದು ಕರೆಯಲಾಗುತ್ತದೆ.

ಈ ಪರಿಸರ ವ್ಯವಸ್ಥೆಗಳು ಹೆಚ್ಚು ಉತ್ಪಾದಕ ಪರಿಸರ ವ್ಯವಸ್ಥೆಗಳಾಗಿದ್ದು ವೈವಿಧ್ಯಮಯ ಸಮುದ್ರ ಜೀವಿಗಳಿಗೆ ಆವಾಸ ಸ್ಥಾನಗಳಾಗಿವೆ. ಕೆಲ್ಪ್ ಕಾಡುಗಳು ನೂರಕ್ಕೂ ಹೆಚ್ಚಿನ ಮೀನು, ಅಕಶೇರುಕಗಳು ಮತ್ತು ಸಮುದ್ರ ಸಸ್ತನಿಗಳು ಸೇರಿ ವಿವಿಧ ಜೀವಿಗಳಿಗೆ ಆವಾಸಸ್ಥಾನವನ್ನು ಮತ್ತು ಆಹಾರ ಮೂಲವನ್ನು ಒದಗಿಸುತ್ತದೆ. ಕೆಲ್ಪ್ ಕಾಡುಗಳ ಸಂಕೀರ್ಣ ರಚನೆಯು ಅನೇಕ ಸಾಗರ ಜೀವಿಪ್ರಭೇದಗಳಿಗೆ ಆಶ್ರಯ ಮತ್ತು ರಕ್ಷಣೆ ನೀಡುತ್ತದೆ. ಈ ಮೂಲಕ ಕೆಲ್ಪ್ ಕಾಡುಗಳನ್ನು ಸಾಗರದೊಳಗಿನ ನರ್ಸರಿ ಮೈದಾನಗಳು ಮತ್ತು ಆಹಾರ ಪ್ರದೇಶಗಳು ಎನ್ನಲಾಗುತ್ತದೆ.

ಸಾಗರದೊಳಗಿನ ಜೀವವೈವಿಧ್ಯವನ್ನು ಬೆಂಬಲಿಸುವುದರ ಜೊತೆಗೆ, ಕೆಲ್ಪ್ ಕಾಡುಗಳು ನಿರ್ಣಾಯಕ ಪರಿಸರ ಪಾತ್ರಗಳನ್ನು ವಹಿಸುತ್ತವೆ. ಸಮುದ್ರದ ತಳವನ್ನು ಸ್ಥಿರಗೊಳಿಸುವ ಮೂಲಕ, ಸವೆತವನ್ನು ಕಡಿಮೆ ಮಾಡುವ ಮೂಲಕ ಮತ್ತು ದ್ಯುತಿಸಂಶ್ಲೇಷಣೆಯ ಮೂಲಕ ನೀರಿನಿಂದ ಇಂಗಾಲದ ಡೈಆಕ್ಸೈಡ್ ಅನ್ನು ಹೀರಿಕೊಳ್ಳುವ ಮೂಲಕ ಕರಾವಳಿ ಪರಿಸರ ವ್ಯವಸ್ಥೆಗಳನ್ನು ನಿಯಂತ್ರಿಸಲು ಅವು ಸಹಾಯ ಮಾಡುತ್ತವೆ. ಈ ಮೂಲಕ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ತಗ್ಗಿಸುತ್ತವೆ.

ಕೆಲ್ಪ್ ಕಾಡುಗಳು ಮಾಲಿನ್ಯ, ಮಿತಿಮೀರಿದ ಮೀನುಗಾರಿಕೆ, ಆವಾಸಸ್ಥಾನ ನಾಶ ಮತ್ತು ಹವಾಮಾನ ಬದಲಾವಣೆ ಸೇರಿದಂತೆ ವಿವಿಧ ಮಾನವ ಚಟುವಟಿಕೆಗಳಿಂದ ಅಪಾಯವನ್ನು ಎದುರಿಸುತ್ತವೆ. ಬೆಚ್ಚಗಿನ ಸಮುದ್ರದ ತಾಪಮಾನ, ಸಾಗರ ಆಮ್ಲೀಕರಣ ಮತ್ತು ಸಾಗರ ಪ್ರವಾಹಗಳಲ್ಲಿನ ಬದಲಾವಣೆಗಳು ಕೆಲ್ಪ್ ಪಾಚಿಗಳ ಬೆಳವಣಿಗೆಯನ್ನು ಅಡ್ಡಿಪಡಿಸಿ, ಈ ಪ್ರಮುಖ ಪರಿಸರ ವ್ಯವಸ್ಥೆಗಳ ಅವನತಿಗೆ ಕಾರಣವಾಗಬಹುದು.

ಕಡಲ ಜೀವವೈವಿಧ್ಯ ಮತ್ತು ಪರಿಸರ ವ್ಯವಸ್ಥೆಯ ಆರೋಗ್ಯವನ್ನು ಕಾಪಾಡಿಕೊಳ್ಳಲು ಕೆಲ್ಪ್ ಕಾಡುಗಳನ್ನು ರಕ್ಷಿಸುವುದು ಮತ್ತು ಸಂರಕ್ಷಿಸುವುದು ಅತ್ಯಗತ್ಯ.

## ಬಹುಆಯ್ಕೆಯ ಪ್ರಶ್ನೆಗಳು

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಬಹುಆಯ್ಕೆಯ ಪ್ರಶ್ನೋತ್ತರಗಳು ಇಲ್ಲಿವೆ...

**1. ಆಗ್ನೇಯ ಏಷ್ಯಾದ ರಾಷ್ಟ್ರಗಳಿಂದ ಉಂಟಾಗುತ್ತಿರುವ ಸೈಬರ್ ಅಪರಾಧವನ್ನು ತಡೆಗಟ್ಟಲು ಸ್ಥಾಪಿಸಿರುವ ಸಮಿತಿಯಲ್ಲಿ ಕೆಳಗಿನ ಯಾವ ಸಂಸ್ಥೆ ಸದಸ್ಯತ್ವವನ್ನು ಹೊಂದಿರುವುದಿಲ್ಲ?**

1. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರತಿನಿಧಿ.
2. ಫೈನಾನ್ಷಿಯಲ್ ಇಂಟೆಲಿಜೆನ್ಸ್ ಯೂನಿಟ್ ನ ಪ್ರತಿನಿಧಿ.
3. ಭಾರತೀಯ ಬ್ಯಾಂಕ್‌ಗಳ ಪ್ರತಿನಿಧಿ.
4. ಕೇಂದ್ರ ಸಮಾಜ ಕಲ್ಯಾಣ ಸಚಿವಾಲಯದ ಪ್ರತಿನಿಧಿ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 2 ಮತ್ತು 3
ಬಿ. 1 ಮತ್ತು 2
ಸಿ. 1 ಮತ್ತು 3 ಡಿ. 4 ಮಾತ್ರ

**ಉತ್ತರ : ಡಿ**

**2. ವಿಶ್ವಸಂಸ್ಥೆಯ ಮಿಲಿಟರಿ ಜೆಂಡರ್ ಅಡ್ವೊಕೇಟ್-2023 ಪ್ರಶಸ್ತಿಯನ್ನು ಕೆಳಗಿನ ಯಾರು ಪಡೆದುಕೊಂಡರು?**

ಎ. ಮೇಜರ್ ರಾಧಿಕಾ ಸೇನ್.
ಬಿ. ಮೇಜರ್ ಧ್ಯಾನ್ ಚಂದ್.
ಸಿ. ಮೇಜರ್ ಸನತ್.
ಡಿ. ಲೆಫ್ಟಿನೆಂಟ್ ಜನರಲ್ ಹಿಮಾನ್ಶು ಪಟೇಲ್.

**ಉತ್ತರ : ಎ**

**3. ಡಿಜಿಲಾಕರ್ ತಂತ್ರಾಂಶಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.**

ಎ. ಇದು ಕೇಂದ್ರ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ (MeitY) ಸಚಿವಾಲಯದ ಅಡಿಯಲ್ಲಿ ಬರುತ್ತದೆ.
ಬಿ. ಡಿಜಿಲಾಕರ್ ಸರ್ಕಾರದ ಕಾಗದರಹಿತ ಆಡಳಿತದ ಉದ್ದೇಶವನ್ನು ಸಾಧಿಸಲು ಸಹಾಯಕವಾಗಿದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

**ಉತ್ತರ : ಡಿ**

**4. ಇ-ಕಚೇರಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.**

ಎ. ಇ-ಕಚೇರಿಯು ಭಾರತ ಸರ್ಕಾರದ ರಾಷ್ಟ್ರೀಯ ಇ-ಆಡಳಿತ ಕಾರ್ಯಕ್ರಮದ ಮಿಷನ್ ಮೋಡ್ ಯೋಜನೆಯಾಗಿದೆ.
ಬಿ. ಇ-ಕಚೇರಿ ತಂತ್ರಾಂಶವನ್ನು ನ್ಯಾಷನಲ್ ಇನ್ಫಾರ್ಮ್ಯಾಟಿಕ್ಸ್ ಸೆಂಟರ್(ಎನ್.ಐ.ಸಿ)ನವರು ಅಭಿವೃದ್ಧಿಪಡಿಸಿದ್ದಾರೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

**ಉತ್ತರ: ಡಿ**

**5. ಇ-ಕನ್ನಡ ಯೋಜನೆಗೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.**

ಎ. ಇ-ಕನ್ನಡ ಯೋಜನೆಯು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾಗಿದೆ.
ಬಿ. ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಎಲ್ಲ ಕ್ಷೇತ್ರಗಳಲ್ಲಿ ಕನ್ನಡ ಭಾಷೆಯನ್ನು ಪರಿಣಾಮಕಾರಿ ಅಳವಡಿಕೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ.

ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.

**ಉತ್ತರ : ಡಿ**

**6. ಪಾಕ್ ಆಕ್ರಮಿತ ಪ್ರದೇಶದ ಆಡಳಿತಾತ್ಮಕ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?**

1. ಪಾಕ್ ಆಕ್ರಮಿತ ಪ್ರದೇಶವನ್ನು ತನ್ನ ಭೂಪ್ರದೇಶವೆಂದು ಪಾಕಿಸ್ತಾನ ತನ್ನ ಔಪಚಾರಿಕ ನಕ್ಷೆಯಲ್ಲಿ ತೋರಿಸಿದೆ.
2. ಪಾಕ್ ಆಕ್ರಮಿತ ಪ್ರದೇಶವನ್ನು ಪಾಕಿಸ್ತಾನ ತನ್ನ ಔಪಚಾರಿಕ ಪ್ರದೇಶವೆಂದು ತೋರಿಸದೆ ಸ್ವಾಯುತ್ತತೆ ಹೊಂದಿರುವ ಪ್ರದೇಶಗಳಾಗಿ ತೋರಿಸಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

**ಉತ್ತರ : ಬಿ**

**7. ಭಾರತದಿಂದ ಪಾಕಿಸ್ತಾನಕ್ಕೆ ಕೆಳಗಿನ ಯಾವ ಉತ್ಪನ್ನಗಳು 2019ಕ್ಕೂ ಮುನ್ನ ಹೆಚ್ಚಾಗಿ ರಫ್ತಾಗುತ್ತಿತ್ತು?**

1. ಪೆಟ್ರೋಲಿಯಂ ಉತ್ಪನ್ನಗಳು.
2. ಮೆಕ್ಯಾನಿಕಲ್ ಬಿಡಿಭಾಗಗಳು.
3. ಪ್ಲಾಸ್ಟಿಕ್ ಉತ್ಪನ್ನಗಳು.
4. ರಾಸಾಯನಿಕಗಳು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 2, 3 ಮತ್ತು 4 ಬಿ. 1 ಮತ್ತು 2
ಸಿ. 2 ಮತ್ತು 4 ಡಿ. 4 ಮಾತ್ರ

**ಉತ್ತರ : ಎ**

## ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

### Second Language ENGLISH
### Dr. B. R. Ambedkar

**Questions and Answers**

**4. Who were the other notable members of the drafting committee?**

Ans: The other notable members of the drafting committee were Alladi Krishnaswami Iyyar, K.M.Munshi and. Gopalaswami Ayyangar etc..

**5. Ambedkar had ' rare gifts ' What were they?.**

Ans :Ambedkar had rare gifts like unraveling the most complicated legal concepts. in a language which the laymen understood. And also hehad tactfulness, frankness, and patience.

**6.The constitution is a fundamental document to both the ruler and the ruled. How?**

Ans: The constitution is a fundamental document to both the ruler and the ruled because the Constitution is a document which defines the position and power of the three organs of the State, the executive, the judiciary and the legislature. It is also dealing with fundamental rights which gives powers to citizens.

**Share Your Responses**

**1. Nehru chose Ambedkar as a law minister for three reasons. What are they?** (paragraph 7)

Ans:The three reasons are
1. He had skills in the field of law and legislation.
2. His vision of Social justice
3. His own campaigns against social injustice.

**2. Are you aware of the facilities provided by the Social Welfare Department? Mention any two.**

Ans: Yes. The Social Welfare Department, as suggested by the name, strives for social welfare and justice. It ensures the welfare of the Scheduled Caste/Scheduled tribe, handicapped and marginalized sections of society. National Overseas Scholarship for the SCs/STs and Free Coaching Scheme for SC/ST and OBC students, and many welfare schemes are providing.

**3. After independence, members of the Scheduled Castes have found doors opened to them. How?**

Ans: Before independence, members of the Scheduled Castes were ill-treated but after independence the picture changed. Now no legal bars exist today for self-expression or self-advancement. Since Independence, members of the scheduled castes have found doors opened to them. No legal bars exist for self– expression or self – advancement. They can enroll themselves in institutes of higher learning and enter public services. They occupy high offices of state and center. They also compete for the post of judges, ambassadors and governors. They have acquitted themselves creditably in all these positions of responsibility.

**4. All people should be given equal opportunities to prove themselves. How are the members of the Scheduled Castes proving themselves?**

Ans:All people including Scheduled castes should be given equal opportunities to prove themselves.

People from the Scheduled Castes are enrolling themselves in institutes of higher learning and entering public services. They have come to occupy high offices of State, both at the Centre and in the States. Judges, ambassadors and governors have been drawn from their ranks. And they have acquitted themselves creditably in all these positions of responsibility.

**5. Babasaheb Ambedkar considers public agitation in free India as unconstitutional. Why?**

Ans:Ambedkar considers public agitation in free India as unconstitutional because the right to rebellion is recognized against a government without people's consent it should be a dictatorship such agitations invariably result in the loss of lives and Public property.

**Share Your Responses**

**1. What were the opinions of the Buddha and Avvai regarding the caste divisions?**

Ans:The opinion of Buddha regarding the last divisions are (1). The noble and wholesome people and (2). The ignoble and unwholesome people.

The **Tamil Poetess Awai** said that (1). The charitable who give and are superior (2) . The misers who do not give and are inferior.

**2. Caste system in India is in a strong position because of _____[fill in the blank picking theanswer from paragraph 11]**

Ans:Power structure.Question

**3. Why did the British magnify the caste distinctions?**

Ans: The British rulers magnify or exaggerated the caste distinctions to strengthen their control over us. So they started the policy of "Divide and Rule".

**4. The word 'hegemony' means ______**
**a) distinction b) control c) strength**

Ans: (b) Control

**5. 'They brought about a veritable revolution in social thought.'**
**a) who are'they'?**
**b) What 'revolution' is referred to here?**
**c) How did they bring about the revolution?**

Ans: a) Mahatma Gandhiji. and Dr. B.R. Ambedker.
b) The revolution referred here is repudiated (means deny) the caste system and to proclaim the oneness of the Hindu community.
c) Gandhiji brings the revolution by reminding the higher castes of their duty towards depression. Babasaheb did the same by reminding the depressed, classes about their inherent rights to equality with the higher and powerful costes.

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

### MOLECULAR BASIS OF INHERITANCE

**8. Write a note on Pedigree analysis.**

**Ans:-** Pedigree is a record of descent over generations in which the number of offspring and transmission of important traits are given graphically or as family tree.

The study of pedigree for a few generations for analysis of transmission of exceptional phenotypes and the possibility of its occurrence in particular generation is known as pedigree analysis.

The pedigree analysis is carried out for studying inheritance of human traits because the common mendelian experiments cannot be carried out over human beings due to the following reasons-

a) Generation period is long in human beings (20 -25years)
b) In many cases human traits are influenced by a number of factors.
c) A scientific worker can study human inheritance for not more than two or three generations.
d) Progeny of a couple is small.
e) Marriages desired by an experimenter are not always possible in human beings.
f) Study of desired mating requires screening of a large human population. Even then the desired of informative mating may not be observed.
g) Human beings have a mixed population and pure traits are rarely observed.
h) Marriages are not planned so that there is regular mixing of traits coming from unconnected families.

Hence, pedigree analysis is carried out in order to ward off possible disaster due to picking up of harmful genetic defects like dominant polydactyly (extra digits), syndactyly (joined digits) and brachydactyly (short digits), recessive haemophilia, deaf mutism, birth blindness, colour blindness, thalassemia, alkaptonuria, phenylketonuria, sickle cell anaemia, etc. Some factors to be considered during the pedigree analysis, such as -

a) inheritance of genes follow the mendelian principles.
b) There are linkages and crossing overs.
c) As the results to be prophesied on hypothetical matings, the principle of probability and chance of difference are always taken into consideration.
d) Various alternatives are thought and eliminated.
e) A trait can appear in a child though it may be absent in both the parents. However, if both the parents have a trait especially recessive one, the child is liable to have the same. Recessive traits appear more commonly in families where close or cousin marriages are practiced.
f) If pedigree analysis in one case does not give clear possibilities, similar pedigree analyses available for others are studied.

**Importance of pedigree analysis:**

(i) Pedigree analysis is important to know the possibility of a recessive allele which may create disorder in the progeny, e.g., colour blindness, haemophilia, thalassemia, etc.
(ii) It can indicate the origin of a trait in the ancestors, e.g., queen Victoria for haemophilia in royal families.
(iii) It can indicate the usefulness or harm a marriage between close relatives, will cause.
(iv) The analysis is used for genetic counselling about the possibilities of prospective parents transmitting a disorder to their children.
(v) It is extensively used in medical research.

**9. Write a note on Human genetic disorders.**

**Ans:- Human Genetic Disorders**

Genetic disorders are defects that are caused by a genetic mechanism like mendelian genes, multifactor genes, chromosomal aberrations and anomalies.

In 1902, sir Archibald Garrod and William Bateson scanned human population and found that several human disorders seem to be inherited like mendelian genes. They are mendelian disorders.

**Mendelian disorders** are genetic disease showing mendelian pattern of inheritance which are caused by mutations in their genes with pathological consequences.

The other genetic disorders caused by chromosomal aberrations and anomalies are known as **chromosomal disorders**. They do not follow mendelian pattern of inheritance but are caused by mainly defective synapsis and disjunction during meiosis.

**10. Mention some differences Between Mendelian Disorders and Chromosomal Disorders.**

| *Mendelian Disorders* | *Chromosomal Disorders* |
|---|---|
| They are caused by defective alleles. | They are caused by Chromosomal aberrations and anomalies |

(Contd….)

# ಪುತ್ರನಿಂದ ಅಪಘಾತ; ತಾಯಿ ಬಂಧನ

ಶನಿವಾರಸಂತೆ (ಕೊಡಗು ಜಿಲ್ಲೆ): ಇಲ್ಲಿಗೆ ಸಮೀಪದ ದುಂಡಳ್ಳಿ ಗ್ರಾಮ ಪಂಚಾಯಿತಿ ರಸ್ತೆಯಲ್ಲಿ 16 ವರ್ಷದ ಬಾಲಕ ಬೈಕ್ ಚಾಲನೆ ಮಾಡಿ, ಪಾದಚಾರಿಯೊಬ್ಬರು ಮೃತಪಟ್ಟ ಘಟನೆಗೆ ಸಂಬಂಧಿಸಿ, ಬಾಲಕನಿಗೆ ಬೈಕ್ ನೀಡಿದ ತಾಯಿ ಯಶೋಧಾ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಚಂಗಡಹಳ್ಳಿಯ ನಿವಾಸಿಯಾದ ಬಾಲಕ, ಜೂನ್ 1ರಂದು ರಾತ್ರಿ ಬೈಕ್‌ನಿಂದ ಗುದ್ದಿದ ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದ ಪಾದಚಾರಿ ಜಯಪ್ಪ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಬಾಲಕನ ತಾಯಿಯನ್ನು ಬಂಧಿಸಿದರು. ನ್ಯಾಯಾಧೀಶರು ಬಾಲಕನನ್ನು 11 ದಿನಗಳ ಕಾಲ ಮೈಸೂರಿನ ಸರ್ಕಾರಿ ವೀಕ್ಷಣಾಲಯಕ್ಕೆ ಕಳಿಸಿದರು. 'ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಾಹನ ನೀಡುವ ಪೋಷಕರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

# ಸುಧಾ, ಮಯೂರ ಓದಿ

## ICAR - National Institute of Animal Nutrition and Physiology

Adugodi, Bengaluru - 560 030

Department of Agricultural Research and Education, Government of India

**NIANP/ADV-5-CDN/2024-25**

**The walk - in - interview has been scheduled on 21.06.2024** for engaging of One Young Professional - I and one Field Assistant at ICAR -NIANP, Bengaluru under DAPST project (exclusively for ST candidates) and one Field Assistant under DAPSC project (exclusively for SC candidates) on temporary basis. The consolidated remuneration for Young Professional - I is Rs. 30000/- and Rs. 15000/- for Field Assistant per month. For detailed advertisement please visit the Institute website **www.nianp.res.in.**

Sd/- **Administrative Officer**

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪುಲಿಕೇಶಿನಗರ ವಿಭಾಗ,
ಬಿಬಿಎಂಪಿ ಕಛೇರಿ ಕಟ್ಟಡ, ರಾಬರ್ಟ್‌ಸನ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು.

ಸಂಖ್ಯೆ: ಕಾಅ/ಪುನ/ಟೆಂಡರ್/03/2024–25 ದಿನಾಂಕ: 12–06–2024

### ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ದ್ವಿ–ಲಕೋಟೆ ಪದ್ಧತಿ)
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಬಿಬಿಎಂಪಿಯಲ್ಲಿ ನೋಂದಾಯಿಸಿರುವ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ–4)

| ಕ್ರ. ಸಂ. | ಕಾಮಗಾರಿಯ ಹೆಸರು |
|---|---|
| 1 | ವಾರ್ಡ್ ಸಂಖ್ಯೆ. 70 (ಹಳೇ ವಾರ್ಡ್ ಸಂಖ್ಯೆ. 31), ಕುಶಾಲನಗರ (ಬ್ಲಾಕ್ ಸಂಖ್ಯೆ. 26–2) ಅಶೋಕನಗರದಲ್ಲಿರುವ ಅಂಗನವಾಡಿ ಕೇಂದ್ರಕ್ಕೆ ಹೆಚ್ಚುವರಿ ಕಾಮಗಾರಿಗಳು. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 150000.00** |
| 2 | ವಾರ್ಡ್ ಸಂಖ್ಯೆ. 69 (ಹಳೇ ವಾರ್ಡ್ ಸಂಖ್ಯೆ. 32), ಕಾವಲಬೈರಸಂದ್ರದ ಶ್ಯಾಂಪುರ ಗ್ರಾಮ (ಬ್ಲಾಕ್ ಸಂಖ್ಯೆ. 19) ದಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳು. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 200.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 300000.00** |
| 3 | ವಾರ್ಡ್ ಸಂಖ್ಯೆ. 74 (ಹಳೇ ವಾರ್ಡ್ ಸಂಖ್ಯೆ. 60), (ಬ್ಲಾಕ್ ಸಂಖ್ಯೆ. 55 ಮತ್ತು ಬಿ56) ಸಗಾಯಪುರಂನ ಎಂ.ಎಸ್. ಬಿಲ್ಡಿಂಗ್ ಹಾಗೂ ಪಿ.ಕೆ. ಕಾಲೋನಿಯಲ್ಲಿ ಚರಂಡಿಗಳು ಮತ್ತು ರಸ್ತೆಗಳ ಸುಧಾರಣೆಗಳ ಕಾಮಗಾರಿ. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 150000.00** |
| 4 | ವಾರ್ಡ್ ಸಂಖ್ಯೆ. 73 (ಹಳೇ ವಾರ್ಡ್ ಸಂಖ್ಯೆ. 61) ಎಸ್.ಕೆ. ಗಾರ್ಡನ್ ಇಲ್ಲಿನ ಎನ್.ಸಿ ಕಾಲೋನಿ (ಬ್ಲಾಕ್ ಸಂಖ್ಯೆ. 55), ಗಾಂಧಿ ಗ್ರಾಮ (ಬ್ಲಾಕ್ ಸಂಖ್ಯೆ. 53), ಪೊಟ್ಟರಿ ರಸ್ತೆ (ಬ್ಲಾಕ್ ಸಂಖ್ಯೆ. 32) ದಲ್ಲಿ ಚರಂಡಿಗಳು ಮತ್ತು ರಸ್ತೆ ಸುಧಾರಣೆಗಳ ಕಾಮಗಾರಿ. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 150000.00** |
| 5 | ವಾರ್ಡ್ ಸಂಖ್ಯೆ. 72 (ಹಳೇ ವಾರ್ಡ್ ಸಂಖ್ಯೆ. 47) ಡಿ.ಜೆ. ಹಳ್ಳಿ ಇಲ್ಲಿನ ಕಾಳಿಯಮ್ಮ ದೇವಸ್ಥಾನ ದಿಂದ ರಾಮಸ್ವಾಮಿ ಗಲ್ಲಿ (ಬ್ಲಾಕ್ ಸಂಖ್ಯೆ. 45), ಥಂಗಮಲ್ಲೈನಗರ (ಬ್ಲಾಕ್ ಸಂಖ್ಯೆ. 28), ದೊಡ್ಡಣ್ಣನಗರ (ಬ್ಲಾಕ್ ಸಂಖ್ಯೆ. 24), ಮುನಿಮಾರಪ್ಪ ಬ್ಲಾಕ್ (ಬ್ಲಾಕ್ ಸಂಖ್ಯೆ. 32) ದಲ್ಲಿ ಚರಂಡಿ ಮತ್ತು ಸಿಸಿ ರಸ್ತೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿ. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 500.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 750000.00** |

**ಟೆಂಡರ್ ವೇಳಾಪಟ್ಟಿ:** 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: **20–06–2024 ರಂದು 16.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯು ದಿನಾಂಕ: **24–06–2024 ರಂದು 15.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಪುಲಿಕೇಶಿನಗರ ವಿಭಾಗ, ಫ್ರೇಜರ್ ಟೌನ್, ಬೆಂಗಳೂರು – 560001** ಇಲ್ಲಿ ನಡೆಯುತ್ತದೆ. 3) ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: **06–07–2024 ರಂದು 16.00 ಗಂಟೆಗೆ** ಅಥವಾ ಮುಂಚಿತವಾಗಿ ಸಲ್ಲಿಸಬಹುದು. 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **08–07–2024 ರಂದು 16.30 ಗಂಟೆಗೆ** (ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು) ವೆಬ್‌ಸೈಟ್: **https://kppp.karnataka.gov.in** ನಲ್ಲಿ ಕಾರ್ಯಪಾಲಕ ಅಭಿಯಂತರರ ಕಛೇರಿ, ಪುಲಿಕೇಶಿನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ವಿಭಾಗ, ಬಿಬಿಎಂಪಿ.

## ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)

### ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ)

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವಿಚಾರಣೆ ಸಂಖ್ಯೆ: ಬೆವಿಕಂ/2023–24/ಒಡಬ್ಲ್ಯೂ/ವರ್ಕ್_ಇಂಡೆಂಟ್149/ಕರೆ–2ರಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ **"ಸ್ಮಾರ್ಟ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್‌ನ ಅಳವಡಿಕೆಗೆ, ವೆಬ್ ಆಧಾರಿತ ಸಂಪೂರ್ಣ ಕಂದಾಯ ನಿರ್ವಹಣೆ (TRM) ಮಾಡ್ಯೂಲ್‌ಗಳು, ಜಿಐಎಸ್, ಬಿಐ ಮತ್ತು ವಿಶ್ಲೇಷಣಾತ್ಮಕ ಪರಿಕರಗಳು ಹಾಗೂ ಇತರೆ ಮಾಡ್ಯೂಲ್‌ಗಳ ಜೊತೆಗೆ ಹಾರ್ಡ್‌ವೇರು, ಸಾಫ್ಟ್‌ವೇರು, ಮಾನವ ಸಂಪನ್ಮೂಲ, ಸ್ಟೇಷನರಿಗಳು ಮತ್ತು ಉಪಭೋಗ್ಯ ವಸ್ತುಗಳನ್ನು ನಾನ್–ಆರ್‌ಎಪಿಡಿಆರ್‌ಪಿ ಪ್ರದೇಶಗಳಾದ ಚಿತ್ರದುರ್ಗ ಪ್ರದೇಶ ವಲಯ (CTAZ) ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶ ವಲಯ (BRAZ) ದಲ್ಲಿನ ಉಪ–ವಿಭಾಗಗಳಲ್ಲಿ ಮತ್ತು ಲೆಕ್ಕಪತ್ರ ಶಾಖೆಗಳಲ್ಲಿ ವ್ಯವಸ್ಥೆಯೇ ಒಂದು ಸೇವೆಯ ಆಧಾರದಲ್ಲಿ (ಸಿಸ್ಟಂ ಯಾಜ್ ಎ ಸರ್ವೀಸ್ (SaaS) ಒದಗಿಸುವುದು ಮತ್ತು ಇತರೆ ಸಂಬಂಧಿತ ಸೇವೆಗಳನ್ನು ಒದಗಿಸಲು"** ಅರ್ಹ ಬಿಡ್‌ದಾರರಿಂದ ಮರು–ಟೆಂಡರನ್ನು ಆಹ್ವಾನಿಸಲಾಗಿದೆ.

**ಬಿಡ್ ದಾಸ್ತಾವೇಜುಗಳ ಲಭ್ಯತೆ:** 13.06.2024ರ ನಂತರದಿಂದ. **ಬಿಡ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:** 27.06.2024 13:30 ಗಂಟೆಗಳು. **ಬಿಡ್ ದಾಖಲೆಗಳನ್ನು ತೆರೆಯುವುದು:** 28.06.2024 14:45 ಗಂಟೆಗಳು.

ಟೆಂಡರ್ ವಿವರ ಮತ್ತು ಬಿಡ್ ದಾಸ್ತಾವೇಜುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಮೂಲಕ ದಿನಾಂಕ **13.06.2024**ರ ನಂತರ ಪಡೆಯಬಹುದು. ಆಸಕ್ತ ಬಿಡ್‌ದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ ಸಹಾಯವಾಣಿ ಸಂಪರ್ಕ ಸಂಖ್ಯೆ +918046010000, +918068948777 ಅಥವಾ ಇಮೇಲ್ support@eprochelpdesk.com ಗೆ ಸಂಪರ್ಕಿಸಲು ಕೋರಲಾಗಿದೆ.

ಸಹಿ/–
ಪ್ರಧಾನ ವ್ಯವಸ್ಥಾಪಕರು (ವಿ.),
ಗ್ರಾಹಕ ಸಂಬಂಧ, ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

## ಕರ್ನಾಟಕ ಸರ್ಕಾರ

### ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ

ಸ.ನೀ. ಮತ್ತು ಅಂ.ಅ ವಿಭಾಗ, ಮಂಡ್ಯ

ಸಂಖ್ಯೆ:ಕಾಸಮೈ:ಡಿಎಂ1:ಅಟೆಂಪ್ರ:2023–24:207 ದಿ:12.06.2024

**ಮರು ಟೆಂಡರ್ ಪ್ರಕಟಣೆ: 04/2023–24 ದಿನಾಂಕ : 12.06.2024**

ಉಲ್ಲೇಖ: 1. ಟೆಂಡರ್ ಅಧಿಸೂಚನೆ ಸಂಖ್ಯೆ: 04/2023–24, ದಿನಾಂಕ: 05.02.2024 ಪತ್ರ ಸಂ: 976 & 977, ದಿನಾಂಕ: 05.02.2024
2. ಮರು ಟೆಂಡರ್ ಪ್ರಕಟಣೆ ಸಂಖ್ಯೆ: 01, ದಿನಾಂಕ: 06.02.2024ರ ಪತ್ರ ಸಂ: 985 & 986, ದಿನಾಂಕ: 06.02.2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ–571401 ಇವರು ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು–3 ರ ಪ್ರಕಾರ "ಇ" – ಪ್ರಕ್ಯೂರ್‌ಮೆಂಟ್‌ನಲ್ಲಿ ಐಟಂವಾರು ಟೆಂಡರ್ ಅನ್ನು ಅಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ 4702–00–101–1–07–436 ನಬಾರ್ಡ್ ಕಾಮಗಾರಿಗಳು – ಕೆರೆಗಳ ಆಧುನೀಕರಣಯಡಿಯಲ್ಲಿ ಒಟ್ಟು–02 (ಕ್ರ.ಸಂ: 2 & 3) ಕಾಮಗಾರಿಯಿದ್ದು ಟೆಂಡರಿಗಿಟ್ಟ ಮೊತ್ತ ರೂ. 100.00 ಲಕ್ಷಗಳಾಗಿರುತ್ತದೆ. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕಛೇರಿ ವೇಳೆಯಲ್ಲಿ ದಿನಾಂಕ : 19–06–2024 ರವರಗೆ ಪಡೆಯಬಹುದಾಗಿದೆ. ದಿನಾಂಕ: 20.06.2024 ರ 17–30 ಗಂಟೆವರೆಗೆ ಟೆಂಡರ್‌ನ ನಿಗದಿತ ನಮೂನೆಗಳನ್ನು **"www.kppp.karnataka.gov.in"**ನಲ್ಲಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಕೆಳಕಂಡ ಕಾಲಂಗಳನ್ವಯ ಬಿಡ್ಡ್‌ನ್ನು ಅಪ್ ಲೋಡ್ ಮಾಡಬಹುದಾಗಿದೆ. ಈ ಟೆಂಡರ್‌ನ ತಾಂತ್ರಿಕ ಬಿಡ್ಡ್‌ನ್ನು ದಿನಾಂಕ : **24.06.2024 ರಂದು ಬೆಳಿಗ್ಗೆ : 11–00 ಗಂಟೆಗೆ** ತೆರೆಯಲಾಗುವುದು. ಈ ಟೆಂಡರ್‌ನ ಆರ್ಥಿಕ ಬಿಡ್ಡ್‌ನ್ನು ದಿನಾಂಕ : **26.06.2024 ರಂದು ಬೆಳಿಗ್ಗೆ : 11–00 ಗಂಟೆಗೆ** ತೆರೆಯಲಾಗುವುದು. ಟೆಂಡರ್ ದಾಖಲಾತಿಗಳನ್ನು ವೆಬ್ ಸೈಟ್ **"www.kppp.karnataka. gov.in"**ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿಮಾಡಿರುವವರ ಕಛೇರಿಯಲ್ಲಿ ಕೆಲಸದ 'ವೇಳೆಯಲ್ಲಿ ಪಡೆಯ ಬಹುದು. ವಿ.ಸೂ : ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ ಇವರಿಗೆ ಕಾಯ್ದಿರಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು "ಇ" – ಪ್ರಕಟಣೆಯಲ್ಲಿಯೇ ಪ್ರಕಟಿಸಲಾಗುವುದು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಸ.ನೀ.ಮತ್ತು ಅಂ.ಅ.ವಿಭಾಗ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/043/2024–25

## ಕರ್ನಾಟಕ ಅರಣ್ಯ ಇಲಾಖೆ

### ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ.

Emai.: dcfsagar123@gmail.com

ಸಂಖ್ಯೆ:ಎ2/ಜಿಜಿಟಿ/AW & SW/CR-14/2023-24 ದಿ: 11.06.2024

**ಇ–ಟೆಂಡರ್ ಪ್ರಕಟಣೆ Call-02**
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2024–25 ನೇ ಸಾಲಿನಲ್ಲಿ ಜಾನುವಾರು ನಿರೋಧಕ ಕಂದಕ ಕಾಮಗಾರಿಗಳನ್ನು ಸಾಗರ ಪ್ರಾದೇಶಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಕಾಂಪಾ ಯೋಜನೆಯಡಿ ಕೈಗೊಳ್ಳಲು ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಯನುಸಾರ ಆಸಕ್ತ ಗುತ್ತಿಗೆದಾರರುಗಳಿಂದ ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪ್ರಥಮ ಬಾರಿಗೆ ದಿನಾಂಕ: 12–02–2024 ರಂದು ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನ ಆರ್ಥಿಕ ಮೌಲ್ಯಮಾಪನಾ ಪಟ್ಟಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ತಂತ್ರಾಂಶದ ದೋಷದಿಂದಾಗಿ ಒಬ್ಬ ಬಿಡ್ಡುದಾರರು ದಾಖಲಿಸಿದ ಮೌಲ್ಯವು ಕಂಡುಬಾರದೇ ಇರುವುದರಿಂದ, ಸದರಿ ಟೆಂಡರ್‌ನ್ನು ರದ್ದುಗೊಳಿಸಿ ದ್ವಿತಿಯ ಬಾರಿ ಇ–ಪ್ರಕ್ಯೂರ್‌ಮೆಂಟ್ ತಂತ್ರಾಂಶದ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ಗೆ ಬಿಡ್‌ನ್ನು ಸಲ್ಲಿಸುವ ಅವಧಿಯು ದಿನಾಂಕ:20–06–2024 ರಂದು ಸಂಜೆ 4–30 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ದೂರವಾಣಿ ಮೂಲಕ ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/92/06/24–25/83

## ಜಿಲ್ಲಾ ಪಂಚಾಯತ ಬಾಗಲಕೋಟೆ

### ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ

ಕಾರ್ಯಪಾಲಕ ಅಭಿಯಂತರರ ಕಛೇರಿ,
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ,
ದೂರವಾಣಿ : 08354–235042, ಇ–ಮೇಲ್ : bgkeezpe@yahoo.com

ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿ.ಜಿ.ಕೆ./ಪಿಬಿ–2,3/ಟೆಂಡರ್/2024–25/378
ದಿನಾಂಕ : 11–06–2024

**ಅಲ್ಪಾವಧಿ ಇ-ಪ್ರೋಕ್ಯೂರ್‌ಮೆಂಟ್ ದ್ವಿ-ಲಕೋಟೆ ಟೆಂಡರ್ ಪ್ರಕಟಣೆ ಕೆ.ಡಬ್ಲ್ಯೂ-2 & 3 ಬಿಡ್ ಡಾಕ್ಯೂಮೆಂಟ್**

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ **ಬಾಗಲಕೋಟೆ ಜಿಲ್ಲೆ ವ್ಯಾಪ್ತಿಯಲ್ಲಿನ 2022–23 ನೇ ಸಾಲಿನ ವಿವೇಕ ಶಾಲಾ ಯೋಜನೆಯಡಿ ಆಯ್ಕೆಯಾದ ಸರಕಾರಿ ಪದವಿ ಪೂರ್ವ ಕಾಲೇಜುಗಳ ಬೋಧನಾ ಕೊಠಡಿಗಳ ನಿರ್ಮಾಣದ ರೂ. 676.35 ಲಕ್ಷ ಅನುದಾನದಡಿಯಲ್ಲಿ 01) ಸರ್ಕಾರದ ಆದೇಶ ಸಂಖ್ಯೆ : ಇಪಿ/217ಯೋಸಕ 2022 ಬೆಂಗಳೂರು ದಿನಾಂಕ : 26–08–2022, 28–09–2022, 18–10–2022, 15–11–2022, 02) ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಅವರ ಕಛೇರಿ ಪತ್ರ ಸಂಖ್ಯೆ : ಪಿ.ಯು.ಇ/ಮೂಸೌಶಾ/ಹೆ.ತ.ಕೊ/1500/2022–23 ದಿನಾಂಕ : 25–11–2022, 03) ಮಾನ್ಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬಾಗಲಕೋಟೆ ಇವರ ಕಛೇರಿ ಟಿಪ್ಪಣಿ ಅನುಮೋದನೆ ಆದೇಶ ಸಂಖ್ಯೆ : ಜಿಪಂಬಾ/ಅಭಿವೃದ್ಧಿ/ಸ.ಪ.ಪೂ.ಕಾ/ಕೊ.ನಿ.ಕಾ/2022–23 ದಿನಾಂಕ : 18–03–2023 ಅಡಿಯಲ್ಲಿ ಆಯ್ಕೆಯಾದ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ, ಮುಧೋಳ, ಬೀಳಗಿ, ಹುನಗುಂದ ತಾಲೂಕು ವ್ಯಾಪ್ತಿಯ ಕಾಮಗಾರಿಗಳಿಗೆ** ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – 2 & 3 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000 ರ ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

**ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳ ಇಂಡೆಂಟ್ ನಂ. : 2104/ಕರೆ–2, ಪರಿಶಿಷ್ಟ ಪಂಗಡ ವರ್ಗಕ್ಕೆ ಮೀಸಲಾದ ಇಂಡೆಂಟ್ ಸಂಖ್ಯೆ : 1230/ಕರೆ–2, ಕಾಮಗಾರಿ ವಿವರ, ಕಾಮಗಾರಿ ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಕಾಮಗಾರಿ ಟೆಂಡರ್ ಮೊತ್ತ (ರೂ. 75.15 ರಿಂದ 100.20 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.**

**1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿ ಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 28–06–2024 ರ ಸಂಜೆ 17.30 ಗಂಟೆವರೆಗೆ, 2) ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 01–07–2024 ರಂದು ಬೆಳಿಗ್ಗೆ 11.00 ಗಂಟೆಯ ನಂತರ, 3) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆ ಯಾದ ನಂತರ.**

**ಸೂಚನೆ** : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ : **https://kppp.karnataka.gov.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/22/ಮಣಿಪಾಲ್/2024–25

## ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009

ಸಂ: ಕಾಪಾಅ/ಪಂರಾಇಂವಿ/ಬೆಂಗ್ರಾಂ/ಟೆಂ–01/ತಾಂಶಾ/2024–25 ದಿನಾಂಕ: 12.06.2024

**ಟೆಂಡರ್ ಪ್ರಕಟಣೆ ಸಂ: 01/2024–25** (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ನಾಲ್ಕನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ 2022–23ನೇ ಸಾಲಿನ ವಿವೇಕ ಶಾಲೆ ಕೊಠಡಿ ನಿರ್ಮಾಣ ಲೆಕ್ಕ ಶೀರ್ಷಿಕೆ ಅನುದಾನದಡಿ ಅನುಮೋದನೆಯಾದ ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗಳಿಗೆ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 28.06.2024 ಸಂಜೆ 4.00 ಗಂಟೆಯವರೆಗೆ** ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಟೆಂಡರ್ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್ ನಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೆಂಗಳೂರು

DIPR/CP/292/SPAN/2024-25

## ಕರ್ನಾಟಕ ಸರ್ಕಾರ

### ಜಿಲ್ಲಾ ಪಂಚಾಯತ್, ಬಳ್ಳಾರಿ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.

ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಶಇ–1/JJM/Ten.Nofi/2024–25/282
ದಿನಾಂಕ:07.06.2024

**ಟೆಂಡರ್ ಪ್ರಕಟಣೆ**
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ –2000 ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ರವರು ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡ ಬಳ್ಳಾರಿ ಜಿಲ್ಲೆಯ ಬಳ್ಳಾರಿ ಮತ್ತು ಸಿರುಗುಪ್ಪ ತಾಲ್ಲೂಕಿನ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ದಿನಾಂಕ: 08–06–2024 ರಿಂದ 19–06–2024 ರಂದು ಸಂಜೆ 4.00 ರವರೆಗೆ ಸಲ್ಲಿಸ ಬಹುದಾಗಿರುತ್ತದೆ, ತಾಂತ್ರಿಕ ಬಿಡ್ ದಿನಾಂಕ: 20–06–2024 ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು ಹಾಗೂ ದಿನಾಂಕ: 13–06–2024 ರಂದು ಬೆಳಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂಟೋನ್ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ. ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗದಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು ದಿ:13–06–2024 ರ ಸಂಜೆ 4.00 ಗಂಟೆಯವರೆಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೊಕ್ಯೂರಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ, ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/63/ಕೆಎಸ್‌ಎಂಸಿಎ/2024–25

## ಆಯುಕ್ತರ ಕಛೇರಿ, ಮಹಾನಗರಪಾಲಿಕೆ, ಬಳ್ಳಾರಿ

ದೂರವಾಣಿ ಸಂಖ್ಯೆ: 08392–273479 /278168 ಫ್ಯಾಕ್ಸ್: 08392–273477
ವೆಬ್ ಸೈಟ್: www.ballaricity.mrc.gov.in ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂ: ಮನಪಾಬ/ಆಶಾ/ಪೌರಕಾರ್ಮಿಕರು/15ನೇ/ಎಂ.ಆರ್‌ಎಫ್/01/2024–25 ದಿನಾಂಕ: .06.2024

### ಟೆಂಡರ್ ಪ್ರಕಟಣೆ

ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 15ನೇ ಹಣಕಾಸು ಮತ್ತು ಸಿ.ಎಸ್.ಆರ್ ಅನುದಾನದಡಿಯಲ್ಲಿ ಹಳೇ ಕಾಂಪೋಸ್ಟ್ ಯಾರ್ಡನಲ್ಲಿ ಘನ ತ್ಯಾಜ್ಯ ನಿರ್ವಹಣೆಗಾಗಿ ನಿರ್ಮಿಸಲಾಗುತ್ತಿರುವ ಮೆಟೀರಿಯಲ್ ರಿಕವರಿ ಫೆಸಿಲಿಟಿ ಸೆಂಟರ್‌ಗೆ ಬೆಲ್ಟ್ ಕನ್ವೇಯರ್ ಸ್ಕ್ರೀಗೇಷನ್ ಯಂತ್ರಗಳನ್ನು ಅಳವಡಿಸುವುದು ಹಾಗೂ ರೂಪನಗುಡಿ ರಸ್ತೆಯಲ್ಲಿರುವ ಹಳೆಯ ಕಾಂಪೋಸ್ಟ್ ಯಾರ್ಡನಲ್ಲಿ ಎಂ.ಆರ್.ಎಫ್ ಸೆಂಟರ್‌ಗೆ ಅವಶ್ಯವಿರುವ ಯಂತ್ರೋಪಕರಣಗಳನ್ನು ಖರೀದಿಸಲು ಟೆಂಡರ್ ಕರೆಯಲಾಗಿದ್ದು, ಅರ್ಹ ಏಜೆನ್ಸಿ/ಸರಬರಾಜುದಾರರಿಗೆ ಈ ಕೆಳಕಂಡ ದಿನಾಂಕದೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನಲ್ಲಿ ಭಾಗವಹಿಸಬಹುದು.

| ಕ್ರ.ಸಂ | ವಿಷಯ | ದಿನಾಂಕ | ಸಮಯ |
|---|---|---|---|
| 1 | ಇಂಡೆಂಟ್ ಸಂಖ್ಯೆ: DMA/2024-25/IND1964 | | |
| 2 | ಟೆಂಡರನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ | 13.06.2024 | – |
| 3 | ಟೆಂಡರ್ ಪೂರ್ವಭಾವಿ ಸಭೆ ದಿನಾಂಕ | 20.06.2024 | ಮಹಾನಗರಪಾಲಿಕೆಯ ಸಭಾಂಗಣದಲ್ಲಿ |
| 4 | ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ | 27.06.2024 | 5.30 PM ಗಂಟೆವರೆಗೆ |
| 5 | ತಾಂತ್ರಿಕ ಬಿಡ್ ತೆರೆಯುವ ದಿನಾಂಕ | 29.06.2024 | 11.00 AM ನಂತರ |
| 6 | ಆರ್ಥಿಕ ಬಿಡ್ ತೆರೆಯುವ ದಿನಾಂಕ | 02.07.2024 | 11.00 AM ನಂತರ |

ಸದರಿ ಟೆಂಡರನ್ನು ದಿನಾಂಕ: 12.06.2024 ರಿಂದ ಆನ್‌ಲೈನ್ ಮುಖಾಂತರ ಡೌನ್ಲೋಡ್ ಮಾಡಿಕೊಳ್ಳಬಹುದಾಗಿದೆ, ಹೆಚ್ಚಿನ ಮಾಹಿತಿ ಬೇಕಾದಲ್ಲಿ ಮಹಾನಗರ ಪಾಲಿಕೆ, ಬಳ್ಳಾರಿ ಕಛೇರಿಯ ಕೆಲಸದ ವೇಳೆಯಲ್ಲಿ ದೂರವಾಣಿ ಸಂಖ್ಯೆ: 9036676999 ಅಥವಾ http://eproc.karnataka.gov.in ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/– ಆಯುಕ್ತರು,
ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ

## ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

### ಚರಾಸ್ತಿಯ ವಸ್ತುಗಳ ಇ–ಹರಾಜಿಗೆ ಆಹ್ವಾನ /ಸೂಚನೆ

Pursuant to attachment of movable properties by the Government under the provisions of the Karnataka Protection of Interest of Depositors in Financial Establishments Act, 2004 (KPIDFE Act) and pursuant to the absolute attachment order by the Hon'ble Special Court the Special Officer & Competent Authority(under KPIDFE-IMA and other Scam), is issuing notice for e-auction of the movables attached through e-auction on **'as is where is and whatever there is basis'**..

The intending bidders will be required to furnish Earnest Money Deposit (EMD) (as mentioned against each auction in the e-portal provided by the Service Provider/Karnataka Public Procurement Portal only).

**Short Description of the Movable items**

| Sl. No. | Description of Items | Reserve Price (Rs) | EMD (Rs) | Bid Increase Value (Rs) |
|---|---|---|---|---|
| | **Computers and Peripherals** | | | |
| 1. | Black Colour Cannon Printer-2<br>ORTIS CPU- Black Colour -4<br>LG CPU-Black Colour -1<br>INTEX CPU- Black Colour -1<br>AOC Monitor- Black Colour -4<br>BENQ Monitor - Black Colour<br>Micro Spike Connector Black Colour-1<br>Computer/Printer Cable Wires Black Colour-13 | 19,000/- | 1,000 | 100 |
| 2. | Datsun- Go Car- with petrol as fuel, silver grey Colour with Registration No. MH-09-DA -4853 with Engine No. 742963 A and Chassis No. MDHZBAA OE3003871, Model 2014 | 1,71,000/- | 9,000 | 900/- |

ಪರಿಶೀಲನೆಯ ದಿನಾಂಕ ಮತ್ತು ಸಮಯ : 19ನೇ ಜುಲೈ 2024, ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ. ಸ್ಥಳ : ರಾಯಬಾಗ್ ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆ

ಪ್ರಿ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : 18ನೇ ಜುಲೈ 2024, ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ. ಸ್ಥಳ : **O/o SPLOCA**, 3ನೇ ಮಹಡಿ ಪೊಡಿಯಮ್ ಬ್ಲಾಕ್, ವಿಶ್ವೇಶ್ವರಯ್ಯ ಟವರ್ಸ್, ಬೆಂಗಳೂರು–01

ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ : 20ನೇ ಜುಲೈ 2024, ಸಂಜೆ 5.00 ಗಂಟೆ ಒಳಗೆ.

ಇ–ಹರಾಜಿನ ದಿನಾಂಕ ಮತ್ತು ಸಮಯ : 22ನೇ ಜುಲೈ 2024, ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯ ಒಳಗೆ.

For Registration & Online Auction, you can login to: **https://kppp.karnataka.gov.in** (Helpdesk No: 080-46010000, 080-68948777) The interested bidders who require auction related information can contact Joint Secretary, Office of the Special Officer & Competent Authority, 3rd Floor, Podium Block, Visveswariah Towers, Dr.Ambedkar Veedi, Bengaluru-560001, e-mail ID: **splocaeauction@gmail.com** or Contact Mob. No 6364403715.

ಸ್ಥಳ: ಬೆಂಗಳೂರು
ದಿನಾಂಕ: 12.06.2024

ಸಹಿ/–
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

DIPR/CP/297/Zen/2024-25

## RASHTRIYA MILITARY SCHOOL, BENGALURU

(A Residential Public School under Ministry of Defence
Govt of India & Affiliated to CBSE, Delhi)

**WALK IN INTERVIEW**

Required Teachers on Contractual basis:-

| S/ No | Vacancy | No of vacancy | Salary | Essential Qualification |
|---|---|---|---|---|
| (a) | Assistant Master (Physics) | 01 (One) | ₹ 20,000/-pm consolidated | B Sc(Physics) B Ed from a recognized university. |
| (b) | Assistant Master (English) | 01 (One) | ₹ 20,000/-pm consolidated | B.A (English) B Ed from a recognized university |
| (c) | Assistant Master (Chemistry) | 01 (One) | ₹20,000/-pm consolidated | B Sc(Chemistry) B Ed from a recognized university. |

**Desirable Qualification:-**

1. Post Graduate in concerned subjects from any recognized University.
2. One year teaching experience from any recognized university (Secondary Level/Class).
3. Proficiency in English in reading, writing and speaking.
4. Basic knowledge of using Microsoft Office in computer.
5. Minimum senior secondary level participation in games or sports.

**A walk in interview will now be conducted on 21 Jun 2024 at 0900 hrs**
**Eligible Candidates to report to school directly**

**Note:- Advertisement for the same vacancies as published in The Hindu Newspaper on 10 Jun 2024 may pl be treated as cancelled.**

**Principal**

## ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

**ಟೆಂಡರ್‌ಗಾಗಿ ಆಹ್ವಾನ** (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿತ ಏಜೆನ್ಸಿಗಳಿಂದ ದ್ವಿ ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

**ಪ್ರಧಾನ ಮುಖ್ಯ ಅಭಿಯಂತರರ ಕಛೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009**

| ಕ್ರಮ ಸಂ. | ಕೆಲಸದ ಹೆಸರು | ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ (ರೂ.ಗಳಲ್ಲಿ) |
|---|---|---|
| | **ಸಂಖ್ಯೆ: ಬೆಂಜಮಂ/ಪ್ರಮುಅ/ಅಮುಅ(ಯುಎಫ್‌ಡಬ್ಲ್ಯೂ)/ತಾಂಸ/802/2024–25** | **ದಿನಾಂಕ: 12.06.2024** |
| 1 | ಕಾನಿಅ(ಕೇಂದ್ರ) ವಿಭಾಗದ ಸಕಾನಿಅ (ಕೇಂದ್ರ–1–2) ಉಪವಿಭಾಗದಡಿಯ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಸಗಾಯಪುರಂನ ವಾರ್ಡ್ ನಂ.60 ರ ಫುಟ್‌ಬಾಲ್ ಗ್ರೌಂಡ್‌ನಲ್ಲಿ ಪಂಪ್‌ಹೌಸ್ ಜೊತೆಗೆ ಸೇವಾಠಾಣೆ ನಿರ್ಮಾಣ ಮತ್ತು ಸಂಬಂಧಿಸಿದ ಕಾಮಗಾರಿಗಳು, ಹೈಗ್ರೌಂಡ್ಸ್ ಸೇವಾ ಜಲಸಂಗ್ರಹದಿಂದ ಜಿ.ಎಲ್.ಆರ್ ವರೆಗೆ 450 ಮಿ.ಮೀ ವ್ಯಾಸದ ಎಂ.ಎಸ್ ನೀರು ಸರಬರಾಜು ಒಳಹರಿವಿನ ಮುಖ್ಯ ಕೊಳವೆಗಳನ್ನು ಒದಗಿಸುವುದು ಮತ್ತು ಅಳವಡಿಸುವುದು ಮತ್ತು 4 ಎಂ.ಎಲ್ ಸಾಮರ್ಥ್ಯದ ನೆಲಮಟ್ಟದ ಜಲಸಂಗ್ರಹಗಾರ ನಿರ್ಮಾಣ ಕಾಮಗಾರಿಗಾಗಿ ಟೆಂಡರ್ ಅನ್ನು ಆಹ್ವಾನಿಸಿದೆ. **(4ನೇ ಕರೆ)** | **ರೂ.2615 ಲಕ್ಷಗಳು** / **ರೂ.26.15 ಲಕ್ಷಗಳು** |

ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 27.06.2024 ರ ಸಂಜೆ 4.00 ಗಂಟೆಯವರೆಗೆ. ಬಿಡ್‌ಗಳನ್ನು 28.06.2024 ರಂದು 4.00 ಗಂಟೆಗೆ ತೆರೆಯಲಾಗುವುದು.

ಸಹಿ/– ಪ್ರಧಾನ ಮುಖ್ಯ ಅಭಿಯಂತರರು

**ಮುಖ್ಯ ಅಭಿಯಂತರರ ಕಚೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560 009**

| ಕ್ರಮ ಸಂ. | ಕೆಲಸದ ಹೆಸರು | ಟೆಂಡರ್‌ಗಿಟ್ಟ ಮೊತ್ತ / ಇ.ಎಂ.ಡಿ (ರೂ.ಗಳಲ್ಲಿ) |
|---|---|---|
| | **ಬೆಂಜಮಂ/ಪ್ರಮುಅ/ಮುಅ(ದ)/ಅಮುಅ(ದ)–1/ಉಮುಅ(ನಿ)–1/ತಾಂಸ(ದ)/821/2024–25** | **ದಿನಾಂಕ: 12.06.2024** |
| 2 | ಸಕಾನಿಅ ದಕ್ಷಿಣ–1–1 ಉಪ ವಿಭಾಗದ ಕೂತ್ತನೂರು ದಿಣ್ಣೆ ಸೇವಾ ಠಾಣೆ ವ್ಯಾಪ್ತಿಯಲ್ಲಿ ಬರುವ ಸಾರಕ್ಕಿ 5 ಎಂಎಲ್‌ಡಿ ಎಸ್‌ಟಿಪಿಯಿಂದ ಚುಂಚಘಟ್ಟ ಮತ್ತು ಕೂತ್ತನೂರು ಕೆರೆಗಳಿಗೆ ಸಂಸ್ಕರಿಸಿದ ನೀರಿನಿಂದ ಕೆರೆಗಳನ್ನು ತುಂಬಿಸಲು 200 ಮೀ.ಮೀ ವ್ಯಾಸದ ಡಿಐ ಪೈಪ್‌ಲೈನ್ ಒದಗಿಸುವ ಮತ್ತು ಅಳವಡಿಸುವ ಕಾಮಗಾರಿ | **ರೂ.202.73 ಲಕ್ಷಗಳು** / **ರೂ.3.59 ಲಕ್ಷಗಳು** |

ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 26.06.2024 ರ ಮಧ್ಯಾಹ್ನ 3.00 ಗಂಟೆಯವರೆಗೆ. ಬಿಡ್‌ಗಳನ್ನು 28.06.2024 ರಂದು ಸಂಜೆ 4.00 ಗಂಟೆಯ ನಂತರ ತೆರೆಯಲಾಗುವುದು.

ಸಹಿ/– ಮುಖ್ಯ ಅಭಿಯಂತರರು (ದಕ್ಷಿಣ).

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ವಾಪ್ರ/294/ಆಕಾರ್/2024–25

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪುಲಿಕೇಶಿನಗರ ವಿಭಾಗ,
ಬಿಬಿಎಂಪಿ ಕಛೇರಿ ಕಟ್ಟಡ, ರಾಬರ್ಟ್‌ಸನ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು

ನಂ.: ಕಾಪಾಅ/ಪುನ/ಟೆಂಡರ್/04/2024–25 ದಿನಾಂಕ: 12.06.2024

### ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) ದ್ವಿ ಲಕೋಟೆ

ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯು4)**

| ಕ್ರ. ಸಂ. | ಕಾಮಗಾರಿಯ ಹೆಸರು |
|---|---|
| 1 | ಎಸ್‌ಕೆ ಗಾರ್ಡನ್, ವಾರ್ಡ್ ನಂ. 61ರ ಗೋವಾ ಗಾರ್ಡನ್‌ನ 6ನೇ, 7ನೇ, 8ನೇ ಅಡ್ಡರಸ್ತೆಗಳು ಮತ್ತು ಮೋದಿ ರಸ್ತೆಯ 10ನೇ, 11ನೇ, 12ನೇ ಅಡ್ಡರಸ್ತೆಗಳ ಚರಂಡಿಗಳು ಮತ್ತು ರಸ್ತೆಗಳ ಸುಧಾರಣೆ. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 200.00. **ಇಎಂಡಿ (ರೂ.ಗಳಲ್ಲಿ):** 3,00,000.00 |
| 2 | ಸಗಾಯಪುರಂ, ವಾರ್ಡ್ ನಂ. 60ರ ಕ್ಲಾರ್ಕ್ ರಸ್ತೆ, ಕಾಕ್ಸನ್ ರಸ್ತೆ, ಗೋಶಾಲಾ ಬೀದಿ, ಲೇಜರ್ ಲೇಔಟ್ ಮತ್ತು ಸುತ್ತಮುತ್ತಲ ಪ್ರದೇಶದ ಚರಂಡಿಗಳು ಮತ್ತು ರಸ್ತೆಗಳ ಸುಧಾರಣೆ. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 100.00. **ಇಎಂಡಿ (ರೂ.ಗಳಲ್ಲಿ):** 1,50,000.00 |
| 3 | ಮುನೇಶ್ವರ ನಗರ, ವಾರ್ಡ್ ನಂ. 48ರ ಲಾಬಾಬಿನ್ ಮಸೀದಿ, ಮುನಿಬೈರಪ್ಪ ಬ್ಲಾಕ್ ಮತ್ತು ಸುತ್ತಮುತ್ತಲ ಪ್ರದೇಶದ ಚರಂಡಿಗಳು ಮತ್ತು ರಸ್ತೆಗಳ ಸುಧಾರಣೆ. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 200.00. **ಇಎಂಡಿ (ರೂ. ಗಳಲ್ಲಿ):** 3,00,000.00 |
| 4 | ಪುಲಕೇಶಿನಗರ, ವಾರ್ಡ್ ನಂ. 78ರ ಪರಂಜ್ಯೋತಿ ರಸ್ತೆ ಮತ್ತು ಚಿನ್ನಯ್ಯ ಕಾಲೋನಿ, ಪ್ರೊಮಿನೆಡ್ ರಸ್ತೆ, ಪಂಜಾಬ್ ನ್ಯಾಷನಲ್ ಬ್ಯಾಂಕ್ ರಸ್ತೆ ಹಾಗೂ ಸುತ್ತಮುತ್ತಲ ಪ್ರದೇಶದ ಚರಂಡಿಗಳ ಸುಧಾರಣೆ ಮತ್ತು ಡಾಂಬರೀಕರಣ ಕಾಮಗಾರಿ. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 200.00. **ಇಎಂಡಿ (ರೂ. ಗಳಲ್ಲಿ):** 3,00,000.00 |
| 5 | ಡಿಜೆ ಹಳ್ಳಿ, ವಾರ್ಡ್ ನಂ. 47ರ ಬಂಗಾರಗಿರಿ ಲೇಔಟ್ 1ನೇ, 2ನೇ, 3ನೇ ಅಡ್ಡರಸ್ತೆ, ಜಂಡಾ ಗಲ್ಲಿ, ಟಿಪ್ಪು ಗಲ್ಲಿ ಮತ್ತು ಸುತ್ತಮುತ್ತಲ ಪ್ರದೇಶದ ಚರಂಡಿಗಳು ಮತ್ತು ರಸ್ತೆಗಳ ಸುಧಾರಣೆ. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 200.00. **ಇಎಂಡಿ (ರೂ.ಗಳಲ್ಲಿ):** 3,00,000.00 |
| 6 | ವಾರ್ಡ್ ನಂ. 70 ಕುಶಾಲನಗರ, 69 ಕಾವಲ್‌ಬೈರಸಂದ್ರ, 71 ಮುನೇಶ್ವರನಗರ, 74 ಸಗಾಯಪುರಂ, 72 ಡಿಜೆ ಹಳ್ಳಿ, 73 ಎಸ್‌ಕೆ ಗಾರ್ಡನ್, 75 ಪುಲಕೇಶಿನಗರಗಳಲ್ಲಿ ಹಳೆಯ ನಾಮಫಲಕಗಳಿಗೆ ಪೈಂಟಿಂಗ್ ಮಾಡುವುದು ಮತ್ತು ಹೊಸ ನಾಮಫಲಕಗಳನ್ನು ಒದಗಿಸುವುದು. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):** 100.00. **ಇಎಂಡಿ (ರೂ.ಗಳಲ್ಲಿ):** 1,50,000.00 |

**ವೇಳಾಪಟ್ಟಿ: (1)** ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್‌ನಿಂದ **24.06.2024, 4:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **(2)** ಪೂರ್ವಭಾವಿ ಸಭೆಯು **29.06.2024**ರ **ಮಧ್ಯಾಹ್ನ 3:00 ಗಂಟೆಗೆ** ಕಾರ್ಯಪಾಲಕ ಅಭಿಯಂತರರು, ಪುಲಕೇಶಿನಗರ ವಿಭಾಗ, ಫ್ರೇಜರ್ ಟೌನ್, ಬೆಂಗಳೂರಿನಲ್ಲಿ ನಡೆಯಲಿದೆ. **(3)** ಟೆಂಡರ್‌ಗಳನ್ನು ಆನ್‌ಲೈನ್ ಕೆಪಿಪಿಪಿ ಪೋರ್ಟಲ್‌ನಲ್ಲಿ **08.07.2024**ರ **ಸಂಜೆ 4:00 ಗಂಟೆಯೊಳಗೆ** ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. **(4)** ತಾಂತ್ರಿಕ ಬಿಡ್‌ಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಪುಲಕೇಶಿನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇಲ್ಲಿ **10.07.2024**ರ **ಸಂಜೆ 4:00 ಗಂಟೆಗೆ** ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪುಲಕೇಶಿನಗರ ವಿಭಾಗ, ಬಿಬಿಎಂಪಿ

17 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ಆರೋಪ ● 2024ರ ಫೆಬ್ರುವರಿ 2ರಂದು ನಡೆದಿರುವ ಘಟನೆ ಎಂದು ದೂರು

# ಯಡಿಯೂರಪ್ಪ ಬಂಧನ ಕೋರಿ ರಿಟ್ ಅರ್ಜಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012) ಪ್ರಕರಣದ ಆರೋಪಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಕೂಡಲೇ ಬಂಧಿಸಿ ವಿಚಾರಣೆ ನಡೆಸಲು ಬೆಂಗಳೂರು ನಗರ ಪೊಲೀಸ್ ಕಮಿಶನರ್ ಅವರಿಗೆ ನಿರ್ದೇಶಿಸಬೇಕು ಎಂದು ಕೋರಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಲಾಗಿದೆ. ಈ ಸಂಬಂಧ ಸಂತ್ರಸ್ತ ಬಾಲಕಿಯ ಅಣ್ಣ ರಿಟ್ ಅರ್ಜಿ ಸಲ್ಲಿಸಿದ್ದು, ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ.

**ಪ್ರಕರಣವೇನು?:** 'ನನ್ನ ಮಗಳ ಮೇಲೆ ಅತ್ಯಾಚಾರ ನಡೆದಿದೆ, ನನಗೆ ನ್ಯಾಯ ಕೊಡಿಸಿ' ಎಂದು ಬಿ.ಎಸ್. ಯಡಿಯೂರಪ್ಪ ಅವರ ಬಳಿ ಹೋಗಿದ್ದ 53 ವರ್ಷದ ಮಹಿಳೆಯೊಬ್ಬರು; ಯಡಿಯೂರಪ್ಪ ಅವರು ನನ್ನ ಮಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ 2024ರ ಮಾರ್ಚ್ 14ರಂದು ಸದಾಶಿವ ನಗರ ಪೊಲೀಸ್ ಠಾಣೆಯಲ್ಲಿ ಯಡಿಯೂರಪ್ಪ ವಿರುದ್ಧ ದೂರು ನೀಡಿದ್ದರು.

ಇದರನ್ವಯ ಪೊಲೀಸರು ಪೋಕ್ಸೊ ಕಾಯ್ದೆ ಕಲಂ 8 ಮತ್ತು ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 354(ಎ) ಅಡಿಯಲ್ಲಿ ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಎಫ್‌ಐಆರ್ ದಾಖಲಿಸಿದ್ದರು.

**ದೂರಿನಲ್ಲಿ ಏನಿತ್ತು?:** 'ನನ್ನ ಮಗಳ ಮೇಲೆ ಅತ್ಯಾಚಾರ ಎಸಗಿ ಮೋಸ ಮಾಡಲಾಗಿದೆ. ನಮ್ಮ ಕೇಸನ್ನು ಎಸ್‌ಐಟಿಗೆ ವಹಿಸಿ ನಮಗೆ ನ್ಯಾಯ ಕೊಡಿಸಿ ಎಂದು ಕೇಳಿಕೊಂಡೆವು. ಯಡಿಯೂರಪ್ಪ ಅವರು ನಮ್ಮೊಂದಿಗೆ ಸುಮಾರು 9 ನಿಮಿಷಗಳ ಕಾಲ ಮಾತನಾಡಿ ನಮಗೆ ಟೀ ಕುಡಿಸಿದರು. ನಮ್ಮ ಸಂಭಾಷಣೆಯ ನಡುವೆ ಯಡಿಯೂರಪ್ಪ ಅವರು ನನ್ನ 17 ವರ್ಷದ ಮಗಳ ಕೈ ಹಿಡಿದುಕೊಂಡು ಮಾತನಾಡಿಸುತ್ತಿದ್ದರು. ನನ್ನ ಮಗಳು ಅವರನ್ನು ತಾತ ಎನ್ನುತ್ತಾ ಮಾತನಾಡುತ್ತಿದ್ದಳು. ನಾನು ಅಪ್ಪಾಜಿ ಎಂದು ಸಂಭೋಧಿಸಿ ಮಾತನಾಡುತ್ತಿದ್ದೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

'ಕೆಲ ಸಮಯದ ಬಳಿಕ ಯಡಿಯೂರಪ್ಪ ಅವರು ನನ್ನ ಮಗಳನ್ನು ರೂಮಿಗೆ ಕರೆದುಕೊಂಡು ಹೋಗಿ ಬಾಗಿಲು ಹಾಕಿಕೊಂಡು ಸುಮಾರು 5 ನಿಮಿಷ ರೂಮಿನ ಒಳಗೆ ಇದ್ದರು. ಆ ಸಮಯದಲ್ಲಿ ಯಡಿಯೂರಪ್ಪ ಅವರು ನನ್ನ ಮಗಳು ಧರಿಸಿದ್ದ ಶರ್ಟ್ ಒಳಗೆ ಕೈ ಹಾಕಿ ಬಲಭಾಗದ ವಕ್ಷಸ್ಥಲವನ್ನು ಹಿಸುಕಿ ಲೈಂಗಿಕ ಕಿರುಕುಳ ನೀಡಿದ್ದು, ನನ್ನ ಮಗಳು ಅವರಿಂದ ತಪ್ಪಿಸಿಕೊಂಡು ಆಚೆ ಬರಲು ಯತ್ನಿಸಿದರೂ ಆಕೆಯನ್ನು ಬಿಡದೆ ಲಾಕ್ ಮಾಡಿಕೊಂಡಿದ್ದರು. ನಂತರ ಯಡಿಯೂರಪ್ಪ ಅವರೇ ಬಾಗಿಲನ್ನು ಮೆಲ್ಲಗೆ ತೆರೆದು ಹೊರಬಂದಾಗ ನನ್ನ ಮಗಳು ರೂಮಿನಿಂದ ಆಚೆ ಬಂದು ನನಗೆ ಎಲ್ಲಾ ವಿಚಾರ ತಿಳಿಸಿದಳು' ಎಂದು ದೂರಿನಲ್ಲಿ ವಿವರಿಸಲಾಗಿದೆ.

'ನಾನು ಯಡಿಯೂರಪ್ಪ ಅವರಿಗೆ ಯಾಕೆ ಹೀಗೆ ಮಾಡಿದಿರಿ ಎಂದು ಕೇಳಿದ್ದಕ್ಕೆ, ಅವರು, ಆಕೆಗೆ ರೇಪ್ ಆಗಿದೆಯೊ ಇಲ್ಲವೊ ಎಂದು ಚೆಕ್ ಮಾಡಲು ಹಾಗೆ ಮಾಡಿದೆ ಎಂದು ಹೇಳಿ ತಕ್ಷಣವೇ ಕ್ಷಮೆ ಯಾಚಿಸುತ್ತಾ, ನಿಮಗೆ ಮೋಸ ಆಗಿರುವ ಬಗ್ಗೆ ನಾನು ಸಹಾಯ ಮಾಡುತ್ತೇನೆ ಎಂದರು. ಅದಕ್ಕೆ ನಾನು ಒಪ್ಪಲಿಲ್ಲ. ಆದರೂ ಯಡಿಯೂರಪ್ಪ ಅವರು ಈ ವಿಚಾರವನ್ನು ಹೊರಗೆ ಎಲ್ಲೂ ತಿಳಿಸಬಾರದು ಎಂದು ನಮ್ಮನ್ನು ತಡೆಯಲು ತುಂಬಾ ಪ್ರಯತ್ನಿಸಿರುತ್ತಾರೆ. ನನ್ನ ಮಗಳಿಗೆ ಆಗಿದ್ದ ಅನ್ಯಾಯದ ಬಗ್ಗೆ ನ್ಯಾಯ ದೊರಕಿಸುವಂತೆ ಕೇಳಲು ಹೋದಾಗ ಲೈಂಗಿಕ ಕಿರುಕುಳ ನೀಡಿದ್ದಾರೆ' ಎಂದು ವಿಶದವಾಗಿ ವಿವರಿಸಿದ್ದಾರೆ.

**ರಿಟ್ ಅರ್ಜಿಯಲ್ಲಿ ಏನಿದೆ?:** ದೂರು ನೀಡಿದ್ದ ಸಂತ್ರಸ್ತ ಬಾಲಕಿಯ ತಾಯಿ 2024ರ ಮೇ 27ರಂದು ಖಾಸಗಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದು, ಈಗ ಅವರ ಪುತ್ರ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

'ಯಡಿಯೂರಪ್ಪ ಅವರ ಮನೆಯಲ್ಲಿ 2024ರ ಫೆಬ್ರುವರಿ 2ರಂದು ಘಟನೆ ನಡೆದಿದೆ. ಮಾರ್ಚ್ 14ರಂದು ದೂರು ನೀಡಲಾಗಿದೆ. ಯಡಿಯೂರಪ್ಪ ಅವರ ಜೊತೆ ಮಾತನಾಡಿರುವ ವಿಡಿಯೊ ರೆಕಾರ್ಡಿಂಗ್ ಕೂಡಾ ಇದ್ದು ಅದರ ಪೆನ್ ಡ್ರೈವ್ ಅನ್ನು ಲಗತ್ತಿಸಲಾಗಿದೆ. ಸಂತ್ರಸ್ತ ಬಾಲಕಿ 2024ರ ಮಾರ್ಚ್ 14ರಂದು ಬೆಂಗಳೂರಿನ 25ನೇ ಎಸಿಎಂಎಂ ನ್ಯಾಯಾಲಯದಲ್ಲಿ ಅಪರಾಧ ಪ್ರಕ್ರಿಯಾ ಸಂಹಿತೆ-1973ರ ಕಲಂ 164 (5) ಅಡಿಯಲ್ಲಿ ಸ್ವಯಂ ಹೇಳಿಕೆ ದಾಖಲಿಸಿದ್ದಾಳೆ. ಈ ಕುರಿತಂತೆ, ಸಂತ್ರಸ್ತೆಯ ತಾಯಿ ಮಹಿಳಾ ಆಯೋಗದ ಅಧ್ಯಕ್ಷರಿಗೆ, ಮುಖ್ಯ ನ್ಯಾಯಮೂರ್ತಿಗಳಿಗೆ, ಎಡಿಜಿಪಿ ಹಾಗೂ ಇತರ ಪ್ರಮುಖರಿಗೆ ಪತ್ರ ಬರೆದಿದ್ದಾರೆ. ಆದರೆ, ಈ ಪ್ರಕರಣದಲ್ಲಿ ಈತನಕ ಯಾವುದೇ ಪ್ರಗತಿಯಾಗಿಲ್ಲ' ಎಂದು ವಿವರಿಸಲಾಗಿದೆ.

'ಪ್ರಕರಣದ ತನಿಖೆಯನ್ನು ಸಿಐಡಿ ನಡೆಸುತ್ತಿದ್ದು, ಈತನಕ ಪಂಚನಾಮೆ ಮಾಡಿಲ್ಲ. ಯಾವುದೇ ಸಾಕ್ಷ್ಯ ಸಂಗ್ರಹಿಸಿಲ್ಲ. ದಾಖಲೆಗಳನ್ನು ವಶಪಡಿಸಿಕೊಂಡಿಲ್ಲ. ಪೋಕ್ಸೊ ಕಾಯ್ದೆಯಡಿ ನೋಟಿಸ್ ನೀಡಿಲ್ಲ. ಆದ್ದರಿಂದ, ಯಡಿಯೂರಪ್ಪ ಅವರನ್ನು ಬಂಧಿಸಿ, ವಿಚಾರಣೆ ನಡೆಸಿ ಸತ್ಯಾಂಶ ಬಯಲಿಗೆ ತರಬೇಕು. ಇದಕ್ಕಾಗಿ ಅಗತ್ಯವಿರುವ ಸಿಸಿಟಿವಿ ದೃಶ್ಯಗಳು, ಮೆಮೊರಿ ಕಾರ್ಡ್ ಮತ್ತು ಹಾರ್ಡ್ ಡಿಸ್ಕ್ ವಶಪಡಿಸಿಕೊಳ್ಳಬೇಕು. ತನಿಖೆಯನ್ನು ಚುರುಕುಗೊಳಿಸಿ ಒಂದು ತಿಂಗಳ ಒಳಗೆ ವರದಿ ಸಲ್ಲಿಸಲು ನಗರ ಪೊಲೀಸ್ ಆಯುಕ್ತರು ಮತ್ತು ಸಿಐಡಿ ಇನ್‌ಸ್ಪೆಕ್ಟರ್‌ಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ. ಅರ್ಜಿದಾರರ ಪರ ಎಸ್. ಬಾಲನ್ ವಕಾಲತ್ತು ವಹಿಸಿದ್ದಾರೆ.

### ಮುಖ್ಯಾಂಶಗಳು

- ಸಂತ್ರಸ್ತೆಯ ಅಣ್ಣನಿಂದ ಅರ್ಜಿ ಸಲ್ಲಿಕೆ
- ಅರ್ಜಿ ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ

### ಅಶೋಕ್ ನಾಯಕ್ ವಿಶೇಷ ಪ್ರಾಸಿಕ್ಯೂಟರ್

ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ ವಿಚಾರಣಾ ಮತ್ತು ಜಿಲ್ಲಾ ಸೆಷನ್ಸ್ ನ್ಯಾಯಾಲಯಗಳಲ್ಲಿ ಪ್ರಾಸಿಕ್ಯೂಷನ್ ಪರವಾಗಿ ಹಾಜರಾಗಿ ವಾದ ಮಂಡಿಸಲು ಅಶೋಕ್ ನಾಯಕ್ ಅವರನ್ನು ವಿಶೇಷ ಸರ್ಕಾರಿ ವಕೀಲರನ್ನಾಗಿ ನೇಮಕ ಮಾಡಲಾಗಿದೆ.

ಅಶೋಕ್ ನಾಯಕ್

ಈ ಕುರಿತಂತೆ ಒಳಾಡಳಿತ ಇಲಾಖೆಯ ಅಧೀನ ಕಾರ್ಯದರ್ಶಿ ಬುಧವಾರ ಅಧಿಸೂಚನೆ ಹೊರಡಿಸಿದ್ದಾರೆ. ಅಶೋಕ್ ನಾಯಕ್ ಅವರು ಪ್ರಜ್ವಲ್ ರೇವಣ್ಣ ಪ್ರಕರಣದಲ್ಲೂ ವಿಚಾರಣಾ ನ್ಯಾಯಾಲಯಗಳಲ್ಲಿ ಪ್ರಾಸಿಕ್ಯೂಷನ್ ಪರ ವಿಶೇಷ ಪ್ರಾಸಿಕ್ಯೂಟರ್ ಆಗಿ ವಾದ ಮಂಡಿಸುತ್ತಿದ್ದಾರೆ.

### ಸಿಐಡಿ ವಿಚಾರಣೆಗೆ ಬಿಎಸ್‌ವೈ ಗೈರು

**ಬೆಂಗಳೂರು:** ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್ ಯಡಿಯೂರಪ್ಪ ಅವರು ಬುಧವಾರ (ಜೂ.12) ಸಿಐಡಿ ಅಧಿಕಾರಿಗಳ ವಿಚಾರಣೆಗೆ ಹಾಜರಾಗಲಿಲ್ಲ.

ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ಬುಧವಾರ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದ್ದರು. ಆದರೆ, ಜೂನ್ 17ರಂದು ವಿಚಾರಣೆಗೆ ಹಾಜರಾಗುವುದಾಗಿ ತಿಳಿಸಿದ್ದ ಯಡಿಯೂರಪ್ಪ, ವಿಚಾರಣೆಗೆ ಗೈರಾಗಿದ್ದರು.

ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ವಿಚಾರಣೆ ಅಗತ್ಯವಿದ್ದು, ಬುಧವಾರ ಬೆಳಿಗ್ಗೆ 10.30ಕ್ಕೆ ಸಿಐಡಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗುವಂತೆ ನೋಟಿಸ್‌ನಲ್ಲಿ ಸೂಚಿಸಲಾಗಿತ್ತು.

### ಪ್ರಕರಣ ರದ್ದು ಕೋರಿ ಅರ್ಜಿ

ತಮ್ಮ ವಿರುದ್ಧದ ಪೋಕ್ಸೊ ಪ್ರಕರಣ ರದ್ದುಪಡಿಸುವಂತೆ ಕೋರಿ ಬಿ.ಎಸ್.ಯಡಿಯೂರಪ್ಪ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ.

'ನಾನು ಯಾವುದೇ ಕಾನೂನು ಬಾಹಿರ ಕೃತ್ಯ ಎಸಗಿಲ್ಲ. ಫಿರ್ಯಾದುದಾರ ಮಹಿಳೆಗೆ ದೂರು ನೀಡುವುದೇ ಹವ್ಯಾಸ. ಎಫ್‌ಐಆರ್ ದಾಖಲಾದ ನಂತರ ಏಪ್ರಿಲ್ 12ರಂದು ಪೊಲೀಸರ ವಿಚಾರಣೆಗೆ ಹಾಜರಾಗಿದ್ದೆ. ಪೊಲೀಸರು ಹೇಳಿಕೆ ದಾಖಲಿಸಿಕೊಳ್ಳದೇ ಧ್ವನಿ ಮಾದರಿ ಸಂಗ್ರಹಿಸಿದರು. ದೂರಿನಲ್ಲಿ ಅಪರಾಧದ ಅಂಶಗಳು ಇಲ್ಲದೇ ಇರುವುದರಿಂದ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿದ್ದಾರೆ.

## ಸುದ್ದಿ 2 ನಿಮಿಷ

### ಏಕರೂಪದ ಪಠ್ಯಕ್ರಮಕ್ಕೆ ಪ್ರಕಾಶಕರ ಒತ್ತಾಯ

**ಬೆಂಗಳೂರು:** ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಪದವಿ ತರಗತಿಗಳಿಗೆ ಏಕರೂಪದ ಪಠ್ಯಕ್ರಮ ರಚಿಸಬೇಕು ಎಂದು ಕರ್ನಾಟಕ ಪ್ರಕಾಶಕರ ಮತ್ತು ಪುಸ್ತಕ ವ್ಯಾಪಾರಿಗಳ ಸಂಘ ಒತ್ತಾಯಿಸಿದೆ.

ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸುವಾಗ ಆಯಾ ವಿಶ್ವ-ವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಅಧ್ಯಯನ ಮಂಡಳಿಗಳಿಗೆ ಪಠ್ಯಕ್ರಮ ರೂಪಿಸಲು ಸೂಚಿಸಲಾಗಿದೆ. ಇದರಿಂದ ಅಧ್ಯಾಪಕರು ಹಾಗೂ ವಿದ್ಯಾರ್ಥಿ-ಗಳಿಗೆ ಅನನುಕೂಲವಾಗುತ್ತದೆ ಎಂದು ಸಂಘದ ಕಾರ್ಯದರ್ಶಿ ಎ.ಪಿ. ಪ್ರದೀಪ್ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷರಿಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರೆ.

ಒಂದು ವಿಶ್ವವಿದ್ಯಾಲ-ಯದ ವಿದ್ಯಾರ್ಥಿ ಅನಿವಾರ್ಯ ಕಾರಣಗಳಿಂದ ಸೆಮಿಸ್ಟರ್ ಮಧ್ಯದಲ್ಲೇ ಮತ್ತೊಂದು ವಿಶ್ವ-ವಿದ್ಯಾಲಯಕ್ಕೆ ಸೇರ್ಪಡೆಯಾದರೆ ಪಠ್ಯಕ್ರಮ ವ್ಯತ್ಯಾಸದಿಂದ ತೊಂದರೆ ಅನುಭವಿಸಬೇಕಾಗುತ್ತದೆ ಎಂದು ಹೇಳಿದ್ದಾರೆ.

### ಪಾಕಿಸ್ತಾನ ಪರ ಘೋಷಣೆ: ಥಳಿತ

**ಬೆಳಗಾವಿ:** ಇಲ್ಲಿನ ನ್ಯಾಯಾಲಯದ ಆವರಣದಲ್ಲಿ ಬುಧವಾರ ಜಯೇಶ್ ಪೂಜಾರಿ ಉರುಫ್ ಶಾಕೀರ್ ಮೊಹಮ್ಮದ್ ಎಂಬ ಕೈದಿ ಪಾಕಿಸ್ತಾನದ ಪರ ಘೋಷಣೆ ಕೂಗಿದ್ದರಿಂದ ವಕೀಲರು ಮತ್ತು ಜನರು ಥಳಿಸಿದ್ದಾರೆ.

ಜೋಡಿ ಕೊಲೆ, ಕೊಲೆ ಬೆದರಿಕೆ, ಬಾಂಬ್‌ಸ್ಫೋಟದ ಬೆದರಿಕೆ ಸೇರಿ ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ದಕ್ಷಿಣ ಕನ್ನಡದ ಜಯೇಶ್ ಪೂಜಾರಿಗೆ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಕರೆತರಲಾಗಿತ್ತು. ಆತ 'ಪಾಕಿಸ್ತಾನ ಜಿಂದಾಬಾದ್' ಎಂದು ಘೋಷಣೆ ಕೂಗಿದ್ದನ್ನು ಕೇಳಿಸಿಕೊಂಡು ಕೆಲ ವಕೀಲರು ಮತ್ತು ಜನ ಥಳಿಸಿದರು. ಆತನನ್ನು ವಶಕ್ಕೆ ಪಡೆದ ಪೊಲೀಸರು, ಎಪಿಎಂಸಿ ಠಾಣೆಗೆ ಕರೆದೊಯ್ದರು.

'ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಲೋಕ್‌ಕುಮಾರ್ ಅವರಿಗೆ 2018ರಲ್ಲಿ ಬೆದರಿಕೆ ಕರೆ ಮಾಡಿದ ಪ್ರಕರಣದ ವಿಚಾರಣೆಗಾಗಿ ಹಾಜರುಪಡಿಸಲು ಜಯೇಶ್ ಪೂಜಾರಿಯನ್ನು ನ್ಯಾಯಾಲಯಕ್ಕೆ ಕರೆತರಲಾಗಿತ್ತು. ಜೆಎಂಎಫ್‌ಸಿ 4ನೇ ನ್ಯಾಯಾಲಯದ ಎದುರು ಘೋಷಣೆ ಕೂಗಿದ' ಎಂದು ಡಿಸಿಪಿ ರೋಹನ ಜಗದೀಶ್ ಸುದ್ದಿಗಾರರಿಗೆ ತಿಳಿಸಿದರು. '14ನೇ ವಯಸ್ಸಿಗೆ ಮನೆ ತೊರೆದ ಜಯೇಶ್, ಕೇರಳದಲ್ಲಿ ಶಾಕೀರ್ ಮೊಹಮ್ಮದ್ ಆಗಿ ಮತಾಂತರಗೊಂಡ. ಮುಂಬೈ ಮತ್ತಿತರ ಕಡೆ ಓಡಾಡಿ, ಬೇರೆ ಬೇರೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾದ' ಎಂದರು.

## 'ಊಟ ಇಲ್ಲದೆ ಸಾಯಿಸುವುದಕ್ಕೆ ಆಗಲ್ಲ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೊಲೆ ಪ್ರಕರಣದಿಂದ ನಟ ದರ್ಶನ್ ಅವರನ್ನು ರಕ್ಷಿಸಲು ಯಾರೂ ಪ್ರಯತ್ನಿಸಿಲ್ಲ. ಸರ್ಕಾರ ಸಹ ಮಧ್ಯಪ್ರವೇಶ ಮಾಡಿಲ್ಲ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

'ರೇಣುಕಸ್ವಾಮಿ ತಪ್ಪು ಮಾಡಿದ್ದರೆ, ಪೊಲೀಸರಿಗೆ ದೂರು ನೀಡಬಹುದಿತ್ತು. ಪೊಲೀಸರು ತನಿಖೆ ಮಾಡುತ್ತಿದ್ದರು. ರೇಣುಕಸ್ವಾಮಿ ಕುಟುಂಬದ ಪರವಾಗಿ ಸರ್ಕಾರ ಏನು ಮಾಡಬಹುದು ಎಂಬುದನ್ನು ಮುಖ್ಯಮಂತ್ರಿ ಜೊತೆ ಚರ್ಚಿಸಿ ತೀರ್ಮಾನ ಮಾಡುತ್ತೇವೆ' ಎಂದು ನಗರದಲ್ಲಿ ಬುಧವಾರ ಪ್ರತಿಕ್ರಿಯಿಸಿದರು.

'ಪ್ರಕರಣದಲ್ಲಿ 13 ಮಂದಿಯನ್ನು ಬಂಧಿಸಲಾಗಿದೆ. ಯಾಕಾಗಿ ಕೊಲೆ ಯಾಗಿದೆ ಎಂಬ ವಿಚಾರ ಗೊತ್ತಾಗಿದೆ. ಪ್ರಕರಣವನ್ನು ಬೇರೆ ತನಿಖಾ ಏಜೆನ್ಸಿಗಳಿಗೆ ಕೊಡುವ ಅಗತ್ಯ ಇಲ್ಲ' ಎಂದರು.

'ಕೊಲೆ ಆರೋಪಿಗಳಿಗೆ ಬಿರಿಯಾನಿ ತರಿಸಿ ಕೊಟ್ಟ ವಿಚಾರವೂ ನನಗೆ ಗೊತ್ತಿಲ್ಲ. ಹಾಗೆಂದು, ಊಟ ಇಲ್ಲದೆ ಸಾಯಿಸುವುದಕ್ಕೆ ಆಗುವುದಿಲ್ಲ. ಆರೋಪಿಗಳು ಕಸ್ಟಡಿಯಲ್ಲಿದ್ದಾಗ ಊಟ ತರಿಸಿ ಕೊಡುತ್ತಾರೆ. ಅದರಲ್ಲಿ ಬಿರಿಯಾನಿ ತರಿಸಿಕೊಟ್ರಾ? ಚಿಕನ್ ತರಿಸಿಕೊಟ್ರಾ ಗೊತ್ತಿಲ್ಲ' ಎಂದರು.

**ಸಿಎಂ ಭೇಟಿ – ಚರ್ಚೆ:** ಪ್ರಕರಣ ಸಂಬಂಧ ಪರಮೇಶ್ವರ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ದರ್ಶನ್ ಅಭಿಮಾನಿಗಳ ಸಂಘ ವಿಸರ್ಜಿಸಿ – ವಿವಿಧ ಸಂಘಟನೆಗಳ ಒತ್ತಾಯ

# ರೇಣುಕಸ್ವಾಮಿ ಕೊಲೆ: ತವರಿನಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಚಿತ್ರದುರ್ಗ:** ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವ ನಟ ದರ್ಶನ್ ಹಾಗೂ ಇತರ ಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿ ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ವೀರಶೈವ ಲಿಂಗಾಯತ ಜಂಗಮ ಸಮಾಜದವರು, ವಿವಿಧ ಸಂಘಟನೆಗಳ ಸಾವಿರಾರು ಸದಸ್ಯರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ನೀಲಕಂಠೇಶ್ವರ ದೇವಸ್ಥಾನದಿಂದ ಪ್ರತಿಭಟನಾ ಮೆರವಣಿಗೆ ಆರಂಭವಾಯಿತು. ಗಾಂಧಿ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ರೇಣುಕಸ್ವಾಮಿ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರತಿಭಟನಾಕಾರರು ಮೌನಾಚರಣೆ ನಡೆಸಿದರು. ಮಾರ್ಗದುದ್ದಕ್ಕೂ 'ಖಳನಾಯಕ ದರ್ಶನ್‌ಗೆ ಧಿಕ್ಕಾರ, ಏರಿಸಿ ಏರಿಸಿ ದರ್ಶನ್‌ನನ್ನು ಗಲ್ಲಿಗೇರಿಸಿ' ಎಂಬ ಘೋಷಣೆ ಕೂಗಿದರು.

ರಾಜ್ಯದಾದ್ಯಂತ ಇರುವ ದರ್ಶನ್ ಅಭಿಮಾನಿಗಳ ಸಂಘಗಳನ್ನು ವಿಸರ್ಜನೆ ಮಾಡಬೇಕು. ಯಾವುದೇ ಚಿತ್ರಮಂದಿರದಲ್ಲಿ ದರ್ಶನ್ ಚಿತ್ರ ಪ್ರದರ್ಶಿಸಬಾರದು. ಜನರು ಸ್ವಯಂ ಪ್ರೇರಣೆಯಿಂದ ದರ್ಶನ್ ಚಿತ್ರಗಳನ್ನು ಬಹಿಷ್ಕರಿಸಬೇಕು ಎಂದು ಒತ್ತಾಯಿಸಲಾಯಿತು.

ಕೊಲೆ ಪ್ರಕರಣದಲ್ಲಿ ದರ್ಶನ್ ಭಾಗಿಯಾಗಿದ್ದರೂ ಕೆಲವು ಅಂಧ ಅಭಿಮಾನಿಗಳು ಆತನ ಪರ ನಿಂತಿದ್ದಾರೆ.

ರೇಣುಕಸ್ವಾಮಿ ಕೊಲೆ ಆರೋಪಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿ ವಿವಿಧ ಸಂಘಟನೆಗಳ ಸದಸ್ಯರು ಬುಧವಾರ ಚಿತ್ರದುರ್ಗ ಜಿಲ್ಲಾಧಿಕಾರಿ ಕಚೇರಿವರೆಗೂ ಮೆರವಣಿಗೆ ನಡೆಸಿದರು

ಆರೋಪಿಯನ್ನು ಪೊಲೀಸ್ ಠಾಣೆ, ಕೋರ್ಟ್‌ಗೆ ಕರೆದೊಯ್ಯುವಾಗ ಆತನ ಪರವಾಗಿ ಘೋಷಣೆ ಕೂಗಿದ್ದಾರೆ. ರಾಜ್ಯದಲ್ಲಿ ಇಂತಹ ಘಟನೆ ಮತ್ತೆಂದೂ ನಡೆಯದಿರಲು ದರ್ಶನ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ರೇಣುಕಸ್ವಾಮಿ ಕೆಟ್ಟ ಸಂದೇಶ ಕಳುಹಿಸಿ ತಪ್ಪು ಮಾಡಿದ್ದರೆ ಪೊಲೀಸ್ ಠಾಣೆಗೆ ದೂರು ನೀಡಬಹುದಾಗಿತ್ತು. ಅದನ್ನು ಬಿಟ್ಟು ಬೆಂಗಳೂರಿಗೆ ಕರೆಸಿಕೊಂಡು ಚಿತ್ರಹಿಂಸೆ ನೀಡಿ ಕೊಲೆ ಮಾಡಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಇಡೀ ಪ್ರಕರಣದಲ್ಲಿ ಪೊಲೀಸರು ದಿಟ್ಟ ಹೆಜ್ಜೆ ಇರಿಸಿದ್ದಾರೆ. ಶೀಘ್ರವೇ ಆರೋಪಿಗಳನ್ನು ಬಂಧಿಸಿದ್ದಾರೆ. ಆದರೆ, ಚುನಾವಣೆಯಲ್ಲಿ ದರ್ಶನ್ ಕಾಂಗ್ರೆಸ್ ಪರ ಪ್ರಚಾರ ಮಾಡಿರುವ ಕಾರಣಕ್ಕೆ ರಾಜ್ಯ ಸರ್ಕಾರ ಆತನ ಪರವಾಗಿ ನಿಲ್ಲಬಾರದು. ಆರೋಪಿಗಳನ್ನು ರಕ್ಷಿಸುವ ಪ್ರಯತ್ನ ನಡೆಯುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ. ಮುಖ್ಯಮಂತ್ರಿ ಹಾಗೂ ಗೃಹಸಚಿವರು ತನಿಖೆ ದಿಕ್ಕು ತಪ್ಪದಂತೆ ನೋಡಿಕೊಳ್ಳಬೇಕು. ಆರೋಪಿಯನ್ನು ರಕ್ಷಿಸುವ ಕೆಲಸ ಮಾಡಿದರೆ ಹೋರಾಟ ರೂಪಿಸಲಾಗುವುದು' ಎಂದು ಮಾಜಿ ಶಾಸಕ, ಬಿಜೆಪಿ ಮುಖಂಡ ಎಸ್.ಕೆ. ಬಸವರಾಜನ್ ಎಚ್ಚರಿಸಿದರು.

'ದರ್ಶನ್ ಅವರ ಹೆಸರಿನ ಜೊತೆ ಡಿ ಬಾಸ್ ಎಂಬ ಬಿರುದು ಇತ್ತು. ಆದರೆ, ಅವರು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ ಮಾಡಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಮರುಳಾರಾಧ್ಯ ಹೇಳಿದರು. ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್, ಮಾಜಿ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ, ಛಲವಾದಿ ಗುರುಮಠದ ಬಸವನಾಗಿದೇವ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮಿ, ಷಡಾಕ್ಷರಯ್ಯ, ನಾಗರಾಜ ಸಂಗಮ್ ಇದ್ದರು.

### ರೇಣುಕಸ್ವಾಮಿ ಕ್ರಿಕೆಟ್ ಪ್ರಿಯ

'ನನ್ನ ಮಗ ದರ್ಶನ್ ಅಭಿಮಾನಿಯಲ್ಲ. ಆತ ಮನೆಯಲ್ಲಿ ಸಿನಿಮಾ, ಧಾರಾವಾಹಿ ನೋಡುತ್ತಿರಲಿಲ್ಲ, ಸಿನಿಮಾಗಳ ಬಗ್ಗೆ ಮಾತನಾಡುತ್ತಿರಲಿಲ್ಲ, ಕ್ರಿಕೆಟ್ ಮಾತ್ರ ನೋಡುತ್ತಿದ್ದ. ಕ್ರಿಕೆಟ್ ಪ್ರಿಯನಾಗಿದ್ದ' ಎಂದು ರೇಣುಕಸ್ವಾಮಿ ತಂದೆ ಕಾಶಿನಾಥ ಶಿವಣ್ಣಗೌಡರ್ ತಿಳಿಸಿದರು.

'ಗಂಡುಮಗ ಎಲ್ಲೋ ಹೋಗಿದ್ದಾನೆ, ಬರುತ್ತಾನೆ ಎಂದು ನಾವು ನಂಬಿದ್ದೆವು. ಹೀಗಾಗಿ ಪೊಲೀಸ್ ಠಾಣೆಗೆ ದೂರು ನೀಡಿರಲಿಲ್ಲ. ಸೋಮವಾರ ಮಧ್ಯಾಹ್ನ 12.30ರವರೆಗೂ ಸಾವಿನ ಸುದ್ದಿ ಗೊತ್ತಿರಲಿಲ್ಲ. ನನ್ನ ಮಗನನ್ನು ಬರ್ಬರವಾಗಿ ಕೊಂದಿದ್ದಾರೆ. ತಲೆಯಲ್ಲಿ ತೂತುಗಳಾಗಿದ್ದವು. ಎದೆ, ಬೆನ್ನು ಮೂಳೆ ಪುಡಿಯಾಗಿತ್ತು, ಮರ್ಮಾಂಗಕ್ಕೂ ಹೊಡೆದಿದ್ದರು' ಎಂದರು.

### 'ಸಿಬಿಐಗೆ ಕೊಡಿ, ಮುಚ್ಚಿ ಹಾಕಬೇಡಿ'

ವಿವಿಧ ಸಂಘಟನೆ ಸದಸ್ಯರು, ರಾಜಕೀಯ ಪಕ್ಷಗಳ ಮುಖಂಡರು ಹಾಗೂ ವಿವಿಧ ಮಠಗಳ ಶ್ರೀಗಳು ನಗರದ ವಿಆರ್‌ಎಸ್ ಬಡಾವಣೆಯಲ್ಲಿರುವ ರೇಣುಕಸ್ವಾಮಿ ನಿವಾಸಕ್ಕೆ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ಈ ವೇಳೆ ಮಾತನಾಡಿದ ರೇಣುಕಸ್ವಾಮಿ ತಾಯಿ ರತ್ನಪ್ರಭಾ 'ನನ್ನ ಮಗನನ್ನು ಕೊಂದವರಿಗೆ ಕಠಿಣ ಶಿಕ್ಷೆಯಾಗಬೇಕು. ಪ್ರಕರಣ ಮುಚ್ಚಿ ಹಾಕುತ್ತಾರೆ ಎಂದು ಕೆಲವರು ಮಾತನಾಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ಪ್ರಕರಣ ಮುಚ್ಚಿ ಹಾಕಬಾರದು, ತನಿಖೆಯನ್ನು ಸಿಬಿಐಗೆ ವಹಿಸಬೇಕು. ಮಗನ ಸಾವಿಗೆ ನ್ಯಾಯ ಕೊಡಿಸಬೇಕು' ಎಂದು ಕಣ್ಣೀರಿಟ್ಟರು.

## ಬಿಟ್‌ಕಾಯಿನ್: ಮೊಹಮ್ಮದ್ ನಲಪಾಡ್ ವಿಚಾರಣೆ

**ಬೆಂಗಳೂರು:** ಬಿಟ್ ಕಾಯಿನ್ ಹಗರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಗಳು ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಅವರನ್ನು ಬುಧವಾರ ವಿಚಾರಣೆಗೆ ಒಳಪಡಿಸಿದರು.

ಸಿಐಡಿ ಕಚೇರಿಯಲ್ಲಿ ವಿಚಾರಣೆ ನಡೆಸಿದ ತನಿಖಾಧಿಕಾರಿಗಳು, ಪ್ರಕರಣ ಸಂಬಂಧ ಕೆಲವು ಪ್ರಶ್ನೆಗಳನ್ನು ಕೇಳಿದ್ದು, ಇದಕ್ಕೆ ನಲಪಾಡ್ ಉತ್ತರಿಸಿದ್ದಾರೆ ಎಂದು ಗೊತ್ತಾಗಿದೆ.

ಬಿಟ್‌ಕಾಯಿನ್ ಹಗರಣದ ಆರೋಪಿಯಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಗೆ ನಲಪಾಡ್ ಆಪ್ತ ಎನ್ನಲಾಗಿದೆ. ತನಿಖೆ ವೇಳೆ ಲಭಿಸಿದ ಮಾಹಿತಿ ಆಧರಿಸಿ ಅವರನ್ನು ವಿಚಾರಣೆಗೆ ಕರೆಸಲಾಗಿತ್ತು. ಇದೇ ಪ್ರಕರಣದಲ್ಲಿ ಈ ಹಿಂದೆ ಐಪಿಎಸ್ ಅಧಿಕಾರಿ ಸಂದೀಪ್ ಪಾಟೀಲ ಅವರನ್ನು ವಿಚಾರಣೆ ನಡೆಸಲಾಗಿತ್ತು.

ಕೆಂಪೇಗೌಡ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಡ್ರಗ್ಸ್ ಪ್ರಕರಣ ಸಂಬಂಧ ಶ್ರೀಕಿ ಸೇರಿ ಆರು ಮಂದಿ ವಿರುದ್ಧ ಈಗಾಗಲೇ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಶ್ರೀಕಿ, ರಾಬಿನ್ ಖಂಡೇನ್‌ವಾಲ್, ಸುನೀಶ್ ಹೆಗ್ಡೆ ಸೇರಿ 6 ಮಂದಿಯ ಹೆಸರನ್ನು ದೋಷಾರೋಪ-ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಆರೋಪಿಗಳು ಡಾರ್ಕ್‌ವೆಬ್ ಮೂಲಕ ವಿದೇಶಗಳಿಂದ ಮಾದಕ ವಸ್ತುಗಳನ್ನು ತರಿಸುತ್ತಿದ್ದರು. ಅದಕ್ಕಾಗಿ ಕ್ರಿಪ್ಟೊ ಕರೆನ್ಸಿ ಮತ್ತು ಬಿಟ್‌ಕಾಯಿನ್ ಮೂಲಕ ಹಣಕಾಸಿನ ವ್ಯವಹಾರ ನಡೆಸುತ್ತಿದ್ದರು. ಜತೆಗೆ ತನಿಖೆಯಲ್ಲಿ ರಾಬಿನ್ ಖಂಡೇನ್‌ವಾಲ್ ಜತೆ ಸೇರಿಕೊಂಡು ಕೆಲ ಗೇಮ್ ಆ್ಯಪ್‌ಗಳನ್ನು ಹ್ಯಾಕ್ ಮಾಡಿ, ಅವುಗಳ ಮಾಲೀಕರಿಂದ ಹಣ ವಸೂಲಿ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಉಲ್ಲೇಖಿಸಲಾಗಿತ್ತು.

# ಬಚಾವಾಗಲು ₹30 ಲಕ್ಷಕ್ಕೆ ಸುಪಾರಿ

ಒಂದನೇ ಪುಟದಿಂದ...

**'ಅಣ್ಣ', 'ಅಕ್ಕ' ಇದ್ದರು ಎಂದಿದ್ದ ಆರೋಪಿಗಳು:** ಭಾನುವಾರ ಬೆಳಿಗ್ಗೆ ಕಾಲುವೆ ಬಳಿ ಮೃತದೇಹ ಸಿಕ್ಕಿದ ಮೇಲೆ ಪೊಲೀಸರು ತನಿಖೆ ಆರಂಭಿಸಿದ್ದರು. ಮೃತದೇಹವನ್ನು ಸ್ಕಾರ್ಪಿಯೊದಲ್ಲಿ ತಂದು ಎಸೆಯುತ್ತಿದ್ದ ದೃಶ್ಯ ಸಿ.ಸಿ. ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಆ ಮಾರ್ಗದಲ್ಲಿ ಸಂಚರಿಸಿದವರ ಮೊಬೈಲ್ ಸಂಖ್ಯೆ ಸಂಗ್ರಹಿಸಿದ್ದ ಪೊಲೀಸರು, ಆರೋಪಿಗಳಿಗೆ ಹುಡುಕಾಟ ಆರಂಭಿಸಿದ್ದರು.

'ಬಂಧನದ ಭೀತಿಯಿಂದ ಆರೋಪಿಗಳಾದ ರಾಘವೇಂದ್ರ, ಕಾರ್ತಿಕ್ ಅಲಿಯಾಸ್ ಕಪ್ಪೆ, ನಿಖಿಲ್ ನಾಯಕ್ ಅವರು ಠಾಣೆಗೆ ಬಂದು ಮೊದಲು ಶರಣಾದರು. ಹಣಕಾಸಿನ ವಿಚಾರಕ್ಕೆ ತಾವೇ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದರು. ಅನುಮಾನಗೊಂಡು ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ ಇತರೆ ಆರೋಪಿಗಳ ಹೆಸರು ಹೇಳಿದ್ದರು. ರಾಘವೇಂದ್ರ, ನಿಖಿಲ್ ನಾಯಕ್ ಹಾಗೂ ಕೇಶವಮೂರ್ತಿಗೆ ಆರೋಪಿ ದೀಪಕ್ ಮುಂಗಡವಾಗಿ ₹5 ಲಕ್ಷ ನೀಡಿ, 'ದರ್ಶನ್ ಅವರ ಹೆಸರು ಎಲ್ಲಿಯೂ ಹೇಳದಂತೆ ಸೂಚಿಸಿದ್ದ. ಕಾರ್ತಿಕ್, ರಾಘವೇಂದ್ರ ಜೈಲಿಗೆ ಹೋದ ನಂತರ ಅವರ ಮನೆಯವರಿಗೆ ಹಣ ತಲುಪಿಸುವುದಾಗಿ ಆಮಿಷವೊಡ್ಡಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಶರಣಾದ ಆರೋಪಿಗಳ ಹೇಳಿಕೆ ಆಧರಿಸಿ ಆರ್.ಆರ್. ನಗರದ ಗೋಪುರದ ಬಳಿ ವಿನಯ್, ದೀಪಕ್ ಹಾಗೂ ಬಿಡದಿ ಟೋಲ್ ಬಳಿ ಪವನ್ ಹಾಗೂ ನಂದೀಶ್, ನಾಗರಾಜ್, ಲಕ್ಷ್ಮಣ್, ಪ್ರದೂಷ್ ಎಂಬುವವರನ್ನು ಬಂಧಿಸಲಾಯಿತು. ಅವರನ್ನು ವಿಚಾರಣೆಗೆ ಒಳಪಡಿಸಿದಾಗ, ಪವಿತ್ರಾಗೌಡಗೆ ಅಶ್ಲೀಲ ಸಂದೇಶ ಕಳುಹಿಸುತ್ತಿದ್ದ ರೇಣುಕಸ್ವಾಮಿ ಕರೆತರುವಂತೆ ನಟ ದರ್ಶನ್ ಸೂಚಿಸಿದ್ದರು. ಅವರ ಸೂಚನೆ ಮೇರೆಗೆ ರೇಣುಕಸ್ವಾಮಿ ಅವರನ್ನು ಅಪಹರಿಸಿ ತಂದು ಜಯಣ್ಣ ಅವರ ಗೋದಾಮಿನಲ್ಲಿ ಹಗ್ಗದಿಂದ ಕಟ್ಟಿ ರಿಪೀಸಿನ ತುಂಡು, ದೊಣ್ಣೆಯಿಂದ ಹಲ್ಲೆ ನಡೆಸಲಾಯಿತು. ಈ ಸಂದರ್ಭದಲ್ಲಿ ಅಕ್ಕ (ಪವಿತ್ರಾಗೌಡ) ಹಾಗೂ ಅಣ್ಣ (ದರ್ಶನ್) ಇದ್ದರು ಎಂದು ಆರೋಪಿಗಳು ಹೇಳಿದ್ದರು' ಎಂದು ಗೊತ್ತಾಗಿದೆ.

'ಹಲ್ಲೆ ನಡೆಸಿದ ನಂತರ ದರ್ಶನ್ ಹಾಗೂ ಪವಿತ್ರಾಗೌಡ ಶೆಡ್‌ನಿಂದ ತೆರಳಿದ್ದರು. ನಂತರ ಉಳಿದ ಆರೋಪಿಗಳು ರೇಣುಕಸ್ವಾಮಿ ಮೇಲೆ ತೀವ್ರ ಹಲ್ಲೆ ನಡೆಸಿದ್ದರಿಂದ ಮೃತಪಟ್ಟಿದ್ದರು. ಅದಾದ ಮೇಲೆ ಮೃತದೇಹ ವಿಲೇವಾರಿಗೆ ಸುಪಾರಿ ನೀಡಲಾಗಿತ್ತು. ಹೊರರಾಜ್ಯಕ್ಕೆ ಮೃತದೇಹ ಕೊಂಡೊಯ್ದು ಎಸೆಯುವುದಾಗಿ ಆರೋಪಿಗಳು ದೀಪಕ್‌ಗೆ ತಿಳಿಸಿದ್ದರು. ಅದು ಸಾಧ್ಯವಾಗದ ಕಾರಣ ಸುಮನಹಳ್ಳಿಯ ಕಾಲುವೆಯಲ್ಲಿ ಹಾಕಿದ್ದರು' ಎಂದು ಪೊಲೀಸರು ಹೇಳಿದರು.

ರೇಣುಕಸ್ವಾಮಿ ಮೃತಪಟ್ಟ ಬಳಿಕ ಅಂದು ರಾತ್ರಿ ದರ್ಶನ್ ಹಾಗೂ ಆರೋಪಿಗಳ ನಡುವೆ ಹಲವು ಬಾರಿ ಮೊಬೈಲ್ ಸಂಭಾಷಣೆ ಹಾಗೂ ವಾಟ್ಸ್‌ಆ್ಯಪ್ ಚಾಟ್ ನಡೆದಿತ್ತು ಎಂದು ತನಿಖಾಧಿಕಾರಿ ತಿಳಿಸಿದ್ದಾರೆ.

**ಕೃತ್ಯದ ಜಾಗದಲ್ಲಿ ಸ್ಥಳ ಮಹಜರು:** ಆರೋಪಿಗಳಾದ ರಾಘವೇಂದ್ರ, ಕಾರ್ತಿಕ್, ನಿಖಿಲ್ ನಾಯಕ್, ಕೇಶವಮೂರ್ತಿಯನ್ನು ಬುಧವಾರ ಮಧ್ಯಾಹ್ನ ಸುಮನಹಳ್ಳಿ ಸೇತುವೆ ಬಳಿಗೆ ಕರೆದೊಯ್ದು ಸ್ಥಳ ಮಹಜರು ನಡೆಸಲಾಯಿತು. ಎಷ್ಟು ಗಂಟೆಗೆ ಮೃತದೇಹ ತಂದು ಎಸೆಯಲಾಯಿತು. ಯಾರೂ ಸೂಚಿಸಿದ್ದರು ಎಂಬ ಪ್ರಶ್ನೆಗಳನ್ನು ತನಿಖಾಧಿಕಾರಿಗಳು ಕೇಳಿದರು. ಸಂಜೆ ದರ್ಶನ್, ಪವಿತ್ರಾಗೌಡ ಸೇರಿದಂತೆ 13 ಆರೋಪಿಗಳನ್ನು ಪಟ್ಟಣಗೆರೆಯ ಶೆಡ್‌ಗೆ ಕರೆದೊಯ್ದು ಸ್ಥಳ ಮಹಜರು ನಡೆಸಲಾಯಿತು. ಇದಕ್ಕೂ ಮೊದಲು ಎಫ್‌ಎಸ್‌ಎಲ್ ತಂಡದವರು ಈ ಶೆಡ್‌ಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದರು. ಈ ವೇಳೆ ರಕ್ತದ ಕಲೆಗಳು ಇರುವುದು ಪತ್ತೆಯಾಗಿತ್ತು ಎಂದು ಮೂಲಗಳು ಹೇಳಿವೆ.

ನಿಖಿಲ್

ಪವನ್

ಕಾರ್ತಿಕ್

ನಾಗರಾಜ್

ನಂದೀಶ್

### ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹ

**ಬೆಂಗಳೂರು:** ಚಿತ್ರದುರ್ಗದ ರೇಣುಕಸ್ವಾಮಿಯವರ ಹತ್ಯೆಯನ್ನು ಖಂಡಿಸಿರುವ ಅಖಿಲ ಭಾರತ ವೀರಶೈವ ಮಹಾಸಭಾ, ಕೃತ್ಯ ಎಸಗಿದವರಿಗೆ ಮತ್ತು ಸಹಕಾರ ನೀಡಿದವರಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿದೆ.

ಯಾವುದೇ ಒತ್ತಡ, ಪ್ರಭಾವಕ್ಕೆ ಒಳಗಾಗಬಾರದು. ಆರೋಪಿ ಸ್ಥಾನದಲ್ಲಿರುವವರನ್ನು ರಕ್ಷಿಸದೇ ಸರ್ಕಾರವು ಜನಸಾಮಾನ್ಯರ ಪರವಾಗಿ ನಿಲ್ಲಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿದರೆ ಸರ್ಕಾರದ ವಿರುದ್ಧ ರಾಜ್ಯದಾದ್ಯಂತ ಹೋರಾಟ ಮಾಡಲು ನಿರ್ಧಾರ ಕೈಗೊಳ್ಳಲಾಗುವುದು. ಮೃತಪಟ್ಟಿರುವ ರೇಣುಕಸ್ವಾಮಿ ಅವರ ಕುಟುಂಬಕ್ಕೆ ಅಗತ್ಯ ನೆರವು ನೀಡಬೇಕು ಎಂದು ಮಹಾಸಭಾ ಕಾರ್ಯದರ್ಶಿ ಎಚ್.ಎಂ. ರೇಣುಕಪ್ರಸನ್ನ ಆಗ್ರಹಿಸಿದ್ದಾರೆ.

### ಅಭಿಮಾನಿಗಳ ಜಮಾವಣೆ: ಲಾಠಿ ಪ್ರಹಾರ

ಪೊಲೀಸ್ ಕಸ್ಟಡಿಯಲ್ಲಿರುವ ಆರೋಪಿ ದರ್ಶನ್, ಪವಿತ್ರಾಗೌಡ ಸೇರಿದಂತೆ 13 ಆರೋಪಿಗಳನ್ನು ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಯ ಸೆಲ್‌ನಲ್ಲಿ ವಿಚಾರಣೆ ನಡೆಸಲಾಗುತ್ತಿದೆ. ಆರೋಪಿಗಳನ್ನು ಅಲ್ಲಿಂದಲೇ ಸ್ಥಳ ಮಹಜರು ನಡೆಸಲು ಕರೆದೊಯ್ಯಲಾಗುತ್ತಿದೆ. ಆರೋಪಿಗಳನ್ನು ಕರೆದೊಯ್ಯುವ ಮಾರ್ಗದಲ್ಲಿ ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿಗಳು ಜಮಾವಣೆ ಆಗುತ್ತಿದ್ದಾರೆ. ಠಾಣೆ ಎದುರೂ ಬುಧವಾರ ಅಪಾರ ಸಂಖ್ಯೆಯಲ್ಲಿ ಜನರು ಸೇರಿದ್ದರು. ಸ್ಥಳದಿಂದ ತೆರಳುವಂತೆ ಪೊಲೀಸರು ಮನವಿ ಮಾಡಿದ್ದರೂ ಜನರು ಕದಲಿಲ್ಲ. ಗುಂಪು ಚದುರಿಸಲು ಪೊಲೀಸರು, ಲಘು ಲಾಠಿ ಪ್ರಹಾರ ನಡೆಸಿದರು. ಆಗ ಜನರು ದಿಕ್ಕಾಪಾಲಾಗಿ ಓಡಿದರು. ಠಾಣೆಯ ಸುತ್ತಮುತ್ತ ಭದ್ರತೆಗೆ ಕೆಎಸ್‌ಆರ್‌ಪಿ ತುಕಡಿ ನಿಯೋಜಿಸಲಾಗಿದೆ.

### 'ದರ್ಶನ್ ಕೃತ್ಯ ಎಸಗಿಲ್ಲ'

ಬುಧವಾರ ಬೆಳಿಗ್ಗೆ ಅನ್ನಪೂರ್ಣೇಶ್ವರಿನಗರ ಠಾಣೆಗೆ ಆಗಮಿಸಿದ್ದ ನಟನ ಪರ ವಕೀಲ ನಾರಾಯಣಸ್ವಾಮಿ ಅವರೊಂದಿಗೆ ದರ್ಶನ್ ಅವರು ಕೆಲ ಸಮಯ ಚರ್ಚಿಸಿದರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ನಾರಾಯಣಸ್ವಾಮಿ, 'ಕೃತ್ಯ ನಡೆದ ಸ್ಥಳಕ್ಕೆ ಹೋಗಿದ್ದ ಮಾತ್ರಕ್ಕೆ ದರ್ಶನ್ ಕೊಲೆ ಮಾಡಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ. ದರ್ಶನ್ ಕೃತ್ಯ ಎಸಗಿದ್ದಾರೆ ಎಂಬುದು ಸರಿಯಲ್ಲ. ರೇಣುಕಸ್ವಾಮಿಗೆ ಆರೋಗ್ಯ ಸಮಸ್ಯೆ ಇತ್ತು ಎಂದು ಹೇಳಲಾಗಿದೆ. ಅಲ್ಲದೆ, ರೇಣುಕಸ್ವಾಮಿ ಮೇಲೆ ಕಂಡು ಬಂದಿರುವ ಗಾಯದ ಗುರುತುಗಳು ನಾಯಿ ಕಚ್ಚಿರುವುದು. ಎಲ್ಲವೂ ಕೋರ್ಟ್‌ನಲ್ಲಿ ತೀರ್ಮಾನವಾಗಲಿದೆ' ಎಂದು ಹೇಳಿದರು.

## ದೇವದಾರಿಯಲ್ಲಿ ಗಣಿಗಾರಿಕೆ: ಎಚ್‌ಡಿಕೆ ಒಪ್ಪಿಗೆ

ಒಂದನೇ ಪುಟದಿಂದ...

ದೇವದಾರಿ ಯೋಜನೆಗೆ ಕೇಂದ್ರ ಹಣಕಾಸು ಸಚಿವಾಲಯದಿಂದ ಇನ್ನಷ್ಟೇ ಅನುಮೋದನೆ ಸಿಗಬೇಕಿದೆ. ಈ ಯೋಜನೆಗೆ ಕರ್ನಾಟಕ ಸರ್ಕಾರ ಸಹ ಒಪ್ಪಿಗೆ ನೀಡಬೇಕಿದೆ. ಕುಮಾರಸ್ವಾಮಿ ಅವರು ಸಚಿವರಾಗಿ ಕರ್ನಾಟಕಕ್ಕೆ ಸಂಬಂಧಿಸಿದ ಮೊದಲ ಕಡತಕ್ಕೆ ಸಹಿ ಹಾಕಿದ್ದಾರೆ. ಇಲ್ಲಿ ಗಣಿಗಾರಿಕೆ ನಡೆಸುವುದಕ್ಕೆ ಸಮಾಜ ಪರಿವರ್ತನ ಸಮುದಾಯ ಹಾಗೂ ಪರಿಸರ ಹೋರಾಟಗಾರರು ಈಗಾಗಲೇ ವಿರೋಧ ವ್ಯಕ್ತಪಡಿಸಿದ್ದಾರೆ.

ಈ ಯೋಜನೆಗೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯವು ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಎರಡನೇ ಹಂತದ ಅನುಮೋದನೆಯನ್ನು ಕಳೆದ ವರ್ಷ ನೀಡಿತ್ತು. ಕಂಪನಿಯು 388 ಹೆಕ್ಟೇರ್‌ನಲ್ಲಿ 50 ವರ್ಷಗಳ ಕಾಲ ಗಣಿಗಾರಿಕೆ ನಡೆಸಲು ಗಣಿ ಹಾಗೂ ಭೂವಿಜ್ಞಾನ ಇಲಾಖೆಯಿಂದ ಅನುಮೋದನೆ ಪಡೆದಿದೆ.

ಸುಪ್ರೀಂ ಕೋರ್ಟ್ ಆದೇಶದ ಕಾರಣ, ಕುದುರೆಮುಖದಲ್ಲಿ ಕಂಪನಿಯು 2006ರಲ್ಲಿ ಗಣಿಗಾರಿಕೆಯನ್ನು ಸ್ಥಗಿತಗೊಳಿಸಿತ್ತು. ಪ್ರಸ್ತುತ ತನ್ನ ಮಂಗಳೂರಿನಲ್ಲಿರುವ ಸ್ಥಾವರಕ್ಕಾಗಿ ಛತ್ತೀಸಗಢದಿಂದ ಸಿಗುವ ಅದಿರನ್ನು ಅವಲಂಬಿಸಿದೆ. 2024–2025ನೇ ಸಾಲಿನಲ್ಲಿ ದೇವದಾರಿಯಲ್ಲಿ 3 ಲಕ್ಷ ಟನ್‌ಗಳಷ್ಟು ಗಣಿಗಾರಿಕೆ ನಡೆಸುವ ಯೋಜನೆಯನ್ನು ಕೆಐಒಸಿಎಲ್ ಹೊಂದಿದೆ.

ಉಕ್ಕು ಸಚಿವಾಲಯದ ಕಾರ್ಯದರ್ಶಿ ನಾಗೇಂದ್ರನಾಥ ಸಿನ್ಹಾ ಸೇರಿ ಉನ್ನತ ಅಧಿಕಾರಿಗಳ ಜತೆ ಸಭೆ ನಡೆಸಿದ ಸಚಿವರು, 'ಉತ್ಪಾದನೆಯಲ್ಲಿ ಕ್ಷಮತೆ ತರಬೇಕು. ನಿಗದಿತ ಗುರಿ ಮುಟ್ಟಬೇಕು' ಎಂದು ಸೂಚಿಸಿದರು. ಕುದುರೆಮುಖ ವಿಷಯದ ಬಗ್ಗೆ ಸಚಿವರು ಮತ್ತೆ ಪ್ರಸ್ತಾಪ ಮಾಡಿದರು. ಭದ್ರಾವತಿ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯ ಬಗ್ಗೆಯೂ ಸಮಾಲೋಚನೆ ನಡೆಸಿದರು.

### ಟೆಸ್ಲಾ ಒಲವು: ಸಚಿವರಿಗೆ ಮಾಹಿತಿ

'ಭಾರತಕ್ಕೆ ಬರುವುದಕ್ಕೆ ಟೆಸ್ಲಾ ಒಲವು ತೋರಿದೆ. ಅದಕ್ಕೆ ಕೆಲವು ರಿಯಾಯಿತಿಗಳನ್ನು ಕೇಳಿದೆ. ಅದಕ್ಕೆ ಅಗತ್ಯವಾದ ನಿರ್ಧಾರಗಳನ್ನು ಕೈಗೊಳ್ಳಬೇಕಿದೆ' ಎಂದು ಸಚಿವರಿಗೆ ಅಧಿಕಾರಿಗಳು ಮಾಹಿತಿ ನೀಡಿದರು.

ತುಮಕೂರು ಇಂಡಸ್ಟ್ರಿಯಲ್ ಪಾರ್ಕ್, ಎಚ್‌ಎಂಟಿ ಕಾರ್ಖಾನೆಯ ಪರಿಸ್ಥಿತಿ ಬಗ್ಗೆ ಸಚಿವರು ವಿವರಗಳನ್ನು ಪಡೆದರು. ದೇಶದಾದ್ಯಂತ ಸುಸ್ಥಿತಿಯಲ್ಲಿರುವ ಹಾಗೂ ರೋಗಗ್ರಸ್ತ ಘಟಕಗಳ ಬಗ್ಗೆ ಮಾಹಿತಿಯನ್ನೂ ಪಡೆದರು.

## ರಾಜ್ಯದಲ್ಲಿ ಪಿಯು ಪಠ್ಯಪುಸ್ತಕಗಳ ಅಭಾವ

ಒಂದನೇ ಪುಟದಿಂದ....

**ಮುದ್ರಣವೇ ವಿಳಂಬ:** '2024–25ನೇ ಸಾಲಿಗೆ ಬೇಡಿಕೆ ಇರುವ ಪಿಯು ಪಠ್ಯಪುಸ್ತಕಗಳನ್ನು ಮುದ್ರಿಸಿಕೊಡಲು ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯ ಇದೇ ಜನವರಿ ಅಂತ್ಯದಲ್ಲಿ ಕರ್ನಾಟಕ ಪಠ್ಯಪುಸ್ತಕ ಸಂಘಕ್ಕೆ ಬೇಡಿಕೆ ಸಲ್ಲಿಸಿದೆ. ಆದರೆ, ಸಂಘ ಇದುವರೆಗೂ ಪಠ್ಯಪುಸ್ತಕ ಪೂರೈಸಿಲ್ಲ. ಇದರಿಂದ ಪಠ್ಯಪುಸ್ತಕಗಳ ಕೊರತೆ ಎದುರಾಗಿದೆ' ಎನ್ನುವುದು ಪಿಯು ನಿರ್ದೇಶನಾಲಯದ ಅಧಿಕಾರಿಗಳ ಆರೋಪ.

'ಪಿಯು ನಿರ್ದೇಶನಾಲಯ ತಡವಾಗಿ ಬೇಡಿಕೆ ಸಲ್ಲಿಸಿತ್ತು. ಟೆಂಡರ್ ಪ್ರಕ್ರಿಯೆ ಆರಂಭಿಸುವ ಮೊದಲೇ ನೀತಿ ಸಂಹಿತೆ ಜಾರಿಯಾಯಿತು. ಹಾಗಾಗಿ, ವಿಳಂಬವಾಗಿದೆ' ಎನ್ನುವುದು ಪಠ್ಯ ಪುಸ್ತಕ ಸಂಘದ ಅಧಿಕಾರಿಗಳ ಸಮರ್ಥನೆ.

**ಈಗಿರುವ ಪಠ್ಯ ಈ ವರ್ಷವೇ ಕೊನೆ:** ಪ್ರಸಕ್ತ ಪಿಯು ಕಾಲೇಜುಗಳಲ್ಲಿ ಬೋಧಿಸುತ್ತಿರುವುದು ಒಂದು ದಶಕದ ಹಿಂದಿನ ಪಠ್ಯಪುಸ್ತಕಗಳು. ಈ ಪಠ್ಯಗಳು 2024–25ನೇ ಶೈಕ್ಷಣಿಕ ಸಾಲಿಗೆ ಕೊನೆಯಾಗಲಿವೆ. ಸರ್ಕಾರವು ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ರಾಜ್ಯ ಶಿಕ್ಷಣ ನೀತಿ ಆಯೋಗ ರಚಿಸಿದ್ದು, ಇದೇ ಆಗಸ್ಟ್‌ನಲ್ಲಿ ಆಯೋಗ ತನ್ನ ಅಂತಿಮ ವರದಿ ಸಲ್ಲಿಸಲಿದೆ. ವರದಿಯ ಶಿಫಾರಸಿನ ಆಧಾರದಲ್ಲಿ ಹೊಸ ಪಠ್ಯಕ್ರಮ ಚೌಕಟ್ಟು ಸಿದ್ಧವಾಗಲಿದೆ. ಹಾಗಾಗಿ, ಈ ಬಾರಿ ಹಳೆಯ ಪಠ್ಯಕ್ರಮದ ಪುಸ್ತಕಗಳನ್ನು ಅಗತ್ಯವಿರುವಷ್ಟೇ ಮುದ್ರಿಸಲು ಬೇಡಿಕೆ ಸಲ್ಲಿಸಲಾಗಿದೆ.

### ಒಂದು ತರಗತಿಗೆ 100 ವಿದ್ಯಾರ್ಥಿಗಳು

ಎಸ್‌ಎಸ್‌ಎಲ್‌ಸಿಗೆ ಮೂರು ಪರೀಕ್ಷೆಗಳನ್ನು ನಡೆಸುತ್ತಿರುವುದರಿಂದ ಪಿಯು ಕಾಲೇಜಿಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಳವಾಗಲಿದೆ. ಹಾಗಾಗಿ, ಅನುದಾನಿತ ಹಾಗೂ ಖಾಸಗಿ ಕಾಲೇಜುಗಳು ಪ್ರತಿ ತರಗತಿಗೆ ಇರಬೇಕಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು 80ರಿಂದ 100ಕ್ಕೆ ಹೆಚ್ಚಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (ಪದವಿಪೂರ್ವ) ಆದೇಶ ಹೊರಡಿಸಿದೆ.

ಹೆಚ್ಚುವರಿ ಪ್ರವೇಶ ನೀಡುವ ಕಾಲೇಜುಗಳು ನಿಯಮದಂತೆ ಅರ್ಜಿ ಸಲ್ಲಿಸಿ, ಅನುಮೋದನೆ ಪಡೆಯಲು ಸೂಚಿಸಲಾಗಿದೆ.

**ನೀತಿ ಸಂಹಿತೆಯ ಕಾರಣ ಟೆಂಡರ್ ಪ್ರಕ್ರಿಯೆಗಳು ವಿಳಂಬವಾಗಿವೆ. ಈಗ ಮುದ್ರಣ ಕಾರ್ಯ ಪ್ರಗತಿಯಲ್ಲಿದ್ದು, 15 ದಿನಗಳ ಒಳಗೆ ಪಠ್ಯಪುಸ್ತಕಗಳು ಲಭ್ಯವಾಗಲಿವೆ**
**ಪ್ರೇಮಾ, ಅಧ್ಯಕ್ಷೆ**
ಕರ್ನಾಟಕ ಪಠ್ಯ ಪುಸ್ತಕ ಸಂಘ

# ಸಿ.ಎಂ ಗದ್ದುಗೆಗೆ ನಾಯ್ಡು, ಪವನ್‌ಗೆ ಮಂತ್ರಿಗಿರಿ

## ಎನ್‌ಡಿಎ ಒಗ್ಗಟ್ಟಿಗೆ ವೇದಿಕೆಯಾದ ಪ್ರಮಾಣ ವಚನ ಸಮಾರಂಭ; ಸಿನಿಮಾ ತಾರೆಯರು, ಕೇಂದ್ರ ಸಚಿವರು ಭಾಗಿ

ಪ್ರಜಾವಾಣಿ ವಾರ್ತೆ/ಪಿಟಿಐ

**ಅಮರಾವತಿ:** ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಅವರು ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾನ ವಚನ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ಜೆ.ಪಿ.ನಡ್ಡಾ, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂದೆ ಸೇರಿದಂತೆ ಬಿಜೆಪಿ ಮುಖಂಡರು ಭಾಗವಹಿಸಿದ್ದರು.

ಇದೇ ವೇಳೆ ಜನಸೇನಾ ಮುಖ್ಯಸ್ಥ, ನಟ ಪವನ್ ಕಲ್ಯಾಣ್, ಚಂದ್ರಬಾಬು ನಾಯ್ಡು ಪುತ್ರ ನಾರಾ ಲೋಕೇಶ್ ಸೇರಿದಂತೆ ಹಲವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. 25 ಸದಸ್ಯರ ಸಚಿವ ಸಂಪುಟದಲ್ಲಿ ಪವನ್ ಕಲ್ಯಾಣ ಅವರ ನೇತೃತ್ವದ ಜನಸೇನಾದಿಂದ ಮೂವರು ಹಾಗೂ ಬಿಜೆಪಿಯಿಂದ ಒಬ್ಬರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ರಾಜ್ಯಪಾಲರಾದ ಎಸ್.ಅಬ್ದುಲ್ ನಜೀರ್ ನೂತನ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು.

ಪ್ರಮಾಣ ವಚನ ಸ್ವೀಕರಿಸಿದ ನಂತರ ಚಂದ್ರಬಾಬು ನಾಯ್ಡು ಅವರನ್ನು ಪ್ರಧಾನಿ ನರೇಂದ್ರ ಮೋದಿ ಆಲಂಗಿಸಿಕೊಂಡು ಅಭಿನಂದಿಸಿದರು. ನಂತರ ಪ್ರಧಾನಿ, ತೆಲುಗು ನಟ ಚಿರಂಜೀವಿ ಹಾಗೂ ಪವನ್ ಕಲ್ಯಾಣ್ ಅವರ ಕೈಗಳನ್ನು ಹಿಡಿದು ಆತ್ಮೀಯತೆಯಿಂದ ಕುಶಲೋಪರಿ ನಡೆಸಿದರು. ವೇದಿಕೆಯ ಮೇಲಿದ್ದ ತಮಿಳುನಾಡು ಮಾಜಿ ಮುಖ್ಯಮಂತ್ರಿ ಓ. ಪನ್ನೀರ್‌ಸೆಲ್ವಂ, ನಟ ರಜನಿಕಾಂತ್ ಮತ್ತು ಅವರ ಪತ್ನಿ ಲತಾ ಅವರೊಂದಿಗೂ ಪ್ರಧಾನಿ ಆತ್ಮೀಯತೆಯಿಂದ ಮಾತನಾಡಿದರು.

ಎನ್. ಚಂದ್ರಬಾಬು ನಾಯ್ಡು ಅವರು ನಾಲ್ಕನೇ ಬಾರಿ ಮುಖ್ಯಮಂತ್ರಿಯಾಗಿದ್ದಾರೆ. ಎರಡು ಬಾರಿ ಅವಿಭಜಿತ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದರು. ರಾಜ್ಯ ವಿಭಜನೆಯಾದ ನಂತರ ಈಗ ಎರಡನೇ ಬಾರಿಗೆ ಮುಖ್ಯಮಂತ್ರಿ ಸ್ಥಾನ ಅಲಂಕರಿಸಿದ್ದಾರೆ.

ರಾಜ್ಯದಲ್ಲಿ ನಡೆದ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಎನ್‌ಡಿಎ ಕೂಟವು ಭರ್ಜರಿ ಗೆಲುವು ಸಾಧಿಸಿತ್ತು. ವಿಧಾನಸಭಾ ಚುನಾವಣೆಗಳಲ್ಲಿ 175 ಸ್ಥಾನಗಳ ಪೈಕಿ 164 ಸ್ಥಾನ ಮತ್ತು 25 ಲೋಕಸಭಾ ಸ್ಥಾನಗಳ ಪೈಕಿ 21 ಸ್ಥಾನ ಗೆದ್ದಿತ್ತು.

ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಎನ್. ಚಂದ್ರಬಾಬು ನಾಯ್ಡು ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಆಲಂಗಿಸಿಕೊಂಡರು –ಪಿಟಿಐ ಚಿತ್ರ

### ‘ಡಿಸಿಎಂ ಪವನ್’ ಎಂದ ಶಾ, ಚಿರಂಜೀವಿ

ಜನಸೇನಾ ಮುಖಂಡ, ನಟ ಪವನ್ ಕಲ್ಯಾಣ್ ಅವರು ಚಂದ್ರಬಾಬು ನಾಯ್ಡು ಸಂಪುಟದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅವರು ಉಪಮುಖ್ಯಮಂತ್ರಿ ಆಗಬಹುದು ಎನ್ನುವ ವದಂತಿಗಳಿದ್ದರೂ ಅಧಿಕೃತವಾಗಿ ಅವರು ಇನ್ನೂ ಕೇವಲ ಸಚಿವರು ಮಾತ್ರ. ಆದರೆ, ಪವನ್ ಅವರನ್ನು ಕೇಂದ್ರ ಸಚಿವ ಅಮಿತ್ ಶಾ ಮತ್ತು ನಟ ಚಿರಂಜೀವಿ ಸಾಮಾಜಿಕ ಜಾಲತಾಣದ ಪ್ರತ್ಯೇಕ ಪೋಸ್ಟ್‌ಗಳಲ್ಲಿ ಉಪಮುಖ್ಯಮಂತ್ರಿ ಎಂದು ಉಲ್ಲೇಖಿಸಿದ್ದಾರೆ.

‘ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡುಜೀ, ಉಪಮುಖ್ಯಮಂತ್ರಿ ಪವನ್ ಕಲ್ಯಾಣ್‌ಜೀ ಮತ್ತು ಪ್ರಮಾಣ ವಚನ ಸ್ವೀಕರಿಸಿದ ಎಲ್ಲ ಸಚಿವರಿಗೂ ಅಭಿನಂದನೆಗಳು’ ಎಂದು ಕೇಂದ್ರ ಸಚಿವ ಅಮಿತ್ ಶಾ ಅವರು ಪೋಸ್ಟ್ ಮಾಡಿದ್ದಾರೆ.

ಇದೇ ರೀತಿ ಪವನ್ ಕಲ್ಯಾಣ್ ಅವರ ಅಣ್ಣ, ನಟ ಚಿರಂಜೀವಿ ಕೂಡ ಪೋಸ್ಟ್ ಮಾಡಿದ್ದು, ‘ಉಪಮುಖ್ಯಮಂತ್ರಿ ಕೊನಿಡೇಲ ಪವನ್ ಕಲ್ಯಾಣ್ ಮತ್ತು ಸಂಪುಟದ ಇತರರಿಗೆ ಅಭಿನಂದನೆಗಳು’ ಎಂದು ಉಲ್ಲೇಖಿಸಿದ್ದಾರೆ.

### ‘ಮೆಗಾ’ ಸೋದರರ ಮೂಲಕ ಮೋದಿ ಸಂದೇಶ

ಆಂಧ್ರಪ್ರದೇಶದ ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭ ಕುತೂಹಲಕಾರಿ ವಿದ್ಯಮಾನಕ್ಕೆ ಸಾಕ್ಷಿಯಾಯಿತು. ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಪವನ್ ಕಲ್ಯಾಣ್ ಅವರು ವೇದಿಕೆಯ ಇನ್ನೊಂದು ಬದಿ ಇದ್ದ ತಮ್ಮ ಅಣ್ಣ ಚಿರಂಜೀವಿ ಅವರನ್ನು ಭೇಟಿ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೋರಿದರು. ಅದರಂತೆ ಮೋದಿ ಅವರು ಚಿರಂಜೀವಿ ಅವರನ್ನು ಭೇಟಿ ಮಾಡಿದ್ದಷ್ಟೇ ಅಲ್ಲ, ಜನರ ಕಡೆ ತಿರುಗಿ ತಮ್ಮ ಎಂದಿನ ಶೈಲಿಯಲ್ಲಿ ಚಿರಂಜೀವಿ ಮತ್ತು ಪವನ್ ಕಲ್ಯಾಣ್ ಅವರ ಕೈಗಳನ್ನು ಹಿಡಿದು ಮೇಲೆತ್ತಿದರು.

ಮೋದಿ ಅವರು ಈ ಮೂಲಕ ಆಂಧ್ರಪ್ರದೇಶದ ಜನತೆಗೆ ಒಂದು ಸಂದೇಶ ರವಾನಿಸಿದರು. ಆಂಧ್ರಪ್ರದೇಶದಲ್ಲಿ ಪವನ್ ಕಲ್ಯಾಣ್ ಒಂದು ರಾಜಕೀಯ ಶಕ್ತಿಯಾಗಿ ರೂಪುತಳೆದಿದ್ದು, ಎನ್‌ಡಿಎ ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಪವನ್ ಮತ್ತು ಚಿರಂಜೀವಿ ಆಂಧ್ರಪ್ರದೇಶದ ಕಾಪು ಸಮುದಾಯಕ್ಕೆ ಸೇರಿದ್ದು, ಅದು ರಾಜ್ಯದಲ್ಲಿ ಶೇ 15ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಸಮುದಾಯವು ಈ ಬಾರಿಯ ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎಗೆ ಮತ ಚಲಾಯಿಸಿದೆ. ಸಮುದಾಯದ ನಾಯಕರಾಗಿ ಪವನ್ ಕಲ್ಯಾಣ್ ಗುರುತಿಸಿಕೊಂಡಿದ್ದು, ಅದನ್ನು ಗುರುತಿಸಿಯೇ ಬಿಜೆಪಿ ಅವರ ಬೆನ್ನಿಗೆ ನಿಂತಿದೆ.

ಜನವರಿಯಲ್ಲಿ ಚಿರಂಜೀವಿ ಅವರಿಗೆ ಮೋದಿ ಸರ್ಕಾರ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತ್ತು. ಇದೆಲ್ಲವೂ ಬಿಜೆಪಿ ದಕ್ಷಿಣದಲ್ಲಿ ಬಲ ವೃದ್ಧಿಸಿಕೊಳ್ಳಲು ನಡೆಸುತ್ತಿರುವ ಚಟುವಟಿಕೆಗಳಾಗಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

### ತಮಿಳ್‌ಇಸೈಗೆ ಅಮಿತ್ ಶಾ ‘ಎಚ್ಚರಿಕೆ’

ಪ್ರಜಾವಾಣಿ ವಾರ್ತೆ

**ಚೆನ್ನೈ:** ವಿಜಯವಾಡದಲ್ಲಿ ಬುಧವಾರ ನಡೆದ ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ತಮಿಳುನಾಡಿನ ಬಿಜೆಪಿಯ ಆಂತರಿಕ ಭಿನ್ನಾಭಿಪ್ರಾಯದ ವಿಷಯ ಪ್ರಸ್ತಾಪವಾಗಿದೆ.

ಲೋಕಸಭಾ ಚುನಾವಣೆಯಲ್ಲಿ ಪಕ್ಷವು ತಮಿಳುನಾಡಿನಲ್ಲಿ ಯಾವುದೇ ಕ್ಷೇತ್ರಗಳಲ್ಲಿ ಗೆಲುವು ಸಾಧಿಸದ ಬಗ್ಗೆ ಬಹಿರಂಗ ಹೇಳಿಕೆಗಳನ್ನು ನೀಡುತ್ತಿರುವ ಬಿಜೆಪಿ ನಾಯಕಿ ತಮಿಳ್‌ಇಸೈ ಸೌಂದರರಾಜನ್ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ‘ಎಚ್ಚರಿಕೆ’ ನೀಡಿದ್ದಾರೆ.

ವೇದಿಕೆ ಮೇಲೆ ತಮಿಳ್‌ಇಸೈ ಅವರಿಗೆ ಅಮಿತ್ ಶಾ ‘ಎಚ್ಚರಿಕೆ’ ನೀಡುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಜಾಲತಾಣಗಳ ವೇದಿಕೆಗಳಲ್ಲಿ ತಮಿಳ್‌ಇಸೈ ಮತ್ತು ಅಣ್ಣಾಮಲೈ ಬೆಂಬಲಿಗರ ನಡುವೆ ಸಂಘರ್ಷ ನಡೆಯುತ್ತಿರುವುದರ ಹಿನ್ನೆಲೆಯಲ್ಲಿ ಈ ವಿಡಿಯೊ ಅನ್ನು ವಿಶ್ಲೇಷಿಸಲಾಗುತ್ತಿದೆ.

ತೆಲಂಗಾಣದ ಮಾಜಿ ರಾಜ್ಯಪಾಲರಾದ ತಮಿಳ್‌ಇಸೈ ಅವರು ತಮಿಳುನಾಡು ಬಿಜೆಪಿ ಘಟಕದ ವಿರುದ್ಧ ಟೀಕೆ ಮಾಡಿದ್ದರು. ಅಪರಾಧ ಹಿನ್ನೆಲೆಯ ಜನ ಪಕ್ಷದಲ್ಲಿ ಸೇರಿದ್ದಾರೆ ಎಂದು ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದರು. ಅದರ ಬಗ್ಗೆ ಬೇಸರಗೊಂಡಿದ್ದ ಅಮಿತ್ ಶಾ ಅವರು, ‘ಪಕ್ಷದ ವಿಚಾರಗಳ ಬಗ್ಗೆ ಸಾರ್ವಜನಿಕ ವೇದಿಕೆಗಳಲ್ಲಿ ಮಾತನಾಡಬಾರದು’ ಎಂಬುದಾಗಿ ಎಚ್ಚರಿಕೆ ನೀಡಿದ್ದಾರೆ.

ವಿಜಯವಾಡದಲ್ಲಿ ನಡೆದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ತಮಿಳ್‌ಇಸೈ ಸೌಂದರರಾಜನ್ ಅವರಿಗೆ ‘ಎಚ್ಚರಿಕೆ’ ನೀಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ –ಪಿಟಿಐ ಚಿತ್ರ

## ಮಾಝಿ ಪ್ರಮಾಣ ವಚನ ಸ್ವೀಕಾರ

ಒಡಿಶಾದ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿದ ಮೋಹನ್ ಚರಣ್ ಮಾಝಿ ಅವರು ದಾಖಲೆಗಳಿಗೆ ಸಹಿ ಹಾಕಿದರು–ಪಿಟಿಐ ಚಿತ್ರ

**ಭುವನೇಶ್ವರ (ಪಿಟಿಐ):** ನಾಲ್ಕು ಬಾರಿ ಶಾಸಕ ಹಾಗೂ ಬುಡಕಟ್ಟು ನಾಯಕ ಮೋಹನ್ ಚರಣ್ ಮಾಝಿ ಅವರು ಒಡಿಶಾದ ಮೊದಲ ಬಿಜೆಪಿ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರು ಹಾಗೂ ಹಲವು ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಿದ್ದರು.

ಹಿರಿಯ ಬಿಜೆಪಿ ನಾಯಕ ಮತ್ತು ಪಟ್ನಾಗಢ ಶಾಸಕ ಕೆ.ವಿ.ಸಿಂಗ್ ಡಿಯೋ ಹಾಗೂ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿರುವ ನಿಮಪಾರ ಕ್ಷೇತ್ರದ ಪ್ರವತಿ ಪರಿದಾ ಉಪಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಜನತಾ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ರಘುಬರ್ ದಾಸ್ ನೂತನ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು.

ಕೇಂದ್ರ ಸಚಿವರಾದ ಅಮಿತ್ ಶಾ, ರಾಜ್‌ನಾಥ್ ಸಿಂಗ್, ಭೂಪೇಂದರ್ ಯಾದವ್, ಧರ್ಮೇಂದ್ರ ಪ್ರಧಾನ್, ಜುಯಲ್ ಓರಮ್, ಅಶ್ವಿನಿ ವೈಷ್ಣವ್ ಭಾಗವಹಿಸಿದ್ದರು. ಒಡಿಶಾದ ನಿರ್ಗಮಿತ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಸೇರಿದಂತೆ ಉತ್ತರ ಪ್ರದೇಶ, ಗೋವಾ, ರಾಜಸ್ಥಾನ, ಮಧ್ಯಪ್ರದೇಶ, ಅಸ್ಸಾಂ, ಗುಜರಾತ್, ಛತ್ತೀಸಗಢ ಮತ್ತು ಉತ್ತರಾಖಂಡದ ಮುಖ್ಯಮಂತ್ರಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

### ಅರುಣಾಚಲ: ಪೇಮಾ ಖಂಡು ಪುನರಾಯ್ಕೆ

**ಇಟಾನಗರ (ಪಿಟಿಐ):** ಅರುಣಾಚಲ ಪ್ರದೇಶದ ಮುಖ್ಯಮಂತ್ರಿಯಾಗಿ ಬಿಜೆಪಿ ನಾಯಕ ಪೇಮಾ ಖಂಡು ಅವರು ಪುನರಾಯ್ಕೆಯಾಗಿದ್ದಾರೆ ಎಂದು ಪಕ್ಷದ ಹಿರಿಯ ಮುಖಂಡ ತರುಣ್ ಛುಗ್ ಹೇಳಿದರು.

ಪೇಮಾ ಖಂಡು

ಬುಧವಾರ ಇಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡಲಾಯಿತು. ಅವರು ಮೂರನೇ ಬಾರಿ ರಾಜ್ಯದ ಮುಖ್ಯಮಂತ್ರಿಯಾಗಲಿದ್ದಾರೆ.

ಛುಗ್ ಮತ್ತು ರವಿಶಂಕರ್ ಪ್ರಸಾದ್ ಅವರು ಕೇಂದ್ರದಿಂದ ಪಕ್ಷದ ವೀಕ್ಷಕರಾಗಿ ಸಭೆಯಲ್ಲಿ ಭಾಗವಹಿಸಿದ್ದರು. ಈಶಾನ್ಯ ರಾಜ್ಯದವರೇ ಆಗಿರುವ ಕೇಂದ್ರ ಸಚಿವ ಕಿರಣ್ ರಿಜಿಜು ಅವರೂ ಕೂಡ ಹಾಜರಿದ್ದರು.

ನಂತರ ಸಂಜೆ ಪೇಮಾ ಖಂಡು ಅವರು ಛುಗ್ ಮತ್ತು ಇತರ ಕೆಲವು ಶಾಸಕರೊಂದಿಗೆ ರಾಜ್ಯಪಾಲರಾದ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಕೆ.ಟಿ. ಪರ್ನಾಯಕ್ ಅವರನ್ನು ರಾಜಭವನದಲ್ಲಿ ಭೇಟಿ ಮಾಡಿ, ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ರಾಜ್ಯಪಾಲರು ಪೇಮಾ ಖಂಡು ಅವರಿಗೆ ಪ್ರಮಾಣ ವಚನ ಸ್ವೀಕರಿಸುವಂತೆ ಆಹ್ವಾನಿಸಿದರು.

ಬಿಜೆಪಿ ಸತತ ಮೂರನೇ ಬಾರಿಗೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿದ್ದು, 60 ಸ್ಥಾನಗಳ ಪೈಕಿ 46 ಸ್ಥಾನಗಳನ್ನು ಗೆದ್ದಿದೆ.

# ರಾಯ್‌ಬರೇಲಿಯತ್ತ ರಾಹುಲ್ ಚಿತ್ತ

**ವಯನಾಡ್/ಮಲಪ್ಪುರಂ (ಪಿಟಿಐ):** 2024ರ ಲೋಕಸಭಾ ಚುನಾವಣೆಯಲ್ಲಿ ವಯನಾಡ್ ಮತ್ತು ರಾಯ್‌ಬರೇಲಿ ಎರಡೂ ಕ್ಷೇತ್ರಗಳಿಂದ ಗೆದ್ದಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಈ ಪೈಕಿ ವಯನಾಡ್ ಕ್ಷೇತ್ರವನ್ನು ಬಿಟ್ಟುಕೊಟ್ಟು, ರಾಯ್‌ಬರೇಲಿ ಕ್ಷೇತ್ರವನ್ನು ಉಳಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಕೇರಳ ಕಾಂಗ್ರೆಸ್ ಘಟಕದ ಅಧ್ಯಕ್ಷರಾದ ಸುಧಾಕರನ್ ಬುಧವಾರ ತಿಳಿಸಿದರು.



ರಾಹುಲ್ ಗಾಂಧಿ

ರಾಹುಲ್ ಗಾಂಧಿ ಅವರ ಬೆಂಬಲಿಗರಿಗೆ ಧನ್ಯವಾದ ತಿಳಿಸಲು ಇಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಇದಕ್ಕಾಗಿ ನಾವು ಬೇಸರ ಪಟ್ಟುಕೊಳ್ಳಬಾರದು. ದೇಶವನ್ನು ಮುನ್ನಡೆಸಬೇಕಿರುವ ರಾಹುಲ್ ವಯನಾಡ್‌ನಲ್ಲಿ ಉಳಿಯಲು ಸಾಧ್ಯವಿಲ್ಲ. ನಾವೆಲ್ಲ ಇದನ್ನು ಅರ್ಥ ಮಾಡಿಕೊಂಡು, ಅವರಿಗೆ ಆಶೀರ್ವಾದ ಮತ್ತು ಬೆಂಬಲ ನೀಡಬೇಕಿದೆ’ ಎಂದು ಹೇಳಿದರು.

ಇದಕ್ಕೂ ಮುನ್ನ ಮಲಪ್ಪುರಂನಲ್ಲಿ ಮಾತನಾಡಿದ್ದ ರಾಹುಲ್ ಗಾಂಧಿ ಅವರು, ’ಎರಡೂ ಕ್ಷೇತ್ರಗಳ ಪೈಕಿ ಯಾವ ಕ್ಷೇತ್ರವನ್ನು ಉಳಿಸಿಕೊಳ್ಳಬೇಕು ಎನ್ನುವ ಬಗ್ಗೆ ಗೊಂದಲದಲ್ಲಿ ಸಿಲುಕಿದ್ದೇನೆ. ಯಾವುದೇ ನಿರ್ಧಾರ ಕೈಗೊಂಡರೂ, ಎರಡು ಕ್ಷೇತ್ರಗಳ ಜನ ಅದನ್ನು ಖುಷಿಯಿಂದ ಸ್ವೀಕರಿಸುತ್ತಾರೆ ಎನ್ನುವ ವಿಶ್ವಾಸವಿದೆ‘ ಎಂದು ಹೇಳಿದ್ದರು.

ವಯನಾಡ್ ಕ್ಷೇತ್ರದಿಂದ ಎರಡನೆಯ ಬಾರಿಗೆ ಭಾರಿ ಅಂತರದಿಂದ ಗೆಲುವು ಸಾಧಿಸಿದ ನಂತರ ರಾಹುಲ್ ಮೊದಲ ಬಾರಿಗೆ ಕ್ಷೇತ್ರಕ್ಕೆ ಭೇಟಿ ನೀಡಿದ್ದರು.

### ಶಾಸಕ ಸ್ಥಾನಕ್ಕೆ ಅಖಿಲೇಶ್ ರಾಜೀನಾಮೆ

**ಲಖನೌ:** ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಕರಹಲ್ ವಿಧಾನಸಭಾ ಕ್ಷೇತ್ರದ ಶಾಸಕನ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಕನೌಜ್ ಲೋಕಸಭಾ ಕ್ಷೇತ್ರದ ಸಂಸದನ ಸ್ಥಾನದಲ್ಲಿ ಮುಂದುವರಿಯಲು ಅವರು ತೀರ್ಮಾನಿಸಿದ್ದಾರೆ. ಈಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಅವರು ಕನೌಜ್ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದಾರೆ.

### ಕ್ಷಮಾದಾನ ಅರ್ಜಿ ತಿರಸ್ಕರಿಸಿದ ಮುರ್ಮು

**ನವದೆಹಲಿ (ಪಿಟಿಐ):** ದೆಹಲಿಯ ಕೆಂಪುಕೋಟೆಯ ಮೇಲಿನ ದಾಳಿ ಪ್ರಕರಣದಲ್ಲಿ ತನಗೆ ಕ್ಷಮಾದಾನ ನೀಡಬೇಕು ಎಂದು ಪಾಕಿಸ್ತಾನದ ಭಯೋತ್ಪಾದಕ ಮೊಹಮ್ಮದ್ ಆರಿಫ್ ಅಲಿಯಾಸ್ ಅಷ್ಫಾಕ್ ಸಲ್ಲಿಸಿದ್ದ ಅರ್ಜಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತಿರಸ್ಕರಿಸಿದ್ದಾರೆ.

24 ವರ್ಷಗಳಷ್ಟು ಹಳೆಯದಾದ ಈ ಪ್ರಕರಣದಲ್ಲಿ ಆರಿಫ್‌ಗೆ ಗಲ್ಲು ಶಿಕ್ಷೆ ವಿಧಿಸಲಾಗಿದೆ. ಈತನಿಗೆ ಮರಣ ದಂಡನೆ ವಿಧಿಸಿದ್ದನ್ನು ರದ್ದುಪಡಿಸಲು ಸುಪ್ರೀಂ ಕೋರ್ಟ್ 2022ರ ನವೆಂಬರ್‌ನಲ್ಲಿ ನಿರಾಕರಿಸಿತ್ತು.

### ಉಕ್ರೇನ್–ರಷ್ಯಾ ಯುದ್ಧದಲ್ಲಿ ಮತ್ತೊಬ್ಬ ಭಾರತೀಯ ಸಾವು

**ಅಮೃತ್‌ಸರ (ಪಿಟಿಐ):** ಉಕ್ರೇನ್ ಜೊತೆಗಿನ ಯುದ್ಧದಲ್ಲಿ ರಷ್ಯಾ ಸೇನೆಯಲ್ಲಿದ್ದ ಭಾರತದ ಮತ್ತೊಬ್ಬ ಯೋಧ ಮೃತಪಟ್ಟಿದ್ದಾರೆ.

ಇವರ ಮೃತದೇಹವನ್ನು ಭಾರತಕ್ಕೆ ತರಲು ಸಹಕರಿಸುವಂತೆ ಆತನ ಕುಟುಂಬಸ್ಥರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಅಮೃತ್‌ಸರ ಮೂಲದ ತೇಜ್‌ಪಾಲ್ ಸಿಂಗ್ (30) ಅವರು ಮೃತಪಟ್ಟಿರುವ ಯೋಧ. ಸ್ನೇಹಿತರೊಂದಿಗೆ ರಷ್ಯಾಕ್ಕೆ ತೆರಳಿದ್ದ ತೇಜ್‌ಪಾಲ್ ಜನವರಿ 12ರಂದು ರಷ್ಯಾ ಸೇನೆಗೆ ಸೇರಿದ್ದ ಎಂದು ಕುಟುಂಬ ಮೂಲಗಳು ತಿಳಿಸಿವೆ.

### ಮಹಾರಾಷ್ಟ್ರದ ಎಂಎಸ್‌ಎಂಇ ನಿರ್ದೇಶಕಿಯಿಂದ ಸಂಚು

## ₹300 ಕೋಟಿ ಆಸ್ತಿಗೆ ಮಾವನ ಕೊಲೆ

**ನಾಗ್ಪುರ (ಪಿಟಿಐ):** ನಾಗ್ಪುರದಲ್ಲಿ ಇತ್ತೀಚೆಗೆ ನಡೆದ ಗುದ್ದೋಡು (ಹಿಟ್ ಆ್ಯಂಡ್ ರನ್) ಪ್ರಕರಣದಲ್ಲಿ 82 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದರು. ಆದರೆ, ಇದು ಅಪಘಾತವಲ್ಲ, ಸೊಸೆ ತನ್ನ ಮಾವನ ₹300 ಕೋಟಿ ಮೌಲ್ಯದ ಆಸ್ತಿ ಲಪಟಾಯಿಸಲು ಸಂಚು ರೂಪಿಸಿ, ಸುಪಾರಿ ನೀಡಿ ಕೊಲೆ ಮಾಡಿಸಿರುವುದು ಪೊಲೀಸ್ ತನಿಖೆಯಲ್ಲಿ ಬಯಲಾಗಿದೆ.

ಈ ಸಂಬಂಧ ಮಹಾರಾಷ್ಟ್ರದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ(ಎಂಎಸ್‌ಎಂಇ) ಇಲಾಖೆಯ ನಿರ್ದೇಶಕರಾದ ಅರ್ಚನಾ ಮನೀಷ್ ಪುಟ್ಟೇವಾರ್ (53) ಅವರನ್ನು ಕಳೆದ ವಾರ ಪೊಲೀಸರು ಬಂಧಿಸಿದ್ದರು. 15 ದಿನಗಳ ಹಿಂದೆ ವ್ಯಾಪಾರಿ ಪುರುಷೋತ್ತಮ ಪುಟ್ಟೇವಾರ್ ಅವರು ಕಾರು ಡಿಕ್ಕಿ ಹೊಡೆದಿದ್ದರಿಂದ ಮೃತಪಟ್ಟಿದ್ದರು. ಈ ಪ್ರಕರಣದಲ್ಲಿ ಸೊಸೆಯನ್ನು ಬಂಧಿಸಲಾಗಿದೆ.

ಅರ್ಚನಾ ಅವರು ತನ್ನ ಮಾವನಿಗೆ ಕಾರು ಡಿಕ್ಕಿ ಹೊಡೆಸಿ ಕೊಲ್ಲಲು ಬಾಡಿಗೆ ಹಂತಕರನ್ನು ನೇಮಿಸಿ, ಸುಮಾರು ₹1 ಕೋಟಿ ಖರ್ಚು ಮಾಡಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಈ ಕೃತ್ಯಕ್ಕಾಗಿ ಕಾರು ಖರೀದಿಸಲು ಅವರು ಆರೋಪಿಗೆ ಹಣ ಪಾವತಿಸಿ, ಕೊಲೆಯನ್ನು ಅಪಘಾತದಂತೆ ಬಿಂಬಿಸಲು ಸಂಚು ರೂಪಿಸಿದ್ದರು. ಮಾವನ ₹300 ಕೋಟಿ ಆಸ್ತಿ ಲಪಟಾಯಿಸುವುದು ಆಕೆಯ ಉದ್ದೇಶವಾಗಿತ್ತು ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಅವರು ಹೇಳಿದ್ದಾರೆ.

ಅರ್ಚನಾ ಅವರು ಈ ಕೃತ್ಯಕ್ಕಾಗಿ ತನ್ನ ಗಂಡನ (ವೈದ್ಯ ಮನೀಷ್) ಕಾರು ಚಾಲಕ ಬಾಗ್ಡೆ ಮತ್ತು ಇತರ ಇಬ್ಬರು ಆರೋಪಿಗಳಾದ ನೀರಜ್ ನಿಮ್ಜೆ ಮತ್ತು ಸಚಿನ್ ಧಾರ್ಮಿಕ್ ಅವರೊಂದಿಗೆ ಕೊಲೆಗೆ ಸಂಚು ರೂಪಿಸಿದ್ದರು. ಆರೋಪಿಗಳ ವಿರುದ್ಧ ಕೊಲೆ ಆಪಾದನೆ, ಐಪಿಸಿ ಮತ್ತು ಮೋಟಾರು ವಾಹನ ಕಾಯ್ದೆಯ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಲಾಗಿದೆ. ಅಲ್ಲದೆ ಎರಡು ಕಾರು, ಚಿನ್ನಾಭರಣ ಹಾಗೂ ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಘಟನೆ ವಿವರ: ಪುರುಷೋತ್ತಮ ಪುಟ್ಟೇವಾರ್ ಅವರ ಪತ್ನಿ ಶಕುಂತಲಾ ಅವರಿಗೆ ಶಸ್ತ್ರ ಚಿಕಿತ್ಸೆಯಾಗಿದ್ದು, ಅವರು ಆಸ್ಪತ್ರೆಯಲ್ಲಿದ್ದರು. ಅವರನ್ನು ಭೇಟಿಯಾಗಲು ಪುರುಷೋತ್ತಮ ಅವರು ಆಸ್ಪತ್ರೆಗೆ ಭೇಟಿ ನೀಡಿದ್ದರು. ಅಲ್ಲಿಂದ ಹಿಂತಿರುಗುವಾಗ, ಬಾಡಿಗೆ ಕಾರು ಅವರ ಮೇಲೆ ಹರಿದಿತ್ತು.

ಕೊಲೆ ಪ್ರಕರಣದ ಆರೋಪಿಯಾಗಿರುವ ಅರ್ಚನಾ ಅವರು ಕಚೇರಿಯಲ್ಲಿಯೂ ಭಾರಿ ಅಕ್ರಮಗಳನ್ನು ನಡೆಸಿದ್ದಾರೆ ಎಂಬ ಆರೋಪಗಳಿವೆ. ಈ ಸಂಬಂಧ ಹಲವು ದೂರುಗಳು ಬಂದಿದ್ದರೂ ರಾಜಕೀಯ ಪ್ರಭಾವ ಬಳಸಿ ರಕ್ಷಣೆ ಪಡೆದಿದ್ದಾರೆ ಎಂಬುದು ಗೊತ್ತಾಗಿದೆ. ಇದೀಗ ಈ ಆರೋಪಗಳ ಕುರಿತೂ ತನಿಖೆ ನಡೆಯುವ ಸಾಧ್ಯತೆಗಳಿವೆ.

### ಜಲಶಕ್ತಿ ಖಾತೆ ರಾಜ್ಯ ಸಚಿವರಾಗಿ ಸೋಮಣ್ಣ ಅಧಿಕಾರ ಸ್ವೀಕಾರ

## ‘11 ಕೋಟಿ ಕುಟುಂಬಗಳಿಗೆ ಕುಡಿಯುವ ನೀರು’

ಪ್ರಜಾವಾಣಿ ವಾರ್ತೆ

**ನವದೆಹಲಿ:** ಗ್ರಾಮೀಣ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಜಲ ಜೀವನ್ ಮಿಷನ್ ಮೂಲಕ 11 ಕೋಟಿ ಕುಟುಂಬಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲಾಗಿದೆ ಎಂದು ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಜಲಶಕ್ತಿ ರಾಜ್ಯ ಸಚಿವರಾಗಿ ಬುಧವಾರ ಇಲ್ಲಿ ಅಧಿಕಾರ ಸ್ವೀಕರಿಸಿದ ಬಳಿಕ ಅವರು ಮಾತನಾಡಿ, ‘ಕಳೆದ 10 ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಕ್ರಿಯಾಶೀಲ ನಾಯಕತ್ವದಲ್ಲಿ ದೇಶವು ಗಮನಾರ್ಹ ಬೆಳವಣಿಗೆ ಕಂಡಿದೆ’ ಎಂದರು. ಸರ್ಕಾರದ 3ನೇ ಅವಧಿಯಲ್ಲೂ ಅಭಿವೃದ್ಧಿಯ ವೇಗವನ್ನು ಮುಂದುವರಿಸುವ ಸಂಕಲ್ಪವನ್ನು ಸಚಿವರು ವ್ಯಕ್ತಪಡಿಸಿದರು.

ಸಚಿವರಾಗಿ ವಿ.ಸೋಮಣ್ಣ ಅಧಿಕಾರ ಸ್ವೀಕರಿಸಿದರು

‘ಈಗ ಶೇ 76ಕ್ಕಿಂತ ಹೆಚ್ಚಿನ ಗ್ರಾಮೀಣ ಕುಟುಂಬಗಳಲ್ಲಿ ಪ್ರತಿ ವ್ಯಕ್ತಿಗೆ 55 ಲೀಟರ್ ಗುಣಮಟ್ಟದ ನೀರು ಒದಗಿಸಲಾಗುತ್ತಿದೆ. ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ್) ಅಡಿ ದೇಶದ ಶೇ 93ಕ್ಕಿಂತ ಹೆಚ್ಚಿನ ಹಳ್ಳಿಗಳನ್ನು ಬಯಲು ಶೌಚ ಮುಕ್ತ (ಒಡಿಎಫ್) ಪ್ಲಸ್ ಮಾಡಲಾಗಿದೆ. ಸುಮಾರು ಶೇ 33ರಷ್ಟು ಒಡಿಎಫ್ ಪ್ಲಸ್ ಮಾದರಿ ಗ್ರಾಮಗಳಾಗಿ ಪರಿವರ್ತನೆ ಹೊಂದಿವೆ. 2025ರ ಮಾರ್ಚ್ ವೇಳೆಗೆ ಎಲ್ಲ ಹಳ್ಳಿಗಳನ್ನು ಒಡಿಎಫ್ ಪ್ಲಸ್ ಮಾದರಿ ಗ್ರಾಮಗಳನ್ನಾಗಿ ಪರಿವರ್ತಿಸಲಾಗುವುದು’ ಎಂದು ಅವರು ಹೇಳಿದರು.

‘ಸ್ವಚ್ಛ ಭಾರತ್ ಅಭಿಯಾನದ ಎರಡನೇ ಭಾಗಕ್ಕೆ ಚಾಲನೆ ನೀಡಲಾಗುತ್ತದೆ. ಈ ಯೋಜನೆಯಡಿ ಹೊಸ ಕ್ರಾಂತಿ ಮಾಡಲಿದ್ದೇವೆ. ಕೇಂದ್ರ ಸಚಿವ ಸಿ.ಆರ್.ಪಾಟೀಲ್ ಮಾರ್ಗ ದರ್ಶನದಲ್ಲಿ ಮುಂದುವರಿಯಲಿದ್ದೇವೆ’ ಎಂದು ಹೇಳಿದರು.

ನೂತನ ಸಚಿವರನ್ನು ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ (ಕುಡಿಯುವ ನೀರು ಮತ್ತು ನೈರ್ಮಲ್ಯ) ವಿನಿ ಮಹಾಜನ್ ಸ್ವಾಗತಿಸಿದರು.

### 24ರಿಂದ ಲೋಕಸಭಾ ಅಧಿವೇಶನ

ಪ್ರಜಾವಾಣಿ ವಾರ್ತೆ

**ನವದೆಹಲಿ:** 18ನೇ ಲೋಕಸಭೆಯ ಮೊದಲ ಅಧಿವೇಶನ ಇದೇ 24ರಿಂದ ಜುಲೈ 3ರ ತನಕ ನಡೆಯಲಿದೆ.

ಈ ಸಂದರ್ಭದಲ್ಲಿ ನೂತನ ಸಂಸದರ ಪ್ರಮಾಣವಚನ, ಲೋಕಸಭಾಧ್ಯಕ್ಷರ ಆಯ್ಕೆ ಜರುಗಲಿದೆ. ಲೋಕಸಭೆ ಹಾಗೂ ರಾಜ್ಯಸಭೆಯ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಷಣ ಮಾಡಲಿದ್ದಾರೆ. ರಾಜ್ಯಸಭೆಯ ಅಧಿವೇಶನವು ಇದೇ 27ರಿಂದ ಆರಂಭವಾಗಿ ಜುಲೈ 3ರಂದು ಮುಗಿಯಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಬುಧವಾರ ಪೋಸ್ಟ್ ಮಾಡಿದ್ದಾರೆ.

## ಕುವೈತ್‌ನಲ್ಲಿ ಅಗ್ನಿ ಅನಾಹುತ

ಒಂದನೇ ಪುಟದಿಂದ...

ನಿವಾಸಿಗಳು ನಿದ್ರಿಸುತ್ತಿದ್ದಾಗ ಬೆಂಕಿ ಹೊತ್ತಿಕೊಂಡಿದೆ. ಹೆಚ್ಚಿನವರು ದಟ್ಟವಾಗಿ ಆವರಿಸಿದ ಹೊಗೆಯ ಪರಿಣಾಮವಾಗಿ ಮೃತಪಟ್ಟಿದ್ದಾರೆ, ಕಟ್ಟಡದಲ್ಲಿ ಇದ್ದ ಹಲವರನ್ನು ರಕ್ಷಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಅಗ್ನಿ ದುರಂತಕ್ಕೆ ಸಂಬಂಧಿಸಿದಂತೆ ಕುವೈತ್‌ನಲ್ಲಿ ಇರುವ ಭಾರತೀಯ ರಾಯಭಾರ ಕಚೇರಿಯು ಸಹಾಯವಾಣಿ ಆರಂಭಿಸಿದೆ (ಸಂಖ್ಯೆ: +965-6550 5246). ಸಂಬಂಧಪಟ್ಟವರು ಈ ಸಂಖ್ಯೆಗೆ ಕರೆಮಾಡುವಂತೆ ಕಚೇರಿಯು ಹೇಳಿದೆ.

‘ಕುವೈತ್ ನಗರದಲ್ಲಿನ ಅಗ್ನಿ ಅವಘಡದ ಸುದ್ದಿ ತಿಳಿದು ಆಘಾತವಾಗಿದೆ. ನಮ್ಮ ರಾಯಭಾರಿ ಅಲ್ಲಿಗೆ ತೆರಳಿದ್ದಾರೆ. ಇನ್ನಷ್ಟು ಮಾಹಿತಿಗೆ ಕಾಯುತ್ತಿದ್ದೇವೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ‘ಎಕ್ಸ್’ ಮೂಲಕ ಪ್ರತಿಕ್ರಿಯಿಸಿದ್ದಾರೆ. ‘ಸಂಬಂಧಪಟ್ಟ ಎಲ್ಲರಿಗೂ ನಮ್ಮ ರಾಯಭಾರ ಕಚೇರಿಯು ಪೂರ್ಣ ನೆರವು ಒದಗಿಸಲಿದೆ’ ಎಂದಿದ್ದಾರೆ.

ಘಟನೆ ನಡೆದ ಸ್ಥಳಕ್ಕೆ ಭಾರತದ ರಾಯಭಾರಿ ಆದರ್ಶ್ ಸ್ವೈಕಾ ಭೇಟಿ ನೀಡಿದ್ದರು.ನಂತರ ಅವರು, ಗಾಯಗೊಂಡಿರುವ ಭಾರತೀಯರನ್ನು ದಾಖಲಿಸಿರುವ ಆಸ್ಪತ್ರೆಗಳಿಗೂ ತೆರಳಿದ್ದರು. ‘ತುರ್ತು ವೈದ್ಯಕೀಯ ಸೇವೆಗಳಿಗೆ, ಇತರ ಅಗತ್ಯ ಕ್ರಮಗಳಿಗಾಗಿ ರಾಯಭಾರ ಕಚೇರಿಯು ಸಂಬಂಧಪಟ್ಟ ಎಲ್ಲ ಅಧಿಕಾರಿಗಳ ಜೊತೆ ಸಂಪರ್ಕದಲ್ಲಿದೆ’ ಎಂದು ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

> **ದುರಂತವು ಬಹಳ ದುಃಖದ ಸಂಗತಿ. ತೊಂದರೆಗೆ ಒಳಗಾದವರಿಗೆ ನೆರವಾಗಲು ಕುವೈತ್‌ನಲ್ಲಿನ ಭಾರತೀಯ ರಾಯಭಾರ ಕಚೇರಿಯು ಅಧಿಕಾರಿಗಳ ಜೊತೆಗೂಡಿ ಕೆಲಸ ಮಾಡುತ್ತಿದೆ.**
> **ನರೇಂದ್ರ ಮೋದಿ,** ಪ್ರಧಾನಿ

ಕುವೈತ್‌ನ ಆಂತರಿಕ ವ್ಯವಹಾರಗಳು ಹಾಗೂ ರಕ್ಷಣಾ ಖಾತೆಯ ಹೊಣೆ ಹೊತ್ತಿರುವ ಪ್ರಥಮ ಉಪ ಪ್ರಧಾನಿ ಶೇಖ್ ಫಹಾದ್ ಅಲ್–ಯೂಸುಫ್ ಅಲ್–ಸಬಾ ಅವರು ಬೆಂಕಿ ಅನಾಹುತ ಸಂಭವಿಸಿದ ಕಟ್ಟಡದ ಮಾಲೀಕರನ್ನು ಬಂಧಿಸುವಂತೆ ಪೊಲೀಸರಿಗೆ ಸೂಚಿಸಿದ್ದಾರೆ.

### ಆತಂಕದಲ್ಲಿ ಕುಟುಂಬ

**ಕೊಲ್ಲಂ ವರದಿ (ಪಿಟಿಐ):** ಕೇರಳದ ಕೊಲ್ಲಂ ಜಿಲ್ಲೆಯ ಕುಟುಂಬವೊಂದು ತನಗೆ ಆಸರೆಯಾಗಿದ್ದ ಶಮೀರ್ ಬದುಕಿ ಬರಲಿ ಎಂದು ಪ್ರಾರ್ಥಿಸುತ್ತಿದೆ. ವಯ್ಯಂಕರ ಗ್ರಾಮದ ಸಮೀರ್, ಕಳೆದ ಕೆಲವು ವರ್ಷಗಳಿಂದ ಕುವೈತ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಬೆಂಕಿ ಅವಘಡದಲ್ಲಿ ಶಮೀರ್ ಮೃತಪಟ್ಟಿದ್ದಾರೆ ಎಂದು ಬುಧವಾರ ಬೆಳಿಗ್ಗೆ 11.30ರ ಹೊತ್ತಿಗೆ ಕುಟುಂಬದವರಿಗೆ ಮಾಹಿತಿ ಬಂತು ಎನ್ನಲಾಗಿದೆ.

‘ಶಮೀರ್ ಕೆಲಸ ಮಾಡುತ್ತಿರುವ ಕಂಪನಿಯಿಂದಾಗಲೀ, ರಾಯಭಾರ ಕಚೇರಿಯಿಂದಾಗಲೀ ಸಾವಿನ ಅಧಿಕೃತ ಮಾಹಿತಿ ಬಂದಿಲ್ಲ’ ಎಂದು ಕುಟುಂಬದ ಸದಸ್ಯರೊಬ್ಬರು ತಿಳಿಸಿದ್ದಾರೆ.

### 2 ವರ್ಷದಲ್ಲಿ 1400ಕ್ಕೂ ಹೆಚ್ಚು ಭಾರತೀಯರ ಸಾವು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕಳೆದ ಎರಡು ವರ್ಷಗಳಲ್ಲಿ ಕುವೈತ್‌ನಲ್ಲಿ ಭಾರತದ 1400ಕ್ಕೂ ಹೆಚ್ಚು ಕಾರ್ಮಿಕರು ಮೃತಪಟ್ಟಿದ್ದಾರೆ.

2021ರ ಮಾರ್ಚ್‌ನಿಂದ 2023ರ ಡಿಸೆಂಬರ್‌ವರೆಗೆ ಕುವೈತ್‌ನ ಭಾರತೀಯ ರಾಯಭಾರ ಕಚೇರಿಗೆ ಅಲ್ಲಿರುವ ಭಾರತೀಯ ಕಾರ್ಮಿಕರಿಂದ 1600ಕ್ಕೂ ಹೆಚ್ಚು ದೂರುಗಳು ಬಂದಿವೆ. ಬಹುತೇಕ ದೂರುಗಳು ವೇತನ ವಿಳಂಬ, ಕಳಪೆ ಮೌಲಸೌಕರ್ಯ ಹಾಗೂ ದೌರ್ಜನ್ಯಕ್ಕೆ ಸಂಬಂಧಿಸಿದ್ದಾಗಿವೆ.

ಕುವೈತ್‌ನಲ್ಲಿನ ಅಗ್ನಿ ಅವಘಡದಿಂದ ಮೃತಪಟ್ಟ 49 ಮಂದಿಯಲ್ಲಿ 42 ಜನ ಭಾರತ ಮೂಲದವರು. ಪಶ್ಚಿಮ ಏಷ್ಯಾ ರಾಷ್ಟ್ರಗಳಿಗೆ ಉದ್ಯೋಗ ಅರಸಿ ವಲಸೆ ಹೋಗುವವರು ಅಲ್ಲಿ ಏನೆಲ್ಲ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ ಎನ್ನುವ ವಿಷಯದ ಚರ್ಚೆ ಈಗ ಕಾವು ಪಡೆದುಕೊಂಡಿದೆ.

2022, 2023ರಲ್ಲಿ ಕುವೈತ್‌ನಲ್ಲಿ ಮೃತಪಟ್ಟ ವಲಸೆ ಕಾರ್ಮಿಕರಲ್ಲಿ 708 ಮಂದಿ ಭಾರತೀಯರು ಇದ್ದರು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಈ ವರ್ಷ ಫೆಬ್ರುವರಿಯಲ್ಲಿ ಸಂಸತ್‌ನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರರೂಪದಲ್ಲಿ ತಿಳಿಸಿತ್ತು.

ಕೋವಿಡ್ ಸಂದರ್ಭದಲ್ಲಿ–2020 ಹಾಗೂ 2021ರ ಅವಧಿಯಲ್ಲಿ ಒಟ್ಟು 2,480 ಭಾರತೀಯರು ಕುವೈತ್‌ನಲ್ಲಿ ಮೃತಪಟ್ಟಿದ್ದರು. 2014ರಿಂದ 2018ರ ಕಾಲಘಟ್ಟದಲ್ಲಿಯೂ 2,932 ಭಾರತೀಯರು ಅಲ್ಲಿ ಅಸುನೀಗಿದ್ದರು. 2018ರಲ್ಲಿ ಅಲ್ಲಿ ಮೃತಪಟ್ಟ 659 ಭಾರತೀಯರಲ್ಲಿ 24 ಮಂದಿ ಕರ್ನಾಟಕದವರಾಗಿದ್ದರು.

ಕೋವಿಡ್ ಸಂದರ್ಭದಲ್ಲಿ ಕುವೈತ್‌ನಿಂದ ದೊಡ್ಡ ಸಂಖ್ಯೆಯಲ್ಲಿ ಭಾರತದ ಕಾರ್ಮಿಕರು ತವರಿಗೆ ಮರಳಿದ್ದರು ಎಂದು ವಿದೇಶಾಂಗ ಸಚಿವಾಲಯವು ಮಾಹಿತಿ ನೀಡಿದೆ.

### ಒಬ್ಬ ಯೋಧ ಹುತಾತ್ಮ ● ಗ್ರಾಮಸ್ಥರಿಂದ ನೀರು ಕೇಳಿದ್ದ ಭಯೋತ್ಪಾದಕರು

# ಜಮ್ಮು–ಕಾಶ್ಮೀರ: ಇಬ್ಬರು ಉಗ್ರರ ಹತ್ಯೆ

**ಜಮ್ಮು (ಪಿಟಿಐ):** ಜಮ್ಮು ಮತ್ತು ಕಾಶ್ಮೀರದ ಕಥುವಾ ಮತ್ತು ದೊಡಾ ಜಿಲ್ಲೆಗಳಲ್ಲಿ ಭಯೋತ್ಪಾದಕರು ಮತ್ತು ಭದ್ರತಾ ಪಡೆಗಳ ನಡುವೆ ಭಾರಿ ಪ್ರಮಾಣದ ಗುಂಡಿನ ಚಕಮಕಿ ನಡೆದಿದ್ದು, ಇಬ್ಬರು ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ. ಈ ವೇಳೆ ಸಿಆರ್‌ಪಿಎಫ್ ಯೋಧರೊಬ್ಬರು ಹುತಾತ್ಮರಾಗಿದ್ದು, ಭದ್ರತಾ ಪಡೆಯ ಆರು ಸಿಬ್ಬಂದಿಗೆ ಗಾಯಗಳಾಗಿವೆ.

ತೀವ್ರ ಗಾಯಗೊಂಡಿದ್ದ ಸಿಆರ್‌ಪಿಎಫ್‌ನ ಯೋಧ ಕಬೀರ್ ದಾಸ್ ಅವರು ಆಸ್ಪತ್ರೆಯಲ್ಲಿ ಮೃತಪಟ್ಟರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೈದಾ ಸುಖಲ್ ಗ್ರಾಮದಲ್ಲಿ (ಅಂತರರಾಷ್ಟ್ರೀಯ ಗಡಿಯಿಂದ 60 ಕಿ.ಮೀ ದೂರದಲ್ಲಿದೆ) ಇಬ್ಬರು ಭಯೋತ್ಪಾದಕರು ಕಾಣಿಸಿಕೊಂಡ ಬಳಿಕ ಮಂಗಳವಾರ ರಾತ್ರಿಯಿಂದ ಸುಮಾರು 15 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಲಾಗಿತ್ತು. ಈ ವೇಳೆ ಭದ್ರತಾ ಪಡೆಗಳ ವಾಹನಗಳ ಮೇಲೆ ಉಗ್ರರು ಬುಲೆಟ್ ದಾಳಿಯನ್ನೂ ನಡೆಸಿದರು. ಅದೃಷ್ಟವಶಾತ್ ಇಬ್ಬರು ಹಿರಿಯ ಅಧಿಕಾರಿಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮತ್ತೊಂದೆಡೆ, ದೋಡಾ ಜಿಲ್ಲೆಯ ಭದರ್ವಾ–ಪಠಾಣ್‌ಕೋಟ್ ಹೆದ್ದಾರಿಯ ಚಟರ್‌ಗಲ್ಲಾ ಪ್ರದೇಶದ ಚೆಕ್‌ಪೋಸ್ಟ್ ಮೇಲೆ ಭಯೋತ್ಪಾದಕರು ಮಂಗಳವಾರ ತಡರಾತ್ರಿ ದಾಳಿ ನಡೆಸಿದ್ದಾರೆ. ಈ ವೇಳೆ ರಾಷ್ಟ್ರೀಯ ರೈಫಲ್ಸ್‌ನ ಐವರು ಯೋದರು ಮತ್ತು ವಿಶೇಷ ಪೊಲೀಸ್ ಅಧಿಕಾರಿ (ಎಸ್‌ಪಿಒ) ಗಾಯಗೊಂಡಿದ್ದಾರೆ.

**ಶಾಂತಿ ಕದಡುತ್ತಿರುವ ಪಾಕ್:** ‘ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿಯುತ ವಾತಾವರಣವನ್ನು ಕದಡಲು ಪಾಕಿಸ್ತಾನ ಪ್ರಯತ್ನಿಸುತ್ತಿದೆ. ಇದರಿಂದ ಜಮ್ಮು ಪ್ರದೇಶದಲ್ಲಿ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚಾಗಿವೆ’ ಎಂದಿದ್ದಾರೆ.

‘ಮಂಗಳವಾರ ರಾತ್ರಿ 8 ಗಂಟೆ ಸುಮಾರಿಗೆ ಇಬ್ಬರು ಭಯೋತ್ಪಾದಕರು ಗ್ರಾಮಕ್ಕೆ ನುಗ್ಗಿ, ಮನೆಯೊಂದರಿಂದ ನೀರು ಕೇಳಿದ್ದಾರೆ. ಈ ಬಗ್ಗೆ ಆತಂಕಗೊಂಡ ಗ್ರಾಮದ ಜನರು ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಅದನ್ನು ಆಧರಿಸಿ, ತಕ್ಷಣವೇ ಕಾರ್ಯಾಚರಣೆ ಕೈಗೊಳ್ಳಲಾಯಿತು. ಭಯೋತ್ಪಾದಕರು ಗ್ರೆನೇಡ್ ಎಸೆಯಲು ಪ್ರಯತ್ನಿಸಿದರು, ಆಗ ನಡೆದ ಗುಂಡಿನ ಚಕಮಕಿಯಲ್ಲಿ ಹತ್ಯೆಯಾದರು. ಉಗ್ರರ ದಾಳಿಯಲ್ಲಿ ಒಬ್ಬ ನಾಗರಿಕರಿಗೂ ಗಾಯವಾಗಿದ್ದು ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ’ ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಜಮ್ಮು ವಲಯ) ಆನಂದ್ ಜೈನ್ ವಿವರಿಸಿದ್ದಾರೆ.

**ಶಸ್ತ್ರಾಸ್ತ್ರ ವಶ:** ಹತ್ಯೆಯಾದ ಇಬ್ಬರು ಉಗ್ರರು ಪಾಕಿಸ್ತಾನದವರು ಎಂದು ಹೇಳಲಾಗಿದೆ. ಎನ್‌ಕೌಂಟರ್ ನಡೆದ ಪ್ರದೇಶದಿಂದ ಎಂ4 ಕಾರ್ಬೈನ್, ಎಕೆ ಅಸಾಲ್ಟ್ ರೈಫಲ್, ಮದ್ದುಗುಂಡುಗಳು ಮತ್ತು ₹ 1 ಲಕ್ಷ ನಗದು ಜತೆಗೆ ಪಾಕಿಸ್ತಾನ ನಿರ್ಮಿತ ಆಹಾರ ಪದಾರ್ಥಗಳು, ಔಷಧಗಳನ್ನು ವಶಪಡಿಸಿಕೊಳ್ಳಲಾಗಿದೆ. ಭಯೋತ್ಪಾದಕರ ಗುರುತನ್ನು ಖಚಿತಪಡಿಸಿಕೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಶಿವ ಖೋರಿ ದೇವಾಲಯಕ್ಕೆ ಯಾತ್ರಿಗಳನ್ನು ಕರೆದೊಯ್ಯುತ್ತಿದ್ದ ಬಸ್ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ ಕೆಲ ದಿನಗಳಲ್ಲಿ ಈ ಎರಡೂ ಉಗ್ರರ ದಾಳಿಗಳು ನಡೆದಿವೆ. ಬಸ್ ಮೇಲೆ ದಾಳಿ ನಡೆಸಿದ ಒಬ್ಬ ಉಗ್ರನ ರೇಖಾಚಿತ್ರವನ್ನು ಪೊಲೀಸರು ಬಿಡುಗಡೆ ಮಾಡಿದ್ದು, ಸುಳಿವು ನೀಡಿದವರಿಗೆ ₹20 ಲಕ್ಷ ಬಹುಮಾನ ಘೋಷಿಸಿದ್ದಾರೆ.

ಕಥುವಾದ ಸೈದಾ ಸುಖಲ್ ಗ್ರಾಮದಲ್ಲಿ ಉಗ್ರರ ವಿರುದ್ಧದ ಕಾರ್ಯಾಚರಣೆ ಬಳಿಕ ವಶಪಡಿಸಿಕೊಂಡಿರುವ ಶಸ್ತ್ರಾಸ್ತ್ರ, ಮದ್ದುಗುಂಡುಗಳನ್ನು ಭದ್ರತಾ ಪಡೆಗಳು ಬುಧವಾರ ಪ್ರದರ್ಶಿಸಿದವು –ಪಿಟಿಐ ಚಿತ್ರ

### ಪ್ರಧಾನಿ ಮೌನ ಪ್ರಶ್ನಿಸಿದ ರಾಹುಲ್

**ನವದೆಹಲಿ (ಪಿಟಿಐ):** ಜಮ್ಮು ಮತ್ತು ಕಾಶ್ಮೀರದಲ್ಲಿ ಮೂರು ದಿನಗಳಲ್ಲಿ ಮೂರು ಭಯೋತ್ಪಾದಕ ದಾಳಿಗಳು ನಡೆದಿದ್ದರೂ ಮೌನವಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಇನ್ನೂ ಸಂಭ್ರಮಾಚರಣೆಯಲ್ಲಿ ನಿರತರಾಗಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಿಡಿಕಾರಿದ್ದಾರೆ.

ದೇಶದ ವಿರುದ್ಧ ಸಂಚು ರೂಪಿಸುತ್ತಿರುವವರನ್ನು ಬಿಜೆಪಿ ಆಡಳಿತದಲ್ಲಿ ಏಕೆ ಹಿಡಿಲಾಗುತ್ತಿಲ್ಲ ಎಂಬುದಕ್ಕೆ ಇಡೀ ದೇಶವೇ ಉತ್ತರ ಕೇಳುತ್ತಿದೆ ಎಂದು ‘ಎಕ್ಸ್’ನಲ್ಲಿ ಪ್ರಶ್ನಿಸಿದ್ದಾರೆ.

‘ಮೋದಿ ಅವರು ಅಭಿನಂದನಾ ಸಂದೇಶಗಳಿಗೆ ಪ್ರತಿಕ್ರಿಯಿಸುವಲ್ಲಿಯೇ ತೊಡಗಿದ್ದಾರೆ. ಹೀಗಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಭೀಕರವಾಗಿ ಕೊಲ್ಲಲ್ಪಟ್ಟ ಯಾತ್ರಿಗಳ ಕುಟುಂಬದವರ ಅಳಲನ್ನೂ ಅವರು ಇಲ್ಲಿಯವರೆಗೆ ಕೇಳಿಲ್ಲ’ ಎಂದು ಅವರು ಹೇಳಿದ್ದಾರೆ.

ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಉಸ್ತುವಾರಿ ಪವನ್ ಖೇರಾ, ‘ಪಾಕಿಸ್ತಾನಿ ನಾಯಕರಿಗೆ ಪ್ರತಿಕ್ರಿಯೆ ನೀಡಲು ಸಮಯ ಹೊಂದಿರುವ ಪ್ರಧಾನಿ ಅವರಿಗೆ, ಭಯೋತ್ಪಾದಕ ದಾಳಿಯನ್ನು ಖಂಡಿಸಲು ಸಮಯವಿಲ್ಲವೇ’ ಎಂದು ಕೇಳಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

### ಸುಭಾಷಿತ

ಅಂದಂದಿನ ಕೆಲಸವನ್ನು ಅಂದಂದು ಮಾಡಿ, ಅದರ ವಿಷಯವಾಗಿ ಬಹಳವಾಗಿ ಚಿಂತೆ ಮಾಡದೆ ಇರಬೇಕು. ಅದೇ ಒಳ್ಳೆಯ ಜೀವನ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

# ಮೋಹನ್ ಭಾಗವತ್ ಮಾತು ಆತ್ಮಾವಲೋಕನದ ಪ್ರತಿಫಲನ

**ರಾಷ್ಟ್ರೀಯ** ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಅವರು ಈಚೆಗೆ ಸಂಘದ ಕಾರ್ಯಕ್ರಮವೊಂದರಲ್ಲಿ ಆಡಿರುವ ಮಾತುಗಳನ್ನು ಬಿಜೆಪಿ ನಾಯಕರ ವರ್ತನೆ, ಪಕ್ಷದ ಕಾರ್ಯವಿಧಾನದ ಬಗ್ಗೆ ಮಾಡಿರುವ ಟೀಕೆ ಎಂದು ಗ್ರಹಿಸಬೇಕಾಗುತ್ತದೆ. ಭಾಗವತ್ ಅವರ ಮಾತುಗಳು ಎಲ್ಲ ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕ ಜೀವನದಲ್ಲಿ ಇರುವ ಎಲ್ಲ ವ್ಯಕ್ತಿಗಳಿಗೆ ಅನ್ವಯವಾಗುತ್ತವೆ ಎಂದು ಅರ್ಥೈಸಲಾಗಿದ್ದರೂ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಅನುಭವಿಸಿದ ಹಿನ್ನಡೆಯನ್ನು ಗಮನಿಸಿ ಈ ಮಾತುಗಳನ್ನು ಆಲಿಸಿದಾಗ, ಅವರು ನಿರ್ದಿಷ್ಟವಾಗಿ ಬಿಜೆಪಿಯನ್ನು ಉದ್ದೇಶಿಸಿಯೇ ಈ ಮಾತುಗಳನ್ನು ಆಡಿದ್ದಾರೆ ಎಂದು ಭಾವಿಸಿದರೆ ತಪ್ಪಾಗುವುದಿಲ್ಲ. ಆರ್‌ಎಸ್‌ಎಸ್ ತಾನು ರಾಜಕೀಯದಿಂದ ಆಚೆಗಿರುವ ಸಂಘಟನೆ ಎಂದು ಹೇಳಿಕೊಳ್ಳುತ್ತದೆಯಾದರೂ ಬಿಜೆಪಿಯು ಆರ್‌ಎಸ್‌ಎಸ್‌ನ ರಾಜಕೀಯ ಅಂಗ ಎಂಬ ಮಾತನ್ನು ಹೊಸದಾಗಿ ಹೇಳಬೇಕಿಲ್ಲ. ಅಲ್ಲದೆ, ಬಿಜೆಪಿಗೆ ಸೈದ್ಧಾಂತಿಕ ತಳಹದಿಯನ್ನು ಹಾಕಿಕೊಟ್ಟಿದ್ದು ಹಾಗೂ ಸಂಘಟನಾ ಶಕ್ತಿಯನ್ನು ಒದಗಿಸುವುದು ಆರ್‌ಎಸ್‌ಎಸ್. ಭಾಗವತ್ ಅವರ ಮಾತುಗಳು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ತೋರಿದ ಪ್ರದರ್ಶನದ ವಿಚಾರವಾಗಿ ನಡೆದ ಮೊದಲ ಆತ್ಮಾವಲೋಕನದ ಪ್ರತಿಫಲನದಂತೆ ಇವೆ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ನಡುವೆ ಅಭಿಪ್ರಾಯಭೇದ ಇದೆ ಎಂಬುದು ಬಹಿರಂಗ ಸತ್ಯ. ಬಿಜೆಪಿಯು ಆರ್‌ಎಸ್‌ಎಸ್ ಮೇಲೆ ಅವಲಂಬಿತವಾಗಿಲ್ಲ ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಈಚೆಗೆ ಹೇಳಿದ ಮಾತು ಇದನ್ನು ಪುಷ್ಟೀಕರಿಸುತ್ತದೆ.

ನಿಜವಾದ 'ಸೇವಕ'ನಲ್ಲಿ ಅಹಂಕಾರ ಇರುವುದಿಲ್ಲ, ಆತ 'ಇನ್ನೊಬ್ಬರಿಗೆ ನೋವು ಉಂಟು ಮಾಡದೆಯೇ ಕೆಲಸ ಮಾಡುತ್ತಾನೆ' ಎಂದು ಭಾಗವತ್ ಹೇಳಿರುವುದನ್ನು ಹಲವು ವಿಧಗಳಲ್ಲಿ ಅರ್ಥೈಸಲು ಸಾಧ್ಯವಿದೆ. 'ನಿಜವಾದ ಸೇವಕನು ಸಭ್ಯತೆಯನ್ನು ಪಾಲಿಸುತ್ತಾನೆ... ಸಭ್ಯತೆಯನ್ನು ಪಾಲಿಸುವವನು ತನ್ನ ಕೆಲಸ ತಾನು ಮಾಡುತ್ತಾನೆ, ಆದರೆ ಕೆಲಸದೊಂದಿಗೆ ಮೋಹ ಬೆಳೆಸಿಕೊಳ್ಳುವುದಿಲ್ಲ, ಅಂಥವನು ಮಾತ್ರವೇ 'ಸೇವಕ' ಎಂದು ಭಾಗವತ್ ಹೇಳಿರುವ ಮಾತುಗಳಲ್ಲಿ ಭಾವನಾತ್ಮಕತೆಯ ಧ್ವನಿ ಇದೆ. ಇದು ನಿರ್ದಿಷ್ಟವಾದ ಉದ್ದೇಶ ಇರಿಸಿಕೊಂಡು ಆಡಿರುವ ವಿವೇಕದ ಮಾತು ಎನ್ನಬಹುದು. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮನ್ನು ತಾವು ದೇಶದ ಪ್ರಧಾನ ಸೇವಕ ಎಂದು ಕರೆದುಕೊಂಡಿದ್ದಾರೆ. ಆದರೆ, ಪ್ರಧಾನಿ ಹಾಗೂ ಇತರ ಹಲವು ನಾಯಕರು ಚುನಾವಣೆಯ ವೇಳೆ ಹಾಗೂ ಸಾರ್ವಜನಿಕವಾಗಿ ಆಡುವ ಮಾತಿನಲ್ಲಿ ಪಾಲಿಸಬೇಕಿರುವ ಸಭ್ಯತೆಯನ್ನು ಪ್ರಚಾರದ ಸಂದರ್ಭದಲ್ಲಿ ಉಪೇಕ್ಷಿಸಿದ ನಿದರ್ಶನಗಳಿವೆ. ಬಿಜೆಪಿಯ ಚುನಾವಣಾ ಅಭಿಯಾನವು ವ್ಯಕ್ತಿಕೇಂದ್ರಿತವಾಗಿ ಇತ್ತು, ಪ್ರಚಾರದ ಸಂದರ್ಭದಲ್ಲಿ ಅಹಂಕಾರ ಕಾಣುತ್ತಿತ್ತು, ವಿರೋಧ ಪಕ್ಷ ಎಂಬುದು ಅಪ್ರಸ್ತುತ ಎಂದು ಭಾಗವತ್ ಹೇಳಿದ್ದರು ಹಾಗೂ ಸಹಮತದ ಅಗತ್ಯದ ಬಗ್ಗೆ ಅವರು ಒತ್ತು ನೀಡಿರುವುದನ್ನು 'ಕಾಂಗ್ರೆಸ್ ಮುಕ್ತ ಭಾರತ' ಎಂದು ಬಿಜೆಪಿ ಈ ಹಿಂದೆ ಹೇಳಿದ್ದ ಮಾತುಗಳ ಜೊತೆ ಹಾಗೂ ಬಿಜೆಪಿಯು ಪಾಲಿಸಿದ ಸಂಘರ್ಷದ ರಾಜಕೀಯದ ಜೊತೆ ಇರಿಸಿ ಅರ್ಥ ಮಾಡಿಕೊಳ್ಳಬೇಕು. ಮಣಿಪುರದಲ್ಲಿನ ಪರಿಸ್ಥಿತಿ ಬಗ್ಗೆ ಭಾಗವತ್ ಆಡಿರುವ ಮಾತುಗಳು, ಅಲ್ಲಿನ ಪರಿಸ್ಥಿತಿಯನ್ನು ಸರ್ಕಾರ ನಿಭಾಯಿಸಿದ ಬಗೆ ಕುರಿತ ನೇರ ಟೀಕೆಯಂತೆ ಇವೆ.

> ಭಾಗವತ್ ಅವರ ಮಾತುಗಳು ಎಲ್ಲರಿಗೂ ಅನ್ವಯ ಆಗುವಂತೆ ಇವೆಯಾದರೂ ಅವು ಬಿಜೆಪಿಗೆ ಹೆಚ್ಚು ಅನ್ವಯವಾಗುತ್ತವೆ

ಭಾಗವತ್ ಅವರ ಮಾತುಗಳು ಎಲ್ಲರಿಗೂ ಅನ್ವಯ ಆಗುವಂತೆ ಇವೆಯಾದರೂ ಅವು ಬಿಜೆಪಿಗೆ ಹೆಚ್ಚು ಅನ್ವಯವಾಗುತ್ತವೆ. ಭಾಗವತ್ ಅವರು ತಮ್ಮ ಭಾಷಣದಲ್ಲಿ ಹೆಸರುಗಳನ್ನು ಉಲ್ಲೇಖಿಸಿಲ್ಲ ಎಂಬುದು ನಿಜ. ಆದರೆ, ಆರ್‌ಎಸ್‌ಎಸ್ ಜೊತೆ ನಂಟು ಹೊಂದಿರುವ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲವು ಲೇಖನಗಳಲ್ಲಿ ಬಿಜೆಪಿಯ ಹೆಸರನ್ನು ಉಲ್ಲೇಖಿಸಿ ಕೆಲವು ಅಭಿಪ್ರಾಯಗಳನ್ನು ಹಂಚಿಕೊಳ್ಳಲಾಗಿದೆ. ಒಂದು ಲೇಖನದಲ್ಲಿ, ಬಿಜೆಪಿಯ ನಾಯಕರು ಹಾಗೂ ಕಾರ್ಯಕರ್ತರು ಅತಿಯಾದ ಆತ್ಮವಿಶ್ವಾಸ ಹೊಂದಿದ್ದರು, ತಮ್ಮದೇ ಲೋಕದಲ್ಲಿ ಬಹಳ ಸಂತಸದಿಂದ ಇದ್ದರು ಎಂದು ಹೇಳಲಾಗಿದೆ. ಬಿಜೆಪಿಗೆ ಚುನಾವಣೆಯಲ್ಲಿ ಆಗಿರುವ ಹಿನ್ನಡೆಗೂ ಸಂಘಕ್ಕೂ ಸಂಬಂಧವಿಲ್ಲ ಎಂದಿರುವ ಲೇಖನವು ಚುನಾವಣೆಯಲ್ಲಿ ನೆರವು ಬೇಕು ಎಂದು ಬಿಜೆಪಿ ಕೋರಲಿಲ್ಲ ಎಂದು ಹೇಳಿದೆ. ಪಕ್ಷವು ದುರ್ಬಲಗೊಂಡಾಗ, ವಿಫಲಗೊಂಡಾಗ ಆರ್‌ಎಸ್‌ಎಸ್ ಈ ಹಿಂದೆಯೂ ಬಿಜೆಪಿಯನ್ನು ಟೀಕಿಸಿದ ನಿದರ್ಶನಗಳು ಇವೆ. ನಾಯಕರು ಸಂಘಟನೆಗಿಂತ ಮಿಗಿಲಾಗಿ ನಿಲ್ಲಲು ಯತ್ನಿಸಿದಾಗ ಅದನ್ನು ಸಂಘವು ಮೆಚ್ಚಿಲ್ಲ ಎಂಬುದು ಕೂಡ ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಭಾಗವತ್ ಅವರು ಈಗ ಆಡಿರುವ ಮಾತುಗಳನ್ನು ಈ ಹಿಂದೆ ಬೇರೆಯವರೂ ಆಡಿದ್ದಾರೆ. ಆದರೆ ಈ ಬಾರಿ ಭಾಗವತ್ ಅವರೇ ಈ ಮಾತು ಆಡಿರುವುದು ಮಹತ್ವದ್ದಾಗಿದೆ.

### ದಿನದ ಟ್ವೀಟ್

**ನಿಷ್ಕ್ರಿಯ ಪಾಲಿಕೆಗಳು ಬೇಡ**

ಬೆಂಗಳೂರಿಗೆ ಬೇಕಾಗಿರುವುದು ನಿಷ್ಕ್ರಿಯವಾಗಿರುವ ಐದು ಪಾಲಿಕೆಗಳಲ್ಲ. ಬದಲಿಗೆ, ಇಲ್ಲಿಗೆ ಬೇಕಿರುವುದು ಕ್ರಿಯಾಶೀಲವಾದ, ಇನ್ನಷ್ಟು ಸ್ವಾಯತ್ತವಾದ ಬಿಬಿಎಂಪಿ. ರಾಜ್ಯ ಸರ್ಕಾರವು ಬಿಬಿಎಂಪಿಗೆ ಮೊದಲು ಚುನಾವಣೆ ನಡೆಸಲಿ.

**ವಸಂತ ಶೆಟ್ಟಿ,** ಬರಹಗಾರ, ಉದ್ಯಮಿ

### ಕಿಡಿನುಡಿ

ನಮ್ಮ ಶಾಶ್ವತ ನಿಂದಕ ಭಕ್ತರೇ; ಮಣಿಪುರದ ಬಗ್ಗೆ ಗಮನಹರಿಸಿ, ವಿರೋಧ ಪಕ್ಷಗಳ ಮಾತು ಕೇಳಿ, ಸಾಮಾಜಿಕ ಅಶಾಂತಿಯು ಕಳವಳಕಾರಿ, ಸೊಕ್ಕಿನಿಂದ ವರ್ತಿಸಬೇಡಿ, ನೀವು ಬಳಸುವ ಭಾಷೆ ಸ್ವೀಕಾರಾರ್ಹವಲ್ಲ ಎಂದು ನಾನು ಮೋದಿ ಅವರಿಗೆ ಹೇಳಿದಾಗಲೆಲ್ಲ ನನ್ನನ್ನು ನೀವು ನಿಂದಿಸುತ್ತಿದ್ದಿರಿ. ಈಗ ಇದೇ ಮಾತುಗಳನ್ನು ಆಡಿದ್ದಕ್ಕೆ ಭಾಗವತ್ ಅವರನ್ನೂ ನಿಂದಿಸುವಿರಾ?

**ಕಪಿಲ್ ಸಿಬಲ್,** ರಾಜ್ಯಸಭಾ ಸದಸ್ಯ

### 25 ವರ್ಷಗಳ ಹಿಂದೆ

ಭಾನುವಾರ, 13-6-1999

**• ಪಾಕಿಸ್ತಾನದ ಹಟದಿಂದ ವಿಫಲಗೊಂಡ ಮಾತುಕತೆ**

ನವದೆಹಲಿ, ಜೂನ್ 12– ಕಾರ್ಗಿಲ್ ವಲಯದಲ್ಲಿ ಉಲ್ಬಣಗೊಂಡಿರುವ ಪ್ರಕ್ಷುಬ್ಧ ಸ್ಥಿತಿಯ ನಿವಾರಣೆಗಾಗಿ ಭಾರತ ಮತ್ತು ಪಾಕಿಸ್ತಾನದ ವಿದೇಶಾಂಗ ಸಚಿವರು ತಮ್ಮ ನಿಲುವಿಗೆ ಕಟ್ಟುಬಿದ್ದಿದ್ದರಿಂದ ಅವರಿಬ್ಬರ ನಡುವೆ ಇಂದು ನಡೆದ ಚರ್ಚೆಯು ಯಾವುದೇ ಪ್ರತಿಫಲ ಇಲ್ಲದೆ ಸ್ಥಗಿತಗೊಂಡಿತು.

ಈ ಮಧ್ಯೆ ಭಾರತವು ಅತಿಕ್ರಮಣ ಕಾರರನ್ನು ಸಂಪೂರ್ಣವಾಗಿ ಭಾರತದ ಗಡಿಯಾಚೆ ಅಟ್ಟುವವರೆವಿಗೆ ಸೇನಾ ಕಾರ್ಯಾಚರಣೆಯನ್ನು ಮುಂದುವರಿಸುವ ದೃಢ ನಿರ್ಧಾರಕ್ಕೆ ಬದ್ಧವಾಗಿದೆ.

ಸೇನಾ ಕಾರ್ಯಚರಣೆ ಸ್ಥಗಿತ ಮತ್ತು ಗಡಿ ನಿಯಂತ್ರಣ ರೇಖೆಯನ್ನು ಮತ್ತೆ ಗುರುತಿಸುವ ಕಾರ್ಯವನ್ನು ಕೈಗೊಳ್ಳಬೇಕು ಎಂಬುದು ಸೇರಿದಂತೆ ಪಾಕಿಸ್ತಾನದ ಕೆಲವು ಬೇಡಿಕೆಗಳನ್ನು ಭಾರತ ತಳ್ಳಿ ಹಾಕಿದೆ.

**• ಅತಿಕ್ರಮಣಕಾರರ ಹೊರದಬ್ಬಿದ ಕಾರ್ಯಾಚರಣೆ**

ನವದೆಹಲಿ, ಜೂನ್ 12– ಬಟಾಲಿಕ್ ವಲಯದಲ್ಲಿನ ಪ್ರಮುಖ ಸ್ಥಳಗಳಲ್ಲಿ ಅಡಗಿಕೊಂಡಿದ್ದ ಪಾಕಿಸ್ತಾನಿ ಅತಿಕ್ರಮಣ-ಕಾರರನ್ನು ಯಶಸ್ವಿಯಾಗಿ ಹೊರಗಟ್ಟಲು ನಡೆದ ಗುಂಡಿನ ಚಕಮಕಿಯಲ್ಲಿ 13 ಮಂದಿ ಭಾರತೀಯ ಯೋಧರು ಮತ್ತು 25 ಮಂದಿ ಪಾಕಿಸ್ತಾನಿ ಕಡೆಯವರು ಸತ್ತಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಲೈಟ್ ಇನ್ಫೆಂಟ್ರಿ ರೆಜಿಮೆಂಟ್ ಮತ್ತು ಪ್ಯಾರಾಚೂಟ್ ಕಮಾಂಡೋಗಳು ಶತ್ರುಗಳ ನೆಲೆಯ ಮೇಲೆ ನಡೆಸಿದ ದಾಳಿಯಲ್ಲಿ ಕ್ಯಾಪ್ಟನ್ ಅಮೋಲ್ ಕಲಿಯಾ ಮತ್ತು ಇತರ ಹನ್ನೆರಡು ಮಂದಿ ಯೋಧರು ಪ್ರಾಣ ಕಳೆದುಕೊಂಡರು.

ಭೂ ಸೇನಾ ಪಡೆಯ ವಕ್ತಾರ ಕರ್ನಲ್ ವಿಕ್ರಂ ಸಿಂಗ್ ಇಂದು ಪತ್ರಿಕಾಗೋಷ್ಠಿಯಲ್ಲಿ, ನೈರುತ್ಯ ಭಾಗದಲ್ಲಿ ಸುಮಾರು ಏಳು ಗಂಟೆ ಕಾಲ ಹೋರಾಟ ನಡೆದಿದೆ ಎಂದರು.

### 50 ವರ್ಷಗಳ ಹಿಂದೆ

ಗುರುವಾರ, 13-6-1974

**• ಭಾರತದ ಜತೆ ಮಾತುಕತೆ ಪುನರ್ ಆರಂಭಿಸಲು ಪಾಕ್‌ಗೆ ಬ್ರಿಟನ್ ಸಲಹೆ**

ನವದೆಹಲಿ, ಜೂನ್ 12– ಉಪಖಂಡದಲ್ಲಿ ಬಾಂಧವ್ಯವನ್ನು ಮಾಮೂಲು ಸ್ಥಿತಿಗೆ ತರಲು ಭಾರತದ ಜತೆ ಮಾತುಕತೆ ಪುನರಾರಂಭಿಸುವುದರ ಅಗತ್ಯವನ್ನು ಬ್ರಿಟನ್ ಸರ್ಕಾರವು ಪಾಕಿಸ್ತಾನಕ್ಕೆ ಮನವರಿಕೆ ಮಾಡಿಕೊಟ್ಟಿದೆ.

ಲಂಡನ್ನಿನಲ್ಲಿ ಬ್ರಿಟನ್ನಿನ ಸಚಿವರ ಜತೆ ಪಾಕಿಸ್ತಾನದ ರಕ್ಷಣೆ ಮತ್ತು ವಿದೇಶಾಂಗ ವ್ಯವಹಾರಗಳ ಸ್ಟೇಟ್ ಸಚಿವ ಅಜೀಜ್ ಅಹ್ಮದ್ ಅವರು ಮಾತುಕತೆ ನಡೆಸಿದ ವೇಳೆ ಅವರಿಗೆ ಬ್ರಿಟನ್ ಸರ್ಕಾರದ ಈ ಅಭಿಪ್ರಾಯ ತಿಳಿಸಲಾಯಿತು ಎಂದು ಬಿಬಿಸಿ ಇಂದು ಉದ್ಧರಿಸಿತು.

ಪಾಕಿಸ್ತಾನದ ಸ್ಟೇಟ್ ಸಚಿವ ಅಜೀಜ್ ಅಹ್ಮದ್ ಅವರು ಬ್ರಿಟನ್ನಿನ ಸಚಿವರ ಜತೆ ಎರಡು ದಿನ ಮಾತುಕತೆ ನಡೆಸಿದರು.

**• ಸಂಸ್ಥಾ ಕಾಂಗ್ರೆಸ್ಸಿಗೆ ತಾರಕೇಶ್ವರಿ ರಾಜೀನಾಮೆ**

ಪಟನಾ, ಜೂನ್ 12– ಸಂಸ್ಥಾ ಕಾಂಗ್ರೆಸ್ ನಾಯಕಿ ಶ್ರೀಮತಿ ತಾರಕೇಶ್ವರಿ ಸಿನ್ಹ ಅವರು ಇಂದು ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು.

ಅವರು ಸದ್ಯದಲ್ಲೇ ಆಡಳಿತ ಕಾಂಗ್ರೆಸ್ ಪಕ್ಷ ಸೇರುವ ನಿರೀಕ್ಷೆಯಿದೆ ಎಂದು ಬಲ್ಲವೃತ್ತಗಳು ತಿಳಿಸಿವೆ.

ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷ ಅಶೋಕ ಮೆಹ್ತಾ ಅವರಿಗೆ ಬರೆದ ರಾಜೀನಾಮೆ ಪತ್ರದಲ್ಲಿ ಶ್ರೀಮತಿ ತಾರಕೇಶ್ವರಿ ಸಿನ್ಹ ಅವರು 'ರಾಷ್ಟ್ರದ ಎರಡೂ ಪಕ್ಷಗಳು ಒಗ್ಗೂಡುವಂಥ ಪರಿಸ್ಥಿತಿ-ಯನ್ನುಂಟು ಮಾಡಿ' ಎಂದು ತಿಳಿಸಿದ್ದಾರೆ.

## ಈ ಒಬ್ಬ ವಿಜ್ಞಾನಿಯಿಂದಾಗಿ ಮನುಜಲೋಕಕ್ಕೆ ಬಂತು ಏನೆಲ್ಲ ಸಂಕಟ

# ಈತ 'ಶತಮಾನದ ವಿಷಪುರುಷ'

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಇಲ್ಲಿ ಕುಂಭದ್ರೋಣ ಮಳೆ; ಅಲ್ಲಿ ದಿಲ್ಲಿಗೆ ದಿಲ್ಲಿಯೇ ಬಿಸಿ ಬಾಣಲೆ. ಇಲ್ಲಿ ನೀರಿನಿಂದಾಗಿ ಏನೆಲ್ಲ ಸಂಕಟ; ಅಲ್ಲಿ ನೀರಿಲ್ಲದೇ ಏನೆಲ್ಲ ಪರದಾಟ. ಇಲ್ಲಿ ಬಟ್ಟೆ ಒಣಗಿಸಲು ವಾಷಿಂಗ್ ಮಷಿನ್‌ನಲ್ಲಿ ಬಿಸಿಗಾಳಿಯ ಬಳಕೆ; ಅಲ್ಲಿ ಬಿಸಿಗಾಳಿಯನ್ನು ತಂಪು ಮಾಡಲೆಂದು ಏರ್ ಕಂಡಿಷನರ್‌ಗಳ ಅತಿ ಬಳಕೆ. ಅಂತೂ ಅನುಕೂಲಕ್ಕೆಂದು ಬದುಕು ಸುಗಮವಾಗಲೆಂದು ಎರಡೂ ಕಡೆ ವಿದ್ಯುತ್ತಿಗಾಗಿ ಫಾಸಿಲ್ ಇಂಧನಗಳ ಹೇರಳ ಬಳಕೆ. ಅದರಿಂದಾಗಿ ವಾತಾವರಣಕ್ಕೆ ಇನ್ನಷ್ಟು ಶಾಖವರ್ಧಕ ಅನಿಲಗಳ ಬಿಡುಗಡೆ. ಮುಂದಿನ ವರ್ಷ ವಾತಾವರಣ ಮತ್ತಷ್ಟು ಅಲ್ಲೋಲಕಲ್ಲೋಲ.

ಈ ಮಧ್ಯೆ ಹೊಸದಾಗಿ ಇನ್ನೊಂದು ತರಲೆ ವಿವಾದ ಏಳುತ್ತಿದೆ: ಏಷ್ಯ ಖಂಡದಲ್ಲಿ ಏಳುತ್ತಿರುವ ಮಾನ್ಸೂನ್ ಬಿರುಗಾಳಿ ಇಲ್ಲಿ ನೆಲಮಟ್ಟದಲ್ಲಿದ್ದ ಕೊಳಕು ಗಾಳಿಯನ್ನೆಲ್ಲ ಎತ್ತರದ ವಾಯುಮಂಡಲಕ್ಕೆ ತೂರುತ್ತಿದೆಯಂತೆ. ಅಲ್ಲಿ ಓಝೋನ್ ರಂಧ್ರವನ್ನು ಇನ್ನಷ್ಟು ದೊಡ್ಡದು ಮಾಡಲಿದೆಯಂತೆ. ಹೀಗೆಂದು ಅಮೆರಿಕದ ನ್ಯಾಷನಲ್ ಸೈನ್ಸ್ ಅಕಾಡೆಮಿಯ ವಿಜ್ಞಾನಿಗಳು ತಿಳಿಸಿದ್ದಾರೆ.

ಅದು ನಿಜವೋ ಇಲ್ಲವೊ. ಈಚಿನ ದಶಕಗಳಲ್ಲಿ ಚೀನಾ, ಕೊರಿಯಾ, ತೈವಾನ್, ಇಂಡೊನೇಷ್ಯ ಮತ್ತು ಭಾರತ- ಈ ದೇಶಗಳಲ್ಲಿ ಔದ್ಯಮೀಕರಣ ಭರದಿಂದ ಹೆಚ್ಚುತ್ತಿದೆ. ಪಶ್ಚಿಮದ ರಾಷ್ಟ್ರಗಳತ್ತ ಅಭಿವೃದ್ಧಿ ಸಾಧಿಸಬೇಕೆಂಬ ಭರದಿಂದ ಏಷ್ಯನ್ ದೇಶಗಳು ದಾಂಗುಡಿ ಇಡುತ್ತಿವೆ. ಪಶ್ಚಿಮದ 'ವಿಕಾಸ ಸೂತ್ರ'ವನ್ನೇ ಇವೂ ಅನುಸರಿಸುತ್ತಿವೆ. ಅಲ್ಲಿನವರು ಕಳಚಿ ಹಾಕಿದ ಕೊಳಕು ಸೂಸುವ, ಕಳಪೆ ಯಂತ್ರಗಳನ್ನೆಲ್ಲ ಇಲ್ಲಿ ಸ್ಥಾಪಿಸಿದ ಅದೆಷ್ಟೊ ಉದಾಹರಣೆಗಳೂ ಇವೆ. ಉದ್ಯಮಕ್ಕೆ ಬೇಕಿದ್ದ ಸಾಲಸೋಲ, ಬಂಡವಾಳವೂ ಅಲ್ಲಿಂದಲೇ ಏಷ್ಯದತ್ತ ಹರಿದು ಬಂದಿದೆ. ಪಶ್ಚಿಮದವರು ತಕರಾರು ಎತ್ತುವಂತಿಲ್ಲ.

ಇದಕ್ಕೆ ಸಂಬಂಧಿಸಿ ಇಲ್ಲೊಂದು ಸ್ವಾರಸ್ಯದ ಕತೆ ಇದೆ: ಥಾಮಸ್ ಮಿಜ್ಲೀ (Midgley) ಜ್ಯೂನಿಯರ್ ಎಂಬೊಬ್ಬ ಪ್ರಚಂಡ ವಿಜ್ಞಾನಿ ಅಮೆರಿಕದಲ್ಲಿದ್ದ. 'ಭೂಮಿಗೆ ಬಹುವಿಧದ ಸಂಕಷ್ಟಗಳನ್ನು ತಂದ ಏಕೈಕ ವ್ಯಕ್ತಿ' ಎಂತಲೇ ಕುಪ್ರಸಿದ್ಧಿ ಪಡೆದ ಭೂಪ ಈತ. ಸರಿಯಾಗಿ 100 ವರ್ಷಗಳ ಹಿಂದಿನ ಈತನ ಕತೆ ಹೀಗಿದೆ: ಆಗಲೇ ಪೆಟ್ರೋಲ್ ಗಾಡಿಗಳು ಮಾರ್ಗಮಧ್ಯೆ ಆಗಾಗ ಕೆಮ್ಮುತ್ತ, ಕ್ಯಾಕರಿಸುತ್ತ ಓಡುತ್ತಿದ್ದುವು. ಅಂತರ್ದಹನ ಎಂಜಿನ್‌ಗಳ ಈ ಕಾಯಿಲೆಗೆ ನಾಕಿಂಗ್ (knocking) ಎನ್ನುತ್ತಾರೆ. ಅಂದಿನ ಸುವಿಖ್ಯಾತ 'ಜನರಲ್ ಮೋಟಾರ್ಸ್' ಕಂಪನಿಯ ಉದ್ಯೋಗಿಯಾಗಿದ್ದ ಈತ ಏನೇನೋ ಪ್ರಯೋಗ ಮಾಡಿ, ಪೆಟ್ರೋಲಿಗೆ ಸೀಸದ (lead-ಲೆಡ್) ದ್ರಾವಣ ಸೇರಿಸಿದರೆ ಸರಿಹೋಗುತ್ತದೆ ಎಂದು ಕಂಡುಕೊಂಡ.

ಸೀಸ ಭಾರೀ ವಿಷಕಾರಿ ವಸ್ತು ಎಂಬುದು ಆಗಲೇ ಗೊತ್ತಿತ್ತು. ಅದಕ್ಕೊಂದು ದೀರ್ಘ ಇತಿಹಾಸವೇ ಇದೆ. ರೋಮನ್ನರ ಕಾಲದಲ್ಲಿ ಕೊಳಾಯಿಗಳೂ, ಮದ್ಯದ ಲೋಟಗಳೂ ಸೀಸದ್ದೇ ಆಗಿದ್ದವು. ರೋಮ್ ಸಾಮ್ರಾಜ್ಯದ ಪತನಕ್ಕೆ ಅದೇ ಕಾರಣ ಎಂದು ವಿಜ್ಞಾನಿಗಳು ಸಾಬೀತು ಮಾಡಿದ್ದಾರೆ. ಮಕ್ಕಳ ಮಂದಬುದ್ಧಿಗೆ ಅದೇ ಮುಖ್ಯ ಕಾರಣ ಎಂತಲೂ ಹೇಳಿದ್ದಾರೆ. ರಕ್ತದ ಮೂಲಕ ಸೀಸ ದೇಹಕ್ಕೆ ಒಮ್ಮೆ ಸೇರಿದರೆ ಮತ್ತೆಂದೂ ಹೊರಕ್ಕೆ ಬರಲಾರದು ಎಂಬುದು ಈ ಮಿಜ್ಲಿಗೂ ಗೊತ್ತಿತ್ತು. ಸೀಸದ ದ್ರಾವಣದ ಬದಲು ಕಡ್ಲೆಕಾಯಿ ಎಣ್ಣೆಯನ್ನು ಅಥವಾ ಇಥೆನಾಲ್ ಎಂಬ ಮದ್ಯಸಾರವನ್ನು ಶೇಕಡ 10ರಷ್ಟು ಸೇರಿಸಿದರೂ ಪೆಟ್ರೋಲ್ ಗಾಡಿ ಸಲೀಸಾಗಿ ಓಡುತ್ತದೆ ಎಂಬುದನ್ನೂ ಈತ ಕಂಡುಹಿಡಿದಿದ್ದ. ಆದರೂ ಸೀಸ ವಿಷದ ಸಂಯುಕ್ತವನ್ನು ಸೇರಿಸಲು ಕಾರಣ ಏನೆಂದರೆ ಅದಕ್ಕೆ ಮಾತ್ರ ಪೇಟೆಂಟ್ ದೊರೆತು, ಹಣ ಗಳಿಕೆಗೆ ಅವಕಾಶವಿತ್ತು. ಅಲ್ಪವೆಚ್ಚದ್ದೂ ಆಗಿತ್ತು. 1924ರಲ್ಲಿ ಪತ್ರಿಕಾಗೋಷ್ಠಿ ಕರೆದು ಈತ ಸೀಸದ ದ್ರಾವಣವನ್ನು ಕೈಗೆ ಸುರಿದುಕೊಂಡು ಮೂಸಿ ತೋರಿಸಿದ. ಪೆಟ್ರೋಲಿನ ಹೊಗೆಯಲ್ಲಿ ಸೀಸದ ಅಂಶ ನಗಣ್ಯವೆಂದೂ ಸುರಕ್ಷಿತವೆಂದೂ ಘೋಷಿಸಿದ.

ಈತನ ಆವಿಷ್ಕಾರಕ್ಕೆ ಪ್ರಶಸ್ತಿಗಳೂ ಬಂದವು. ಅಂದಿನ ಪ್ರಮುಖ ಕಂಪನಿಗಳು (ಫೋರ್ಡ್, ಜಿಎಮ್, ಎಸ್ಸೊ, ಡ್ಯೂಪಾಂಟ್) ಜಂಟಿಯಾಗಿ ಈತನ 'ಟೆಟ್ರಾ ಈಥೈಲ್ ಲೆಡ್' ದ್ರಾವಣ ತಯಾರಿಸಲೆಂದು ಹಣ ಹೂಡಿದವು. ಜನರು ಆಕ್ಷೇಪ ಎತ್ತಬಾರದೆಂದು 'ಲೆಡ್'(ಸೀಸ) ಎಂಬ ಪದವನ್ನು ಮರೆಮಾಚಿ ತಮ್ಮ ಹೊಸ ಕಂಪನಿಗೆ ಬರೀ 'ಈಥೈಲ್' ಎಂದು ಹೆಸರಿಟ್ಟವು. ಕಾರು, ಲಾರಿ, ಮಿಲಿಟರಿ ವಾಹನಗಳಿಗೆ ಸೀಸದ್ರಾವಣದ ಪೆಟ್ರೋಲನ್ನು ತುಂಬಿ ಭೂಮಿಗೆಲ್ಲ ಸೀಸದ ಹೊಗೆಯನ್ನು ತೂರಿದವು. 1970ರ ಸುಮಾರಿಗೆ ಪಾಶ್ಚಿಮಾತ್ಯ ದೇಶಗಳಲ್ಲಿ ಈ ವಿಷದ ವಿರುದ್ಧ ಭಾರೀ ಕೂಗೆದ್ದಿತು. ಮಕ್ಕಳ ರಕ್ತದಲ್ಲೂ ಸೀಸದ ಅಂಶ ಹೆಚ್ಚುತ್ತ, ಕಿಡ್ನಿವೈಫಲ್ಯದ ಪ್ರಕರಣಗಳು ಹೆಚ್ಚಿದವು. ಯಾವ ವಾಹನಕ್ಕೂ ಸೀಸದ ದ್ರಾವಣವನ್ನು ಸೇರಿಸಬಾರದೆಂಬ ಕಾನೂನು ಬಂತು. ನಮ್ಮಲ್ಲೂ ಸೀಸಮುಕ್ತ ಪೆಟ್ರೋಲ್ ಬೇಕೆಂದು ಭಾರತದಲ್ಲೇ ಮೊದಲ ಬಾರಿಗೆ 1990ರ ಮಾರ್ಚ್‌ನಲ್ಲಿ ಮೈಸೂರಿನಲ್ಲಿ ನಡೆದ ಜಾಥಾ ಕುರಿತು ಇದೇ ಅಂಕಣದಲ್ಲಿ ಚರ್ಚೆಯಾಗಿತ್ತು. ಅಂತೂ 2000ದ ಹೊತ್ತಿಗೆ ಎಲ್ಲೆಲ್ಲೂ ಸೀಸರಹಿತ ಪೆಟ್ರೋಲ್ ಬಳಕೆಗೆ ಬಂತು. ಆದರೆ ಅಮೆರಿಕದ್ದೇ 'ಇನ್ನೊಸ್ಪೆಕ್' ಹೆಸರಿನ ಕಂಪನಿ ಮಾತ್ರ ಹಿಂದುಳಿದ ಅಲ್ಜೀರಿಯಾ, ಇರಾಕ್, ಮ್ಯಾನ್ಮಾರ್, ಅಫ್ಘಾನಿಸ್ತಾನ್‌ಗಳಿಗೆ 2014ರವರೆಗೂ ಪೆಟ್ರೋಲಿಗೆ ಸೀಸದ್ರಾವಣವನ್ನು ಪೂರೈಸುತ್ತ ಬಂತು. ಆ ದೇಶಗಳ ಮುಖ್ಯಸ್ಥರನ್ನು ಲಾಭಾರ್ಥಿಗಳನ್ನಾಗಿ ಮಾಡಿ-ಕೊಂಡಿದ್ದಕ್ಕೆ ಕಂಪನಿಯ ಅಧಿಕಾರಿಗಳು ಜೈಲು ಸೇರಿದ್ದೂ ಆಯಿತು. ಅಂತೂ ಗಾಳಿಯಲ್ಲಿ ಸೇರಿದ್ದ ಸೀಸದ ಅಂಶ ಕ್ರಮೇಣ ಕಡಿಮೆಯಾಗಲು 40 ವರ್ಷಗಳೇ ಬೇಕಾದವು.



ಈತನ ಇನ್ನೊಂದು ಸಂಶೋಧನೆ ಓಝೋನ್ ಪದರದ ನಾಶಕ್ಕೆ ಕಾರಣವಾಯಿತು. ರೆಫ್ರಿಜರೇಟರ್ ಮತ್ತು ಏರ್ ಕಂಡೀಷನರ್‌ಗಳಿಗೆ 'ಸಿಎಫ್‌ಸಿ'(ಕ್ಲೋ-ರೋಫ್ಲೂರೊ ಕಾರ್ಬನ್) ಬಳಸಿದರೆ ದಕ್ಷತೆ ಹೆಚ್ಚುತ್ತದೆಂದು ಈತ ತೋರಿಸಿದ್ದೇ ತಡ, ಜಗತ್ತಿನೆಲ್ಲೆಡೆ ಹೊಸ ಯಂತ್ರಗಳು ಬಂದವು. ಚಂದದ ಡಬ್ಬಗಳಿಂದ ಪುಸ್‌ಪುಸ್ ಎಂದು ಸುಗಂಧವನ್ನೂ ಜಿರಳೆ ನಾಶಕ ವಿಷಗಳನ್ನೂ ಸಲೀಸಾಗಿ ಹೊಮ್ಮಿಸುವ ಸಿಂಚನಕಾರಿ-ಯಾಗಿಯೂ ಸಿಎಫ್‌ಸಿ ವ್ಯಾಪಕವಾಗಿ ಬಳಕೆಗೆ ಬಂತು. ಮಿಲಿಟರಿ ಯೋಧರು ಸೊಳ್ಳೆ-ತಿಗಣೆಗಳ ನಾಶಕ್ಕೂ ಸಿಎಫ್‌ಸಿ ಇದ್ದ ಸ್ಪ್ರೇಗಳನ್ನೇ ಬಳಸತೊಡಗಿದರು. ಒಟ್ಟಾರೆ ಪರಿಣಾಮ ಏನೆಂದರೆ ನೆಲದಿಂದ 40 ಕಿ.ಮೀ. ಎತ್ತರದ ಓಝೋನ್ ಸುರಕ್ಷಾ ಕವಚ ಛಿದ್ರವಾಯಿತು. ಅದರ ದುಷ್ಪರಿಣಾಮಕ್ಕೆ ಬೆದರಿ ಸಿಎಫ್‌ಸಿ ನಿಷೇಧಕ್ಕೆ ಜಾಗತಿಕ ಸಮ್ಮೇಳನವೇ ಜರುಗಿ ಮಾಂಟ್ರಿಯಲ್ ಒಪ್ಪಂದ ಜಾರಿಗೆ ಬಂತು. ಪಶ್ಚಿಮದಲ್ಲಿ ನಿಷೇಧವಾದ ಬೆನ್ನಲ್ಲೇ ಅದೇ ತಂತ್ರಜ್ಞಾನವನ್ನು ನಮ್ಮತ್ತ ಸಾಗಹಾಕಲೆಂದು ವಿದೇಶೀ ಕಂಪನಿಗಳು ಇತ್ತ ದೌಡಾಯಿಸಿದವು. ದಿಲ್ಲಿಯಲ್ಲಿ ವಿಶೇಷ ಮಾರಾಟಮೇಳವೂ ಜರುಗಿತು.

ಸಿಎಫ್‌ಸಿಯಿಂದಾಗಿ ಓಝೋನ್ ಪದರದ ನಾಶವಷ್ಟೇ ಅಲ್ಲ; ಭೂಮಿಯನ್ನು ಬಿಸಿ ಮಾಡುವಲ್ಲಿ ಅದು ಕಾರ್ಬನ್ ಡೈಆಕ್ಸೈಡ್‌ಗಿಂತ ಹತ್ತು ಸಾವಿರ ಪಟ್ಟು ಪ್ರಬಲವಾಗಿದೆ. ಈಗೇನೋ ಸುಧಾರಿತ ದೇಶಗಳಲ್ಲಿ ಅಂಥ ಮಾಲಿನ್ಯವಿಲ್ಲ. ಆದರೆ ಅಲ್ಲಿಂದ ಬಂದ ಹಳೇ ಕಾರ್ಖಾನೆಗಳಿಂದಾಗಿ ಏಷ್ಯದ ದೇಶಗಳಲ್ಲಿ ಹೊಮ್ಮುವ ಕೊಳಕು ಗಾಳಿಯೆಲ್ಲ ಈಗಿನ ಮಾನ್ಸೂನ್ ಬಿರುಗಾಳಿಯಿಂದಾಗಿ ಮೇಲಕ್ಕೇರಿ ಓಝೋನ್ ವಲಯಕ್ಕೆ ಅಪಾಯ ತರುತ್ತಿದೆ ಎಂದು ಈಗ ಕೂಗೆದ್ದಿದೆ.

ಭೂಮಿಯನ್ನು ಅಪಾಯಕ್ಕೆ ಸಿಲುಕಿಸಿದವರಲ್ಲಿ ಥಾಮಸ್ ಮಿಜ್ಲೀ ಒಬ್ಬನನ್ನೇ ದೂರಬೇಕಾಗಿಲ್ಲ. ಆತನ ಸಂಶೋಧನೆಯನ್ನು ಲಾಭಕ್ಕಾಗಿ ಬಳಸಿಕೊಂಡ ಎಲ್ಲ ಬಹುರಾಷ್ಟ್ರೀಯ ಕಂಪನಿಗಳೂ, ಎಲ್ಲ ಭೋಗಪಿಪಾಸುಗಳೂ ಇದರಲ್ಲಿ ಪಾಲುದಾರರೇ ಆಗಿದ್ದಾರೆ. ಆಗಿದ್ದೇವೆ. ಭೂಮಿಗೆ ಈಗ ಸಂಕಟ ಬಂದಿದೆ ಎಂಬುದೂ ಸರಿಯಲ್ಲ. ನಮ್ಮೆಲ್ಲರಿಗೆ ಬಂದಿದೆ. ನಮ್ಮಲ್ಲೂ ವಿಶೇಷವಾಗಿ ದುರ್ಬಲರಿಗೆ ಬಂದಿದೆ.

ಈ ವಿಷಪುರುಷನ ಅಂತ್ಯವೂ ವಿಶಿಷ್ಟದ್ದಾಗಿತ್ತು. ತನ್ನ 51ನೇ ವಯಸ್ಸಿನಲ್ಲಿ ಪೋಲಿಯೊ ಕಾಯಿಲೆಗೆ ತುತ್ತಾಗಿ ಈತ ಹಾಸಿಗೆ ಹಿಡಿದ. ಆಗಾಗ ಎದ್ದು ಗಾಲಿಕುರ್ಚಿಯ ಮೇಲೆ ಕೂರಲೆಂದು ತಾನೇ ಹಗ್ಗ, ಚಕ್ರ, ಲಿವರ್, ಗಿಯರ್, ದಾರಗಳ ಒಂದು ಕ್ಲಿಷ್ಟ ಸಲಕರಣೆಯನ್ನು ರೂಪಿಸಿಕೊಂಡ. 1944ರ ನವೆಂಬರ್ 2ರಂದು ಏಳಲು ಯತ್ನಿಸಿದಾಗ ಅವನ ಹಗ್ಗದ ಸೂತ್ರ ಅವನಿಗೇ ಕುಣಿಕೆಯಾಗಿ, ನೇಣು ಬಿಗಿದ ಸ್ಥಿತಿಯಲ್ಲಿ ಸಾವಪ್ಪಿದ. ವಿಧಿಯ 'ಸೂತ್ರ'ವೇ ವಿಲಕ್ಷಣ!

### ಚುರುಮುರಿ

# ಸಹಿ ಪುರಾಣ!

• ಬಿ.ಎನ್. ಮಲ್ಲೇಶ್

**ರಾತ್ರಿ** ಹತ್ತು ಗಂಟೆ ಸಮಯ. ಆಂಧ್ರದಲ್ಲಿ ಮೊಬೈಲ್ ರಿಂಗಾಯಿತು. ದೆಹಲಿ ಧ್ವನಿ... 'ಬಾಬೂಜೀ... ಕೈಸೇ ಹೋ..'

'ನಮೋ'ಸ್ತೆ, ನಮೋಸ್ತೆ ಮಹಾನ್‌ಜೀ... ತಾವು ಹೇಗಿದ್ದೀರಿ?'

'ತಮ್ಮ ಸಹಕಾರದಿಂದ ಚೆನ್ನಾಗಿದ್ದೇನೆ ಬಾಬೂಜೀ... ಕಳೆದ ಹತ್ತು ವರ್ಷ ಏನೂ ಅನ್ನಿಸ್ಲಿಲ್ಲ, ಮುಂದಿನ ಐದು ವರ್ಷದ್ದೇ ಸವಾಲು...'

'ಆರಾಮಾಗಿರಿ, ನಾವೆಲ್ಲ ನಿಮ್ಮ ಜೊತೆ ಇದ್ದೇವಲ್ಲ?'

'ಅದೇ ಸವಾಲು, ಬೆಳಿಗ್ಗೆ ಎಲ್ಲರಿಗೂ ಗುಡ್ ಮಾರ್ನಿಂಗ್ ಹೇಳಬೇಕು, ರಾತ್ರಿ ಮಲಗಲೇ ಅಂತ ಕೇಳ್ಬೇಕು...'

'ಛೆಛೆ, ಅದೆಲ್ಲ ಏನೂ ಬೇಡ... ಈಗ ಏನು ಫೋನ್ ಮಾಡಿದ್ದು?'

'ಏನಿಲ್ಲ, ಆ ಹೊಸ ಕಡತಕ್ಕೆ ನೀಲಿ ಪೆನ್ನಿಂದ ಸಹಿ ಮಾಡಲೋ, ಹಸಿರು ಪೆನ್ನಿಂದ ಸಹಿ ಮಾಡಲೋ?'

'ನೀಲಿ ಪೆನ್ನಿಂದಲೇ ಮಾಡಿ ಪರವಾಗಿಲ್ಲ...'

'ಅಚ್ಛಾ... ಗುಡ್ ನೈಟ್, ನಾನಿನ್ನು ಮಲಗಲೇ?'

ಫೋನ್ ಕಟ್ಟಾಗಿ ಬಿಹಾರದಲ್ಲಿ ರಿಂಗಾಯಿತು. 'ತೀಶ್ ಕುಮಾರ್‌ಜೀ... ಹೇಗಿದ್ದೀರಿ? ಆ ಹೊಸ ಕಡತಕ್ಕೆ ಬಾಬೂಜಿ ನೀಲಿ ಪೆನ್ನಿಂದ ಸಹಿ ಮಾಡಲು ಹೇಳಿದಾರೆ, ನಿಮ್ಮ ಅಭಿಪ್ರಾಯ ಏನು?'

'ನೀಲಿ ಚೆನ್ನಾಗಿರಲ್ಲ ಮಹಾನ್, ಹಸಿರು ಪೆನ್ನಿಂದ ಮಾಡಿ...'

'ಅಯ್ತು, ಅಯ್ತು... ನಾನಿನ್ನು ಮಲಗಲೇ?'

ಆ ಫೋನೂ ಕಟ್ಟಾಗಿ ಮಂಡ್ಯದಲ್ಲಿ ರಿಂಗಾಯಿತು 'ಬ್ರದರ್'ಜೀ... ಹೇಗಿದ್ದೀರಿ? ಉಜ್ವಲ್ ಕತೆ ಎಲ್ಲಿಗೆ ಬಂತು?'

'ಅದಾ... ಟೀವಿ ತುಂಬ ಎರಡು ಡೈವೋರ್ಸು, ಒಂದು ಸಿನಿಮಾ ಮರ್ಡರ್ ನಡುವೆ ಎಲ್ರೂ ಉಜ್ವಲ್‌ನ ಮರೆತೇಬಿಟ್ಟದಾರೆ ಮಹಾನ್‌ಜೀ...'

'ಅಚ್ಛಾ? ಈಗ ಹೊಸ ಕಡತಕ್ಕೆ ಬಾಬೂಜಿ ನೀಲಿ ಪೆನ್ನಲ್ಲಿ, ತೀಶ್ ಕುಮಾರ್ ಹಸಿರು ಪೆನ್ನಲ್ಲಿ ಸಹಿ ಹಾಕಿ ಅಂತಿದಾರೆ, ಪ್ರಾಬ್ಲಂ ಆಗಿಬಿಟ್ಟಿದೆ, ಏನ್ ಮಾಡ್ಲಿ?'

'ಅದಕ್ಯಾಕೆ ತಲೆ ಕೆಡಿಸ್ಕಂತೀರಿ ಮಹಾನ್, ಎರಡೂ ಪೆನ್ನಲ್ಲಿ ಸಹಿ ಹಾಕಿ ನೆಮ್ಮದಿಯಾಗಿ ಮಲಗಿ, ಯಾರೂ ಪಿಟಿಕ್ಕನ್ನಲ್ಲ...'

ಫೋನ್ ಕಟ್ಟಾಯಿತು.

### ಸಂಗತ

# ಘನ ಪರಂಪರೆ ಎತ್ತಿಹಿಡಿಯಬೇಕಿದೆ

**ಸಂಸತ್ತಿಗೆ ಆಯ್ಕೆಯಾದವರು ದೇಶದ ಸಾಂಸ್ಕೃತಿಕ ನಾಯಕರೂ ಆಗಿರುತ್ತಾರೆ. ಇದನ್ನು ಅರಿತು ನಡೆಯಬೇಕಾದ ನೈತಿಕ ಜವಾಬ್ದಾರಿ ಅವರ ಮೇಲಿದೆ**

• ಡಾ. ಲಕ್ಷ್ಮಣ ವಿ.ಎ.

**ಒಂದು** ದಿನ ಝೆನ್ ಗುರುವಿನ ಬಳಿ ಒಬ್ಬ ತಾಯಿ ಬಂದು, ತನ್ನ ಮಗನಿಗೆ ಅತಿಯಾಗಿ ಸಿಹಿ ತಿನ್ನುವ ಕೆಟ್ಟ ಚಟ ಅಂಟಿಕೊಂಡಿದೆ. ಅದನ್ನು ಹೋಗಲಾಡಿಸುವಂ-ತಹ ಉಪದೇಶ ನೀಡಬೇಕು ಎಂದು ಕೋರುತ್ತಾಳೆ. ಆಗ ಕ್ಷಣ ಯೋಚಿಸಿದ ಗುರು, ಆ ದಿನ ಯಾವುದೇ ಉಪದೇಶ ನೀಡದೆ, ಒಂದು ವಾರ ಬಿಟ್ಟು ಬರಲು ಹೇಳುತ್ತಾರೆ. ಅದರಂತೆ ಆ ತಾಯಿ ಮಗನ ಜೊತೆ ವಾಪಸ್ ಬಂದಾಗ, ಗುರು ಮತ್ತದೇ ನಿರ್ಲಿಪ್ತತೆಯಲ್ಲಿ ಮುಂದಿನ ವಾರ ಬರಲು ಸೂಚಿಸುತ್ತಾರೆ. ಹೀಗೆ ಎರಡು– ಮೂರು ಸಲ ತಾಯಿ ಮತ್ತೆ ಮತ್ತೆ ಮರಳಿ ಬಂದಾಗ, ಒಂದು ದಿನ ಅವರು ಆಕೆಯ ಮಗನಿಗೆ ಸಿಹಿ ತಿನ್ನುವುದರ ಅಪಾಯಗಳನ್ನು ವಿವರಿಸಿ ಕಳುಹಿಸುತ್ತಾರೆ.

ಈ ಸರಳ ಉಪದೇಶವನ್ನು ಝೆನ್ ಗುರು ಮೊದಲ ದಿನವೇ ಕೊಡುವುದು ಸಾಧ್ಯವಿತ್ತು. ಚೋದ್ಯವೆಂದರೆ, ತಾಯಿ ಮೊದಲ ಬಾರಿ ಬಂದಾಗ ಸ್ವತಃ ಗುರುವೇ ಸಿಹಿ ತಿನ್ನುವ ಅಭ್ಯಾಸಕ್ಕೆ ಅಂಟಿಕೊಂಡಿದ್ದರು. ಈ ದುರಭ್ಯಾಸ ವನ್ನು ಮೊದಲು ತಾನು ಬಿಡುವವರೆಗೂ ಆಕೆಯ ಮಗನಿಗೆ ಗುರು ಉಪದೇಶ ನೀಡಲಿಲ್ಲ. ಇದು ಒಬ್ಬ ನಿಜವಾದ ಗುರುವಿನ ಬದ್ಧತೆ.

'ತೊಡೆಯಬಾರದ ಪದವ ಬರೆಯಬಾರದು ನೋಡ!' ಎಂದು ಅಲ್ಲಮ ಹೇಳುತ್ತಾನೆ. ಯಾವುದನ್ನು ತೊಡೆದುಹಾಕಲು ಸಾಧ್ಯವಿಲ್ಲವೋ ಅದನ್ನು ಬರೆಯಬಾರದು ಎಂಬ ಸಂದೇಶವಿರುವ ಈ ವಾಕ್ಯವು ಬರಹಕ್ಕೆ ಸಂಬಂಧಿಸಿದ್ದಾದರೂ ಒಬ್ಬ ವ್ಯಕ್ತಿಯ ವ್ಯಕ್ತಿತ್ವಕ್ಕೆ ಸಂಬಂಧಿಸಿದ ವ್ಯಾಖ್ಯಾನವಾಗಿಯೂ ಇದನ್ನು ಪರಿಗಣಿ-ಸಬಹುದು.

ಒಬ್ಬ ಶಿಕ್ಷಕ ಮಕ್ಕಳಿಗೆ ಸರಿಯಾದ ಶಿಕ್ಷಣ ಕೊಡದಿದ್ದರೆ ಒಂದು ತಲೆಮಾರು ಹಾಳಾದಂತೆ. ಒಬ್ಬ ವೈದ್ಯ ತಪ್ಪು ಚಿಕಿತ್ಸೆ ನೀಡಿದರೆ ಒಬ್ಬ ವ್ಯಕ್ತಿಯ ಸಾವಾದಂತೆ. ಒಬ್ಬ ನ್ಯಾಯಾಧೀಶರ ತಪ್ಪು ತೀರ್ಪಿನಿಂದ ಅಮಾಯಕನಿಗೆ ಅನ್ಯಾಯವಾದಂತೆ. ಅದೇ ಒಬ್ಬ ಜನಪ್ರತಿನಿಧಿ ದಾರಿ ತಪ್ಪಿದರೆ ಇಡೀ ಒಂದು ವರ್ತಮಾನ ವನ್ನು ಕುಲಗೆಡಿಸಿ ದೇಶದ ಭವಿಷ್ಯವನ್ನು ಕತ್ತಲಿನಲ್ಲಿ ಇರಿಸಿದಂತೆ ಆಗುತ್ತದೆ. ನೈತಿಕತೆ, ಧಾರ್ಮಿಕ ಸಹಿಷ್ಣುತೆ, ಕೂಡಿ ಬದುಕುವ ಅನ್ಯೋನ್ಯ ಭಾವ ಎಂಬ ಕನ್ನಡಿಯಲ್ಲಿ ಜನನಾಯಕ ದಿನನಿತ್ಯ ತನ್ನ ತಾ ಆತ್ಮವಿಮರ್ಶೆಗೆ ಒಡ್ಡಿಕೊಂಡು ಆಳಿದರೆ ಮಾತ್ರ ತಾನು ನಿಜ ಅರ್ಥದ ಅರಸನಾಗುತ್ತಾನೆ.

ಪ್ರಸಕ್ತ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾದ ಸಂಸದರ ಪೈಕಿ ಶೇಕಡ 46ರಷ್ಟು ಮಂದಿ ಅಪರಾಧದ ಹಿನ್ನೆಲೆಯುಳ್ಳವರಾಗಿದ್ದು, ಇವರಲ್ಲಿ ಶೇಕಡ 93ರಷ್ಟು ಮಂದಿ ಕೋಟ್ಯಧಿಪತಿಗಳೇ ಇರುವುದು 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್'ನ ಸಮೀಕ್ಷಾ ವರದಿಯಿಂದ ತಿಳಿಯುತ್ತದೆ. ಇದು, ಪ್ರಜಾಪ್ರಭುತ್ವದ ಅಸ್ತಿತ್ವ ಹಾಗೂ ದೇಶದ ಒಟ್ಟಾರೆ ಆರೋಗ್ಯದ ಬಗ್ಗೆ ಗಂಭೀರವಾಗಿ ಯೋಚಿಸುವಂತೆ ಮಾಡುತ್ತದೆ.

ಹಿಂದಿನ ಹತ್ತು– ಹದಿನೈದು ವರ್ಷಗಳ ಅಂಕಿ ಅಂಶಗಳನ್ನು ಗಮನಿಸಿದರೆ, ಭಾರತದ ಸಂಸದೀಯ ಜನತಂತ್ರ ವ್ಯವಸ್ಥೆ ಹಿಂದೆಂದೂ ಕಂಡರಿಯದಂತಹ ಬಿಕ್ಕಟ್ಟನ್ನು ಈಗ ಎದುರಿಸುತ್ತಿದೆ ಎನಿಸುತ್ತದೆ. ಚುನಾಯಿತ ಸದನಗಳ ಗುಣಮಟ್ಟ ಕ್ರಮೇಣ ಕುಸಿಯುತ್ತಿದೆ. ದೇಶದ ಒಬ್ಬ ಚುನಾಯಿತ ಸಂಸದನೆಂದರೆ ಅವನು ಆಯಾ ಸಮಾಜದ ಕನ್ನಡಿ ಇದ್ದ ಹಾಗೆ. ಆ ಸಂಸದ ಶಾಸನಬದ್ಧ ಅಧಿಕಾರ ಚಲಾಯಿಸುವುದಕ್ಕೆ ಮಾತ್ರ ಅರ್ಹನಾಗದೆ ಏಕಕಾಲಕ್ಕೆ ದೇಶದ ಸಾಂಸ್ಕೃತಿಕ ನಾಯಕನೂ ಆಗಿರುತ್ತಾನೆ. ನಾಯಕನು ಸದಾಚಾರ, ಪರಿಶುದ್ಧ ನಡೆ– ನುಡಿ ಮೈಗೂಡಿಸಿಕೊಂಡು ನೆಲದ ಕಾನೂನನ್ನು ಗೌರವಿಸುವುದು ಅಪೇಕ್ಷಣೀಯವಾಗಿರುತ್ತದೆ. ಇಲ್ಲಿ ಆಳುವ ದೊರೆಯೇ ಘೋರ ಅಪರಾಧಿಯಾದರೆ ಯಾರನ್ನು ದೂಷಿಸುವುದು? ಆತನನ್ನು ಆರಿಸಿ ಕಳಿಸಿದ ಮತದಾರನ ತಪ್ಪು ಕೂಡ ವಿವೇಚನೆಗೆ ಒಳಗಾಗುತ್ತದೆ. ಆದರೆ ಹಣ, ತೋಳ್ಬಲ ಮತ್ತು ಮಾಫಿಯಾ ಸುಳಿಯಲ್ಲಿ ಅವನ ಅಸಹಾಯಕತೆ ಅಡಗಿರುತ್ತದೆ.

ಅಪರಾಧ ಪ್ರಕರಣಗಳ ಆರೋಪ ಹೊತ್ತಿರುವ ಅಭ್ಯರ್ಥಿ ಗೆಲ್ಲುವ ಸಾಧ್ಯತೆ ಶೇಕಡ 15ರಷ್ಟು. ಆದರೆ, ಶುದ್ಧ ಚಾರಿತ್ರ್ಯ ಹೊಂದಿರುವ ಅಭ್ಯರ್ಥಿ ವಿಜೇತನಾಗುವ ಸಾಧ್ಯತೆ ಬರೀ ಶೇ 4.4ರಷ್ಟು ಎಂದು ಇದೇ ವರದಿ ಹೇಳುತ್ತದೆ. ಇದನ್ನು ಮುಂದಿಟ್ಟುಕೊಂಡು ಯೋಚಿಸಿದರೆ, ಸಜ್ಜನರು ಚುನಾವಣೆಗೆ ಸ್ಪರ್ಧಿಸುವ ವಾತಾವರಣವಾದರೂ ಎಲ್ಲಿದೆ?

'ಅರಸು ರಾಕ್ಷಸ, ಮಂತ್ರಿಯೆಂಬುವ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ, ಬಡವರ ಭಿನ್ನಪವ ಇನ್ನಾರು ಆಲಿಪರು, ಉರಿ ಉರಿಯುತಿದೆ ದೇಶ, ನಾವಿನ್ನಿರಲು ಬಾರದು...' ಎಂಬ ಕವಿ ಕುಮಾರವ್ಯಾಸರ ಮಾತುಗಳು ಈ ಸಂಕಟದ ಕಾಲಕ್ಕಂತೂ ಪ್ರಸ್ತುತವೆನಿಸುತ್ತವೆ.

ಭಾರತದ ಪ್ರಜಾತಂತ್ರ ವ್ಯವಸ್ಥೆಗೊಂದು ಘನವಾದ ಪರಂಪರೆ ಇದೆ. ಈ ಹಿಂದೆ ಆಳಿದ ನಾಯಕರ ಸಚ್ಚಾರಿತ್ರ್ಯ, ತುಡಿತ, ಬದ್ಧತೆ ಹಾಗೂ ನೈತಿಕತೆಯ ಇತಿಹಾಸವಿದೆ. ರೈಲು ಅಪಘಾತದ ನೈತಿಕ ಹೊಣೆ ಹೊತ್ತು ತತ್‌ಕ್ಷಣವೇ ರಾಜೀನಾಮೆ ನೀಡಿದ ಲಾಲ್ ಬಹದ್ದೂರ್ ಶಾಸ್ತ್ರಿ, ವಿಶ್ವಾಸಮತ ಪರೀಕ್ಷೆಯಲ್ಲಿ ಬರೀ ಒಂದು ವೋಟಿನಿಂದ ಸೋಲಾಗಿ ಪ್ರಧಾನಿ ಪದವಿಗೆ ರಾಜೀನಾಮೆ ನೀಡಿದ ಅಟಲ್ ಬಿಹಾರಿ ವಾಜಪೇಯಿ, ಆಯಕಟ್ಟಿನ ಹುದ್ದೆಗಳನ್ನು ನಿರ್ವಹಿಸಿದ್ದರೂ ಕೊನೆಯುಸಿರು ಇರುವವರೆಗೂ ಸರಳವಾಗಿ ಬದುಕಿದ ಜಾರ್ಜ್ ಫರ್ನಾಂಡಿಸ್ ಹೀಗೆ ಹತ್ತು ಹಲವರ ಅಕಳಂಕ ಇತಿಹಾಸ ಹೊತ್ತ ಸಂಸತ್ತಿನ ಘನ ಪರಂಪರೆಯನ್ನು ಎತ್ತಿ ಹಿಡಿದು, ದೇಶದ ಆರೋಗ್ಯವನ್ನು ಕಾಪಾಡುವ ಜವಾಬ್ದಾರಿ ಹೊಸ ಸಂಸದರ ಮೇಲಿದೆ. ಶಾಸನಸಭೆಗಳ ಚರ್ಚೆ, ಸಂವಾದದ ಗುಣಮಟ್ಟ ಎತ್ತರಿಸುವ ಹೊಣೆಯನ್ನೂ ಮರೆಯಬಾರದು.

### ವಾಚಕರ ವಾಣಿ

## ನೀಟ್: ಅಕ್ರಮ ಅಕ್ಷಮ್ಯ

'ನೀಟ್' ಬರೆಯುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಆದರೆ ಈ ಪರೀಕ್ಷೆಯನ್ನು ನೀಟಾಗಿ ನಿರ್ವಹಿಸುವಲ್ಲಿ ನಾವು ಸೋಲುತ್ತಿರುವುದು ವಿಪರ್ಯಾಸ. ಕೆಲವು ವಿದ್ಯಾರ್ಥಿಗಳು ವೈದ್ಯಕೀಯ ಕ್ಷೇತ್ರವೇ ಬೇಕೆಂದು ಪಟ್ಟು ಹಿಡಿದು ಮೂರ್ನಾಲ್ಕು ಬಾರಿ ನೀಟ್ ಬರೆಯುತ್ತಾರೆ. ಇದರಿಂದಾಗಿ, ಶೈಕ್ಷಣಿಕ ಬದುಕಿನ ಒಂದೆರಡು ವರ್ಷವನ್ನು ಅವರು ಕಳೆದುಕೊಳ್ಳುತ್ತಾರೆ. ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ನಿರ್ಧರಿಸುವ ಇಂತಹ ಪರೀಕ್ಷೆಯಲ್ಲಿ ಅಕ್ರಮಗಳಿಗೆ ಆಸ್ಪದ ಇರಬಾರದು. ಈ ಬಾರಿಯಂತೂ ನಾನಾ ಬಗೆಯ ಆರೋಪಗಳು ಕೇಳಿಬಂದಿವೆ.

ನೀಟ್ ವಿರುದ್ಧ ತಮಿಳುನಾಡು ಸೇರಿದಂತೆ ಕೆಲವು ರಾಜ್ಯಗಳು ಧ್ವನಿ ಎತ್ತಿವೆ. ಈಗ ಕೇಳಿಬಂದಿರುವ ಆರೋಪಗಳನ್ನು ಗಮನಿಸಿದರೆ, ರಾಜ್ಯ ಮಟ್ಟದ ಪ್ರವೇಶ ಪರೀಕ್ಷೆಗಳೇ ಉತ್ತಮವಾಗಿತ್ತೇನೊ ಅಂತ ಅನ್ನಿಸದಿರದು. ವೈದ್ಯಕೀಯ ಪ್ರವೇಶ ಪರೀಕ್ಷೆಯ ಗೋಜಲು ಬಿಡಿಸಲು ಸರ್ಕಾರ ಈಗಲಾದರೂ ಮುಕ್ತ ಮನಸ್ಸಿನಿಂದ ಯೋಚಿಸಬೇಕು. ವಿಕೇಂದ್ರೀಕೃತ ಮಾದರಿಗಳ ಬಗ್ಗೆ ಚಿಂತಿಸಬೇಕು.

**ಕೆ.ಬಿ.ಸುಮಲತಾ,** ದೊಡ್ಡಬಳ್ಳಾಪುರ

## ತಾರಾನಾಥ: ಆ ಪ್ರಯೋಗ, ಆ ಸಂಗೀತ...

ಮಂಗಳವಾರ ರಾತ್ರಿ ತೀರಿಕೊಂಡ ದೊಡ್ಡ ಚೇತನ ಪಂಡಿತ್ ರಾಜೀವ ತಾರಾನಾಥ ಅವರನ್ನು ಕುರಿತು ಸುಮಂಗಲಾ ಅವರು ಬರೆದಿರುವ ಬರಹ ಘನವಾಗಿದೆ. ತಾರಾನಾಥರನ್ನು ಕುರಿತು ಎಲ್ಲರೂ ಮರೆತಂತಿರುವ ಒಂದು ವಿಷಯ ನೆನಪಿಸಲು ಈ ಪತ್ರ. ಹಿಂದೂಸ್ತಾನಿ ನಾಟಕಕಾರ ಸರ್ವೇಶ್ವರ ದಯಾಲ್ ಸಕ್ಸೇನಾ ಅವರು ರಾಜಕಾರಣಿಗಳ ಪಕ್ಷಾಂತರದ ಚಾಳಿ ಮತ್ತು ಹುಚ್ಚಾಟ-ಹಾರಾಟಗಳನ್ನು ವಿಡಂಬಿಸಿ ಬರೆದ ನಾಟಕ 'ಬಕರಿ'. 1979ರಲ್ಲಿ ಸಿ.ಪಿ. ರವಿಕುಮಾರ್ ಅವರು ಅದನ್ನು ಬೆಂಗಳೂರಿನ ಸಮುದಾಯ ರಂಗತಂಡಕ್ಕಾಗಿ 'ಕುರಿ' ಎಂದು ಹೆಸರಿಸಿ ಅನುವಾದಿಸಿ ಕೊಟ್ಟರು. ಸಮುದಾಯ ತಂಡ ಅದನ್ನು ಎಂ.ಎಸ್.ಸತ್ಯು ಅವರ ನಿರ್ದೇಶನದಲ್ಲಿ ಪ್ರಯೋಗಿಸಿ, ಚಿತ್ರಕಲಾ ಪರಿಷತ್ತಿನ ಬಯಲು ರಂಗಮಂದಿರದಲ್ಲಿ ಆಡಿತು. ವಾರಗಟ್ಟಲೆಯ ಕಾಲ ಡಜನ್‌ಗಟ್ಟಲೆ ಸರಣಿ ಆಟಗಳನ್ನು ಕಂಡು, ದೊಡ್ಡ ಯಶಸ್ಸು ಗಳಿಸಿದ ಪ್ರಯೋಗ ಅದು. ಅನೇಕ ಹಾಡುಗಳಿದ್ದ ಆ ಪ್ರಯೋಗದ ಸಂಗೀತ ನಿರ್ದೇಶಕರು ತಾರಾನಾಥರು. ಅದ್ಭುತ-ನಾಟಕೀಯವಾದ ಅವರ ರಾಗಸಂಯೋಜನೆಯ ಹಾಡುಗಳು ಎಂದಿಗೂ ಗುನುಗಿಕೊಳ್ಳುವಂತಿವೆ. ಎರಡೇ ಎರಡು ಉದಾಹರಣೆ ನೀಡುವುದಾದರೆ, ಶೀರ್ಷಿಕೆಯ ಹಾಡು 'ಕುರಿ, ಕುರಿ, ಕುರಿ, ಗಾಂಧೀಜಿ ಕುರಿ', ಮತ್ತು 'ಡಬ್ಬಡಬ್ಬದೊಳಗೆ ಡಬ್ಬ, ಡಬ್ಬದೊಳು ಮುರಬ್ಬ, ಮುರಬ್ಬದೊಳು ನೂರು ಇರುವೆ ಕಚ್ಚಿತೋ ಅಬಬ್ಬಬಬ್ಬಬಬ್ಬಬ-ಬ್ಬಬಬ್ಬ' ಎಂದು ಶುರುವಾಗುವ ಹಾಡುಗಳನ್ನು ಹೆಸರಿಸಬಹುದು.

ಆ ಪ್ರಯೋಗದಲ್ಲಿ, ಕವಿ ಸಿದ್ಧಲಿಂಗಯ್ಯನವರ 'ಗುಡಿಸಿಲುಗಳು ಗುಡುಗುತಿವೆ, ಬಂಗಲೆಗಳು ನಡುಗುತಿವೆ' ಎಂದು ಶುರುವಾಗುವ ಕವನವನ್ನೂ ಸೇರಿಸಿ, ಅದಕ್ಕೆ ಮೈನವಿರೇಳುವಂಥ ರಾಗ ಕೂಡಿಸಿ ಹಾಡಿಸಿದ್ದರು ತಾರಾನಾಥರು. ಆ ಪ್ರಯೋಗ, ಆ ಸಂಗೀತ ಎರಡೂ ಆಧುನಿಕ ಕನ್ನಡ ರಂಗಭೂಮಿಯ ಮೈಲಿಗಲ್ಲುಗಳಾಗಿವೆ.

**ರಘುನಂದನ,** ಬೆಂಗಳೂರು

## ಹೇಗಿತ್ತು... ಹೇಗಾಗಿದೆ!

ಕನ್ನಡ ಚಿತ್ರರಂಗದ ಹಿರಿಯ ನಾಯಕನಟರು ತುಂಬ ಸಂಭಾವಿತರಾಗಿದ್ದರು. ವಿವಾದಗಳಿಗೆ ಆಸ್ಪದ ಕೊಡದೆ ತಮ್ಮ ಕೆಲಸ–ಕಾರ್ಯಗಳಲ್ಲಿ ಬದ್ಧತೆಯಿಂದ ತೊಡಗಿಸಿಕೊಂಡಿದ್ದರು. ಜೊತೆಗೆ ಸಮಾಜಮುಖಿ ಕಾರ್ಯಗಳಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ನಾಡು–ನುಡಿಗೆ ಸಂಬಂಧಿಸಿದ ಹೋರಾಟಗಳಿಗೆ ಒತ್ತಾಸೆಯಾಗಿ ನಿಲ್ಲುತ್ತಿದ್ದರು.

ಆದರೆ, ಈಗ ಕನ್ನಡ ಚಿತ್ರರಂಗದ ನಾಯಕರು ಒಂದಿಲ್ಲ ಒಂದು ವಿವಾದದಲ್ಲಿ ಸಿಲುಕಿ ಕುಖ್ಯಾತರಾಗು-ತ್ತಿದ್ದಾರೆ. ನಾಯಕನಟನೊಬ್ಬ ಹೆಂಡತಿಗೆ ಥಳಿಸಿ ವಿವಾದಕ್ಕೀಡಾಗಿದ್ದರು. ಕೆಲವು ಯುವ ತಾರಾದಂಪತಿಗಳ ಗೃಹಕಲಹ, ವಿಚ್ಛೇದನದಂಥ ವಿಷಯಗಳು ಸುದ್ದಿಯಾಗುತ್ತಿವೆ. ಈಗ ಕೊಲೆ ಪ್ರಕರಣವೊಂದರಲ್ಲಿ ಆರೋಪಿಯಾಗಿ ಒಬ್ಬ ನಾಯಕನಟ ಪೊಲೀಸ್ ಕಸ್ಟಡಿಯಲ್ಲಿದ್ದಾನೆ. 1970ರ ದಶಕದಲ್ಲಿ ಕನ್ನಡ ಚಿತ್ರರಂಗವು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುಣಾತ್ಮಕ ಚಿತ್ರಗಳ ಕಾರಣದಿಂದಾಗಿ ಮನ್ನಣೆ ಪಡೆದಿತ್ತು. ಇತ್ತೀಚಿನ ವರ್ಷಗಳಲ್ಲಿ ಕೆಲವರ ಕೆಟ್ಟ ವರ್ತನೆ ಮತ್ತು ಕೆಟ್ಟ ಕೃತ್ಯಗಳಿಂದ ಕನ್ನಡ ಚಿತ್ರರಂಗಕ್ಕೆ ಕಳಂಕ ಅಂಟಿದೆ.

**ಎಚ್.ವಿ.ಶ್ರೀಧರ್,** ಬೆಂಗಳೂರು

## ಫಲಿತಾಂಶ ಬೇಗ ಪ್ರಕಟಿಸಬೇಕು

ಕರ್ನಾಟಕ ಲೋಕಸೇವಾ ಆಯೋಗವು ಪ್ರಥಮ ಮತ್ತು ದ್ವಿತೀಯ ದರ್ಜೆ ಸಹಾಯಕರ ಪರೀಕ್ಷೆ ನಡೆಸಿ ಒಂದು ವರ್ಷವಾಗುತ್ತಾ ಬಂದರೂ ಪರೀಕ್ಷಾ ಫಲಿತಾಂಶವನ್ನು ಇನ್ನೂ ಪ್ರಕಟಿಸಿಲ್ಲ. ಪರೀಕ್ಷೆ ಬರೆದವರು ಫಲಿತಾಂಶಕ್ಕಾಗಿ ಕಾತರದಿಂದ ಕಾಯುತ್ತಿದ್ದಾರೆ. ಇಷ್ಟು ವಿಳಂಬ ತರವಲ್ಲ. ಆದಷ್ಟು ಬೇಗ ಫಲಿತಾಂಶ ಪ್ರಕಟಿಸಬೇಕು.

**ಎಸ್.ಎನ್. ಕೃಷ್ಣಮೂರ್ತಿ,** ಕಡೂರು

## ಪಾದಚಾರಿ ಮಾರ್ಗ: ಬೇಕು ಸಮರ್ಪಕ ನಿರ್ವಹಣೆ

ರಸ್ತೆ ಗುಂಡಿಗಳ ಬಗೆಗಿನ ಡಾ. ಕೆ.ಎಸ್. ಚೈತ್ರಾ ಅವರ ಲೇಖನ (ಸಂಗತ, ಜೂನ್ 11) ಚೆನ್ನಾಗಿದೆ. ಆದರೆ, ರಸ್ತೆಗಳಿಗಿಂತ ಪಾದಚಾರಿ ಮಾರ್ಗಗಳ ಸ್ಥಿತಿ ಮತ್ತಷ್ಟು ಶೋಚನೀಯವಾಗಿದೆ. ಬೆಂಗಳೂರಿನಲ್ಲಿ ಪಾದಚಾರಿ ಮಾರ್ಗಗಳು ಬಳಕೆಗೆ ಯೋಗ್ಯವಲ್ಲದ ಸ್ಥಿತಿ ತಲುಪಿವೆ. ಅನೇಕ ಕಡೆ ಸಮತಟ್ಟು ಕಳೆದುಕೊಂಡಿವೆ, ಒತ್ತುವರಿಗೆ ಒಳಗಾಗಿವೆ. ಆದಕಾರಣ, ಸಾರ್ವಜನಿಕರು ವಿಧಿಯಿಲ್ಲದೆ ರಸ್ತೆಯನ್ನೇ ಉಪಯೋಗಿಸಬೇಕಾಗಿದೆ. ಕೆಲವೆಡೆ ವಾಹನ ನಿಲುಗಡೆಗೆ ಬಳಕೆ ಆಗುತ್ತಿವೆ. ಪಾದಚಾರಿ ಮಾರ್ಗಗಳನ್ನು ಸುಸ್ಥಿತಿಗೆ ತರುವುದರ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಗಮನ ಹರಿಸಬೇಕು. ಬಿಬಿಎಂಪಿಗೆ ಪಾದಚಾರಿಗಳ ಹಿತರಕ್ಷಣೆಯೂ ಆದ್ಯತೆಯಾಗಬೇಕು.

**ಮೋಹನದಾಸ್,** ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಬಿಜೆಪಿ 'ಸೋತಿದ್ದು' ಹೇಗೆ?

ಈ ಬಾರಿಯ ಲೋಕಸಭಾ ಚುನಾವಣೆಯನ್ನು ವಿಶ್ಲೇಷಿಸಲು ಯೋಗೇಂದ್ರ ಯಾದವ್ ಅವರ ತಂಡವು ಬಿಜೆಪಿಯನ್ನು 'ಪ್ರಭುತ್ವ ಬಿಜೆಪಿ' (ಆಡಳಿತ ಪಕ್ಷವಾಗಿರುವ ಬಿಜೆಪಿ) ಮತ್ತು 'ಸವಾಲುಗಾರ ಬಿಜೆಪಿ' (ವಿರೋಧ ಪಕ್ಷದಲ್ಲಿರುವ ಬಿಜೆಪಿ) ಎಂದು ವರ್ಗೀಕರಿಸಿದೆ. ಚುನಾವಣೆಯಲ್ಲಿ ಬಿಜೆಪಿ ಪಡೆದ ಮತಗಳು ಮತ್ತು ಗೆದ್ದ ಸ್ಥಾನಗಳನ್ನು ಈ ವರ್ಗೀಕರಣದ ಆಧಾರದಲ್ಲೇ ವಿಶ್ಲೇಷಿಸಲಾಗಿದೆ. ಈ ಪ್ರಕಾರ 'ಪ್ರಭುತ್ವ ಬಿಜೆಪಿ'ಯಿಂದ ಮತದಾರ ದೂರ ಸರಿದಿದ್ದರೆ, 'ಸವಾಲುಗಾರ ಬಿಜೆಪಿ'ಯತ್ತ ಮತದಾರ ಸರಿದಿದ್ದಾನೆ

● ಯೋಗೇಂದ್ರ ಯಾದವ್, ಶ್ರೇಯಸ್ ಸರ್ದೇಸಾಯಿ, ರಾಹುಲ್ ಶಾಸ್ತ್ರಿ

## ಲೋಕ ರಾಜ 'ಕಾರಣ' 2

**ಈ ಬಾರಿಯ ಲೋಕಸಭಾ ಚುನಾವಣೆಯ** ಫಲಿತಾಂಶವು ಬಿಜೆಪಿಯ ವಿರುದ್ಧದ, ಆಡಳಿತ ಪಕ್ಷದ ವಿರೋಧದ ಜನಾದೇಶ ಎಂದು ಪರಿಭಾವಿಸುವುದು ಸೂಕ್ತವೇ? ಈ ಲೇಖನದ ಲೇಖಕರಲ್ಲಿ ಒಬ್ಬರಾದ, ಯೋಗೇಂದ್ರ ಯಾದವ್ ಅವರು ಈ ಪ್ರಶ್ನೆಗೆ 'ಹೌದು' ಎಂದೇ ಉತ್ತರಿಸುತ್ತಾರೆ. ಎನ್‌ಡಿಎ ಮೈತ್ರಿಕೂಟದ ಬಳಿ ಸರ್ಕಾರ ರಚನೆ ಮಾಡುವಷ್ಟು ಸಂಖ್ಯೆ ಇರಬಹುದು. ಆದರೆ, ಬಿಜೆಪಿಯು ತನ್ನ ಬಹುಮತವನ್ನು ಕಳೆದುಕೊಂಡಿದೆ. ತನ್ನ ಜನಪ್ರಿಯತೆಯನ್ನು ಕಾಪಾಡಿಕೊಳ್ಳುವಲ್ಲಿ ಸೋತಿದೆ.

ವಿರೋಧ ಪಕ್ಷಗಳಿಗೆ ಹೋಲಿಸಿದರೆ, ಬಿಜೆಪಿಯು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವುದು ನಿಜ. ಆದರೆ, ಈ ಬಾರಿ 400ಕ್ಕೂ ಅಧಿಕ ಸ್ಥಾನಗಳಿಂದ ಗೆಲ್ಲುತ್ತೇವೆ ಎಂದು ತಾನೇ ಸಾರ್ವಜನಿಕವಾಗಿ ಹೇಳಿಕೊಂಡಿದ್ದ ಅಂಕಿಯನ್ನೂ ಬಿಜೆಪಿಗೆ ಮುಟ್ಟಲಾಗಲಿಲ್ಲ. ಶೇ 50ರಷ್ಟು ಮತಗಳೂ ಬರಲಿಲ್ಲ. ಈ ಎಲ್ಲ ವಿಚಾರಗಳಿಗಿಂತ ಮುಖ್ಯವಾದುದು ಬೇರೆಯದಿದೆ. ಹಣದ ಪ್ರಾಬಲ್ಯ, ಮಾಧ್ಯಮ, ಇಡೀ ಸರ್ಕಾರಿ ವ್ಯವಸ್ಥೆ, ಅದರಲ್ಲೂ ಚುನಾವಣಾ ಆಯೋಗ ಸಾಲು ಸಾಲಾಗಿ ಈ ಚುನಾವಣೆಯಲ್ಲಿ ವಿರೋಧ ಪಕ್ಷಗಳ ವಿರುದ್ಧ ನಿಂತಿದ್ದವು.

ಈ ವಿಶ್ಲೇಷಣೆಗಳಿಗೆ ವ್ಯತಿರಿಕ್ತವಾದ ವಿಚಾರವೂ ಒಂದಿದೆ. ಅದು ಬಿಜೆಪಿಯ ಮತ ಪ್ರಮಾಣಕ್ಕೆ ಸಂಬಂಧಿಸಿದ್ದು. ಕಳೆದ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಶೇ 37.4ರಷ್ಟು ಮತ ಪ್ರಮಾಣವನ್ನು ಗಳಿಸಿಕೊಂಡಿತ್ತು. ಈ ಪ್ರಮಾಣವು ತುಸುವೇ ಕುಸಿದು, ಶೇ 36.6ರಷ್ಟಕ್ಕೆ ನಿಂತಿದೆ. ಒಡಿಶಾ ರಾಜಕಾರಣದಲ್ಲಿ ಬಿಜೆಪಿಯು ನಾಟಕೀಯ ಎನ್ನುವಂತೆ ಪ್ರವೇಶ ಪಡೆದಿದೆ. ಕೇರಳದ ತಡೆಯನ್ನು ಒಡೆದಿದೆ. ಆಂಧ್ರ ಪ್ರದೇಶ ಹಾಗೂ ಪಂಜಾಬ್‌ನಲ್ಲಿ ಬಿಜೆಪಿಯು ತನ್ನ ಅಸ್ತಿತ್ವವನ್ನು ಇನ್ನಷ್ಟು ಗಟ್ಟಿಯಾಗಿಸಿಕೊಂಡಿದೆ. ಭಾರತದ ಎಲ್ಲ ರಾಜ್ಯಗಳಲ್ಲೂ ತನ್ನ ಮತ ಪ್ರಮಾಣವನ್ನು ಎರಡಂಕಿಗೆ ಏರಿಸಿಕೊಳ್ಳುವ ಮೂಲಕ ಬಿಜೆಪಿಯು ರಾಷ್ಟ್ರ ಮಟ್ಟದಲ್ಲಿ ಹೆಜ್ಜೆಗುರುತನ್ನು ಮೂಡಿಸಿದೆ. ಈ ಎಲ್ಲ ಹಿನ್ನೆಲೆಯಲ್ಲಿಯೇ ಬಿಜೆಪಿಯು ತಾನು ಜಯಸಾಧಿಸಿದ್ದೇನೆ ಎಂದು ಹೇಳುತ್ತಿರುವುದು. ಬಿಜೆಪಿಯು ತನ್ನ ಬೇರುಗಳನ್ನು ಇನ್ನಷ್ಟು ಚಾಚಿಕೊಂಡು, ಇನ್ನಷ್ಟು ಆಳಕ್ಕೆ ಇಳಿದಿದೆ. ಇದೇ ಕಾರಣಕ್ಕೆ, ಬಿಜೆಪಿಗೆ ಸ್ಥಾನಗಳು ಕಡಿಮೆ ಬಂದಿವೆ ಎಂದು ಸಂಭ್ರಮ ಪಡುವುದು ಆತುರವಾದೀತು ಎಂದು ಹಲವು ವಿಶ್ಲೇಷಕರು ಎಚ್ಚರಿಸಿದ್ದಾರೆ.

ಈ ಎಲ್ಲ ಲೆಕ್ಕಾಚಾರವು, ಪಕ್ಷವೊಂದು ಕೆಲವು ಪ್ರದೇಶದಲ್ಲಿ ಸೋತಿತು, ಕೆಲವು ಪ್ರದೇಶಗಳಲ್ಲಿ ಗೆದ್ದಿತು ಎಂಬ ವಿಶ್ಲೇಷಣೆ ಅಷ್ಟೇ ಅಲ್ಲ ಎಂಬುದು ರಾಜ್ಯವಾರು ಮತ ಪ್ರಮಾಣವನ್ನು ಸೂಕ್ಷ್ಮವಾಗಿ ಗಮನಿಸಿದಾಗ ತಿಳಿಯುತ್ತದೆ. ಆಯಾ ರಾಜ್ಯಗಳ ಆಡಳಿತ ಪಕ್ಷದ ವಿರುದ್ಧ ಜನರು ಮತ ಹಾಕಿದ್ದಾರೆ. ಬಿಜೆಪಿಯು ಎಲ್ಲ ರಾಜ್ಯಗಳಲ್ಲಿ ಆಡಳಿತದಲ್ಲಿ ಇಲ್ಲ ಎನ್ನುವುದನ್ನೂ ಗಮನಿಸಬೇಕು.

ಈ ಲೋಕಸಭಾ ಚುನಾವಣೆಯಲ್ಲಿ ಎರಡು ಭಿನ್ನ ರೀತಿಯ ಬಿಜೆಪಿಯು ಕಣಕ್ಕಿಳಿದಿತ್ತು. ಒಂದು: ಅಧಿಕಾರದಲ್ಲಿರುವ ಬಿಜೆಪಿ (ಪ್ರಭುತ್ವ ಬಿಜೆಪಿ). ಎರಡು: ವಿರೋಧ ಪಕ್ಷದಲ್ಲಿದ್ದು, ಸವಾಲೊಡ್ಡಿದ್ದ ಬಿಜೆಪಿ (ಸವಾಲುಗಾರ ಬಿಜೆಪಿ). ಅಧಿಕಾರದಲ್ಲಿರುವ ಬಿಜೆಪಿಗೆ ಚುನಾವಣಾ ಹಿನ್ನಡೆಯಾಗಿದೆ. ಆದರೆ, ಸವಾಲೊಡ್ಡಿದ್ದ ಬಿಜೆಪಿಗೆ ಒಳ್ಳೆಯ ಫಲಿತಾಂಶವೇ ಬಂದಿದೆ. ಕೆಲವು ರಾಜ್ಯಗಳಲ್ಲಿ ಬಿಜೆಪಿಗೆ ಆಡಳಿತ ವಿರೋಧಿ ಅಲೆ ಇತ್ತು. ಈ ಕಾರಣಕ್ಕಾಗಿ ಅದಕ್ಕೆ ಕಡಿಮೆ ಸ್ಥಾನಗಳು ದೊರೆತವು. ರಾಷ್ಟ್ರ ಮಟ್ಟದಲ್ಲಿ ಬಿಜೆಪಿಗೆ ಆದ ಮತ ಮತ್ತು ಸ್ಥಾನ ನಷ್ಟವನ್ನು, ಕೆಲವು ರಾಜ್ಯಗಳಲ್ಲಿ ಅದರ ಪಾಲಿಗೆ ಬಂದ ಉತ್ತಮ ಫಲಿತಾಂಶವು ಮರೆಮಾಚಿಸಿದೆ. ಆದರೆ, ಇದು ಅಲ್ಪಾವಧಿಯಾಗಿರಲಿದೆ. ವಿವಿಧ ರಾಜ್ಯಗಳಲ್ಲಿ ಬಂದ ಹೆಚ್ಚುವರಿ ಸ್ಥಾನಗಳು ಮತ್ತು ಮತಗಳು ಮುಂದೆಯೂ ದೊರೆಯುತ್ತಲೇ ಇರುತ್ತವೆ ಎಂದು ನಂಬಿಕೊಂಡು ಕೂರಲು ಸಾಧ್ಯವಿಲ್ಲ.

ಪೈಚಾರ್ಟ್‌ನಲ್ಲಿ ನಮೂದಿಸಲಾದ ಸಂಖ್ಯೆಗಳನ್ನೇ ನೋಡೋಣ. ದೇಶದ ಮೂರನೇ ಎರಡರಷ್ಟು ಭಾಗದಲ್ಲಿ (ನಿರ್ದಿಷ್ಟವಾಗಿ 356 ಸ್ಥಾನಗಳು) ಬಿಜೆಪಿಯು ಪ್ರಧಾನ ಪಕ್ಷವಾಗಿದೆ. ಇಲ್ಲಿ ಹಲವು ರಾಜ್ಯಗಳಲ್ಲಿ ಬಿಜೆಪಿಯು ಆಡಳಿತ ಪಕ್ಷದಲ್ಲಿ ಇಲ್ಲ. ಆದರೂ ಬಿಜೆಪಿಯೇ ಪ್ರಬಲ ಪಕ್ಷ. ಈ ಪ್ರದೇಶವು ಮಹಾರಾಷ್ಟ್ರದಿಂದ ಗುಜರಾತ್‌ವರೆಗೆ, ಬಿಹಾರದಿಂದ ಜಾರ್ಖಂಡ್‌ವರೆಗೆ ಇದೆ. ಜೊತೆಗೆ, ಕರ್ನಾಟಕದದಿಂದ ಹಿಮಾಚಲದವರೆಗೂ ವ್ಯಾಪಿಸಿದೆ. ಆದರೆ, ಈ ಕೆಲವು ರಾಜ್ಯಗಳಲ್ಲಿ ಬಿಜೆಪಿಯು ಆಡಳಿತದಲ್ಲಿ ಇಲ್ಲ. ತಾನು ಆಡಳಿತದಲ್ಲಿ ಇರುವ ರಾಜ್ಯಗಳಲ್ಲಿನ ಒಟ್ಟು ಕ್ಷೇತ್ರಗಳಲ್ಲಿ ಬಿಜೆಪಿಯು ಕಳೆದ ಲೋಕಸಭಾ ಚುನಾವಣೆಯಲ್ಲಿ 271 ಸ್ಥಾನಗಳನ್ನು ಗಳಿಸಿತ್ತು. ಈ ಬಾರಿ ಈ 271 ಸ್ಥಾನಗಳಲ್ಲಿ 75 ಸ್ಥಾನಗಳನ್ನು ಕಳೆದುಕೊಂಡಿದೆ. ಕರ್ನಾಟಕದಿಂದ ಬಿಹಾರದವರೆಗೆ ಬಿಜೆಪಿಗೆ ಶೇ 5ರಷ್ಟು ಮತಗಳು ಕಡಿಮೆ ಬಿದ್ದಿವೆ.

ಆದರೆ, ಇನ್ನುಳಿದ ಮೂರನೇ ಒಂದು ಭಾಗದ ದೇಶದಲ್ಲಿ (187 ಸ್ಥಾನಗಳು) ಬಿಜೆಪಿಯು ವಿರೋಧ ಪಕ್ಷದ ಸ್ಥಾನದಲ್ಲಿ ಇದ್ದುಕೊಂಡು ಚುನಾವಣೆಯಲ್ಲಿ ಸ್ಪರ್ಧಿಸಿತ್ತು. ಈ ರಾಜ್ಯಗಲ್ಲಿ ಬಿಜೆಪಿಯು ಸವಾಲುಗಾರನಾಗಿತ್ತು. ಪ್ರಬಲ ಪಕ್ಷಗಳಾದ ಒಡಿಶಾದ ಬಿಜೆಡಿ, ಆಂಧ್ರ ಪ್ರದೇಶದ ವೈಎಸ್‌ಆರ್ ಕಾಂಗ್ರೆಸ್, ಪಶ್ಚಿಮ ಬಂಗಾಳದ ಟಿಎಂಸಿಯ ಆಡಳಿತಕ್ಕೆ ಬಿಜೆಪಿಯು ತೀವ್ರ ಸವಾಲೊಡ್ಡಿತ್ತು. ಕಳೆದ ಲೋಕಸಭಾ ಚುನಾವಣೆಯಲ್ಲಿ ಈ ಎಲ್ಲ ರಾಜ್ಯಗಳಲ್ಲಿ ಬಿಜೆಪಿ ಗಳಿಸಿಕೊಂಡ ಸ್ಥಾನಗಳಿಗಿಂತ ಹೆಚ್ಚುವರಿಯಾಗಿ 12 ಸ್ಥಾನಗಳನ್ನು ಅದು ಗಳಿಸಿಕೊಂಡಿದೆ. ಶೇ 6ರಷ್ಟು ಮತಗಳೂ ಹೆಚ್ಚಿಗೆ ಬಿದ್ದಿವೆ. ಈ ರಾಜ್ಯಗಳಲ್ಲಿ ಹೆಚ್ಚಿಸಿಗೊಂಡ ಮತಪ್ರಮಾಣವೇ ಬಿಜೆಪಿಗೆ ರಾಷ್ಟ್ರ ಮಟ್ಟದಲ್ಲಿ ಆದ ಮತನಷ್ಟವನ್ನು ಕೇವಲ 1 ಶೇಕಡಾವಾರು ಅಂಶಕ್ಕಷ್ಟೇ ಸೀಮಿತವಾಗಲು ಕಾರಣವಾಗಿದೆ.

**ನಮ್ಮ ಮುಂದಿರುವ ಪ್ರಶ್ನೆ:** ವಿರೋಧ ಪಕ್ಷದಲ್ಲಿದ್ದುಕೊಂಡು ಆಡಳಿತ ಪಕ್ಷಕ್ಕೆ ಸವಾಲೊಡ್ಡುವ 'ಸವಾಲುಗಾರ ಬಿಜೆಪಿ'ಯು, ಅಧಿಕಾರದಲ್ಲಿರುವ 'ಪ್ರಭುತ್ವ ಬಿಜೆಪಿ'ಯನ್ನು ಎಲ್ಲಿಯವರೆಗೆ ರಕ್ಷಿಸುತ್ತದೆ? ಈ ಪರಿಸ್ಥಿತಿಯು ಹೆಚ್ಚು ಕಾಲ ಇರುವುದಿಲ್ಲ ಮತ್ತು ಈ ರಾಜ್ಯಗಳಲ್ಲಿ ಇನ್ನಷ್ಟು ಸ್ಥಾನಗಳನ್ನು ಗಳಿಸಿಕೊಳ್ಳುವ ಅವಕಾಶವೂ ಬಿಜೆಪಿಗಿಲ್ಲ. ಬಿಜೆಪಿಯು ತಕ್ಕಮಟ್ಟಿಗೆ ಎಲ್ಲ ರಾಜ್ಯಗಳಲ್ಲಿಯೂ ಪ್ರಬಲ ಪಕ್ಷವಾಗಿಯೇ ಬೆಳೆದಿದೆ. ಆದರೆ, ಈ ಲಾಭವೂ ಹೆಚ್ಚು ದಿನ ಇರುವುದಿಲ್ಲ. ನರೇಂದ್ರ ಮೋದಿ ಅವರ ವರ್ಚಸ್ಸು ಕ್ಷೀಣಿಸುತ್ತಿದೆ. ಹಿಂದೆ ಕಾಂಗ್ರೆಸ್ ಸರ್ಕಾರಗಳು ಉದುರಿದಂತೆ, ಇಂದಿಲ್ಲ ನಾಳೆ ಬಿಜೆಪಿಯ ಸರ್ಕಾರಗಳೂ ಉದುರುತ್ತವೆ. ಹೀಗಾಗದಂತೆ ತಡೆಯಬೇಕು ಮತ್ತು ತಾನು ಸರ್ಕಾರದಲ್ಲಿಯೇ ಉಳಿಯಬೇಕು ಎಂದಾದರೆ ಬಿಜೆಪಿಯು ಬೇರೆ ಮಾರ್ಗಗಳನ್ನು ಕಂಡುಕೊಳ್ಳಬೇಕಿದೆ. ಆದರೆ ಈ ಚುನಾವಣೆ ಮತ್ತು ಅದರ ಫಲಿತಾಂಶವು ಬಿಜೆಪಿ ಅಂತಹ ಆತ್ಮವಿಶ್ವಾಸವನ್ನಂತೂ ಒದಗಿಸುತ್ತದೆ ಅನಿಸುವುದಿಲ್ಲ.

## ಬದಲಾವಣೆಗೆ ಹಲವು ದಿಕ್ಕು

* ಆವರಣದಲ್ಲಿ ಇರುವುದು 2019ರ ಚುನಾವಣೆಯಲ್ಲಿ ಬಿಜೆಪಿ ಪಡೆದ ಸ್ಥಾನ ಮತ್ತು ಮತಗಳ ಪ್ರಮಾಣ

* ಕೆಂಪು ಬಣ್ಣದಲ್ಲಿರುವ ಸಂಖ್ಯೆ ಬಿಜೆಪಿ ಪಡೆದ ಸ್ಥಾನ ಮತ್ತು ಮತಗಳ ಪ್ರಮಾಣದಲ್ಲಿ ಆದ ಬದಲಾವಣೆ




## 'ಪ್ರಭುತ್ವ ಬಿಜೆಪಿ'ಯ ಮತಗಳಲ್ಲಿನ ಬದಲಾವಣೆ

2019ಕ್ಕೆ ಹೋಲಿಸಿದರೆ 2024ರಲ್ಲಿ, ಈ ರಾಜ್ಯಗಳಲ್ಲಿ ಚಲಾವಣೆಯಾದ ಒಟ್ಟು ಮತಗಳಲ್ಲಿ ಬಿಜೆಪಿಯ ಮತಗಳಲ್ಲಿ ಆದ ಬದಲಾವಣೆ (ಶೇಕಡಾವಾರು ಅಂಶಗಳಲ್ಲಿ)

2019ಕ್ಕೆ ಹೋಲಿಸಿದರೆ 2024ರಲ್ಲಿ, ಈ ರಾಜ್ಯಗಳಲ್ಲಿ ಬಿಜೆಪಿ ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ಅದು ಪಡೆದ ಮತಗಳಲ್ಲಿನ ಬದಲಾವಣೆ (ಶೇಕಡಾವಾರು ಅಂಶಗಳಲ್ಲಿ)

ಬಿಜೆಪಿ ಈಗಾಗಲೇ ಅಧಿಕಾರದಲ್ಲಿ ಇದ್ದೆಡೆ ಗೆದ್ದ ಸ್ಥಾನಗಳಲ್ಲಿನ ಬದಲಾವಣೆ

**ಬಿಜೆಪಿಯ** ಮತ ಪ್ರಮಾಣದ ಸ್ಥಿತಿ ಮೇಲ್ನೋಟಕ್ಕೆ ಕಾಣುತ್ತಿರುವುದಕ್ಕಿಂತ ಕೆಟ್ಟದಾಗಿದೆ. ಬಿಜೆಪಿಯು 2019 ಮತ್ತು 2024ರಲ್ಲಿ ಸ್ಪರ್ಧಿಸಿದ್ದ 399 ಕ್ಷೇತ್ರಗಳ ಪೈಕಿ, 274 ಕ್ಷೇತ್ರಗಳಲ್ಲಿ ಅದರ ಮತ ಪ್ರಮಾಣ ಕಡಿಮೆಯಾಗಿದೆ. ಇವುಗಳಲ್ಲಿ ಮಹಾರಾಷ್ಟ್ರ, ರಾಜಸ್ಥಾನ, ಬಿಹಾರ, ಜಾರ್ಖಂಡ್, ಹರಿಯಾಣ, ಹಿಮಾಚಲ ಪ್ರದೇಶ, ಪಂಜಾಬ್, ಜಮ್ಮು ಮತ್ತು ಉತ್ತರ ಪ್ರದೇಶದಲ್ಲಿ ಬಿಜೆಪಿ ಸ್ಪರ್ಧಿಸಿದ್ದ ಕ್ಷೇತ್ರಗಳೂ ಸೇರಿವೆ. ಬಿಜೆಪಿಯ ಗೆಲುವಿನ ಅಂತರವೂ ಭಾರಿ ಪ್ರಮಾಣದಲ್ಲಿ ಕಡಿಮೆಯಾಗಿದೆ. ಶೇ 20ಕ್ಕಿಂತ ಹೆಚ್ಚಿನ ಮತಗಳ ಅಂತರದಿಂದ ಬಿಜೆಪಿ ಗೆದ್ದ ಸ್ಥಾನಗಳ ಸಂಖ್ಯೆ 151ರಿಂದ (2019ರ ಚುನಾವಣೆ), 77ಕ್ಕೆ (2024ರ ಚುನಾವಣೆ) ಕುಸಿದಿದೆ.

ಮತದಾನದಲ್ಲಿನ ಪಲ್ಲಟವನ್ನು ಅರ್ಥಮಾಡಿಕೊಳ್ಳಲು ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ನೇರ ಹಣಾಹಣಿ ಇದ್ದ 215 ಕ್ಷೇತ್ರಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಈ ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಮಾತ್ರವೇ ಮೊದಲ ಎರಡು ಸ್ಥಾನಗಳಲ್ಲಿ ಇವೆ. 2019ರ ಚುನಾವಣೆಯಲ್ಲಿ, ಈ 215 ಕ್ಷೇತ್ರಗಳ ಪೈಕಿ 195ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು 21 ಶೇಕಡಾವಾರು ಅಂಶಗಳಿಗಿಂತ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಆದರೆ ಈ ಬಾರಿ 215 ಕ್ಷೇತ್ರಗಳ ಪೈಕಿ 153ರಲ್ಲಿ ಬಿಜೆಪಿ ಗೆದ್ದಿದ್ದರೆ, 62 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ.

### ಕಳವಳಕಾರಿ ಹಿನ್ನಡೆ

ಬಿಜೆಪಿ ಗೆದ್ದ ಎಲ್ಲಾ ಕ್ಷೇತ್ರಗಳ ಗೆಲುವಿನ ಸರಾಸರಿ ಅಂತರ 10 ಶೇಕಡಾವಾರು ಅಂಶಗಳು ಮಾತ್ರ. ಈ 215 ಕ್ಷೇತ್ರಗಳಲ್ಲಿ ಬಿಜೆಪಿಗೆ ಬಿದ್ದ ಮತಗಳಲ್ಲಿ ಶೇ 5.5ರಷ್ಟು ಕಡಿಮೆಯಾಗಿದೆ. ಇದು ನಿಜಕ್ಕೂ ಬಿಜೆಪಿಗೆ ಕಳವಳಕಾರಿಯಾದ ಹಿನ್ನಡೆ.

ಬಿಜೆಪಿ ಪ್ರಭುತ್ವವಿದ್ದ ರಾಜ್ಯಗಳಿಗೆ ಸಂಬಂಧಿಸಿದ ಪಟ್ಟಿಯನ್ನು ಗಮನಿಸಿದರೆ ಕೆಲವು ಸಂಗತಿಗಳು ಗೊತ್ತಾಗುತ್ತವೆ. ಈ ರಾಜ್ಯಗಳಲ್ಲಿ ಬಿಜೆಪಿ ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ಅದರ ಮತ ಪ್ರಮಾಣವು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. ಬಿಜೆಪಿ ಅಭ್ಯರ್ಥಿಗಳಿಗೆ ರಾಜಸ್ಥಾನದಲ್ಲಿ ಶೇ 11.5ರಷ್ಟು, ಹರಿಯಾಣದಲ್ಲಿ ಶೇ 11.9ರಷ್ಟು, ಹಿಮಾಚಲ ಪ್ರದೇಶದಲ್ಲಿ ಶೇ 12.7ರಷ್ಟು ಮತಗಳು ಕಡಿಮೆಯಾಗಿವೆ. ಹಿಂದಿನ ಚುನಾವಣೆಯಲ್ಲಿ ಈ ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿಯ ಭಾರಿ ಅಂತರದಿಂದ ಗೆಲುವು ಸಾಧಿಸಿತ್ತು. ರಾಜಸ್ಥಾನ ಮತ್ತು ಹರಿಯಾಣದಲ್ಲಿ ಬಿಜೆಪಿಗೆ ಬಿದ್ದ ಮತಗಳು ಕಡಿಮೆಯಾಗಿದ್ದು ಕೆಲವೇ ಕ್ಷೇತ್ರಗಳಲ್ಲಿ. ಅಂತಹ ಕ್ಷೇತ್ರಗಳ ಪೈಕಿ ಹಲವನ್ನು ಬಿಜೆಪಿ ಈ ಬಾರಿ ಕಳೆದುಕೊಂಡಿದೆ.

ಈ ಬಾರಿಯ ಫಲಿತಾಂಶದ ನಂತರ ಉತ್ತರ ಪ್ರದೇಶದಲ್ಲಿ ಬಿಜೆಪಿ ಕುಸಿತದ್ದೇ ದೊಡ್ಡ ಮಾತು. ಸೂಕ್ಷ್ಮವಾಗಿ ಗಮನಿಸಿದರೆ ಉತ್ತರ ಪ್ರದೇಶದಲ್ಲಿ ಬಿಜೆಪಿ ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ಎಷ್ಟು ಪ್ರಮಾಣದಲ್ಲಿ ಮತಗಳನ್ನು ಕಳೆದುಕೊಂಡಿತೋ, ಪಕ್ಕದ ರಾಜ್ಯಗಳಲ್ಲಿ ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲೂ ಸರಿಸುಮಾರು ಅಷ್ಟೇ ಪ್ರಮಾಣದಲ್ಲಿ ಮತಗಳನ್ನು ಕಳೆದುಕೊಂಡಿದೆ. ಉತ್ತರ ಪ್ರದೇಶದಲ್ಲಿ 6.8 ಶೇಕಡಾವಾರು ಅಂಶಗಳಷ್ಟು, ಬಿಹಾರದಲ್ಲಿ 6.9 ಶೇಕಡಾವಾರು ಅಂಶಗಳಷ್ಟು ಮತ್ತು ಜಾರ್ಖಂಡ್‌ನಲ್ಲಿ 7 ಶೇಕಡಾವಾರು ಅಂಶಗಳಷ್ಟು ಮತಗಳನ್ನು ಬಿಜೆಪಿ ಕಳೆದುಕೊಂಡಿದೆ. ಉತ್ತರ ಪ್ರದೇಶದಲ್ಲಿ ಬಿಜೆಪಿಯು, ಒಂದು ಚತುರ ಮತ್ತು ಸಾಮಾಜಿಕ ಹಿನ್ನೆಲೆಯ ಪ್ರಬಲ ರಾಜಕೀಯ ಮೈತ್ರಿಕೂಟವನ್ನು ಎದುರಿಸಬೇಕಾಯಿತು. ಹೀಗಾಗಿ ಬಿಜೆಪಿ ಕಳೆದು ಕೊಂಡ ಮತಗಳೆಲ್ಲವೂ ಅದರ ಗೆಲುವನ್ನೂ ಕಸಿದುಕೊಂಡವು. ಆದರೆ ಬಿಹಾರದಲ್ಲಿ ಹಾಗಾಗಲಿಲ್ಲ. ಇಲ್ಲಿ ಬಿಜೆಪಿ ಅತ್ಯಂತ ದೊಡ್ಡ ಮೈತ್ರಿಯನ್ನು ಸಾಧಿಸಿದ ಕಾರಣ, ಮತಗಳನ್ನು ಕಳೆದುಕೊಂಡರೂ ಕ್ಷೇತ್ರಗಳನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಕರ್ನಾಟಕ, ಅಸ್ಸಾಂ, ದೆಹಲಿ ಮತ್ತು ಉತ್ತರಾಖಂಡದಲ್ಲಿ ಬಿಜೆಪಿ ಮತ ಪ್ರಮಾಣದಲ್ಲಿ ತುಸು ಇಳಿಕೆಯಾಗಿದೆ. ಈ ಎಲ್ಲಾ ರಾಜ್ಯಗಳಲ್ಲಿ ಆಡಳಿತ ಪಕ್ಷಗಳು ತಮ್ಮ ಸ್ಥಾನಗಳನ್ನು ಉಳಿಸಿಕೊಳ್ಳಲು ಯಶಸ್ವಿಯಾಗಿವೆ. ಆದರೆ ಕರ್ನಾಟಕದ ಕೆಲವು ಕ್ಷೇತ್ರಗಳಲ್ಲಿ ಬಿಜೆಪಿಯ ಮತಗಳು ಪಲ್ಲಟವಾದ ಕಾರಣ, ಆ ಪಕ್ಷವು ಹಲವು ಕ್ಷೇತ್ರಗಳನ್ನು ಕಳೆದುಕೊಂಡಿದೆ. ಬಿಜೆಪಿಯೇ ಅಧಿಕಾರದಲ್ಲಿ ಇದ್ದ ರಾಜ್ಯಗಳಲ್ಲಿ ಅದು ಮತಗಳನ್ನು ಕಳೆದುಕೊಳ್ಳದೇ ಇದ್ದದ್ದು ಗುಜರಾತ್, ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ ಮಾತ್ರ. ಈ ರಾಜ್ಯಗಳಲ್ಲಿ ವಿರೋಧ ಪಕ್ಷಗಳು ಬಿಜೆಪಿಯ ಮತಗಳನ್ನು ಕಸಿದುಕೊಳ್ಳುವಲ್ಲಿ ವಿಫಲವಾಗಿವೆ.




ಲೇಖಕರು: ಮೊದಲ ಲೇಖಕ– ಭಾರತ ಜೋಡೊ ಯಾತ್ರೆಯ ರಾಷ್ಟ್ರೀಯ ಸಂಚಾಲಕ, ಎರಡನೇ ಲೇಖಕ– ಸಮೀಕ್ಷಾ ಸಂಶೋಧನೆ ಸಂಶೋಧಕ, ಮೂರನೇ ಲೇಖಕ–ಸಂಶೋಧಕ

## ಸವಾಲುಗಾರ ಬಿಜೆಪಿ'ಯ ಮತಗಳಲ್ಲಿನ ಬದಲಾವಣೆ

**ಆದರೆ ಕೆಲವೆಡೆ** ರಾಜಕೀಯ ಒಳಸುಳಿಗಳು ಮೇಲಿನ ಟ್ರೆಂಡ್‌ಗೆ ವಿರುದ್ಧವಾಗಿ ಕೆಲಸ ಮಾಡಿದ್ದನ್ನೂ ನೋಡಬಹುದಾಗಿದೆ. ತೆಲಂಗಾಣದಲ್ಲಿ ಬಿಆರ್‌ಎಸ್‌ನ ಪರೋಕ್ಷ ಬೆಂಬಲದ ಕಾರಣದಿಂದ ಬಿಜೆಪಿಯ ಮತಗಳು ಶೇ15.7ರಷ್ಟು ಹೆಚ್ಚಾಯಿತು. ಒಡಿಶಾದಲ್ಲಿ ಬಿಜೆಪಿ ಮತಗಳಲ್ಲಿ ಹೆಚ್ಚಾಗಿದ್ದು ಶೇ 7ರಷ್ಟಾದರೂ, ಸರಿಸುಮಾರು ಎಲ್ಲಾ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಕೇರಳದಲ್ಲಿ ಕೇವಲ ಶೇ3ರಷ್ಟು ಮತಗಳು ಹೆಚ್ಚಾದರೂ ಒಂದು ಕ್ಷೇತ್ರವನ್ನು ಬಿಜೆಪಿ ಗೆದ್ದುಕೊಂಡಿದೆ.

ತಮಿಳುನಾಡಿನಲ್ಲಿ ಬಿಜೆಪಿ ತನ್ನ ಹಳೆಯ ಮಿತ್ರಪಕ್ಷದ ಬೆಂಬಲ ಕಳೆದುಕೊಂಡ ಕಾರಣ, ಅದು ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ಭಾರಿ ಪ್ರಮಾಣದಲ್ಲಿ ಮತಗಳನ್ನು ಕಳೆದುಕೊಂಡಿದೆ. ಪಂಜಾಬ್‌ನಲ್ಲೂ ಹಾಗೇ ಆಗಿದೆ. ಹಳೆಯ ಮಿತ್ರಪಕ್ಷವಿಲ್ಲದೆ ಹೆಚ್ಚಿನ ಕ್ಷೇತ್ರಗಳಲ್ಲಿ ಬಿಜೆಪಿ ಸ್ಪರ್ಧಿಸಿದೆ. ಒಟ್ಟು ಮತದಾನದಲ್ಲಿ ಬಿಜೆಪಿ ಮತ ಪ್ರಮಾಣ ಹೆಚ್ಚಾಗಿದ್ದರೂ, ಅದು ಸ್ಪರ್ಧಿಸಿದ್ದ ಕ್ಷೇತ್ರಗಳಲ್ಲಿ ಮತ ಪ್ರಮಾಣ ಭಾರಿ ಕುಸಿದಿದೆ.

ಪಶ್ಚಿಮ ಬಂಗಾಳವು ಇದಕ್ಕೆ ಅಪವಾದ ಎಂಬಂತಿದೆ. ಇಲ್ಲಿ ರಾಜ್ಯದ ಆಡಳಿತ ಪಕ್ಷಕ್ಕೆ ಬಿಜೆಪಿ ಸವಾಲುಗಾರನೇ ಆಗಿದ್ದರೂ, ಶೇ 1.3ರಷ್ಟು ಮತಗಳನ್ನು ಕಳೆದುಕೊಂಡಿದೆ. ಜತೆಗೆ ವಿಧಾನಸಭಾ ಚುನಾವಣೆಯಲ್ಲಿ ಕಂಡಿದ್ದ ಸೋಲಿನಿಂದ ಚೇತರಿಸಿಕೊಳ್ಳಲೂ ಆಗಿಲ್ಲ.

| | | | |
|---|---|---|---|
| ಪಶ್ಚಿಮ ಬಂಗಾಳ | -1.5% | -1.5% | -6 |
| ತಮಿಳುನಾಡು | 7.6% | -8.9% | -- |
| ಆಂಧ್ರಪ್ರದೇಶ | 10.3% | 48.1% | 3 |
| ಒಡಿಶಾ | 7.0% | 7.0% | 12 |
| ಕೇರಳ | 3.7% | 3.2% | 1 |
| ತೆಲಂಗಾಣ | 15.7% | 15.7% | 4 |
| ಪಂಜಾಬ್ | 8.9% | -26.3% | -2 |
| ಮಿಜೋರಾಂ | 1.1% | 1.1% | -- |
| ಸಿಕ್ಕಿಂ | 0.2% | 0.2% | -- |

## ಗುಂಡಣ್ಣ




## ಕೇಳದೇ ಸಲಹೆ ಕೊಡುವವರ ನಡುವೆ



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ನನ್ನ ಹಳೆಯ ವಿದ್ಯಾರ್ಥಿಯೊಬ್ಬ ಮೆಸೇಜ್ ಮಾಡಿ, 'ಮೇಡಂ, ನನ್ನ ಕಸಿನ್ ಒಬ್ಬಳು ಬಹಳ ಗೊಂದಲದಲ್ಲಿದ್ದಾಳೆ, ಫ್ಯಾಷನ್ ಟೆಕ್ನಾಲಜಿಯಲ್ಲಿ ಪದವಿ ಪಡೆಯಬೇಕೆಂಬುದು ಅವಳ ಆಸೆ. ಆದರೆ ಕೆಲವರು ಏನೇನೋ ಹೇಳಿ ಧೃತಿಗೆಡಿಸುತ್ತಿದ್ದಾರೆ. ನೀವು ಸ್ವಲ್ಪ ಮಾತಾಡಬಹುದಾ' ಎಂದ.

ಪಿಯುಸಿ ವಿಜ್ಞಾನದಲ್ಲಾಕೆ ತೊಂಬತ್ತು ಶೇಕಡಾ ಅಂಕ ತೆಗೆದಿದ್ದಾಳೆ, ಸಂಬಂಧಿಸಿದ ಪರೀಕ್ಷೆಯ ಎರಡೂ ಹಂತಗಳಲ್ಲಿ ಪಾಸಾಗಿ ರಾಷ್ಟ್ರಮಟ್ಟದಲ್ಲೂ ಒಳ್ಳೆಯ ಶ್ರೇಣಿ ಪಡೆದಿದ್ದಾಳೆ. ಅಂತರ್ಜಾಲದಿಂದ ಆ ಕೋರ್ಸ್ ಬಗ್ಗೆ ಎಲ್ಲ ಮಾಹಿತಿ ಸಂಗ್ರಹಿಸಿದ್ದಾಳೆ.

ಪೋಷಕರೂ ಒಪ್ಪಿ ಇನ್ನೇನು ಕೋರ್ಸಿಗೆ ಸೇರಬೇಕು ಅನ್ನುವಷ್ಟರಲ್ಲಿ ಸಂಬಂಧಿಕರು ಕೆಲವರು, 'ಅಯ್ಯೋ ಅದೇನು ಕೋರ್ಸು ಅಂತ ಅದಕ್ಕೆ ಸೇರಿಸುತ್ತೀರಾ, ಅದೂ ಅಷ್ಟು ಖರ್ಚು ಮಾಡಿ! ಎಷ್ಟು ಓದಿದರೂ ಕೊನೆಗೆ ಕತ್ತರಿ ಹಿಡಿಯುವುದೇ!' ಅಂದರಂತೆ. ತನ್ನಿಷ್ಟದ ಓದು ಓದಲು ಸಜ್ಜಾಗಿದ್ದ ಹುಡುಗಿ ಇಂತಹ ಅರ್ಧ ಜ್ಞಾನ ಹೊಂದಿದ ಮೂರ್ಖರ ಮಾತು ಕೇಳಿ ಬಹಳ ತಲೆ ಕೆಡಿಸಿಕೊಂಡಿದ್ದಳು. ಜತೆಗೆ ಮಗಳ ಆಸಕ್ತಿಗೆ ಸಂಪೂರ್ಣ ಸಹಕಾರ ನೀಡಿದ್ದ ತಂದೆತಾಯಿಯೂ!

ಈ ಜನರ ವಿಚಿತ್ರ ಸ್ವಭಾವ ನಿಜಕ್ಕೂ ವಿಷಾದನೀಯ. ಯಾರಾದರೂ ಯಾವುದಾದರೂ ಹೊಸ ದಾರಿಯಲ್ಲಿ ಹೋಗುವಾಗ ಅವರನ್ನು ಎದೆಗುಂದಿಸುವುದರಲ್ಲಿ ಕೆಲವರದ್ದು ಎತ್ತಿದ ಕೈ. ಯಾವುದೇ ಕ್ಷೇತ್ರದ ಪರಿಣಿತರಾದರೂ ತಮ್ಮ ಅಭಿಪ್ರಾಯ ನೀಡುವಾಗ ಸ್ವಲ್ಪ ಯೋಚಿಸುತ್ತಾರೆ. ತಮಾಷೆಯ ಸಂಗತಿಯೆಂದರೆ ತಮಗೆ ಮಾಹಿತಿಯೇ ಇರದ ವಿಷಯದ ಬಗ್ಗೆ ಕೇಳದೆಯೂ ತಮ್ಮ ಅಭಿಪ್ರಾಯ ಕೊಡುವುದರಲ್ಲಿ ಕೆಲವರು ಮುಂದಿರುತ್ತಾರೆ! ಇಂತಹ ಸಂಬಂಧಿಕರು, ಸ್ನೇಹಿತರು ಮಗ್ಗುಲ ಮುಳ್ಳಿದ್ದಂತೆ!

ಈ ಸಂಭಾಷಣೆಯಿಂದ ನೆನಪಾದ ಮತ್ತೊಂದು ವಿಚಾರವೆಂದರೆ ಭಾರತೀಯರು ಬಿಳಿ ಕಾಲರಿನ ಕೆಲಸಗಳಿಗೆ ಕೊಡುವ ಅತಿಯಾದ ಮಹತ್ವ. ಇಂತಹ ಮನಃಸ್ಥಿತಿಯಿಂದಲೇ ನಾವು ಕ್ಷಮತೆ ಇದ್ದರೂ ಅತ್ಯುನ್ನತ ಸಾಧನೆ ಮಾಡುವುದಕ್ಕೆ ಸಾಧ್ಯವಾಗದಿರುವುದು. ಇಂಥವರ ವರ್ಷದ ದುಡಿಮೆಯನ್ನು ಗಂಟೆಗಳಲ್ಲಿ ದುಡಿದು ಹಾಕುವ ಕತ್ತರಿ ಹಿಡಿವ ಡಿಸೈನರುಗಳಿದ್ದಾರೆ ಭಾರತದಲ್ಲಿಯೇ.

ಅದೇನೇ ಇರಲಿ, ಬೇರೆಯವರ ವಿಷಯದಲ್ಲಿ ವಿನಾಕಾರಣ ಮೂಗುತೂರಿಸುವ ಜನರಲ್ಲಿ ಒಂದು ಮನವಿ. ದಯವಿಟ್ಟು ನಿಮ್ಮ ಅರೆಬರೆ ಜ್ಞಾನವನ್ನು ಯಾರಿಗೂ ಹಂಚಬೇಡಿ ಮತ್ತು ದೈಹಿಕಶ್ರಮದ ಬಗೆಗಿನ ನಿಮ್ಮ ಪೂರ್ವಗ್ರಹವನ್ನು ನಿಮ್ಮಲ್ಲಿಯೇ ಇಟ್ಟುಕೊಳ್ಳಿ. ಅಂದಹಾಗೆ ಆಯ್ದುಕೊಳ್ಳುವ ಕೋರ್ಸ್ ಯಾವುದೇ ಆಗಿರಲಿ ಓದುವಾಗ ಮತ್ತು ಓದಿನ ನಂತರ ಕೆಲ ವರ್ಷ ಶ್ರಮ ವಹಿಸಿದರೆ, ಆಸಕ್ತಿಯಿಂದ ವಿಚಾರಗಳನ್ನು ಕಲಿತರೆ ಯಾರೂ ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಕಾಣಬಹುದು, ಆರಾಮಾಗಿ ನಿನಗೆ ಬೇಕಾದದ್ದನ್ನು ಓದು ಎಂದು ಆ ಹುಡುಗಿಗೆ ಹೇಳಿದೆ. ❖

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜೂನ್ 13, 2024

**ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ:** ಜ್ಯೇಷ್ಠ ಶುಕ್ಲ ಸಪ್ತಮಿ ಗಂ. 21-34 ನಕ್ಷತ್ರ: ಪೂರ್ವ ಫಲ್ಗುನಿ ಗಂ. 29-09 ಯೋಗ: ವಜ್ರ ಗಂ. 18-05 ಕರಣ: ಗರ ಗಂ. 08-23, ವೃಷಭ ಮಾಸದ ನೇ 30 ದಿನ, ಮಳೆನಕ್ಷತ್ರ: ಮೃಗಶಿರ 2.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-07 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ : 06 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 6, 10

**ಮೇಷ:** ಮನೆಯಲ್ಲಿ ಸುಖ-ಶಾಂತಿ ಸಮೃದ್ಧಿಯಾಗಿದ್ದರೂ ಮನದಲ್ಲಿ ಮಕ್ಕಳ ವಿಚಾರವಾಗಿ ಭಯದ ಭೀತಿ ತೋರಿಬಂದೀತು. ಸ್ವಂತ ಉದ್ಯೋಗಿಗಳಿಗೆ ವೃತ್ತಿಯಲ್ಲಿ ಲಾಭ. ಫಲವನ್ನು ನಿರೀಕ್ಷಿಸಬೇಡಿ.

**ವೃಷಭ:** ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟ-ವರಲ್ಲಿ ಅಗತ್ಯ ಚರ್ಚೆ ನಡೆಸಿ. ನಿತ್ಯದ ಆಗುಹೋಗುಗಳ ಬಗ್ಗೆ ಗಮನಹರಿಸಿ. ಬಹುಜನರ ಒಡನಾಟದಿಂದ ವಿಶ್ವಾಸ, ಪ್ರೀತಿ ಪಡೆಯುವಂತಾಗುವುದು.

**ಮಿಥುನ:** ಬಂಧುಗಳ ಮೂಲಕ ಹೆಚ್ಚಿನ ಸಹಕಾರ ದೊರೆತು ವ್ಯಾಪಾರದಲ್ಲಿ ಅಧಿಕ ಧನಲಾಭ. ವಿದ್ಯಾರ್ಥಿಗಳಿಗೆ ಸ್ವಪ್ರಯತ್ನದ ಪರಿಶ್ರಮಕ್ಕೆ ತಕ್ಕಂಥ ಪ್ರತಿಫಲ ದೊರೆಯುತ್ತದೆ.

**ಕರ್ಕಾಟಕ:** ನಿಮ್ಮೊಳಗಿನ ಹಲವಾರು ವರ್ಷಗಳ ದುಃಖ ಹೊರಬರಲಿದೆ. ಅದು ಅಚ್ಚರಿಯನ್ನು ಉಂಟು ಮಾಡಬಹುದು. ಮಕ್ಕಳ ಮೇಲಿನ ಅತಿ ಮೋಹವು ಅವರ ಶ್ರೇಯೋಭಿವೃದ್ದಿಗೆ ತೊಡಕನ್ನು ಉಂಟುಮಾಡುವ ಸಾಧ್ಯತೆ ಇದೆ.

**ಸಿಂಹ:** ಸದಾಕಾಲ ಹಿತವನ್ನು ಬಯಸುವ ಕುಟುಂಬ ಸದಸ್ಯರನ್ನು ಹೊಂದಿರುವುದರಿಂದ ಮಾನಸಿಕ ಸ್ಥೈರ್ಯ ಸದೃಢವಾಗುವುದು. ತಾತ್ಕಾಲಿಕ ಹುದ್ದೆಯಲ್ಲಿರುವವರಿಗೆ ಬದಲಾವಣೆಯ ಸೂಚನೆ ಕಂಡುಬರಲಿದೆ.

**ಕನ್ಯಾ:** ವೃತ್ತಿ ಜೀವನಕ್ಕೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವಾಗ ಗೊಂದಲ ಉಂಟಾಗಬಹುದು. ಗುಂಪು ಚಟುವಟಿಕೆಯಲ್ಲಿ ಮುಂದಾಳತ್ವವು ನಿಮ್ಮದಾಗಲಿದೆ. ಸಹಿಯನ್ನು ನಕಲು ಪಡಿಸುವವರಿದ್ದಾರೆ. ಎಚ್ಚರವಾಗಿರಿ.

**ತುಲಾ:** ಜೀವನದ ನಡೆ-ನುಡಿಗಳು ಕಿರಿಯರ ಜೀವನಕ್ಕೆ ಮಾರ್ಗದರ್ಶನ-ದಂತಾಗಿ ಸಹಕಾರಿಯಾಗುವುದು. ಉತ್ಸಾಹದಿಂದ ಕೆಲಸ ಆರಂಭಿಸಿದಲ್ಲಿ ಸಮಸ್ಯೆಗಳು ತಾನಾಗಿಯೇ ಪರಿಹಾರಗೊಳ್ಳಲಿವೆ.

**ವೃಶ್ಚಿಕ:** ಧರ್ಮಕಾರ್ಯಗಳನ್ನು ಮಾಡುವಲ್ಲಿ ವಿಳಂಬವನ್ನು ಮಾಡದಿರಿ. ಪ್ರಯಾಣಕ್ಕೆ ಹೆಚ್ಚು ಧನ ವ್ಯಯ ಆಗುವುದು. ಗೃಹ ಉತ್ಪಾದಕ ವಸ್ತುಗಳ ಮಾರಾಟದಲ್ಲಿ ಉತ್ತಮ ಲಾಭವಾಗುವ ಸಾಧ್ಯತೆಗಳಿವೆ.

**ಧನು:** ಗ್ರಾಮ ಪಂಚಾಯ್ತಿಯಂಥ ಇಲಾಖೆಯ ಅಧಿಕಾರಿಗಳಿಗೆ ಹೆಚ್ಚಿನ ಕಾರ್ಯಭಾರ ಹೊರಬೇಕಾಗುವುದು. ಉತ್ತಮ ಗುರುವಿನ ಪ್ರಾಪ್ತಿಯಿಂದಾಗಿ ನಿಮ್ಮ ಮನಸ್ಸಿನ ಆಧ್ಯಾತ್ಮಿಕವಾದ ಪ್ರಶ್ನೆಗಳಿಗೆ ಉತ್ತರ ಸಿಗಬಹುದು.

**ಮಕರ:** ಗುಪ್ತ ವಿಷಯಗಳನ್ನು ಕಂಡುಕೊಳ್ಳಲಿಕ್ಕಾಗಿ ಕಪಟವಾದ ಸ್ನೇಹವನ್ನು ಮಾಡುವವರು ಇರುತ್ತಾರೆ. ಮೊದಲು ಕೊಟ್ಟ ಮಾತಿನಂತೆಯೆ ನಡೆದುಕೊಳ್ಳಲು ಹರಸಹಾಸವನ್ನು ಪಡುವಂತಾಗಬಹುದು.

**ಕುಂಭ:** ಕಳೆದು ಹೋದಂಥ ವಸ್ತುವನ್ನು ಸಮಾಧಾನದ ಶೋಧನದಿಂದಾಗಿ ಪಡೆದುಕೊಳ್ಳುವಿರಿ. ಮಾತುಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗುವುದು. ವೃತ್ತಿಯಲ್ಲಿ ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ದುಡುಕಬೇಡಿ.

**ಮೀನ:** ಮೌಖಿಕವಾಗಿ ಬೆಳೆದ ಮಾತಿನಲ್ಲಿ ನಿಮ್ಮ ತರ್ಕಬದ್ಧವಾದ ಉತ್ತರಗಳಿಗೆ ಎಲ್ಲರೂ ಮಾರುಹೋಗುವರು. ಮಕ್ಕಳ ಆಟೋಪಚಾರವನ್ನು ಕಂಡು ಹರ್ಷ-ಗೊಳ್ಳುವಿರಿ. ವ್ಯಾವಹಾರಿಕವಾದ ಕಲ್ಪನೆಗಳು ಗರಿಗೆದರುವುವು.

## ಪದಬಂಧ 5710

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಹೋಲಿಕೆಗೆ ಮೀರಿದುದು (4)
3.ಮಿತಿ ಮೀರಿದ ಕೋಪವಿದು (3)
4.ಮರವನ್ನು ಕೊಯ್ಯುವ ಸಾಧನ (4)
6.ಒಂದು ಬಗೆಯ ಅಲೋಹ ಮೂಲಧಾತು (3)
7.ನಾಮ ಹಚ್ಚಿಕೊಂಡವನ ಹೆಸರು (4)
8.ಕರಿಯ ಹತ್ತಿರವಿರುವ ಕಿರುಗತ್ತಿ (3)
9.ಮರುನುಡಿ ಅಥವಾ ಜವಾಬು (4)
12.ನಿಶ್ಶಬ್ದಕ್ಕೊಂದು ಪರ್ಯಾಯ ಪದ (3)
13.ಮಲಗುವ ಮನೆಯಿದು (4)
15.ಒಳ್ಳೆಯ ಗುಣಗಳಿಂದ ಕೂಡಿದ ಮನುಷ್ಯ (3)
16.ಎಳೆತನದಿಂದಲೂ ಬೆಳೆಸಿಕೊಂಡು ಬಂದಿರುವ ಸ್ನೇಹ (4)

**ಮೇಲಿಂದ ಕೆಳಕ್ಕೆ**
1.ಅಪರಿಚಿತನ ಬಳಿಯಲ್ಲಿರುವುದು ಚೊಕ್ಕ ಚಿನ್ನ! (4)
2.ಮಗಳ ಹತ್ತಿರವಿರುವ ಪುತ್ರ (2)
3.ಚಿತ್ರವಿದ್ದುದಕ್ಕೇ ಇಷ್ಟೊಂದು ಬೆರಗು! (3)
5.ಮಯನ ಹತ್ತಿರ ಕಳೆದ ಕಾಲ (3)
7.ನಾಗರಿಕತೆ ಕಲಿತಿರುವ ಸ್ತ್ರೀ (2)
8.ಕಠೋರವಾಗಿರುವ ಕೈ! (2)
9.ವೇಷ ಧರಿಸಿಕೊಂಡು ಒಳಹೋಗುವಿಕೆ (3)
10.ಅವನ ಸಾವು ಹೀಗೆ ಬಂದಿದೆ! (4)
11.ಪಾಕದಲ್ಲಿರುವ ದೋಷ ಕಾಣುತ್ತಿದೆಯೇ? (3)
14.ಹಲಗೆಗಾಗಿ ಈ ವೈರವೇ? (2)



## 5709ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಆಘ್ರಾಣ 2.ಸಾಮರಸ್ಯ
4.ಸಾಕ್ಷಾತ್ಕಾರ 6.ಪ್ರಸಂಗ
7.ನೆಪ 9.ಕನಕ
11.ರವಿ 13.ಕವಲು
14.ಟಕ್ಕುತನ 16.ಮನೆತನ
16.ಗಲಭೆ

**ಮೇಲಿಂದ ಕೆಳಕ್ಕೆ:**
1.ಆತ್ಮಸಾಧನೆ 2.ಸಾಮು
3.ರಕ್ತಸಂಚಾರ 5.ರಥಿಕ
8.ಪರಿವರ್ತನೆ 10.ಕರಟ
12.ವಿಧಾನಸಭೆ 15.ಮೌನ

## ಸುಡೊಕು 6095

| | | | | | | | | |
|---|---|---|---|---|---|---|---|---|
| | | | | 8 | | | 2 | |
| | 3 | | | | | | | 8 |
| 6 | | 5 | | 9 | | 4 | | 3 |
| | 2 | | 6 | | | | 3 | |
| 5 | | 3 | 2 | | 1 | 8 | | 9 |
| | 1 | | | | 9 | | 4 | |
| | 6 | | | 2 | | | | 4 |
| 3 | | 8 | 9 | | | | 5 | |
| | 5 | | | 3 | 4 | | | 1 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## 6094 ಸುಡೊಕು

| | | | | | | | | |
|---|---|---|---|---|---|---|---|---|
| 1 | 8 | 3 | 5 | 2 | 6 | 9 | 4 | 7 |
| 2 | 9 | 5 | 3 | 4 | 7 | 1 | 8 | 6 |
| 7 | 6 | 4 | 9 | 8 | 1 | 5 | 2 | 3 |
| 9 | 1 | 6 | 4 | 7 | 5 | 2 | 3 | 8 |
| 3 | 4 | 7 | 2 | 9 | 8 | 6 | 1 | 5 |
| 5 | 2 | 8 | 6 | 1 | 3 | 7 | 9 | 4 |
| 8 | 3 | 1 | 7 | 5 | 9 | 4 | 6 | 2 |
| 6 | 5 | 2 | 1 | 3 | 4 | 8 | 7 | 9 |
| 4 | 7 | 9 | 8 | 6 | 2 | 3 | 5 | 1 |

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

25ನೇ ವಾರ್ಷಿಕ ಪುಣ್ಯಸ್ಮರಣೆ
ಶ್ರೀಮತಿ ರಂಗಮ್ಮ
(ದಿ॥ ಮರಿಸ್ವಾಮಿಯವರ ಧರ್ಮಪತ್ನಿ)
ನಿಮ್ಮ ಜೀವನದ ಸರಳತೆ, ಪ್ರೀತಿ ಔದಾರ್ಯ ಹಾಗೂ ಮೌಲ್ಯಗಳನ್ನು ಸದಾ ಸ್ಮರಿಸುತ್ತಾ ಮುನ್ನಡೆಯುತ್ತಿರುವ
ಇಂತಿ ದುಃಖತಪ್ತರು: ಮಕ್ಕಳು ಹಾಗೂ ಕುಟುಂಬ ವರ್ಗದವರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036


## ಷೇರುಪೇಟೆ ವಹಿವಾಟು




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 23.264 |
| ಇಂದಿನ ಅಂತ್ಯ | 23,323 |
| ▲ | 58 |
| ದಿನದ ಕನಿಷ್ಠ | 23,295 |

## ವಿನಿಮಯ ದರ

| | |
|---|---|
| $ ಡಾಲರ್ | 83.54 |
| £ ಪೌಂಡ್ | 106.59 |
| € ಯುರೊ | 89.86 |
| ¥ ಯೆನ್ (100ಕ್ಕೆ) | 54 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100ಕ್ಕೆ | ₹595 |
| 12 ಕ್ಕೆ | ₹80 |
| ಮೈಸೂರು | |
| 100ಕ್ಕೆ | ₹597 |

## ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ನಿನ್ನೆಯ ದರ)

| | |
|---|---|
| ಶೇಂಗಾ (ರಿಫೈನ್ಡ್) | ₹1510 (1490) |
| ಸೋಯಾ (ರಿಫೈನ್ಡ್) | ₹975 (970) |
| ಸೂರ್ಯಕಾಂತಿ (ರಿಫೈನ್ಡ್) | ₹980 (970) |
| ಪಾಮೋಲಿನ್ | ₹925 (915) |

## ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹8500-8930 |
| ದಾವಣಗೆರೆ | ₹6700-6750 |
| ತಿಪಟೂರು | ₹8700-9500 |

## ಮುದ್ರೆಮನೆ ಕಾಫಿ

(50 ಕೆಜಿಗೆ)

| | |
|---|---|
| ಎಪಿ | ₹15400 |
| ಎಸಿ | ₹9100 |
| ಆರ್‌ಪಿ | ₹16500 |
| ಆರ್‌ಸಿ | ₹9750 |

## ಎನ್.ಆರ್.ಪುರ ರಬ್ಬರ್

| | |
|---|---|
| ಆರ್‌ಎಸ್‌ಎಸ್-4 | ₹169.50 |
| ಆರ್‌ಎಸ್‌ಎಸ್-5 | ₹163.50 |
| ಗುಡ್ ಲಾಟ್ | ₹159.50 |

(ಪ್ರತಿ ಕೆ.ಜಿಗೆ)

## ಮುಂಬೈ ಧಾರಣೆ

ಶೇಂಗಾ
12-4-2022

| | |
|---|---|
| ಜಾವಾ 70/80(ಹೊಸ) | 11200-11300 |
| ಜಾವಾ 80/90(ಹೊಸ) | 10800-10900 |
| ದಪ್ಪ ಮಧ್ಯಪ್ರದೇಶ(ಹೊಸ) | 9800-9900 |
| ದಪ್ಪ ಗುಜರಾತ್(ಹೊಸ) | 10600-10700 |

### ಶೇಂಗಾ ಎಣ್ಣೆ (10 ಕೆಜಿಗೆ)

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1510 (1500) |
| ಒಂದು ವಾರದ ಡೆಲಿವರಿ | 1505 (1495) |
| ಸೋಯಾ ಕಚ್ಚಾ | 925 (920) |
| ಪಾಮ್ ವಾರದ ಡೆಲಿವರಿ | 923 (913) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 920 (917) |

### ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹71,450 (71,050)
ಬೆಳ್ಳಿ ಕೆ.ಜಿ ₹88,300 (87,650)
ಆವರಣದಲ್ಲಿ ಹಿಂದಿನ ದಿನದ ಧಾರಣೆ

### ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹322-510
ದ್ವಿತಳಿ (ಬಿ.ವಿ) ₹370-808

ಮೇ ತಿಂಗಳಿನಲ್ಲಿ ಶೇ 4.75ರಷ್ಟು ದಾಖಲು • ತರಕಾರಿ ಬೆಲೆ ಏರಿಕೆ

# ಚಿಲ್ಲರೆ ಹಣದುಬ್ಬರ: ವರ್ಷದ ಕನಿಷ್ಠ

ನವದೆಹಲಿ (ಪಿಟಿಐ): ದೇಶದ ಚಿಲ್ಲರೆ ಹಣದುಬ್ಬರವು ಮೇ ತಿಂಗಳಿನಲ್ಲಿ ಒಂದು ವರ್ಷದ ಕನಿಷ್ಠ ಮಟ್ಟವಾದ ಶೇ 4.75ಕ್ಕೆ ಇಳಿಕೆಯಾಗಿದೆ.

ಕೆಲವು ಆಹಾರ ಪದಾರ್ಥಗಳ ಬೆಲೆಯಲ್ಲಿ ಕಡಿಮೆಯಾಗಿರುವುದೇ ಈ ಇಳಿಕೆಗೆ ಕಾರಣವಾಗಿದೆ ಎಂದು ಬುಧವಾರ ಬಿಡುಗಡೆಯಾಗಿರುವ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ ವರದಿ ತಿಳಿಸಿದೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ 4.83ರಷ್ಟು ದಾಖಲಾಗಿತ್ತು. ಕಳೆದ ವರ್ಷದ ಮೇ ತಿಂಗಳಿನಲ್ಲಿ ಶೇ 4.31ರಷ್ಟು ಕನಿಷ್ಠ ಮಟ್ಟಕ್ಕೆ ಇಳಿದಿತ್ತು ಎಂದು ಹೇಳಿದೆ.

ಏಪ್ರಿಲ್‌ನಲ್ಲಿ ಶೇ 8.70ರಷ್ಟಿದ್ದ ಆಹಾರದ ಹಣದುಬ್ಬರವು ಮೇ ತಿಂಗಳಿನಲ್ಲಿ ಶೇ 8.69ಕ್ಕೆ ಇಳಿಕೆಯಾಗಿದೆ. ಪ್ರಸಕ್ತ ವರ್ಷದ ಫೆಬ್ರುವರಿಯಿಂದ ಹಣದುಬ್ಬರವು ಇಳಿಕೆಯ ಪಥದಲ್ಲಿಯೇ ಸಾಗುತ್ತಿದೆ. ಫೆಬ್ರುವರಿಯಲ್ಲಿ ಶೇ 5.1ರಷ್ಟು ದಾಖಲಾಗಿತ್ತು.

ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿಯೇ ಕಾಯ್ದುಕೊಳ್ಳುವುದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗುರಿಯಾಗಿದೆ.

ಇತ್ತೀಚೆಗೆ ನಡೆದ ಆರ್‌ಬಿಐನ ಹಣಕಾಸು ನೀತಿ ಸಮಿತಿ ಸಭೆಯಲ್ಲಿ 2024–25ನೇ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರವು ಶೇ 4.5ರಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ.

ಏಪ್ರಿಲ್‌ಗೆ ಹೋಲಿಸಿದರೆ ಮೇ ತಿಂಗಳಿನಲ್ಲಿ ತರಕಾರಿಗಳ ಬೆಲೆಯಲ್ಲಿ ಏರಿಕೆಯಾಗಿದ್ದರೆ, ಹಣ್ಣುಗಳ ಬೆಲೆಯಲ್ಲಿ ಇಳಿಕೆಯಾಗಿದೆ.

‘ಏಪ್ರಿಲ್‌ಗೆ ಹೋಲಿಸಿದರೆ ಮೇ ತಿಂಗಳಿನಲ್ಲಿ ಇಂಧನ, ವಿದ್ಯುತ್ ಬೆಲೆಯಲ್ಲಿ ಇಳಿಕೆಯಾಗಿದೆ ಅಥವಾ ಬೆಲೆಯಲ್ಲಿ ಬದಲಾವಣೆಯಾಗಿಲ್ಲ. ಈ ಬೆಳವಣಿಗೆಯಿಂದಾಗಿ ಜೂನ್‌ನಲ್ಲಿ ಹಣದುಬ್ಬರವು ಶೇ 5ಕ್ಕಿಂತ ಕಡಿಮೆ ದಾಖಲಾಗುವ ನಿರೀಕ್ಷೆಯಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಜುಲೈ ಮತ್ತು ಆಗಸ್ಟ್‌ನಲ್ಲಿ ಶೇ 2.5ರಿಂದ ಶೇ 3.5ಕ್ಕೆ ತಗ್ಗುವ ಸಾಧ್ಯತೆಯಿದೆ’ ಎಂದು ಕ್ರೆಡಿಟ್ ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ತಿಳಿಸಿದ್ದಾರೆ.

ಆಂಧ್ರಪ್ರದೇಶ, ಅಸ್ಸಾಂ, ಬಿಹಾರ, ಛತ್ತೀಸಗಢ, ಹರಿಯಾಣ, ಕರ್ನಾಟಕ, ಕೇರಳ, ಒಡಿಶಾ, ರಾಜಸ್ಥಾನ, ತಮಿಳುನಾಡು, ತೆಲಂಗಾಣ ಮತ್ತು ಉತ್ತರ ಪ್ರದೇಶದಲ್ಲಿ ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚು ದಾಖಲಾಗಿದೆ.

ಒಡಿಶಾದಲ್ಲಿ ಶೇ 6.25ರಷ್ಟು ಗರಿಷ್ಠ ಮಟ್ಟದಲ್ಲಿದ್ದರೆ, ದೆಹಲಿಯಲ್ಲಿ ಶೇ 1.99ರಷ್ಟು ಕಡಿಮೆ ದಾಖಲಾಗಿದೆ.

# ಕೈಗಾರಿಕಾ ಉತ್ಪಾದನೆ ಕುಸಿತ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯು ಏಪ್ರಿಲ್‌ನಲ್ಲಿ ಮೂರು ತಿಂಗಳ ಕನಿಷ್ಠ ಮಟ್ಟವಾದ ಶೇ 5ಕ್ಕೆ ಇಳಿಕೆಯಾಗಿದೆ.

ತಯಾರಿಕಾ ವಲಯದ ಚಟುವಟಿಕೆಗಳು ತಗ್ಗಿರುವುದೇ ಈ ಇಳಿಕೆಗೆ ಕಾರಣವಾಗಿದೆ. ಆದರೆ, ಗಣಿಗಾರಿಕೆ ಮತ್ತು ವಿದ್ಯುತ್ ವಲಯದ ಬೆಳವಣಿಗೆಯು ಉತ್ತಮವಾಗಿದೆ ಎಂದು ಬುಧವಾರ ಬಿಡುಗಡೆಯಾಗಿರುವ ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ವರದಿ ತಿಳಿಸಿದೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಈ ಬೆಳವಣಿಗೆಯು ಜನವರಿಯಲ್ಲಿ ಶೇ 4.2ರಷ್ಟು ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿತ್ತು. ಫೆಬ್ರುವರಿಯಲ್ಲಿ ಶೇ 5.6ರಷ್ಟು ಹಾಗೂ ಮಾರ್ಚ್‌ನಲ್ಲಿ ಶೇ 5.4ರಷ್ಟು ಪ್ರಗತಿ ದಾಖಲಿಸಿತ್ತು. 2022–23ನೇ ಪೂರ್ಣ ಆರ್ಥಿಕ ವರ್ಷದಲ್ಲಿ ಕೈಗಾರಿಕಾ ಉತ್ಪಾದನೆಯ ಶೇ 5.2ರಷ್ಟು ಬೆಳವಣಿಗೆ ದಾಖಲಿಸಿದ್ದರೆ, 2023–24ನೇ ಆರ್ಥಿಕ ವರ್ಷದಲ್ಲಿ ಶೇ 5.9ರಷ್ಟು ಪ್ರಗತಿ ಕಂಡಿದೆ.

2023ರ ಏಪ್ರಿಲ್‌ಗೆ ಹೋಲಿಸಿದರೆ ಪ್ರಸಕ್ತ ವರ್ಷದ ಏಪ್ರಿಲ್‌ನಲ್ಲಿ ಗಣಿಗಾರಿಕೆ ವಲಯವು ಶೇ 5.1ರಿಂದ ಶೇ 6.7ರಷ್ಟು ಬೆಳವಣಿಗೆ ಕಂಡಿದೆ. ತಯಾರಿಕಾ ವಲಯದ ಬೆಳವಣಿಗೆಯು ಶೇ 5.5ರಿಂದ ಶೇ 3.9ಕ್ಕೆ ಇಳಿಕೆಯಾಗಿದೆ.

ವಿದ್ಯುತ್ ವಲಯದ ಉತ್ಪಾದನೆಯು ಶೇ 1.1ರಿಂದ ಶೇ 10.2ರಷ್ಟು ಏರಿಕೆಯಾಗಿದೆ. ಬಂಡವಾಳ ಸರಕುಗಳ ವಲಯದ ಬೆಳವಣಿಗೆಯು ಶೇ 3.1ಕ್ಕೆ ಇಳಿಕೆಯಾಗಿದೆ. ಗ್ರಾಹಕರ ಬಳಕೆಯ ವಸ್ತುಗಳ ಉತ್ಪಾದನೆಯು ಶೇ 2.3ರಿಂದ ಶೇ 9.8ರಷ್ಟು ಪ್ರಗತಿ ಕಂಡಿದೆ. ಮೂಲಸೌಕರ್ಯ/ ನಿರ್ಮಾಣ ಸರಕುಗಳ ವಲಯದ ಬೆಳವಣಿಗೆಯು ಶೇ 8ಕ್ಕೆ ಇಳಿಕೆ ಕಂಡಿದೆ.

# ಬಜಾಜ್ ಚೇತಕ್ 2901 ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ದ್ವಿಚಕ್ರ ವಾಹನ ತಯಾರಿಕಾ ಕಂಪನಿಯಾದ ಬಜಾಜ್ ಆಟೊ, ಎಲೆಕ್ಟ್ರಿಕ್ ಸ್ಕೂಟರ್ ಆದ ‘ಚೇತಕ್ 2901’ ಅನ್ನು ಮಾರುಕಟ್ಟೆಗೆ ಪರಿಚಯಿಸಿದೆ.

ಕೆಂಪು, ಬಿಳಿ, ಕಪ್ಪು, ನಿಂಬೆ ಹಳದಿ ಮತ್ತು ಅಜುರೆ ನೀಲಿ ಬಣ್ಣದಲ್ಲಿ ಈ ಸ್ಕೂಟರ್ ಲಭ್ಯವಿದೆ. ಬೆಂಗಳೂರಿನಲ್ಲಿ ಇದರ ಎಕ್ಸ್ ಷೋರೂಂ ಬೆಲೆಯು ₹95,998 ಆಗಿದೆ. ದೇಶದ 500ಕ್ಕೂ ಷೋರೂಂಗಳಲ್ಲಿ ಲಭ್ಯವಿದ್ದು, ಜೂನ್ 15ರಿಂದ ಗ್ರಾಹಕರು ಖರೀದಿಸಬಹುದಾಗಿದೆ ಎಂದು ಕಂಪನಿ ತಿಳಿಸಿದೆ.

ಚೇತಕ್ ಸದೃಢವಾದ ಲೋಹದ ದೇಹ ಹಾಗೂ ಸುಧಾರಿತ ತಾಂತ್ರಿಕ ವೈಶಿಷ್ಟ್ಯಗಳಿಂದ ಕೂಡಿದೆ. ಐಇಸಿ ವಾಹನ ಹಾಗೂ ಎಲೆಕ್ಟ್ರಿಕ್ ವಾಹನ ಸವಾರರನ್ನು ಸೆಳೆಯುತ್ತದೆ. ಒಂದು ಬಾರಿ ಚಾರ್ಜ್ ಮಾಡಿದರೆ 123 ಕಿ.ಮೀ. ದೂರ ಕ್ರಮಿಸಬಹುದಾಗಿದೆ ಎಂದು ಹೇಳಿದೆ.

ಸವಾರರು ನಿರೀಕ್ಷಿಸುವ ಸಾಮರ್ಥ್ಯ ಹೊಂದಿದ್ದು, ಉತ್ತಮ ಸವಾರಿಯ ಅನುಭವ ನೀಡಲಿದೆ ಎಂದು ತಿಳಿಸಿದೆ.

# ‘ಜನರ ಸುಲಲಿತ ಜೀವನ ನಿರ್ವಹಣೆಗೆ ಕ್ರಮ’

ನವದೆಹಲಿ (ಪಿಟಿಐ): ಸತತ ಎರಡನೇ ಬಾರಿಗೆ ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆಯಾಗಿ ನಿರ್ಮಲಾ ಸೀತಾರಾಮನ್ ಅವರು ಬುಧವಾರ ಅಧಿಕಾರ ಸ್ವೀಕರಿಸಿದರು.

ಕೇಂದ್ರ ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಹಾಗೂ ಸಚಿವಾಲಯದ ಹಿರಿಯ ಅಧಿಕಾರಿಗಳು, ನಿರ್ಮಲಾ ಅವರಿಗೆ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು. ಈ ವೇಳೆ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಕೂಡ ಹಾಜರಿದ್ದರು.

ಬಳಿಕ ಮಾತನಾಡಿದ ಅವರು, ‘ದೇಶದ ಜನರ ಸುಲಲಿತ ಜೀವನ ನಿರ್ವಹಣೆಗೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಬದ್ಧ. ಜನರ ಜೀವನ ಗುಣಮಟ್ಟ ಸುಧಾರಿಸುವುದೇ ಸರ್ಕಾರದ ಪ್ರಥಮ ಆದ್ಯತೆಯಾಗಿದೆ’ ಎಂದು ಭರವಸೆ ನೀಡಿದರು.

ಕೇಂದ್ರ ಹಣಕಾಸು ಸಚಿವೆಯಾಗಿ ನಿರ್ಮಲಾ ಸೀತಾರಾಮನ್ ಅವರು, ನವದೆಹಲಿಯಲ್ಲಿ ಬುಧವಾರ ಎರಡನೇ ಬಾರಿಗೆ ಅಧಿಕಾರ ಸ್ವೀಕರಿಸಿದರು —ಪಿಟಿಐ ಚಿತ್ರ

‘2014ರಿಂದ ಸರ್ಕಾರ ಕೈಗೊಂಡಿರುವ ಸುಧಾರಣಾ ಕ್ರಮಗಳು ಮುಂದುವರಿಯಲಿವೆ. ದೇಶದ ಸ್ಥೂಲ ಆರ್ಥಿಕ ಸ್ಥಿರತೆ ಹಾಗೂ ಆರ್ಥಿಕತೆ ಬೆಳವಣಿಗೆಗೆ ಸಂಬಂಧಿಸಿದಂತೆ ಅಗತ್ಯವಿರುವ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ಜಾಗತಿಕ ಬಿಕ್ಕಟ್ಟಿನ ನಡುವೆಯೂ ಮುಂಬರುವ ವರ್ಷಗಳಲ್ಲಿ ಭಾರತದ ಆರ್ಥಿಕತೆಯು ಬೆಳವಣಿಗೆ ಸಾಧಿಸಲಿದೆ ಎಂದರು.

ಎನ್‌ಡಿಎ ಮೈತ್ರಿಕೂಟದ ಅಭಿವೃದ್ಧಿ ಕಾರ್ಯಸೂಚಿಯ ಅನುಷ್ಠಾನಕ್ಕೆ ಅಧಿಕಾರಿಗಳು ಮುಂದಾಗಬೇಕು. ಪ್ರಧಾನಿ ನರೇಂದ್ರ ಮೋದಿ ಅವರ ‘ವಿಕಸಿತ ಭಾರತ’ದ ಕನಸು ಈಡೇರಿಸಲು ಹೊಣೆಗಾರಿಕೆಯಿಂದ ಕೆಲಸ ನಿರ್ವಹಿಸಬೇಕು ಎಂದು ಸೂಚಿಸಿದರು.

‘ಕೈಗಾರಿಕಾ ವಲಯದ ನಾಯಕರು, ನಿಯಂತ್ರಕರು, ನಾಗರಿಕರು ಹಾಗೂ ಮಧ್ಯಸ್ಥಗಾರರಿಗೆ ಸಂಪೂರ್ಣ ಸಹಕಾರ ನೀಡಲಾಗುವುದು. ಆ ಮೂಲಕ ಸದೃಢ ಆರ್ಥಿಕತೆ ನಿರ್ಮಾಣಕ್ಕೆ ಒತ್ತು ನೀಡಲಾಗುವುದು’ ಎಂದು ಹೇಳಿದರು.

# ಹೈದರಾಬಾದ್–ಅಯೋಧ್ಯೆ ಸ್ಪೈಸ್‌ಜೆಟ್ ವಿಮಾನ ಸೇವೆ ಸ್ಥಗಿತ

ಮುಂಬೈ (ಪಿಟಿಐ): ಪ್ರಯಾಣಿಕರಿಂದ ಬೇಡಿಕೆ ಕುಸಿದಿರುವ ಪರಿಣಾಮ ಹೈದರಾಬಾದ್ ಮತ್ತು ಅಯೋಧ್ಯೆ ನಡುವೆ ಆರಂಭಿಸಿದ್ದ ನೇರ ವಿಮಾನ ಸಂಚಾರ ಸೇವೆಯನ್ನು ಸ್ಪೈಸ್‌ಜೆಟ್ ವಿಮಾನಯಾನ ಕಂಪನಿಯು ರದ್ದುಪಡಿಸಿದೆ.

ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರವು ಲೋಕಾರ್ಪಣೆಗೊಂಡಿದ್ದ ವೇಳೆ ವಿಮಾನ ಸೇವೆಗೆ ಬೇಡಿಕೆ ಹೆಚ್ಚಿತ್ತು. ಟಿಕೆಟ್ ದರವೂ ದುಪ್ಪಟ್ಟಾಗಿತ್ತು. ಸದ್ಯ ಅಯೋಧ್ಯೆಗೆ ತೆರಳುವವರ ಸಂಖ್ಯೆಯಲ್ಲಿ ಕಡಿಮೆಯಾಗಿದೆ. ಹಾಗಾಗಿ, ಎರಡು ತಿಂಗಳ ಹಿಂದೆ ಆರಂಭಿಸಿದ್ದ ವಿಮಾನ ಸೇವೆಯನ್ನು ಕಂಪನಿಯು ಸ್ಥಗಿತಗೊಳಿಸಿದೆ ಎಂದು ಹೇಳಲಾಗಿದೆ.

ವಾರದಲ್ಲಿ ಮೂರು ಬಾರಿ ಹೈದರಾಬಾದ್‌ನಿಂದ ಅಯೋಧ್ಯೆಗೆ ಸ್ಪೈಸ್‌ಜೆಟ್ ವಿಮಾನಗಳು ಕಾರ್ಯಾಚರಣೆ ನಡೆಸುತ್ತಿದ್ದವು. ಜೂನ್ 1ರಿಂದ ಈ ಸೇವೆ ಸ್ಥಗಿತಗೊಂಡಿದೆ ಎಂದು ಹೈದರಾಬಾದ್ ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.

ವಾಣಿಜ್ಯ ಉದ್ದೇಶ ಹಾಗೂ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ವಿಮಾನಗಳ ಸಂಚಾರದ ವೇಳಾಪಟ್ಟಿಯನ್ನು ನಿಗದಿಪಡಿಸಲಾಗುತ್ತದೆ. ಸದ್ಯ ಚೆನ್ನೈನಿಂದ ಅಯೋಧ್ಯೆಗೆ ವಿಮಾನ ಸೇವೆ ಲಭ್ಯವಿದೆ ಎಂದು ಸ್ಪೈಸ್‌ಜೆಟ್ ವಕ್ತಾರರು ತಿಳಿಸಿದ್ದಾರೆ.

# ನಿಫ್ಟಿ ಸಾರ್ವಕಾಲಿಕ ಗರಿಷ್ಠ

ಮುಂಬೈ (ಪಿಟಿಐ): ಬಂಡವಾಳ ಸರಕು, ವಿದ್ಯುತ್ ಹಾಗೂ ಕೈಗಾರಿಕಾ ಸೂಚ್ಯಂಕದ ಷೇರುಗಳ ಖರೀದಿಯಿಂದಾಗಿ ದೇಶದ ಷೇರುಪೇಟೆಗಳಲ್ಲಿ ಬುಧವಾರ ಸಕಾರಾತ್ಮಕ ವಹಿವಾಟು ನಡೆದಿದ್ದು, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ.



ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್ ಸೇರಿ ಪ್ರಮುಖ ಕಂಪನಿಗಳ ಷೇರು ಖರೀದಿಗೆ ಹೂಡಿಕೆದಾರರು ಮುಂದಾಗಿದ್ದು ಕೂಡ ಸೂಚ್ಯಂಕಗಳು ಏರಿಕೆಯ ಹಾದಿ ಹಿಡಿಯಲು ನೆರವಾಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 149 ಅಂಶ ಏರಿಕೆ ಕಂಡು 76,606 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 593 ಅಂಶ ಏರಿಕೆ ಕಂಡಿತ್ತು.

ನಿಫ್ಟಿ 58 ಅಂಶ ಏರಿಕೆ ಕಂಡು, ಸಾರ್ವಕಾಲಿಕ ಗರಿಷ್ಠ ಮಟ್ಟವಾದ 23,322 ಅಂಶಗಳಲ್ಲಿ ಸ್ಥಿರಗೊಂಡಿತು. ಇಂಟ್ರಾಡೇನಲ್ಲಿ 177 ಅಂಶ ಏರಿಕೆ ಕಂಡು, 23,411 ಅಂಶಗಳಿಗೆ ತಲುಪಿತ್ತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಪವರ್ ಗ್ರಿಡ್ ಷೇರಿನ ಮೌಲ್ಯದಲ್ಲಿ ಶೇ 2.54ರಷ್ಟು ಏರಿಕೆಯಾಗಿದೆ. ಟೆಕ್ ಮಹೀಂದ್ರ, ಬಜಾಜ್ ಫೈನಾನ್ಸ್, ಎನ್‌ಟಿಪಿಸಿ, ಅಲ್ಟ್ರಾ ಟೆಕ್ ಸಿಮೆಂಟ್, ಎಲ್ ಆ್ಯಂಡ್ ಟಿ, ಟಾಟಾ ಸ್ಟೀಲ್, ಭಾರ್ತಿ ಏರ್‌ಟೆಲ್, ಬಜಾಜ್ ಫಿನ್‌ಸರ್ವ್ ಮತ್ತು ಎಚ್‌ಸಿಎಲ್ ಟೆಕ್ನಾಲಜೀಸ್ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ, ಹಿಂದುಸ್ತಾನ್ ಯೂನಿಲಿವರ್, ಇನ್ಫೊಸಿಸ್ ಮತ್ತು ಟೈಟನ್ ಕಂಪನಿಯ ಷೇರಿನ ಮೌಲ್ಯ ಇಳಿಕೆ ಕಂಡಿದೆ.

ಸೋಲ್, ಶಾಂಘೈ ಮಾರುಕಟ್ಟೆಗಳು ಏರಿಕೆ ದಾಖಲಿಸಿದರೆ, ಟೋಕಿಯೊ, ಹಾಂಗ್‌ಕಾಂಗ್ ಮಾರುಕಟ್ಟೆಯು ಇಳಿಕೆ ಕಂಡಿವೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 1.16ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 82.87 ಡಾಲರ್ ಆಗಿದೆ.

## ಬಿಎಸ್‌ಇ ಎಂ–ಕ್ಯಾಪ್ ₹429 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಬಿಎಸ್‌ಇಯಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯವು ಬುಧವಾರದ ವಹಿವಾಟಿನಲ್ಲಿ ₹429.32 ಲಕ್ಷ ಕೋಟಿಗೆ (5.14 ಟ್ರಿಲಿಯನ್ ಡಾಲರ್) ತಲುಪಿದೆ.

ಕಳೆದ ಎರಡು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ ಏರಿಕೆ ದಾಖಲಿಸಿದ್ದರಿಂದ, ಎಂ–ಕ್ಯಾಪ್ ಸಾರ್ವಕಾಲಿಕ ಗರಿಷ್ಠಮಟ್ಟಕ್ಕೆ ಮುಟ್ಟಿದೆ.

‘ಆರಂಭಿಕ ವಹಿವಾಟಿನಲ್ಲಿ ಕಂಡಿದ್ದ ಏರಿಕೆಯನ್ನು ಅಂತ್ಯದ ವೇಳೆಗೆ ದೊಡ್ಡ ಬಂಡವಾಳವಾಗಿ ಪರಿವರ್ತಿಸಿಕೊಳ್ಳುವಲ್ಲಿ ಮಾರುಕಟ್ಟೆಗಳು ವೈಫಲ್ಯ ಕಂಡವು. ಆದರೆ, ಸಾಧಾರಣ ಮಟ್ಟದಲ್ಲಿ ಏರಿಕೆ ಕಾಯ್ದುಕೊಂಡಿವೆ’ ಎಂದು ಮೆಹ್ತಾ ಸೆಕ್ಯುರಿಟೀಸ್‌ನ ಹಿರಿಯ ಉಪಾಧ್ಯಕ್ಷ (ಸಂಶೋಧನೆ) ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

**ಕಾಳ್ಗಿಚ್ಚು** ಶಿಮ್ಲಾದ ಅರಣ್ಯ ಪ್ರದೇಶದಲ್ಲಿ ಕಾಳ್ಗಿಚ್ಚು ಕಾಣಿಸಿಕೊಂಡಿದ್ದು, ನೂರಾರು ಎಕರೆ ಅರಣ್ಯ ಭಸ್ಮವಾಗಿದೆ –ಪಿಟಿಐ ಚಿತ್ರ

# ವೀಳ್ಯದೆಲೆಗೆ ದಾಖಲೆ ಬೆಲೆ

ಪ್ರಜಾವಾಣಿ ವಾರ್ತೆ

ರಬಕವಿ ಬನಹಟ್ಟಿ (ಬಾಗಲಕೋಟೆ ಜಿಲ್ಲೆ): ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ 12 ಸಾವಿರ ವೀಳ್ಯದೆಲೆಗಳ ಕಟ್ಟಿನ ದರವು ₹2,000– ₹5,000ಕ್ಕೆ ಏರಿಕೆಯಾಗಿದ್ದು, ಬೆಳೆಗಾರರು ಹರ್ಷಗೊಂಡಿದ್ದಾರೆ.

‘ವೀಳ್ಯದೆಲೆ ಬೆಲೆ ಹೆಚ್ಚಳವಾಗಿದೆ. ತಮಿಳುನಾಡಿನಿಂದ ಎಲೆಗಳ ಪೂರೈಕೆ ಕಡಿಮೆಯಾಗಿದ್ದು, ಈ ಭಾಗದ ಎಲೆಗಳಿಗೆ ಬೇಡಿಕೆ ಹೆಚ್ಚಿದೆ. ನಿತ್ಯ ಬೆಳಿಗ್ಗೆ ಮತ್ತು ಸಂಜೆ ವಾಹನಗಳಲ್ಲಿ ವ್ಯಾಪಾರಸ್ಥರು ಜಗದಾಳ ಮತ್ತು ನಾವಲಗಿ ಗ್ರಾಮಕ್ಕೆ ಬಂದು ಎಲೆಗಳನ್ನು ಖರೀದಿಸುತ್ತಿದ್ದಾರೆ’ ಎಂದು ರೈತ ಶಿವಪ್ಪ ಹಳಿಂಗಳಿ ತಿಳಿಸಿದರು.

‘ನಸುಕಿನ 3 ರಿಂದ 5.30ರವರೆಗೆ ಎಲೆ ವ್ಯಾಪಾರವಾಗುತ್ತದೆ. ಸ್ಥಳೀಯ ಮಾರಾಟಗಾರರು ಇಲ್ಲಿಯೇ ಬಂದು ಎಲೆಗಳನ್ನು ಒಯ್ಯುತ್ತಾರೆ. ಇಲ್ಲಿನ ವೀಳ್ಯದೆಲೆಗಳನ್ನು ಬೆಂಗಳೂರಿಗೂ ಪೂರೈಸಲಾಗುತ್ತದೆ. ಮಹಾರಾಷ್ಟ್ರದ ಮುಂಬೈ, ಸತಾರಾ, ಕರಾಡಕ್ಕೆ ಕಳುಹಿಸಲಾಗುತ್ತದೆ’ ಎಂದು ರೈತ ಸದಾಶಿವ ಬಂಗಿ ಹೇಳಿದರು.

# ‘ವಿಮಾದಾರರಿಗೆ ಸಾಲ ನೀಡಿಕೆ ಕಡ್ಡಾಯ’

ನವದೆಹಲಿ (ಪಿಟಿಐ): ಜೀವ ವಿಮಾ ಪಾಲಿಸಿಯಡಿ ಉಳಿತಾಯ ಮಾಡಿರುವ ಮೊತ್ತಕ್ಕೆ ಅನುಗುಣವಾಗಿ ವಿಮಾ ಕಂಪನಿಗಳು ವಿಮಾದಾರರಿಗೆ ಸಾಲ ಸೌಲಭ್ಯ ಕಲ್ಪಿಸುವುದು ಕಡ್ಡಾಯವಾಗಿದೆ ಎಂದು ಭಾರತೀಯ ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಐಆರ್‌ಡಿಎಐ) ಬುಧವಾರ ಸೂಚಿಸಿದೆ.

ಸಾಲ ಸೌಲಭ್ಯ ಕಲ್ಪಿಸುವುದರಿಂದ ವಿಮಾದಾರರು ಹಣದ ಅಗತ್ಯತೆ ಪೂರೈಸಿಕೊಳ್ಳಲು ನೆರವಾಗಲಿದೆ ಎಂದು ತಿಳಿಸಿದೆ.

ಪಾಲಿಸಿ ಕುರಿತ ನಿಯಮಗಳು ಮತ್ತು ಷರತ್ತುಗಳ ಬಗ್ಗೆ ಪರಿಶೀಲನೆಗೆ ಈ ಮೊದಲು ನಿಗದಿಪಡಿಸಿದ್ದ ಅವಧಿಯನ್ನು 15 ದಿನಗಳಿಂದ 30 ದಿನಗಳಿಗೆ ಹೆಚ್ಚಿಸಿದೆ. ಸಾಮಾನ್ಯ ವಿಮಾ ಪಾಲಿಸಿಗಳಿಗೆ ಸಂಬಂಧಿಸಿದಂತೆ ಇತ್ತೀಚೆಗೆ ಹೊರಡಿಸಿರುವ ಸುತ್ತೋಲೆಯಲ್ಲಿಯೂ ಇದೇ ಮಾದರಿಯ ಕ್ರಮಕೈಗೊಂಡಿದೆ.

‘ಪಾಲಿಸಿದಾರರ ಹಿತದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಹೊಸತನಕ್ಕೆ ಉತ್ತೇಜನ ಸಿಗಲಿದೆ. ಅಲ್ಲದೆ, ಗ್ರಾಹಕರ ಅನುಭವ ಮತ್ತು ಅವರ ಸಂತುಷ್ಟಿಗೆ ಅನುಕೂಲಕರವಾದ ವಾತಾವರಣ ಕಲ್ಪಿಸಲಾಗಿದೆ’ ಎಂದು ಪ್ರಾಧಿಕಾರ ತಿಳಿಸಿದೆ.

ಪಿಂಚಣಿ ಪಾಲಿಸಿಗಳಲ್ಲಿ ಪಾಲಿಸಿದಾರರು ಭಾಗಶಃ ಮೊತ್ತ ಹಿಂತೆಗೆದುಕೊಳ್ಳಲು ಅನುಮತಿ ನೀಡಲಾಗಿದೆ. ಇದರಿಂದ ಪಾಲಿಸಿದಾರರು ಮಕ್ಕಳ ಉನ್ನತ ಶಿಕ್ಷಣ ಅಥವಾ ವಿವಾಹ, ಮನೆ ಅಥವಾ ನಿವೇಶನ ಖರೀದಿ ನಿರ್ಮಾಣಕ್ಕೆ ನೆರವಾಗಲಿದೆ. ಅಲ್ಲದೆ, ಮಾರಣಾಂತಿಕ ಕಾಯಿಲೆಗಳ ಚಿಕಿತ್ಸಾ ವೆಚ್ಚ ಭರಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದೆ.

ಪಾಲಿಸಿಯನ್ನು ಸರೆಂಡರ್ ಮಾಡುವ ಪಾಲಿಸಿದಾರರು ಮತ್ತು ಪಾಲಿಸಿ ಮುಂದುವರಿಸುವವರಿಗೆ ನ್ಯಾಯಸಮ್ಮತವಾಗಿ ಸಿಗುವ ಮೊತ್ತದ ಬಗ್ಗೆ ತಿಳಿಸಬೇಕಿದೆ. ಪಾಲಿಸಿದಾರರ ಕುಂದು ಕೊರತೆ ಪರಿಹರಿಸಲು ಕ್ರಮವಹಿಸಬೇಕಿದೆ ಎಂದು ಸೂಚಿಸಿದೆ.

ವಿಶ್ವಸಂಸ್ಥೆಯ ತನಿಖಾ ವರದಿಯಲ್ಲಿ ಉಲ್ಲೇಖ

# ಇಸ್ರೇಲ್‌ನಿಂದ ಅಮಾನವೀಯ ವರ್ತನೆ

ಜಿನಿವಾ (ಎಎಫ್‌ಪಿ): ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧದ ವೇಳೆ ಎರಡೂ ದೇಶಗಳ ಸಶಸ್ತ್ರ ಪಡೆಗಳು ಅಪರಾಧ ಕೃತ್ಯಗಳನ್ನು ಎಸಗಿದ್ದು, ಅದರಲ್ಲೂ ಇಸ್ರೇಲ್ ಅಮಾನವೀಯ ವರ್ತನೆಯನ್ನು ತೋರಿದೆ ಎಂದು ವಿಶ್ವಸಂಸ್ಥೆಯ ತನಿಖಾ ವರದಿ ತಿಳಿಸಿದೆ.

ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧದ ಬಗ್ಗೆ ವಿಶ್ವಸಂಸ್ಥೆಯ ಸ್ವತಂತ್ರ ಆಯೋಗವು ಸಮಗ್ರ ತನಿಖೆ ನಡೆಸಿ ವರದಿ ಸಿದ್ಧಪಡಿಸಿದೆ.

‘ಯುದ್ಧದಲ್ಲಿ ಇಸ್ರೇಲ್ ದೇಶವು ಅಂತರರಾಷ್ಟ್ರೀಯ ಮಾನವೀಯ ಕಾನೂನು(ಐಎಚ್‌ಎಲ್) ಮತ್ತು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನನ್ನು (ಐಎಚ್‌ಆರ್‌ಎಲ್) ಉಲ್ಲಂಘಿಸಿದೆ. ಗಾಜಾದಲ್ಲಿ ನಾಗರಿಕ ಸಮಾಜದ ಮೇಲೆ ವ್ಯವಸ್ಥಿತ ಮತ್ತು ವ್ಯಾಪಕವಾದ ದಾಳಿ ನಡೆದಿದೆ’ ಎಂದಿದೆ.

‘ಕೊಲೆ, ಪಾಲೆಸ್ಟೀನ್ ಯುವಕ–ಯುವತಿಯರಿಗೆ ಲೈಂಗಿಕ ಕಿರುಕುಳ, ಒತ್ತಾಯಪೂರ್ವಕವಾಗಿ ಸ್ಥಳಾಂತರ, ಹಿಂಸೆಯಂತಹ ಕ್ರೌರ್ಯವನ್ನು ಇಸ್ರೇಲ್ ಎಸಗಿದೆ. ಹಮಾಸ್ ಮಿಲಿಟರಿ ಪಡೆ, ಪ್ಯಾಲೆಸ್ಟೀನ್‌ನ ಇತರ ಸಶಸ್ತ್ರ ಪಡೆಗಳು ಮತ್ತು ಪ್ಯಾಲೆಸ್ಟೀನ್ ನಾಗರಿಕರು ಕೂಡ ಕೊಲೆ, ಲೈಂಗಿಕ ಕಿರುಕುಳದಂತಹ ಅಮಾನವೀಯ ವರ್ತನೆ ತೋರಿದ್ದಾರೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಈ ವರದಿಯನ್ನು ತಿರಸ್ಕರಿಸಿರುವ ಇಸ್ರೇಲ್, ‘ನಮ್ಮ ವಿರುದ್ಧ ವ್ಯವಸ್ಥಿತವಾಗಿ ತಾರತಮ್ಯ ಧೋರಣೆ ಅನುಸರಿಸಲಾಗುತ್ತಿದೆ’ ಎಂದು ಆರೋಪಿಸಿದೆ.

## ‘ಮಕ್ಕಳ ಮೇಲಿನ ಹಿಂಸಾಚಾರ ಅಧಿಕ’

ವಿಶ್ವಸಂಸ್ಥೆ(ಎಪಿ): ಮಕ್ಕಳ ಮೇಲಿನ ಹಿಂಸಾಚಾರ ಪ್ರಕರಣಗಳು 2023ರಲ್ಲಿ ಹಲವು ಪಟ್ಟು ಹೆಚ್ಚಾಗಿವೆ ಎಂದು ವಿಶ್ವಸಂಸ್ಥೆಯ ವರದಿಯೊಂದು ಹೇಳಿದೆ.

ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ನಡುವಿನ ಸಂಘರ್ಷ, ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಸೇರಿದಂತೆ ಹಲವು ಸಂಘರ್ಷಗಳಲ್ಲಿ ಮಕ್ಕಳ ಹತ್ಯೆಗಳು ನಡೆದಿವೆ. ಅಲ್ಲದೆ ಅಧಿಕ ಸಂಖ್ಯೆಯಲ್ಲಿ ಮಕ್ಕಳು ಗಾಯಗೊಂಡಿದ್ದಾರೆ ಎಂದು ಹೇಳಿದೆ.

ಸಶಸ್ತ್ರ ಸಂಘರ್ಷದಲ್ಲಿ ಮಕ್ಕಳು ಕುರಿತ ವಾರ್ಷಿಕ ವರದಿ ಮಂಗಳವಾರ ಲಭ್ಯವಾಗಿದ್ದು 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ವಿರುದ್ಧದ ಘರ್ಷಣೆಗಳ ಸರಣಿಯಲ್ಲಿ ಕಾಂಗೊ, ಬುರ್ಕಿನಾ ಫಾಸೊ, ಸೊಮಾಲಿಯಾ ಮತ್ತು ಸಿರಿಯಾ ಉಲ್ಲೇಖಿಸಿ ‘ಹಿಂಸಾಚಾರ ಪ್ರಕರಣಗಳು ಶೇ 21ರಷ್ಟು ಹೆಚ್ಚಳವಾಗಿವೆ’ ಎಂದು ತಿಳಿಸಿದೆ.

ಇಸ್ರೇಲ್ ಪಡೆಗಳು ಶಾಲೆಗಳು ಮತ್ತು ಆಸ್ಪತ್ರೆಗಳ ಮೇಲೆ ದಾಳಿ ಮಾಡಿ, ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸಿವೆ. ಮಕ್ಕಳನ್ನು ಕೊಲ್ಲುವುದು, ಗಾಯಗೊಳಿಸುವುದು ಮತ್ತು ಅಪಹರಣ ಮಾಡುವುದು ವ್ಯಾಪಕವಾಗಿ ನಡೆದಿದೆ ಎಂದು ಉಲ್ಲೇಖಿಸಲಾಗಿದೆ.

# ಯೂನಸ್ ವಿರುದ್ಧ ಆರೋಪ ನಿಗದಿ

ಢಾಕಾ (ಎಪಿ): ನೊಬೆಲ್ ಶಾಂತಿ ಪುರಸ್ಕೃತ ಸಾಮಾಜಿಕ ಕಾರ್ಯಕರ್ತ ಮಹಮ್ಮದ್ ಯೂನಸ್ ಹಾಗೂ 13 ಜನರ ವಿರುದ್ಧ 2 ಮಿಲಿಯನ್ ಡಾಲರ್‌ಗೂ (₹16.71 ಕೋಟಿ) ಹೆಚ್ಚಿನ ಮೊತ್ತದ ವಂಚನೆ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯವು ಬುಧವಾರ ದೋಷಾರೋಪ ನಿಗದಿ ಮಾಡಿದೆ.

ಬಡವರು, ಮಹಿಳೆಯರಿಗೆ ಕಿರುಸಾಲ ನೀಡುವಲ್ಲಿ ಯೂನಸ್ ಅವರ ಸಾಧನೆಯನ್ನು ಗುರುತಿಸಿ, ಅವರಿಗೆ 2006ರಲ್ಲಿ ನೊಬೆಲ್ ಶಾಂತಿ ಪುರಸ್ಕಾರ ನೀಡಲಾಗಿದೆ. ಯೂನಸ್ ಅವರು ತಾವು ಯಾವುದೇ ತಪ್ಪು ಮಾಡಿಲ್ಲ ಎಂದು ಹೇಳಿದ್ದಾರೆ.

ಅಧಿಕಾರಿಗಳು ತಮಗೆ ಹಾಗೂ ಸಹೋದ್ಯೋಗಿಗಳಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಕೂಡ ಯೂನಸ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ. ಆರೋಪಗಳನ್ನು ಕೈಬಿಡಬೇಕು ಎಂಬ ಅರ್ಜಿಯನ್ನು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸೈಯದ್ ಅರಾಫತ್ ಹುಸೇನ್ ಅವರು ವಜಾಗೊಳಿಸಿದರು.

ಯೂನಸ್, ಇತರರು ಗ್ರಾಮೀಣ್ ಟೆಲಿಕಾಂ ಕಂಪನಿಯ ಕಾರ್ಮಿಕರ ಕಲ್ಯಾಣ ನಿಧಿಯ 2 ಮಿಲಿಯನ್ ಡಾಲರ್ ಹಣವನ್ನು ದುರ್ಬಳಕೆ ಮಾಡಿದ್ದಾರೆ ಎಂದು ಪ್ರಾಸಿಕ್ಯೂಷನ್ ಆರೋಪಿಸಿದೆ.


ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology

★ಸ್ತ್ರೀವಶೀಕರಣ ಸ್ಪೆಷಲಿಸ್ಟ್★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು ನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವ್‌ಭಟ್. 9901724082

★ಗುರು.ಶ್ರೀದೇವಾನಂದ★ ರವರಿಂದ ಕುಟುಂಬ ಮತ್ತು ದಾಂಪತ್ಯ ಕಲಹ ದುರ್ನಡತೆ,ದುಶ್ಚಟ ರೋಗ,ಸಾಲ, ಶತ್ರು,ಬಂಜೆತನ,ಲೈಂಗಿಕತೆ ಇನ್ನಿತರ ನಿಮ್ಮ ಯಾವುದೇ ಸ್ತ್ರೀಪುರುಷ ಸರ್ವಮನಇಚ್ಛಾ ವಶೀಕರಣ ಮಾಡಿಕೊಳ್ಳಿ,ಕೇಶರಾಶಿಗೆ ಕೇರಳ ತೈಲ ಲಭ್ಯ:9845005009

★॥ಸ್ತ್ರೀಪುರುಷ ವಶೀಕರಣ॥★ ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 1ದಿನದಲ್ಲಿ ಪರಿಹಾರ ಶತಸಿದ್ಧ. 9611968471

ಉದ್ಯೋಗಾವಕಾಶ
Drivers

ಚಾಲಕ ಅಗತ್ಯವಿದೆ! ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನು ಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000ಗೆ ಕರೆ ಮಾಡಿ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Marketing & Sales

SUPER SPECIALTY Pharma Company HIRING: Area Business Executive / Manager Experience: 1-5 years Location: Bangalore & Mysore Contact: 9154290602

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6364468422 9663542555

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳೆಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವಮೊಗ್ಗ 8095555517

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/- ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣ ಸಂಪರ್ಕಿಸಿ: 7899235388, 9148525233

ವರ್ಕ್ ಫ್ರಮ್ ಹೋಮ್, ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. 15,000–43,500/–. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ರಿಯಲ್ ಎಸ್ಟೇಟ್ ಸೆಲ್ಲಿಂಗ್
Sites
Chikkaballapura
SALE 30X40 Conversation Sites available for Sale Near S P Office Chikkaballapur Contact : 9886499222

ಪ್ರವಾಸ
Travel

★ಶ್ರೀಶ್ರೇಯಸ್ ಟೂರ್ಸ್★ 25.06.2024 10ದಿನಗಳು:ಉ ಅಯೋಧ್ಯೆ,ಅಖಂಡ ನೇಪಾಳರಾಷ್ಟ್ರ ಪ್ರವಾಸ.05.07.24 07ದಿನಗಳು ಭೂತಾನ್ ರಾಷ್ಟ್ರ ಪ್ರವಾಸ. 20.07.24 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ. (ಅಮರಕಂಟಕಮಯ್ಯಾರ್ ಸಹಿತ) 8073824856/ 9206979202/ 8792319181

★ಶ್ರೀಶ್ರೇಯಸ್ ಟೂರ್ಸ್★ 13.07.2024 5ದಿನಗಳು 25000 ಅಸ್ಸಾಂ,ಮೇಘಾಲಯ ರಾಜ್ಯಗಳಪ್ರವಾಸ (ಗೌಹಾತಿ,ಶಿಲ್ಲಾಂಗ್). 21.07.2024 5ದಿನಗಳು 20000 ಕಾಶಿ,ಅಯೋಧ್ಯಾ ಪ್ರಯಾಗ್‌ರಾಜ್,ಗಯಾ. 05.08.2024 7ದಿನಗಳು 22000 ಸಂಪೂರ್ಣ ಅಹೋಬಲ ನವನಾರಸಿಂಹ,ನವನಂದಿ, ಶ್ರೀಶೈಲಂ,ಹೈದರಾಬಾದ್ ಮಂತ್ರಾಲಯ,ಅಲಂಪುರ, ಯಾಗಂಟಿ,ಬೇಲಂಗುಹೆ. 21.08.2024 10ದಿನಗಳು 32000 ಅಖಂಡ ಕೇರಳರಾಜ್ಯ ಪ್ರವಾಸ.04.08.2024 10ದಿನಗಳು 32000 ವಿಜಯವಾಡ,ಮಂಗಳಗಿರಿ ಭದ್ರಾಚಲಂ,ಪಂಚರಾಮ ಅನ್ನಾವರ,ಪೀಠಾಪುರಂ, ವಾಸವಿಪೆನುಗೊಂಡ, ವಿಶಾಖಪಟ್ಟಣ,ಶ್ರೀಕೂರ್ಮಂ ಅರಕು,ಬೊರಾಗುಹೆ. 8073824856/ 9206979202/ 8792319181

ವಿಮಾನದಲ್ಲಿ 6 ದಿನಗಳು ಸಿಂಗಾಪುರ, ಮಲೇಶಿಯಾ 10.8.2024. ಮತ್ತು 11.10.2024. ಹಾಗೂ 5 ದಿನಗಳು ಥೈಲ್ಯಾಂಡ್ 10.8.2024. ಮತ್ತು 11.10.2024 ಸಂಪರ್ಕಿಸಿ: ನಿಸರ್ಗ ಹಾಲಿಡೇಸ್, ಬೆಂಗಳೂರು. 9900664943/ 9880241669

27/6/24 ರಾಜಸ್ಥಾನ: ಜೈಪುರ, ಜೈಸಲ್ಮೇರ್, ಮೌಂಟ್ ಅಬು ಇತರೆ 23/7/24 ಜಾರ್ಖಂಡ್ ವೈದ್ಯನಾಥ, ಕಾಶಿ, ಅಯೋಧ್ಯೆ 22/8/2024 ಗುಜರಾತ್: ಪಟೇಲ್ ಪ್ರತಿಮೆ, ದ್ವಾರಕಾ, ಸೋಮನಾಥ, ನಾಗೇಶ್ವರ. ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು: 8496044942

ಗುಜರಾತ್ ಪ್ರವಾಸ 18/7/24 ನೇಪಾಳ ಮುಕ್ತಿನಾಥ ಪ್ರವಾಸ 24/7/24 ಕಾಶಿ ಅಯೋಧ್ಯ ಪ್ರವಾಸ 23/7/24 ಶಿರಡಿ ಪ್ರವಾಸ 12/7/24 ಸುವರ್ಣಯಾತ್ರ 8660233673 9019462508

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
*Conditions apply
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9845114560
9901641752
9886213331
9731810277
9900428036
080-45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

## ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯ: ಕತಾರ್‌ಗೆ ನೆರವಾದ ವಿವಾದಾತ್ಮಕ ಗೋಲು

# ವಿಚಾರಣೆಗೆ ಎಐಎಫ್‌ಎಫ್ ಒತ್ತಾಯ

**ನವದೆಹಲಿ (ಪಿಟಿಐ):** ದೋಹಾದಲ್ಲಿ ಮಂಗಳವಾರ ಕತಾರ್ ವಿರುದ್ಧ ವಿಶ್ವಕಪ್ ಫುಟ್‌ಬಾಲ್ ಅರ್ಹತಾ ಸುತ್ತಿನ ನಿರ್ಣಾಯಕ ಪಂದ್ಯದಲ್ಲಿ ಆತಿಥೇಯ ತಂಡಕ್ಕೆ ನೀಡಿದ ವಿವಾದಾತ್ಮಕ ಗೋಲಿಗೆ

ಕಲ್ಯಾಣ್ ಚೌಬೆ

ಸಂಬಂಧಿಸಿ ವಿಚಾರಣೆ ನಡೆಸಬೇಕು ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಒತ್ತಾಯಿಸಿದೆ.

‘ತಂಡಕ್ಕೆ ಆಗಿರುವ ಅನ್ಯಾಯದ ಬಗ್ಗೆ ಗಮನಹರಿಸಬೇಕು’ ಎಂದು ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಬುಧವಾರ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

‘ಭಾರತಕ್ಕೆ ನಿರ್ಣಾಯಕವಾಗಿದ್ದ ಈ ಪಂದ್ಯದಲ್ಲಿ ಗೋಲು ಹೊಡೆಯುವ ಕೆಲವೇ ಕ್ಷಣಗಳ ಮೊದಲು ಚೆಂಡು ಅಂಕಣದ ಗೆರೆಯಾಚೆ ಹೋಗಿದ್ದು ಸ್ಪಷ್ಟವಾಗಿದ್ದರೂ ದಕ್ಷಿಣ ಕೊರಿಯಾದ ರೆಫ್ರಿ ಕಿಮ್ ವೂ ಸುಂಗ್ ಎದುರಾಳಿಗೆ ಗೋಲು ನೀಡಿದ್ದಾರೆ. ಈ ಬಗ್ಗೆ ಆಮೂಲಾಗ್ರ ತನಿಖೆ ನಡೆಸಬೇಕು ಎಂದು ಭಾರತ ಕೇಳಿದೆ’ ಎಂದು ಚೌಬೆ ಹೇಳಿದ್ದಾರೆ.

ಜಸ್ಸಿಮ್ ಬಿನ್ ಹಮದ್ ಕ್ರೀಡಾಂಗಣದಲ್ಲಿ ಈ ಗೋಲಿನಿಂದ 1–1ರಲ್ಲಿ ಸ್ಕೋರ್ ಸಮ ಮಾಡಿಕೊಂಡ ಕತಾರ್ ಅಂತಿಮವಾಗಿ ಪಂದ್ಯವನ್ನು 2–1ರಿಂದ ಗೆದ್ದುಕೊಂಡಿತ್ತು.

ಲಾಲಿಯನ್ಜುವಾಲಾ ಚಾಂಗ್ಟೆ 37ನೇ ನಿಮಿಷ ಭಾರತಕ್ಕೆ ಮುನ್ನಡೆ ಒದಗಿಸಿದ್ದರು. ಯೂಸುಫ್ ಏಮೆನ್ ಮೂಲಕ 73ನೇ ನಿಮಿಷ ಈ ವಿವಾದಾತ್ಮಕ ಗೋಲು ದಾಖಲಾಗಿತ್ತು. 85ನೇ ನಿಮಿಷ ಅಹಮದ್ ಅಲ್ ರಾಯಿ ಕತಾರ್ ಪರ ಗೆಲುವಿನ ಗೋಲು ಗಳಿಸಿದ್ದರು.

‘ಸೋಲು ಗೆಲುವು ಆಟದ ಅವಿಭಾಜ್ಯ ಅಂಗ. ನಾವಿದನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸಿದ್ದೇವೆ. ಆದರೆ ಭಾರತ ವಿರುದ್ಧ ಎರಡು ಗೋಲುಗಳಲ್ಲಿ ಒಂದು ಗೋಲು ಗಳಿಸಿದ ರೀತಿ ಕೆಲವು ಪ್ರಶ್ನೆಗಳನ್ನು ಹಾಗೇ ಉಳಿಸಿಕೊಂಡಿದೆ’ ಎಂದು ಚೌಬೆ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಈ ಪಂದ್ಯದ ನಿರ್ವಹಣೆಯಲ್ಲಾಗಿರುವ ಲೋಪದ ಬಗ್ಗೆ ಮತ್ತು ಅದರಿಂದ ನಮಗೆ ಮೂರನೇ ಹಂತದ ಕ್ವಾಲಿಫೈಯಿಂಗ್ ಅವಕಾಶ ತಪ್ಪಿರುವ ಬಗ್ಗೆ ಫಿಫಾ ಕ್ವಾಲಿಫೈಯರ್ಸ್ ಮುಖ್ಯಸ್ಥರಿಗೆ, ಎಎಫ್‌ಸಿ ರೆಫ್ರಿ ಮುಖ್ಯಸ್ಥರಿಗೆ ಮತ್ತು ಮ್ಯಾಚ್ ಕಮಿಷನರ್‌ಗೆ ಪತ್ರ ಬರೆದಿದ್ದೇವೆ. ಫಿಫಾ ಮತ್ತು ಎಎಫ್‌ಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬಹುದೆಂಬ ನಂಬಿಕೆ ಇದೆ’ ಎಂದರು.

ಈ ಪಂದ್ಯಕ್ಕೆ ಇರಾನ್‌ನ ಹಮೆದ್ ಮೊಮಿನಿ, ಮ್ಯಾಚ್ ಕಮಿಷನರ್ ಆಗಿದ್ದರು.

**ಆಗಿದ್ದೇನು?:** ಪಂದ್ಯದ 73ನೇ ನಿಮಿಷ ಅಬ್ದುಲ್ಲಾ ಅಲ್ಹಾರ್ಕ್ ಅವರ ಫ್ರೀಕಿಕ್‌ನಲ್ಲಿ ಯೂಸೆಫ್ ಏಮೆನ್ ಚೆಂಡನ್ನು ಗೋಲಿನೊಳಗೆ ಹೆಡ್ ಮಾಡಲು ಯತ್ನಿಸಿದ್ದರು. ಅವರ ಪ್ರಯತ್ನವನ್ನು ಗೋಲ್ ಕೀಪರ್ ಗುರುಪ್ರೀತ್ ಸಿಂಗ್ ಸಂಧು ತಡೆದಿದ್ದರು. ಸಂಧು ಆ ಯತ್ನದಲ್ಲಿ ನೆಲಕ್ಕೊರಗುವ ಮೊದಲು ಚೆಂಡು ಗೋಲು ಪೋಸ್ಟ್ ಸನಿಹ ದಲ್ಲೇ ಗೆರೆ ದಾಟಿದ್ದನ್ನು ಗಮನಿಸಿದ್ದರು. ಆದರೆ ಹಶ್ಮಿ ಹುಸೇನ್ ಚೆಂಡನ್ನು ಮತ್ತೆ ಅಂಕಣದೊಳಕ್ಕೆ ಒದ್ದರು. ಆಗ ಚೆಂಡನ್ನು ಪಡೆದ ಏಮೆನ್ ಅದನ್ನು ಗೋಲಿನೊಳಕ್ಕೆ ನಿರ್ದೇಶಿಸಿದ್ದರು.

ಚೆಂಡು ಗೆರೆಯಾಚೆ ಹೋಗಿದ್ದರಿಂದ ಆ ಕ್ಷಣಕ್ಕೆ ಆಟ ನಿಲ್ಲಿಸಿ, ಫ್ರೀಕಿಕ್‌ನೊಡನೆ ಪಂದ್ಯ ಮುಂದುವರಿಸಬೇಕಿತ್ತು. ಚೆಂಡಿನ ಜೊತೆ ಕೊನೆಯ ಬಾರಿ ಗುರುಪ್ರೀತ್ ಸಂಧು ಸಂಪರ್ಕಕ್ಕೆ ಬಂದಿದ್ದರಿಂದ ಫ್ರೀಕಿಕ್ ಪ್ರಕ್ರಿಯೆ ಸಹಜವಾಗಿತ್ತು. ಆದರೆ ರೆಫ್ರಿ, ಕತಾರ್‌ಗೆ ಗೋಲು ನೀಡಿ ಭಾರತದ ಆಟಗಾರರ ಹತಾಶೆಗೆ ಕಾರಣರಾದರು. ಆ ಕ್ಷಣಕ್ಕೆ ಭಾರತದ ಆಟಗಾರರ ಪ್ರತಿಭಟನೆಯನ್ನೂ ಲೆಕ್ಕಿಸಲಿಲ್ಲ. ಆನ್‌ಫೀಲ್ಡ್ ಅಂಪೈರ್ ಕೂಡ ರೆಫ್ರಿ ನಿರ್ಧಾರವನ್ನು ಸಮ್ಮತಿಸಿದ್ದರು.

ನಿಯಮದ ಪ್ರಕಾರ ಚೆಂಡು ಗೋಲ್ ಲೈನ್ ಅಥವಾ ಆಟದ ವೇಳೆ ಗಾಳಿಯಲ್ಲಿದ್ದರೂ ಟಚ್‌ಲೈನ್‌ಗಿಂತ ಆಚೆ ಹೋದಲ್ಲಿ ‘ಔಟ್ ಆಫ್ ಪ್ಲೇ’ ಎನ್ನಲಾಗುತ್ತದೆ.

ಭಾರತದ ಗೋಲ್‌ಕೀಪರ್ ಗುರುಪ್ರೀತ್ ಸಂಧು ಅವರು ‘ಇದು ದುರದೃಷ್ಟಕರ ಫಲಿತಾಂಶ. ಯಾರೂ ನಮಗೆ ತಾವೇ ಆಗಿ ಕೊಡುವುದಿಲ್ಲ. ನಾವೇ ಪಡೆಯಬೇಕು!’ ಎಂದು ಸೂಚ್ಯವಾಗಿ ಹೇಳಿದ್ದಾರೆ.

### ‘ಕ್ರಮಬದ್ಧವಲ್ಲದ ಗೋಲಿನಿಂದ ಭಾರತದ ಕನಸು ಭಗ್ನ’

ಇಗೊರ್ ಸ್ಟಿಮ್ಯಾಚ್

**ದೋಹಾ (ಪಿಟಿಐ):** ತಂಡಕ್ಕೆ ಅನ್ಯಾಯ ಎಸಗಲಾಗಿದೆ. ಗೆಲ್ಲಲೇಬೇಕಿದ್ದ ಪಂದ್ಯದಲ್ಲಿ ‘ಕ್ರಮಬದ್ಧವಲ್ಲದ’ ಗೋಲಿನಿಂದ ನಮ್ಮ ಕನಸನ್ನು ನುಚ್ಚುನೂರು ಮಾಡಲಾಗಿದೆ ಎಂದು ಭಾರತ ಫುಟ್‌ಬಾಲ್ ತಂಡದ ಕೋಚ್ ಇಗೊರ್ ಸ್ಟಿಮ್ಯಾಚ್ ಬೇಸರ ವ್ಯಕ್ತಪಡಿಸಿದರು.

ವಿವಾದಾತ್ಮಕ ಗೋಲಿಗೆ ಮುಂಚೆ ಪಂದ್ಯದ 73ನೇ ನಿಮಿಷದವರೆಗೆ ಭಾರತ 1–0 ಮುನ್ನಡೆ ಕಾಯ್ದುಕೊಂಡಿತ್ತು.

‘ಕತಾರ್ ಇಂದು ಅದೃಷ್ಟಶಾಲಿ ಎನಿಸಿತು. ವಿಶೇಷವಾಗಿ ‘ಕ್ರಮಬದ್ಧವಲ್ಲದ’ ಗೋಲಿನಿಂದಾಗಿ 0–1 ಹಿನ್ನಡೆಯಿಂದ ಅವರು ಚೇತರಿಸಿಕೊಂಡರು. ಮರುಪ್ರಸಾರ ನೋಡಿ ಅದನ್ನು ಖಚಿತಪಡಿಸಿಕೊಂಡಿದ್ದೇನೆ. ಚೆಂಡು ಅಂಕಣದ ಗೆರೆ ದಾಟಿದ್ದು ಸ್ಪಷ್ಟವಾಗಿದ್ದರೂ ಗೋಲು ನೀಡಲಾಯಿತು’ ಎಂದು ಕೋಚ್ ಹೇಳಿದ್ದಾರೆ.

‘ಇಂದಿನ ಪಂದ್ಯದಲ್ಲಿ ಹೀಗಾಗಬಾರದಿತ್ತು. ಆ ಒಂದು ಗೋಲಿನಿಂದಾಗಿ ಎಲ್ಲವೂ ಬದಲಾಯಿತು. ಕತಾರ್‌ಗೇ ಒಂದು ವೇಳೆ ಆ ರೀತಿಯಾಗಿದ್ದರೆ ಇದೇ ಮಾತನ್ನು ಹೇಳುತ್ತಿದ್ದೆ. ನೆಪ ಹುಡುಕುತ್ತಿಲ್ಲ’ ಎಂದು ವಿವರಿಸಿದರು.

**ಏಷ್ಯನ್ ಕ್ವಾಲಿಫೈಯರ್: ಪಾಯಿಂಟ್ ಪಟ್ಟಿ**

| ದೇಶ | ಪಂದ್ಯ | ಗೆಲುವು | ಡ್ರಾ | ಸೋಲು | ಅಂಕ |
|---|---|---|---|---|---|
| ಕತಾರ್ | 6 | 5 | 1 | 0 | 15 |
| ಕುವೈತ್ | 6 | 2 | 1 | 3 | 7 |
| ಭಾರತ | 6 | 1 | 2 | 3 | 5 |
| ಅಫ್ಗಾನಿಸ್ತಾನ | 6 | 1 | 2 | 3 | 5 |

‘ಮೂರನೇ ಸುತ್ತಿಗೇರುವ ಕನಸನ್ನು ನನಸುಗೊಳಿಸಲು ತುಂಬಾ ಶ್ರಮ ವಹಿಸಿದ್ದ ತಂಡದ 23 ಹುಡುಗರ ಬಗ್ಗೆ ನೋವಾಗುತ್ತಿದೆ. ಇಂಥದ್ದನ್ನು ತಡೆಯಲು ನಮಗೆ ಆಗದ್ದರಿಂದ ಕನಸು ಭಗ್ನವಾಗಿದೆ’ ಎಂದು ಕ್ರೊವೇಷ್ಯಾದ ಸ್ಟಿಮಾಚ್ ವ್ಯಥೆಪಟ್ಟರು.

ಪಂದ್ಯದಲ್ಲಿ ಭಾರತ ಗೆದ್ದಲ್ಲಿ ಫಿಫಾ ಕ್ವಾಲಿಫೈಯರ್ಸ್ ಮೊದಲ ಬಾರಿ ಮೂರನೇ ಸುತ್ತಿಗೆ ಪ್ರವೇಶಿಸಬಹುದಿತ್ತು.

**ಕುವೈತ್‌ಗೆ ಜಯ:** ಕತಾರ್ ‘ಎ’ ಗುಂಪಿನಲ್ಲಿ ಮೊದಲ ಸ್ಥಾನ ಪಡೆದರೆ, ಎರಡನೇ ಸ್ಥಾನ ಪಡೆದ ತಂಡವಾಗಿ ಕುವೈತ್ ‘ಮೂರನೇ ಹಂತದ ಅರ್ಹತಾ ಸುತ್ತಿಗೆ ಮುನ್ನಡೆಯಿತು. ಮಂಗಳವಾರ ನಡೆದ ಇನ್ನೊಂದು ಅರ್ಹತಾ ಪಂದ್ಯದಲ್ಲಿ ಕುವೈತ್ 1–0 ಗೋಲಿನಿಂದ ಅಫ್ಗಾನಿಸ್ತಾನ ತಂಡವನ್ನು ಮಣಿಸಿತ್ತು.

# ಪ್ರಣಯ್ ಶುಭಾರಂಭ

**ಸಿಡ್ನಿ (ಪಿಟಿಐ):** ಭಾರತದ ಎಚ್‌.ಎಸ್‌. ಪ್ರಣಯ್ ಅವರು ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಬುಧವಾರ ನಡೆದ ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ 21–10, 23–21ರಿಂದ ಬ್ರೆಜಿಲ್‌ನ ಯಗೊರ್ ಕೊಯೆಲ್ಹೋ ಅವರನ್ನು ಹಿಮ್ಮೆಟ್ಟಿಸಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಭಾರತದ ಮತ್ತೊಬ್ಬ ಆಟಗಾರ ಕಿರಣ್ ಜಾರ್ಜ್ 21–17, 21–10ರಿಂದ ಕೆನಡಾದ ಕ್ಸಿಯಾಡಾಂಗ್ ಶೆಂಗ್ ಅವರನ್ನು ಮಣಿಸಿ ಎರಡನೇ ಸುತ್ತಿಗೆ ಮುನ್ನಡೆದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಆಕರ್ಷಿ ಕಶ್ಯಪ್ 21-14, 21-11ರಿಂದ ಉಕ್ರೇನ್‌ನ ಪೋಲಿನಾ ಬುಹ್ರೋವಾ ಅವರನ್ನು ಸೋಲಿಸಿದರು. ಮಾಳವಿಕಾ ಬನ್ಸೋಡ್ ಮತ್ತು ಅನುಪಮಾ ಉಪಾಧ್ಯಾಯ ಅವರೂ ಮುಂದಿನ ಸುತ್ತು ಪ್ರವೇಶಿಸಿದರು.

# ಬ್ರಿಜ್: ಯುನೀಕ್‌ಗೆ ‘ಸಿಲ್ವರ್’ ಪ್ರಶಸ್ತಿ

**ಮಂಗಳೂರು:** ಯುನೀಕ್ ಮಾಸ್ಟರ್ಸ್ ತಂಡ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್‌ನ ‘ಸಿಲ್ವರ್’ ವಿಭಾಗದ ಪ್ರಶಸ್ತಿ ಗೆದ್ದುಕೊಂಡಿತು.

ಕರಾವಳಿ ಬ್ರಿಜ್ ಸಂಸ್ಥೆಯ ಸಹಯೋಗದಲ್ಲಿ ಭಾರತ ಬ್ರಿಜ್ ಫೆಡರೇಷನ್ ಮತ್ತು ಕರ್ನಾಟಕ ರಾಜ್ಯ ಬ್ರಿಜ್ ಸಂಸ್ಥೆಗಳು ಆಯೋಜಿಸಿರುವ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಜೂತಿಕಾ ತಂಡವನ್ನು ಯುನೀಕ್ ಮಣಿಸಿತು.

ಮೂರು ಮತ್ತು ನಾಲ್ಕನೇ ಸ್ಥಾನಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಏಸ್ ಕಾನ್ಕರರ್ಸ್ ವಿರುದ್ಧ ಹೆಕ್ಸಗನ್ ಜಯ ಸಾಧಿಸಿತು.

ಸ್ವಿಸ್ ಲೀಗ್ ಮಾದರಿಯ ಕ್ವಾಲಿಫೈಯರ್ ಹಂತದಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದ ಯುನೀಕ್ ಮಾಸ್ಟರ್ಸ್ ನಂತರದ ಹಂತಗಳಲ್ಲಿ ಅಮೋಘ ಪ್ರದರ್ಶನ ತೋರಿತ್ತು. ರಾಜೇಂದ್ರ ರೇ, ತಪಸ್ ದಾಸ್ ಗುಪ್ತಾ, ಸೌರವ್ ಸಿಲ್, ಅರ್ಣವ್ ಘೋಷ್, ಬೋಲಾನಾಥ್ ಘೋಷ್ ಮತ್ತು ಸಲಿಲ್ ಕುಮಾರ್ ಮಂಡಲ್ ಅವರನ್ನು ಒಳಗೊಂಡ ತಂಡ ಫೈನಲ್‌ನಲ್ಲಿ ಸುಲಭ ಜಯ ಸಾಧಿಸಿತು.

‘ಗೋಲ್ಡ್’ ವಿಭಾಗದಲ್ಲಿ ಮೇವರಿಕ್ಸ್, ಮೋನಿಕಾ ಜಾಜು, ಫೋರ್ಮಿಡೇಬಲ್ಸ್ ಮತ್ತು ಹೆಕ್ಸಗನ್ ತಂಡಗಳು ಫೈನಲ್ ಮತ್ತು ಪ್ಲೇ ಆಫ್ ಹಂತ ಪ್ರವೇಶಿಸಿವೆ.

# ವುಶು: 3ನೇ ದಿನವೂ ತಮಿಳುನಾಡಿಗೆ ಮುನ್ನಡೆ

ಪ್ರಜಾವಾಣಿ ವಾರ್ತೆ

**ಬಾಗಲಕೋಟೆ:** ರಾಷ್ಟ್ರೀಯ, ರಾಜ್ಯ ವುಶು ಸಂಸ್ಥೆ ವತಿಯಿಂದ ಇಲ್ಲಿನ ಬಿವಿವಿ ಸಂಘದಲ್ಲಿ ಹಮ್ಮಿಕೊಂಡಿರುವ ದಕ್ಷಿಣ ಭಾರತದ ಖೇಲೊ ಇಂಡಿಯಾ ಸಬ್ ಜೂನಿಯರ್, ಜೂನಿಯರ್ ಹಾಗೂ ಸೀನಿಯರ್ ಮಹಿಳಾ ವುಶು ಚಾಂಪಿಯನ್‌ಷಿಪ್‌ನ ಮೂರನೇ ದಿನ ಬುಧವಾರ ತಮಿಳುನಾಡಿನ ಕ್ರೀಡಾಪಟುಗಳು ಮುನ್ನಡೆ ಸಾಧಿಸಿದರು.

ಜೂನಿಯರ್ ಹಾಗೂ ಸೀನಿಯರ್ ವಿಭಾಗದಲ್ಲಿ ತಮಿಳುನಾಡು ಕ್ರೀಡಾಪಟುಗಳು 7 ಚಿನ್ನ, ಒಡಿಶಾ 3, ಕೇರಳ 3, ತೆಲಂಗಾಣ ಒಂದು ಚಿನ್ನ ಪಡೆದರೆ, ಕರ್ನಾಟಕದ ಕ್ರೀಡಾಪಟುಗಳು 6 ಬೆಳ್ಳಿ, 13 ಕಂಚು ಗೆದ್ದರು.

ವುಶು ಚಾಂಪಿಯನ್‌ಷಿಪ್‌ನಲ್ಲಿ ಸೆಣಸುತ್ತಿರುವ ಸ್ಪರ್ಧಿಗಳು

**ಸೀನಿಯರ್ ವಿಭಾಗ- ಚಾಂಗ್‌ಕೌನ್ ವಿಭಾಗ:** ಕೌಶಿಕಾ ರೌಟ್ರೇ (ಒಡಿಶಾ, ಚಿನ್ನ), ಸಂಜನಾ ಹಂಚಿನಮನಿ (ಕರ್ನಾಟಕ, ಬೆಳ್ಳಿ), ರೇಣುಶ್ರೀ ನಂದಿನಿ (ಕರ್ನಾಟಕ) ಹಾಗೂ ಪ್ರತಿಕ್ಷಾ ಹಿರೇಮಠ(ಕರ್ನಾಟಕ ಕಂಚು). **ನಾಂಕೌನ್ ವಿಭಾಗ:** ಗೋಪಿಕಾ ವಿ.ಪಿ(ಕೇರಳ ಚಿನ್ನ), ಕೊಟ್ಟಳ ಪೂಜಿತಾ ಶ್ರುತಿ (ಆಂಧ್ರಪ್ರದೇಶ, ಬೆಳ್ಳಿ), ಒಡಲಕೊಂಡ ಭಾರತಿ (ತೆಲಂಗಾಣ) ಹಾಗೂ ಗೌರಿ ಹಿರೇಮಠ (ಕರ್ನಾಟಕ ಕಂಚು). **ತೈಜಿಕೌನ್ ವಿಭಾಗ:** ನಿರಂಜನಾ ಪಿ (ಕೇರಳ ಚಿನ್ನ), ಪಂಚಮಿ ಸಿಂಗ್ ( ಒಡಿಶಾ, ಬೆಳ್ಳಿ), ರಾಣಿ ಲಾಯದಗುಂದಿ (ಕರ್ನಾಟಕ) ಹಾಗೂ ಒರಿಗೆಲಾ ಅನಿತಾ( ತೆಲಂಗಾಣ ಕಂಚು). **ಬಾಗುವಾಝಾಂಗ್ ವಿಭಾಗ:** ಜ್ಯೋತ್ಸ್ನಾರಾಣಿ ಜೆನಾ (ಒಡಿಶಾ, ಚಿನ್ನ), ಎಸ್.ಸುವಶ್ರೀ (ತಮಿಳುನಾಡು,- ಬೆಳ್ಳಿ), ಪವಿತ್ರಾ ಭೂತಾಳಿ (ಕರ್ನಾಟಕ) ಹಾಗೂ ಜಿತಿಕಾಪ್ರೇಮ ಪಿ.ಕೆ (ಕೇರಳ ಕಂಚು). **ಜಿಯಾನ್ಸು ವಿಭಾಗ:** ಜ್ಯೋತ್ಸ್ನಾರಾಣಿ ಮುದುಳಿ (ಒಡಿಶಾ, ಚಿನ್ನ), ಸೌಜನ್ಯ ಲಾಯದಗುಂದಿ (ಕರ್ನಾಟಕ, ಬೆಳ್ಳಿ), ರುಕ್ಮಿಣಿ ಮುರಕಾಟೆಟ್ಟ (ಕರ್ನಾಟಕ) ಹಾಗೂ ಎಲ್. ರಾಜಶ್ರೀ(ತೆಲಂಗಾಣ, ಕಂಚು). **ತೈಜಿಕೌನ್ ವಿಭಾಗ:** ಒಡೆಪಲ್ಲೇ ನವೀನಾ (ತೆಲಂಗಾಣ, ಚಿನ್ನ), ಅಕ್ಷತಾ ಪಾಟೀಲ (ಕರ್ನಾಟಕ, ಬೆಳ್ಳಿ), ತನ್ಯ ಶ್ರೀವಾಸ್ತವ (ಒಡಿಶಾ) ಹಾಗೂ ಅನುಪಮ ಮೇಲಿನಮನಿ (ಕರ್ನಾಟಕ,ಕಂಚು). **ಕಿಯಾನ್ಸು ವಿಭಾಗ:** ಪಿ.ಎ.ಶ್ರೀಯಾ (ತಮಿಳುನಾಡು,ಚಿನ್ನ), ಸಹನಾ ಕೊಣ್ಣೂರ (ಕರ್ನಾಟಕ, ಬೆಳ್ಳಿ), ಮಲ್ಲರಮ್ ಕವಿತಾ (ತೆಲಂಗಾಣ) ಹಾಗೂ ರೀತಾ ಸೆಥಿ (ಒಡಿಶಾ, ಕಂಚು).

**ಜೂನಿಯರ್ ವಿಭಾಗ- ಚಾಂಗ್‌ಕೌನ್ ವಿಭಾಗ:** ಡಿ.ಬಾಲಹರ್ಷಿಣಿ (ತಮಿಳುನಾಡು ಚಿನ್ನ), ಗೌರಿ ನಂದನ ಎನ್.ಪಿ (ಕೇರಳ, ಬೆಳ್ಳಿ), ಶ್ರೀನಂದಾ ಎಸ್,(ಕೇರಳ) ಹಾಗೂ ದಿಬ್ಯಕಾಂತಿ ಓರಂ (ತಮಿಳುನಾಡು, ಕಂಚು). **ಜಿಯಾನ್ಸು ವಿಭಾಗ:** ಲಕ್ಷ್ಮೀಪ್ರಭಾ ಎಸ್(ತಮಿಳುನಾಡು,ಚಿನ್ನ), ಪಾರಿಯಾ ಖಾನಂ (ತೆಲಂಗಾಣ,ಬೆಳ್ಳಿ), ಎಸ್.ಇಸ್ಸಿತಾ (ತಮಿಳುನಾಡು) ಹಾಗೂ ಮಮಲಿ ಜೆನಾ (ಒಡಿಶಾ, ಕಂಚು). **ಕಿಯಾನ್ಸು ವಿಭಾಗ:** ಮಿಸ್ಸಬಾ ಪಾಥಿಮಾ ಎ.ಆರ್ (ತಮಿಳುನಾಡು, ಚಿನ್ನ),ಖುಷಿ ವರ್ಮಾ (ಕರ್ನಾಟಕ, ಬೆಳ್ಳಿ),ಜಿ, ಪೂಜಿತಾ (ತೆಲಂಗಾಣ) ಹಾಗೂಈಶ್ವರಿ ಬೀಳಗಿ (ಕರ್ನಾಟಕ, ಕಂಚು). **ನಾಂಕೌನ್ ವಿಭಾಗ:** ಶ್ರೀಲಿನಾ ಎಂ (ತಮಿಳುನಾಡು, ಚಿನ್ನ), ನೂಪುರ ಪಟ್ನಾಯಿಕ್ (ಒಡಿಶಾ ಬೆಳ್ಳಿ), ಅಪರ್ಣಾ ಎ (ಕೇರಳ) ಹಾಗೂ ಧರಿಣಿತಾ ಡಿ (ತಮಿಳುನಾಡು, ಕಂಚು). **ತೈಜಿಕೌನ್ ವಿಭಾಗ:** ಎಂ.ಭವತರಾಣಿ (ತಮಿಳುನಾಡು, ಚಿನ್ನ), ಪಾಯಲ್ ಪಟ್ನಾಯಕ ( ಒಡಿಶಾ, ಬೆಳ್ಳಿ), ಮಹೇಕ್ ಜಬೀನ ನದಾಫ (ಕರ್ನಾಟಕ) ಹಾಗೂ ಸವಿತಾ ಹುಬ್ಬಳ್ಳಿ (ಕರ್ನಾಟಕ, ಕಂಚು).

## ಸಂಕ್ಷಿಪ್ತ ಸುದ್ದಿ

### 100 ಮೀ. ಫ್ರೀಸ್ಟೈಲ್: ಟಿಟ್ಮಸ್ ವಿಶ್ವದಾಖಲೆ

**ಬ್ರಿಸ್ಬೇನ್ (ಎಎಫ್‌ಪಿ):** ಅರಿಯಾರ್ನೆ ಟಿಟ್ಮಸ್ ಅವರು ಆಸ್ಟ್ರೇಲಿಯಾದ ಒಲಿಂಪಿಕ್ಸ್ ಈಜು ಟ್ರಯಲ್ಸ್‌ನಲ್ಲಿ ಬುಧವಾರ ಮಹಿಳೆಯರ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ವಿಶ್ವ ದಾಖಲೆ ಸ್ಥಾಪಿಸಿದರು. ಆ ಮೂಲಕ ಪ್ಯಾರಿಸ್ ಕೂಟದಲ್ಲಿ ತಮ್ಮ ಚಿನ್ನದ ಪದಕವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯಿಟ್ಟರು.

ಬ್ರಿಸ್ಬೇನ್‌ನಲ್ಲಿ ನಡೆದ ಕೂಟದ ಫೈನಲ್‌ನಲ್ಲಿ ಅವರು 1ನಿ.52.23 ಸೆ.ಗಳಲ್ಲಿ ಗುರಿ ತಲುಪಿದರು. ಕಳೆದ ವರ್ಷ ಫುಕುವೊಕಾದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್ಸ್‌ನಲ್ಲಿ ಓ‘ಕ್ಯಾಲಗನ್ ಅವರು ಈ ಹಿಂದಿನ ವಿಶ್ವ ದಾಖಲೆ (1:52.85) ಸ್ಥಾಪಿಸಿದ್ದರು. ಎರಡನೇ ಸ್ಥಾನ ಪಡೆದ ಕ್ಯಾಲಗನ್ ಅವರೂ 1:52.48 ಸೆ.ಗಳಲ್ಲಿ ಅಂತರ ಕ್ರಮಿಸುವ ಮೂಲಕ ಹಳೆಯ ವಿಶ್ವದಾಖಲೆ ಸುಧಾರಿಸಿದರು.

### ಒಲಿಂಪಿಕ್ಸ್: ನಡಾಲ್, ಅಲ್ಕರಾಜ್ ಜೋಡಿ

**ಮ್ಯಾಡ್ರಿಡ್ (ಎಪಿ):** ದಿಗ್ಗಜ ಆಟಗಾರ ರಫೆಲ್ ನಡಾಲ್ ಮತ್ತು ಕಾರ್ಲೋಸ್ ಅಲ್ಕರಾಜ್ ಅವರು ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಪುರುಷರ ಟೆನಿಸ್ ಡಬಲ್ಸ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಸ್ಪೇನ್ ದೇಶದ ಇಬ್ಬರೂ ಆಟಗಾರರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. 21 ವರ್ಷದ ಅಲ್ಕರಾಜ್ ಅವರು ಈಚೆಗಷ್ಟೇ ಫ್ರೆಂಚ್ ಓಪನ್ ಕಿರೀಟ ಜಯಿಸಿದ್ದರು.

### ಶಾರ್ದೂಲ್‌ಗೆ ಶಸ್ತ್ರಚಿಕಿತ್ಸೆ

**ಲಂಡನ್ (ಪಿಟಿಐ):** ಭಾರತ ತಂಡದ ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಅವರಿಗೆ ಬುಧವಾರ ಇಲ್ಲಿ ಪಾದದ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆಯಿತು.

ಕನಿಷ್ಠ ಮೂರು ತಿಂಗಳು ಅವರು ಕ್ರಿಕೆಟ್‌ನಿಂದ ದೂರವಿರುವ ನಿರೀಕ್ಷೆಯಿದೆ. ಇದು ಅವರಿಗೆ ಎರಡನೇ ಶಸ್ತ್ರಚಿಕಿತ್ಸೆ. 2019ರಲ್ಲೂ ಅವರಿಗೆ ಪಾದದ ಶಸ್ತ್ರಚಿಕಿತ್ಸೆಯಾಗಿತ್ತು.

‘ಎ’ ಗುಂಪಿನಲ್ಲಿ ಅಗ್ರಸ್ಥಾನದೊಂದಿಗೆ ಸೂಪರ್ ಎಂಟರ ಘಟ್ಟಕ್ಕೆ ರೋಹಿತ್ ಪಡೆ • ಪಾಂಡ್ಯಗೆ ಎರಡು ವಿಕೆಟ್

# ಬೆಳಗಿದ ಅರ್ಷದೀಪ್, ಸೂರ್ಯ

ಪ್ರಜಾವಾಣಿ ವಾರ್ತೆ

**ನ್ಯೂಯಾರ್ಕ್:** ಆಟಗಾರರ ಸತ್ವಪರೀಕ್ಷೆ ಮಾಡಿದ ಇಲ್ಲಿಯ ಪಿಚ್‌ನಲ್ಲಿ ಭಾರತದ ಅರ್ಷದೀಪ್ ಸಿಂಗ್ ಮತ್ತು ಸೂರ್ಯಕುಮಾರ್ ಯಾದವ್ ಅವರು ಪ್ರಖರವಾಗಿ ಬೆಳಗಿದರು.

ನಾಸೌ ಕೌಂಟಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಬುಧವಾರ ಆತಿಥೇಯ ಅಮೆರಿಕ ಎದುರು ನಡೆದ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಭಾರತ ತಂಡ ಜಯಿಸಿತು.

ಅರ್ಷದೀಪ್ (4-0-9-4) ಅವರ ಕರಾರುವಾಕ್ ದಾಳಿಯ ಮುಂದೆ ಅಮೆರಿಕ ತಂಡ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 110 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಈ ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಆರಂಭಿಕ ಆಘಾತ ಎದುರಾಯಿತು. 39 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡ ತಂಡಕ್ಕೆ ಸೂರ್ಯಕುಮಾರ್ (ಅಜೇಯ 50; 49ಎ) ಆಸರೆಯಾದರು. ಅವರಿಗೆ ಮತ್ತೊಬ್ಬ ‘ಮುಂಬೈಕರ್’ ಶಿವಂ ದುಬೆ (ಅಜೇಯ 31) ಜೊತೆಗೂಡಿದರು. ಇದರಿಂದಾಗಿ ರೋಹಿತ್ ಪಡೆಯು 18.2 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 111 ರನ್ ಗಳಿಸಿ ಗೆದ್ದಿತು.

ಆದರೆ ಈ ಹಾದಿ ಸುಗಮವಾಗಿರಲಿಲ್ಲ. ವಿರಾಟ್ ಕೊಹ್ಲಿ ಟೂರ್ನಿಯಲ್ಲಿ ಸತತ ಮೂರನೇ ಪಂದ್ಯದಲ್ಲಿ ವೈಫಲ್ಯ ಅನುಭವಿಸಿದರು. ಈ ಪಂದ್ಯದಲ್ಲಿ ಅವರು ಎದುರಿಸಿದ ಮೊದಲ ಎಸೆತದಲ್ಲಿಯೇ ಸೌರಭ್ ನೇತ್ರಾವಳ್ಕರ್ ಅವರಿಗೆ ವಿಕೆಟ್ ಒಪ್ಪಿಸಿದರು. ಮೂರನೇ ಓವರ್‌ನಲ್ಲಿ ರೋಹಿತ್ ಕೂಡ ಸೌರಭ್ ಅವರಿಗೇ ವಿಕೆಟ್ ಕೊಟ್ಟರು.

ಇದರಿಂದಾಗಿ ತಂಡದ ರನ್ ಗಳಿಕೆ ವೇಗ ಕುಂಠಿತವಾಯಿತು. ಅಲ್ಲದೇ ಚೆಂಡು ಹೆಚ್ಚು ಎತ್ತರಕ್ಕೆ ಪುಟಿಯದ ಅಂಕಣದಲ್ಲಿ ಬ್ಯಾಟಿಂಗ್ ಸವಾಲಿನದಾಗಿತ್ತು. ಸೂರ್ಯ ಮತ್ತು ಶಿವಂ ತಾಳ್ಮೆಯಿಂದ ಆಡಿ ಇದರಲ್ಲಿ ಯಶಸ್ವಿಯಾದರು.

ಇನಿಂಗ್ಸ್‌ನ ಕೊನೆಯ 24 ಎಸೆತಗಳಲ್ಲಿ ಭಾರತದ ಜಯಕ್ಕೆ 24 ರನ್‌ಗಳು ಅವಶ್ಯವಿದ್ದವು. ಅಲ್ಲಿಯವರೆಗೂ ಅಮೆರಿಕ ತಂಡವು ಗೆಲುವಿನ ಕನಸು ಕಾಣುತ್ತಿತ್ತು. ಈ ಹಂತದಲ್ಲಿ ಸೂರ್ಯ ಹೊಡೆದ ಒಂದು ಸಿಕ್ಸರ್ ಭಾರತವನ್ನು ಗೆಲುವಿನತ್ತ ಮುನ್ನಡೆಸಿತು.

**ಅರ್ಷದೀಪ್ ದಾಖಲೆ:** ಅರ್ಷದೀಪ್ ಸಿಂಗ್ ಅವರು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶ್ರೇಷ್ಠ ವೈಯಕ್ತಿಕ ಬೌಲಿಂಗ್ ಸಾಧನೆ ಮಾಡಿದರು. 2014ರಲ್ಲಿ ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಆರ್. ಅಶ್ವಿನ್ (11ಕ್ಕೆ4) ಅವರು ಮಾಡಿದ್ದ ದಾಖಲೆಯನ್ನು ಮೀರಿ ನಿಂತರು.

ಇನಿಂಗ್ಸ್‌ನ ಮೊದಲ ಓವರ್‌ನ ಪ್ರಥಮ ಎಸೆತದಲ್ಲಿ ಶಯಾನ್ ಜಹಾಂಗೀರ್ ಮತ್ತು ಆರನೇ ಎಸೆತದಲ್ಲಿ ಆ್ಯಂಡ್ರೀಸ್ ಗೌಸ್ ಅವರ ವಿಕೆಟ್ ಕಬಳಿಸಿದರು. ಈ ಪಂದ್ಯದಲ್ಲಿ ತಂಡದ ನಾಯಕತ್ವ ವಹಿಸಿದ್ದ ಆ್ಯರನ್ ಜೋನ್ಸ್ (11 ರನ್) ಅವರ ವಿಕೆಟ್ ಕಬಳಿಸಿ ಹಾರ್ದಿಕ್ ಪಾಂಡ್ಯ ಸಂಭ್ರಮಿಸಿದರು.

ಈ ಹಂತದಲ್ಲಿ ಅಮೆರಿಕ ತಂಡಕ್ಕೆ ಆರಂಭಿಕ ಬ್ಯಾಟರ್ ಸ್ಟೀವನ್ ಟೇಲರ್ (24; 30ಎ) ಹಾಗೂ ಮಧ್ಯಮ ಕ್ರಮಾಂಕದ ಬ್ಯಾಟರ್ ನಿತೀಶ್ ಕುಮಾರ್ (27; 23ಎ) ಸ್ವಲ್ಪ ಜೀವ ತುಂಬಿದರು.12ನೇ ಓವರ್‌ನಲ್ಲಿ ಈ ಜೊತೆಯಾಟವನ್ನು ಸ್ಪಿನ್ನರ್ ಅಕ್ಷರ್ ಪಟೇಲ್ ಮುರಿದರು. ಅವರು ಟೇಲರ್ ವಿಕೆಟ್ ಗಳಿಸಿದರು.

ಅರ್ಷದೀಪ್ ಅವರು ತಮ್ಮ ಎರಡನೇ ಸ್ಪೆಲ್‌ನಲ್ಲಿ ನಿತೀಶ್ ಕುಮಾರ್ ಹಾಗೂ ಹರ್ಮೀತ್ ಸಿಂಗ್ ಅವರ ವಿಕೆಟ್‌ಗಳನ್ನು ಕಬಳಿಸಿದರು.

**ವಿಶ್ರಾಂತಿ:** ಅಮೆರಿಕ ತಂಡದ ನಾಯಕ ಭಾರತೀಯ ಮೂಲದ ಮೊನಾಂಕ್ ಪಟೇಲ್, ಕನ್ನಡಿಗ ನಾಸ್ತುಷ್ ಕೆಂಜಿಗೆ ಹಾಗೂ ಮಿಲಿಂದ್ ಕುಮಾರ್ ಅವರಿಗೆ ಈ ಪಂದ್ಯದಲ್ಲಿ ವಿಶ್ರಾಂತಿ ನೀಡಲಾಗಿತ್ತು. ಪಟೇಲ್ ಅವರಿಗೆ ಭುಜದ ಗಾಯದಿಂದಾಗಿ ಆಡಲು ಸಾಧ್ಯವಾಗಲಿಲ್ಲ.

ಅರ್ಧಶತಕ ಗಳಿಸಿದ ಭಾರತದ ಸೂರ್ಯಕುಮಾರ್ ಯಾದವ್ –ಪಿಟಿಐ ಚಿತ್ರ. ವಿಕೆಟ್ ಪಡೆದ ಅರ್ಷದೀಪ್ ಸಿಂಗ್ ಅವರನ್ನು ಅಭಿನಂದಿಸಿದ ಹಾರ್ದಿಕ್ ಪಾಂಡ್ಯ –ಎಎಫ್‌ಪಿ ಚಿತ್ರ

## ಸ್ಕೋರ್ ಕಾರ್ಡ್

**ಅಮೆರಿಕ 8ಕ್ಕೆ110 (20 ಓವರ್‌ಗಳಲ್ಲಿ)**
ಶಯಾನ್ ಎಲ್‌ಬಿಡಬ್ಲ್ಯು ಬಿ ಅರ್ಷದೀಪ್ 0 (1ಎ)
ಟೇಲರ್ ಬಿ ಪಟೇಲ್ 24 (30ಎ, 6x2)
ಗೌಸ್ ಸಿ ಪಾಂಡ್ಯ ಬಿ ಅರ್ಷದೀಪ್ 2 (5ಎ)
ಜೋನ್ಸ್ ಸಿ ಸಿರಾಜ್ ಬಿ ಪಾಂಡ್ಯ 11 (22ಎ, 6x1)
ನಿತೀಶ್ ಸಿ ಸಿರಾಜ್ ಬಿ ಅರ್ಷದೀಪ್ 27 (23ಎ, 4x2, 6x1)
ಆ್ಯಂಡರ್ಸನ್ ಸಿ ಪಂತ್ ಬಿ ಪಾಂಡ್ಯ 15 (12ಎ, 4x1, 6x1)
ಹರ್ಮೀತ್ ಸಿ ಪಂತ್ ಬಿ ಅರ್ಷದೀಪ್ 10 (10ಎ, 6x1)
ಶಾಡ್ಲಿ ವ್ಯಾನ್ ಔಟಾಗದೇ 11 (10ಎ, 4x1)
ಜಸ್‌ದೀಪ್ ರನ್‌ಔಟ್ (ಪಂತ್/ಸಿರಾಜ್) 2 (7ಎ)
**ಇತರೆ:** 8 (ಲೆಗ್‌ಬೈ 1, ವೈಡ್ 7)
**ವಿಕೆಟ್ ಪತನ:** 1-0 (ಶಯಾನ್ ಜಹಾಂಗೀರ್, 0.1), 2-3 (ಆ್ಯಂಡ್ರೀಸ್ ಗೌಸ್, 0.6), 3-25 (ಆ್ಯರನ್ ಜೋನ್ಸ್, 7.2), 4-56 (ಸ್ಟೀವನ್ ಟೇಲರ್, 11.4), 5-81 (ನಿತೀಶ್ ಕುಮಾರ್ , 14.4), 6-96 (ಕೋರಿ ಆ್ಯಂಡರ್ಸನ್, 16.5), 7-98 (ಹರ್ಮೀತ್ ಸಿಂಗ್, 17.3), 8-110 (ಜಸ್‌ದೀಪ್ ಸಿಂಗ್, 19.6)
**ಬೌಲಿಂಗ್:** ಅರ್ಷದೀಪ್ ಸಿಂಗ್ 4–0–9–4, ಮೊಹಮ್ಮದ್ ಸಿರಾಜ್ 4–0–25–0, ಜಸ್‌ಪ್ರೀತ್ ಬೂಮ್ರಾ 4–0–25–0, ಹಾರ್ದಿಕ್ ಪಾಂಡ್ಯ 4–1–14–2, ಶಿವಂ ದುಬೆ 1–0–11–0, ಅಕ್ಷರ್ ಪಟೇಲ್ 3–0–25–1.
**ಭಾರತ 3ಕ್ಕೆ 111 (18.2 ಓವರ್‌ಗಳಲ್ಲಿ)**
ರೋಹಿತ್ ಸಿ ಹರ್ಮೀತ್ ಬಿ ನೇತ್ರಾವಳ್ಕರ್ 3 (6ಎ)
ವಿರಾಟ್ ಸಿ ಗೌಸ್ ಬಿ ನೇತ್ರಾವಳ್ಕರ್ 0 (1)
ರಿಷಭ್ ಬಿ ಅಲಿ ಖಾನ್ 18 (20ಎ, 4x1, 6x1)
ಸೂರ್ಯಕುಮಾರ್ ಔಟಾಗದೇ 50 (49ಎ, 4x2, 6x2)
ಶಿವಂ ದುಬೆ ಔಟಾಗದೇ 31 (35ಎ, 4x1, 6x1)
**ಇತರೆ:** 9 (ಲೆಗ್‌ಬೈ 1, ನೋಬಾಲ್ 1, ವೈಡ್ 2, ಪೆನಾಲ್ಟಿ 5)
**ವಿಕೆಟ್ ಪತನ:** 1-6 (ವಿರಾಟ್ ಕೊಹ್ಲಿ, 0.2), 2-15 (ರೋಹಿತ್ ಶರ್ಮಾ, 2.2), 3-44 (ರಿಷಭ್ ಪಂತ್, 7.3)
**ಬೌಲಿಂಗ್:** ಸೌರಭ್ ನೇತ್ರಾವಳ್ಕರ್ 4–0–18–2, ಅಲಿ ಖಾನ್ 3.2–0–21–1, ಜಸ್‌ಪ್ರೀತ್ ಸಿಂಗ್ 4–0–24–0, ಶಾಡ್ಲಿ ವ್ಯಾನ್ ಶಾಲ್ಕ್‌ವಿಕ್ 4–0–25–0, ಕೋರಿ ಆ್ಯಂಡರ್ಸನ್ 3–0–17–0
**ಪಂದ್ಯದ ಆಟಗಾರ:** ಅರ್ಷದೀಪ್ ಸಿಂಗ್
**ಫಲಿತಾಂಶ:** ಭಾರತಕ್ಕೆ 7 ವಿಕೆಟ್‌ಗಳ ಜಯ

# ಆಸ್ಟ್ರೇಲಿಯಾಕ್ಕೆ ಸುಲಭ ಜಯ

**ನಾರ್ತ್‌ಸೌಂಡ್, ಆ್ಯಂಟಿಗಾ (ಪಿಟಿಐ):** ಲೆಗ್‌ಸ್ಪಿನ್ನರ್ ಆ್ಯಡಂ ಜಂಪಾ ಅವರ ಮೋಡಿಯ ಮುಂದೆ ನಮಿಬಿಯಾ ತಂಡವು ಶರಣಾಯಿತು. 9 ವಿಕೆಟ್‌ಗಳಿಂದ ಜಯಿಸಿದ ಆಸ್ಟ್ರೇಲಿಯಾ ತಂಡವು ಸೂಪರ್ 8ರ ಹಂತಕ್ಕೆ ಪ್ರವೇಶಿಸಿತು.

ಬುಧವಾರ ಬೆಳಿಗ್ಗೆ (ಭಾರತೀಯ ಕಾಲಮಾನ) ನಡೆದ ಬಿ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಜಂಪಾ (12ಕ್ಕೆ4) ಅವರ ದಾಳಿಯ ಮುಂದೆ ನಮಿಬಿಯಾ ತಂಡವು 17 ಓವರ್‌ಗಳಲ್ಲಿ 72 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ವೇಗಿಗಳಾದ ಜೋಷ್ ಹ್ಯಾಜಲ್‌ವುಡ್ ಹಾಗೂ ಮಾರ್ಕಸ್ ಸ್ಟೊಯಿನಿಸ್ ಅವರೂ ತಲಾ ಎರಡು ವಿಕೆಟ್ ಗಳಿಸಿದರು.

ನಮಿಬಿಯಾ ತಂಡದ ನಾಯಕ ಗೆರಾರ್ಡ್ ಎರಸ್ಮಸ್ (36; 43ಎ, 4X4, 6X1) ಹಾಗೂ ಮಿಚೆಲ್ ವ್ಯಾನ್ ಲಿಂಗೆನ್ (10; 10ಎ) ಅವರಿಬ್ಬರನ್ನು ಬಿಟ್ಟರೆ ಉಳಿದವರು ಎರಡಂಕಿ ಮುಟ್ಟಲಿಲ್ಲ.

ನಮಿಬಿಯಾ ತಂಡಕ್ಕೆ ಇದು ಮೂರನೇ ಪಂದ್ಯ ಹಾಗೂ ಎರಡನೇ ಸೋಲು. ಇದರೊಂದಿಗೆ ಸೂಪರ್ 8 ಪ್ರವೇಶದ ಹಾದಿಯಿಂದ ಹೊರಬಿದ್ದಿದೆ.

ಚಿಕ್ಕ ಗುರಿಯನ್ನು ಬೆನ್ನಟ್ಟಿದ ಆಸ್ಟ್ರೇಲಿಯಾ 5.4 ಓವರ್‌ಗಳಲ್ಲಿ 1 ವಿಕೆಟ್‌ಗೆ 74 ರನ್ ಗಳಿಸಿತು.

8 ಎಸೆತಗಳಲ್ಲಿ 20 ರನ್ ಗಳಿಸಿದ ಡೇವಿಡ್ ವಾರ್ನರ್ ಅವರ ವಿಕೆಟ್ ಅನ್ನು ನಮಿಬಿಯಾದ ಡೇವಿಡ್ ವೀಸ್ ಗಳಿಸಿದರು.

ಟ್ರಾವಿಸ್ ಹೆಡ್ (ಔಟಾಗದೆ 34; 17ಎ, 4X5, 6X2) ಹಾಗೂ ಮಿಚೆಲ್ ಮಾರ್ಷ್ (ಔಟಾಗದೆ 18; 9ಎ, 4X3, 6X1) ತಂಡವನ್ನು ಗೆಲುವಿನ ದಡ ಸೇರಿಸಿದರು. ಆಸ್ಟ್ರೇಲಿಯಾ ಬಳಗಕ್ಕೆ ಇದು ಸತತ ಮೂರನೇ ಜಯ. ತಂಡಕ್ಕೆ ಇನ್ನೊಂದು ಪಂದ್ಯ ಬಾಕಿಯಿದ್ದು ಸ್ಕಾಟ್ಲೆಂಡ್ ವಿರುದ್ಧ ಆಡಲಿದೆ.

**ಸಂಕ್ಷಿಪ್ತ ಸ್ಕೋರು: ನಮಿಬಿಯಾ:** 17 ಓವರ್‌ಗಳಲ್ಲಿ 72 (ಮೈಕೆಲ್ ವ್ಯಾನ್ ಲಿಂಗೆನ್ 10, ಗೆರಾರ್ಡ್ ಎರಸ್ಮಸ್ 36, ಜೋಷ್ ಹ್ಯಾಜಲ್‌ವುಡ್ 18ಕ್ಕೆ2, ಮಾರ್ಕಸ್ ಸ್ಟೊಯಿನಿಸ್ 9ಕ್ಕೆ2, ಆ್ಯಡಂ ಜಂಪಾ 12ಕ್ಕೆ4) **ಆಸ್ಟ್ರೇಲಿಯಾ:** 5.4 ಓವರ್‌ಗಳಲ್ಲಿ 1 ವಿಕೆಟ್‌ಗೆ 74 (ಡೇವಿಡ್ ವಾರ್ನರ್ 20, ಟ್ರಾವಿಸ್ ಹೆಡ್ ಔಟಾಗದೆ 34, ಮಿಚೆಲ್ ಮಾರ್ಷ್ ಔಟಾಗದೆ 11) **ಫಲಿತಾಂಶ:** ಆಸ್ಟ್ರೇಲಿಯಾಗೆ 9 ವಿಕೆಟ್‌ಗಳ ಜಯ. **ಪಂದ್ಯಶ್ರೇಷ್ಠ:** ಆ್ಯಡಂ ಜಂಪಾ.

ಆಸ್ಟ್ರೇಲಿಯಾದ ಸ್ಪಿನ್ನರ್ ಆ್ಯಡಂ ಜಂಪಾ

# ಪಂದ್ಯ ರದ್ದು: ಹೊರಬಿದ್ದ ಶ್ರೀಲಂಕಾ

**ಲಾಡರ್‌ಹಿಲ್, ಅಮೆರಿಕ (ಪಿಟಿಐ):** ಶ್ರೀಲಂಕಾ ಮತ್ತು ನೇಪಾಳ ತಂಡಗಳ ನಡುವಣ ಪಂದ್ಯವು ಮಳೆಯಿಂದಾಗಿ ರದ್ದಾಯಿತು. ಉಭಯ ತಂಡಗಳೂ ಸೂಪರ್ 8 ಹಂತಕ್ಕೆ ಸಾಗುವ ದಾರಿಯಿಂದ ಹೊರಬಿದ್ದವು.

ಬುಧವಾರ ಡಿ ಗುಂಪಿನ ಪಂದ್ಯದಲ್ಲಿ ಇವೆರಡೂ ತಂಡಗಳೂ ಹಣಾಹಣಿ ನಡೆಸಬೇಕಿತ್ತು. ಆದರೆ ಮಳೆಯಾದ ಕಾರಣ ಪಂದ್ಯ ರದ್ದಾಯಿತು. ಶ್ರೀಲಂಕಾ 3 ಪಂದ್ಯಗಳಿಂದ ಒಂದು ಅಂಕ ಹಾಗೂ ನೇಪಾಳ ಎರಡು ಪಂದ್ಯಗಳನ್ನು ಆಡಿ ಒಂದು ಅಂಕ ಪಡೆದಿವೆ. ಈ ಗುಂಪಿನಲ್ಲಿ 6 ಅಂಕ ಗಳಿಸಿ ಅಗ್ರಸ್ಥಾನದಲ್ಲಿದ್ದ ದಕ್ಷಿಣ ಆಫ್ರಿಕಾ ಸೂಪರ್ 8 ಹಂತ ಪ್ರವೇಶಿಸಿದೆ. ತಲಾ 2 ಅಂಕ ಗಳಿಸಿರುವ ಬಾಂಗ್ಲಾ ಹಾಗೂ ನೆದರ್ಲೆಂಡ್ಸ್ ತಂಡಗಳು ಎರಡನೇ ಸ್ಥಾನ ಪಡೆಯಲು ಪೈಪೋಟಿಯಲ್ಲಿವೆ. ಉಭಯ ತಂಡಗಳೂ ತಲಾ ಎರಡು ಪಂದ್ಯಗಳನ್ನು ಆಡಬೇಕಿದೆ.

ಜಂಟಿ ಆತಿಥೇಯ ವಿಂಡೀಸ್ ವಿರುದ್ಧ ಸೆಣಸಾಟ ಇಂದು

# ಕಿವೀಸ್‌ಗೆ ನಿರ್ಣಾಯಕ ಪಂದ್ಯ

**ತರೂಬಾ (ಪಿಟಿಐ):** ಲೀಗ್ ಹಂತದಲ್ಲೇ ಹೊರಬೀಳುವ ಆತಂಕ ಎದುರಿಸುತ್ತಿರುವ ನ್ಯೂಜಿಲೆಂಡ್ ತಂಡ ಗುರುವಾರ ಟ್ರಿನಿಡಾಡ್‌ನ ಬ್ರಯನ್ ಲಾರಾ ಕ್ರೀಡಾಂಗಣದಲ್ಲಿ ನಡೆಯುವ ಟಿ20 ವಿಶ್ವಕಪ್ ಪಂದ್ಯದಲ್ಲಿ ಜಂಟಿ ಆತಿಥೇಯ ವೆಸ್ಟ್ ಇಂಡೀಸ್ ತಂಡವನ್ನು ಎದುರಿಸಲಿದೆ. ಸೂಪರ್ ಎಂಟರ ಅವಕಾಶ ಜೀವಂತವಾಗಿರಿಸಿಕೊಳ್ಳಬೇಕಾದರೆ ಕಿವೀಸ್ ತಂಡವು ಸುಧಾರಿತ ಪ್ರದರ್ಶನ ನೀಡಬೇಕಾದ ಅನಿವಾರ್ಯತೆಯಲ್ಲಿದೆ.

ಅಫ್ಗಾನಿಸ್ತಾನ ವಿರುದ್ಧ ಗಯಾನಾದ ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿ ನಡೆದ ‘ಸಿ’ ಗುಂಪಿನ ತನ್ನ ಮೊದಲ ಪಂದ್ಯದಲ್ಲೇ ನ್ಯೂಜಿಲೆಂಡ್ ಬರೇ 75 ರನ್‌ಗಳಿಗೆ (15.2 ಓವರುಗಳಲ್ಲಿ) ಪತನಗೊಂಡು 84 ರನ್‌ಗಳ ಮುಖಭಂಗ ಅನುಭವಿಸಿತ್ತು. ಇದರಿಂದ ಅದರ ರನ್ ರೇಟ್ -4.2ಕ್ಕೆ ಕುಸಿದಿದೆ. ಇದು ಐದು ತಂಡಗಳ ಗುಂಪಿನಲ್ಲೇ ಅತಿಕಡಿಮೆ ರನ್ ರೇಟ್. ಅಫ್ಗಾನಿಸ್ತಾನ, ವೆಸ್ಟ್ ಇಂಡೀಸ್ ಆಡಿದ ಎರಡರಲ್ಲೂ ಗೆದ್ದು ಕ್ರಮವಾಗಿ ಮೊದಲೆರಡು ಸ್ಥಾನಗಳಲ್ಲಿವೆ.

ವಿಶ್ವಕಪ್‌ನಲ್ಲಿ ಸ್ಥಿರಪ್ರದರ್ಶನ ನೀಡುವ ತಂಡಗಳಲ್ಲೊಂದಾದ ನ್ಯೂಜಿಲೆಂಡ್ ಕಳೆದ ಆರೂ ವಿಶ್ವಕಪ್‌ಗಳಲ್ಲಿ ಸೆಮಿಫೈನಲ್ ತಲುಪಿದ ಹಿರಿಮೆ ಹೊಂದಿದೆ. ಏಕದಿನ ವಿಶ್ವಕಪ್‌ನಲ್ಲಿ 2015, 2019 ಮತ್ತು 2023ರಲ್ಲಿ, ಟಿ20 ಮಾದರಿಯ ವಿಶ್ವಕಪ್‌ನಲ್ಲಿ 2016, 2021, 2022ರಲ್ಲಿ ನಾಲ್ಕರ ಘಟ್ಟ ತಲುಪಿತ್ತು.

ಅಫ್ಗನ್ನರ ವಿರುದ್ಧ ಪಂದ್ಯದಲ್ಲಿ ಕೇನ್ ವಿಲಿಯಮ್ಸನ್ ಬಳಗದ ಇಬ್ಬರು (ಗ್ಲೆನ್ ಫಿಲಿಪ್ಸ್ ಮತ್ತು ಮ್ಯಾಟ್ ಹೆನ್ರಿ ಕ್ರಮವಾಗಿ 18 ಮತ್ತು 12) ಮಾತ್ರ ಎರಡಂಕಿ ಮೊತ್ತ ಗಳಿಸಿದ್ದರು. ಕಿವೀಸ್ ಬೌಲರ್‌ಗಳು ಸಹ, ರಹಮಾನುಲ್ಲಾ ಗುರ್ಬಾಝ್ ಮತ್ತು ಇಬ್ರಾಹಿಂ ಜದ್ರಾನ್ ಅವರನ್ನು ನಿಯಂತ್ರಿಸಲು ವಿಫಲರಾಗಿದ್ದರು. ಅವರಿಬ್ಬರು ಶತಕದ ಜೊತೆಯಾಟದಲ್ಲಿ ಭಾಗಿಯಾಗಿದ್ದರು.

ಇನ್ನೊಂದೆಡೆ, ವೆಸ್ಟ್ ಇಂಡೀಸ್ ಈ ಪಂದ್ಯದಲ್ಲಿ ಗೆಲುವು ಸಾಧಿಸಿದಲ್ಲಿ ಸೂಪರ್ ಎಂಟರಲ್ಲಿ ಸ್ಥಾನ ಗಟ್ಟಿಮಾಡಿಕೊಳ್ಳಲಿದೆ.

ಪಾಪುವಾ ನ್ಯೂಗಿನಿ ಎದುರು ಪರದಾಡಿ ಗೆದ್ದ ವಿಂಡೀಸರು, ಯುಗಾಂಡ ವಿರುದ್ಧ 134 ರನ್‌ಗಳ ಭಾರಿ ಜಯಗಳಿಸಿದ್ದರು

**ಇಂದಿನ ಪಂದ್ಯಗಳು**

| | | |
|---|---|---|
| ವೆಸ್ಟ್ ಇಂಡೀಸ್ Vs ನ್ಯೂಜಿಲೆಂಡ್ | (ಬೆಳಿಗ್ಗೆ 6) | |
| ಬಾಂಗ್ಲಾದೇಶ Vs ನೆದರ್ಲೆಂಡ್ಸ್ | (ರಾತ್ರಿ 8) | |
| ಇಂಗ್ಲೆಂಡ್ Vs ಒಮಾನ್ | (ಮಧ್ಯರಾತ್ರಿ 12.30) | |

ಲೈವ್ ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್

ವೆಸ್ಟ್ ಇಂಡೀಸ್‌ನ ಆ್ಯಂಡ್ರೆ ರಸೆಲ್
ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ಎಪಿ/ಪಿಟಿಐ ಚಿತ್ರಗಳು

## ಬಾಂಗ್ಲಾದೇಶಕ್ಕೆ ಡಚ್ಚರ ಸವಾಲು

**ಕಿಂಗ್‌ಟೌನ್ (ಸೇಂಟ್ ವಿನ್ಸೆಂಟ್):** ಬಾಂಗ್ಲಾದೇಶ ಮತ್ತು ನೆದರ್ಲೆಂಡ್ಸ್ ತಂಡಗಳು ಗುರುವಾರ ಇಲ್ಲಿ ನಡೆಯುವ ‘ಡಿ’ ಗುಂಪಿನ ಮಹತ್ವದ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಎರಡೂ ತಂಡಗಳು ಒಂದು ಗೆದ್ದು, ಒಂದು ಸೋತಿವೆ.

‘ಡಿ’ ಗುಂಪಿನಿಂದ ದಕ್ಷಿಣ ಆಫ್ರಿಕಾ ಈಗಾಗಲೇ ಸೂಪರ್ ಎಂಟರಲ್ಲಿ ಸ್ಥಾನ ಪಡೆದಾಗಿದೆ. ಬಾಂಗ್ಲಾ, ನೆದರ್ಲೆಂಡ್ಸ್ ತಲಾ ಎರಡು ಪಾಯಿಂಟ್ಸ್ ಪಡೆದಿದ್ದು ರನ್ ರೇಟ್ ಆಧಾರದಲ್ಲಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ. ನೇಪಾಳ ನಾಲ್ಕನೇ ಸ್ಥಾನದಲ್ಲಿದ್ದು, ಶ್ರೀಲಂಕಾ ಆಡಿದ ಮೂರರಲ್ಲಿ ಎರಡು ಸೋತು ಹೊರಬಿದ್ದಿದೆ. ಆ ತಂಡದ ಒಂದು ಪಂದ್ಯ (ನೇಪಾಳ ವಿರುದ್ಧ) ಮಳೆಯ ಪಾಲಾಗಿದೆ.

ಶ್ರೀಲಂಕಾ ವಿರುದ್ಧ ಎರಡು ವಿಕೆಟ್‌ಗಳ ರೋಚಕ ಜಯಗಳಿಸಿದ್ದ ಬಾಂಗ್ಲಾದೇಶ, ದಕ್ಷಿಣ ಆಫ್ರಿಕಕ್ಕೆ ನಾಲ್ಕು ರನ್‌ಗಳಿಂದ ಸೋಲುವ ಮೊದಲು ತೀವ್ರ ಹೋರಾಟ ನೀಡಿತ್ತು. ನೆದರ್ಲೆಂಡ್ಸ್, ದಕ್ಷಿಣ ಆಫ್ರಿಕಕ್ಕೆ ಸೋತರೂ, ನೇಪಾಳ ವಿರುದ್ಧ ಗೆಲುವು ಸಾಧಿಸಿತ್ತು.

## ಮಹಿಳಾ ಕ್ರಿಕೆಟ್: ದಕ್ಷಿಣ ಆಫ್ರಿಕಾ ವನಿತೆಯರ ಅಭ್ಯಾಸ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತ ತಂಡದಲ್ಲಿ ವಿಶ್ವದರ್ಜೆಯ ಆಟಗಾರರು ಇದ್ದಾರೆ. ಅವರನ್ನು ಮಣಿಸಲು ಉತ್ಕೃಷ್ಟ ಗುಣಮಟ್ಟದ ಆಟವಾಡುವುದು ತಮ್ಮ ಮುಂದಿರುವ ಸವಾಲು ಎಂದು ದಕ್ಷಿಣ ಆಫ್ರಿಕಾ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಲಾರಾ ವೊಲ್ವಾರ್ಟ್ ಹೇಳಿದರು.

ಲಾರಾ ವೊಲ್ವಾರ್ಟ್

ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ದಕ್ಷಿಣ ಆಫ್ರಿಕಾ ಮತ್ತು ಮಂಡಳಿ ಅಧ್ಯಕ್ಷರ ಇಲೆವನ್ ತಂಡಗಳ ನಡುವಣ ಅಭ್ಯಾಸ ಪಂದ್ಯ ನಡೆಯಲಿದೆ. ಪೂರ್ವಭಾವಿಯಾಗಿ ಬುಧವಾರ ದಕ್ಷಿಣ ಆಫ್ರಿಕಾ ಆಟಗಾರ್ತಿಯರು ತಾಲೀಮು ನಡೆಸಿದರು. ಇಲ್ಲಿ ಇದೇ 16, 19 ಹಾಗೂ 23ರಂದು ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಣ ಏಕದಿನ ಪಂದ್ಯಗಳು ನಡೆಯಲಿವೆ.

‘ಏಕದಿನ ಕ್ರಿಕೆಟ್‌ನಲ್ಲಿ ಆಡಿದ ನಂತರ ಟಿ20 ಸರಣಿ ಆಡಲಿದ್ದೇವೆ. ಮುಂಬರು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲು ಇದು ನೆರವಾಗಲಿದೆ. ಏಕೈಕ ಟೆಸ್ಟ್ ಆಡಲಿರುವುದು ನಿಜಕ್ಕೂ ವಿಶೇಷ’ ಎಂದು ಸುದ್ದಿಗಾರರಿಗೆ ಹೇಳಿದರು.

‘ನಮ್ಮ ತಂಡದಲ್ಲಿ ಕೆಲವರು ಈಚೆಗೆ ನಡೆದಿದ್ದ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡಿದ್ದೆವು. ಇದರಿಂದಾಗಿ ಇಲ್ಲಿಯ ವಾತಾವರಣಕ್ಕೆ ಹೊಂದಿಕೊಳ್ಳಲು ಸಹಾಯವಾಗಲಿದೆ’ ಎಂದು ಲಾರಾ ಹೇಳಿದರು.

**ಪಂದ್ಯ ಆರಂಭ: ಮಧ್ಯಾಹ್ನ 1.30**

# ಐಪಿಎಲ್ ಮೌಲ್ಯ ಗಣನೀಯ ಹೆಚ್ಚಳ

**ನವದೆಹಲಿ (ಪಿಟಿಐ):** ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಮೌಲ್ಯವು ಶೇ 6.5ರಷ್ಟು ಏರಿಕೆಯಾಗಿದೆ.

2024ರ ಆವೃತ್ತಿಯ ನಂತರ ಮೌಲ್ಯವು ₹ 134,858 ಕೋಟಿಗೆ ಏರಿಕೆಯಾಗಿದೆ ಎಂದು ಅಮೆರಿಕನ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ ಹಾಲಿಹಾನ್ ಲೋಕೆ ವರದಿ ನೀಡಿದೆ.

ಈ ಶ್ರೀಮಂತ ಟೂರ್ನಿಯ ಬ್ರ್ಯಾಂಡ್ ಮೌಲ್ಯವು ಕೂಡ ವರ್ಷದಿಂದ ವರ್ಷಕ್ಕೆ ಏರುತ್ತಿದೆ. ಶೇ 6.3ರಷ್ಟು ಹಾಗೂ ₹ 28 ಸಾವಿರ ಕೋಟಿಗೆ ಏರಿದೆ.

ಟೂರ್ನಿಯ ಮೌಲ್ಯ ಹೆಚ್ಚಳದಿಂದಾಗಿ ಟೈಟಲ್ ಪ್ರಾಯೋಜಕತ್ವ ನೀಡಿರುವ ಟಾಟಾ ಸಮೂಹ ಮತ್ತೆ ಐದು ವರ್ಷಗಳವರೆಗೆ (2024 ರಿಂದ 2028) ₹ 2,500 ಕೋಟಿಗೆ ಪಡೆಯಲು ಅನುಕೂಲವಾಗಲಿದೆ. ಇದು ಕಳೆದ ವರ್ಷಕ್ಕಿಂತ (ವಾರ್ಷಿಕ ₹ 335 ಕೋಟಿ) ಅಂದಾಜು ಶೇ 50ರಷ್ಟು ಹೆಚ್ಚಳವಾದಂತಾಗಿದೆ.

‘ಹೂಡಿಕೆಯ ಹೆಚ್ಚಳದಿಂದಾಗಿ ಐಪಿಎಲ್ ಘನತೆಯು ಮತ್ತಷ್ಟು ಉನ್ನತ ಮಟ್ಟಕ್ಕೇರಿದೆ. ಪ್ರತಿಷ್ಠಿತ ಬ್ರ್ಯಾಂಡ್‌ಗಳಿಗೆ ಇದು ಅತ್ಯಂತ ಪ್ರಿಯವಾದ ವೇದಿಕೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಒಲಿಂಪಿಕ್ಸ್, ಫಿಫಾ ವಿಶ್ವಕಪ್ ಮತ್ತು ಕ್ರಿಕೆಟ್ ವಿಶ್ವಕಪ್ ಟೂರ್ನಿಗಳನ್ನು ಬಿಟ್ಟರೆ ನೂರು ಕೋಟಿಗೂ ಹೆಚ್ಚು ಜನರನ್ನು ತಲುಪುವ ಕ್ರೀಡಾ ಚಟುವಟಿಕೆ ಎಂಬ ಹೆಗ್ಗಳಿಕೆಗೆ ಐಪಿಎಲ್ ಪಾತ್ರವಾಗಿದೆ.

**ಆರ್‌ಸಿಬಿಗೆ ಎರಡನೇ ಸ್ಥಾನ:** ಐಪಿಎಲ್‌ನಲ್ಲಿ ಆಡುವ ಫ್ರ್ಯಾಂಚೈಸಿಗಳ ಬ್ರ್ಯಾಂಡ್ ಮೌಲ್ಯದಲ್ಲಿಯೂ ಹೆಚ್ಚಳ ದಾಖಲಾಗಿದೆ. ಚೆನ್ನೈ ಸೂಪರ್ ಕಿಂಗ್ಸ್ ಮೊದಲ ಸ್ಥಾನದಲ್ಲಿದೆ. ಕೋಲ್ಕತ್ತ ನೈಟ್ ರೈಡರ್ಸ್ ವಾರ್ಷಿಕ ಹೆಚ್ಚಳದ ಕಂಡಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಬ್ರ್ಯಾಂಡ್ ಮೌಲ್ಯದಲ್ಲಿ ಎರಡನೇ ಸ್ಥಾನದಲ್ಲಿದೆ.

ಆರ್‌ಸಿಬಿಯು ಕತಾರ್ ಏರ್‌ವೇಸ್ (₹ 75 ಕೋಟಿ) ಜೊತೆಗೆ ಮೂರು ವರ್ಷಗಳ ಪ್ರಾಯೋಜಕತ್ವ ಒಪ್ಪಂದ ಮಾಡಿಕೊಂಡಿದೆ. ವ್ಯಾವಹಾರಿಕ ಮೌಲ್ಯವು 227 ಮಿಲಿಯನ್ ಡಾಲರ್ ಇದೆ. ಮುಂಬೈ ಇಂಡಿಯನ್ಸ್, ರಾಜಸ್ಥಾನ ರಾಯಲ್ಸ್ ಹಾಗೂ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ನಂತರದ ಸ್ಥಾನಗಳಲ್ಲಿವೆ.

**ಐಪಿಎಲ್ ತಂಡಗಳ ಮೌಲ್ಯ (₹ ಕೋಟಿ)**

| ಚೆನ್ನೈ | ಬೆಂಗಳೂರು | ಕೋಲ್ಕತ್ತ | ಮುಂಬೈ | ರಾಜಸ್ಥಾನ |
|---|---|---|---|---|
| 1,928 | 1,895 | 1,805 | 1,702 | 1,110 |

| ಹೈದರಾಬಾದ್ | ಡೆಲ್ಲಿ | ಗುಜರಾತ್ | ಪಂಜಾಬ್ | ಲಖನೌ |
|---|---|---|---|---|
| 1,101 | 1,093 | 1,034 | 843 | 759 |

ಗ್ರ್ಯಾನ್‌ಪ್ರಿ -3 ಅಥ್ಲೆಟಿಕ್ಸ್: ನಯನಾ ಪೈಪೋಟಿ ಮೀರಿ ಲಾಂಗ್‌ಜಂಪ್ ಚಿನ್ನ ಗೆದ್ದ ಆ್ಯನ್ಸಿ ಸೋಜನ್

# ಕರ್ನಾಟಕದ ಸ್ನೇಹಾ ವೇಗದ ಓಟಗಾರ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದ ಸ್ನೇಹಾ ಎಸ್.ಎಸ್., ಬುಧವಾರ ಇಲ್ಲಿ ನಡೆದ ಇಂಡಿಯನ್ ಗ್ರ್ಯಾನ್‌ಪ್ರಿ-3 ಅಥ್ಲೆಟಿಕ್ ಕೂಟದಲ್ಲಿ ವೇಗದ ಓಟಗಾರ್ತಿ ಎಂಬ ಗೌರವಕ್ಕೆ ಪಾತ್ರರಾದರು. ದಿನದ ಸ್ಪರ್ಧೆಗಳಲ್ಲಿ ಉತ್ತಮ ಪೈಪೋಟಿ ಕಂಡ ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಕೇರಳದ ಆ್ಯನ್ಸಿ ಸೋಜನ್, ತಮ್ಮದೇ ರಾಜ್ಯದ ನಯನಾ ಜೇಮ್ಸ್ ಅವರನ್ನು ಹಿಂದೆ ಹಾಕಿ ಚಿನ್ನ ಗೆದ್ದರು.

ತಿಂಗಳಾಂತ್ಯಕ್ಕೆ (ಜೂನ್ 27-30) ಪಂಚಕುಲಾದಲ್ಲಿ 63ನೇ ರಾಷ್ಟ್ರೀಯ ಸೀನಿಯರ್ ಅಂತರ ರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ನಿಗದಿಯಾಗಿರುವ ಕಾರಣ, ಜೊತೆಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ 50 ದಿನಗಳಿಗಿಂತ ಕಡಿಮೆ ಅವಧಿ ಉಳಿದಿರುವುದರಿಂದ ದೇಶದ ಪ್ರಮುಖ ಅಥ್ಲೀಟುಗಳಲ್ಲಿ ಹೆಚ್ಚಿನವರು ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕೂಟದಲ್ಲಿ ಭಾಗವಹಿಸಲಿಲ್ಲ.

ಒಲಿಂಪಿಕ್ಸ್‌ಗೆ ಆಯ್ಕೆಯಾಗಿರುವ ಅಥ್ಲೀಟುಗಳು ಅಂತಿಮ ಸಿದ್ಧತೆಯ ದೃಷ್ಟಿಯಿಂದ ಪಾಲ್ಗೊಳ್ಳಲಿಲ್ಲ. ಉಳಿದಂತೆ ಹೆಚ್ಚಿನ ಅಥ್ಲೀಟುಗಳು ಪಂಚಕುಲಾದಲ್ಲಿ ಸತ್ವಪರೀಕ್ಷೆಗೆ ನಿರ್ಧರಿಸಿರುವ ಕಾರಣ ಅವರೂ ಬರಲಿಲ್ಲ. ಕಣಕ್ಕಿಳಿದವರಲ್ಲಿ ಬಹುತೇಕ ಮಂದಿ ಅಂತರರಾಜ್ಯ ಕೂಟಕ್ಕೆ ಇದನ್ನು ಸಿದ್ಧತೆಯಾಗಿ ಬಳಸಿಕೊಂಡರು. ಹೀಗಾಗಿ ಯಾರೊಬ್ಬರೂ ಒಲಿಂಪಿಕ್ಸ್‌ನ ಅರ್ಹತಾ ಮಟ್ಟ ತಲುಪಲಿಲ್ಲ.

ಸ್ನೇಹಾ ಅವರಿಗೆ 100 ಮೀ. ಓಟದಲ್ಲಿ ಅಂಥ ಪೈಪೋಟಿ ಎದುರಾಗಲಿಲ್ಲ. ಆರಂಭದಲ್ಲೇ ಲೀಡ್ ಪಡೆದ ಅವರು 11.41 ಸೆ.ಗಳಲ್ಲಿ ಗುರಿ ಕ್ರಮಿಸಿ ಮೊದಲಿಗರಾದರು. ಹೈಜಂಪ್‌ನಲ್ಲಿ ಕರ್ನಾಟಕದ ಅಭಿನಯಾ ಶೆಟ್ಟಿ ಮೊದಲಿಗರಾದರೆ, 200 ಮೀ.ನಲ್ಲಿ ಕಾವೇರಿ ಲಕ್ಷ್ಮಣಗೌಡ ಎರಡನೇ ಸ್ಥಾನ ಪಡೆದರು.

ಪುರುಷರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಬೆಂಗಳೂರಿನ ಆರ್ಯ ಎಸ್. (7.75 ಮೀ.) 100 ಮೀ. ಓಟದಲ್ಲಿ ಮಣಿಕಂಠ ಹೋಬಳಿದಾರ್ (10.64 ಸೆ.) ಎರಡನೇ ಸ್ಥಾನ ಪಡೆದರು.

ಲಾಂಗ್‌ಜಂಪ್‌ನಲ್ಲಿ ಚಿನ್ನ ಗೆದ್ದ ಕರ್ನಾಟಕದ ಆರ್ಯ ಎಸ್. –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

**ಫಲಿತಾಂಶಗಳು: ಪುರುಷರು:** 100 ಮೀ. ಓಟ: ರಘು ಕುಮಾರ್ ಜಿ (ತಮಿಳುನಾಡು, 10.56 ಸೆ)–1, ಮಣಿಕಂಠ ಹೋಬಳಿದಾರ್ (ಕರ್ನಾಟಕ, 10.64 ಸೆ)–2, ಅರ್ಜಿತ್ ರಾಣಾ (ಹರಿಯಾಣ, 10.65 ಸೆ)–3; 400 ಮೀ. ಓಟ: ಪ್ರಿನ್ಸ್ ಜೋಸೆಫ್ (ಕೇರಳ)–1, ಜೇ ಕುಮಾರ್ (ದೆಹಲಿ)–2, ಆಕಾಶ್ ಬಾಬು ಚಿಂತಲ (ತಮಿಳುನಾಡು)–3, ಕಾಲ: 46.46 ಸೆ.; 800 ಮೀ. ಓಟ: ಪ್ರಕಾಶ್ ಗಡಾದೆ (ಮಹಾರಾಷ್ಟ್ರ)–1, ಕೃಷನ್ ಕುಮಾರ್ (ಹರಿಯಾಣ)–2, ಅನು ಕುಮಾರ್ (ಉತ್ತರಾಖಂಡ)–3, ಕಾಲ: 1ನಿ.48.53 ಸೆ.; 3,000 ಮೀ. ಓಟ: ಕಿರಣ್ ಮೆತ್ರೆ (ಮಹಾರಾಷ್ಟ್ರ)–1, ಹರ್‌ಪ್ರೀತ್ ಸಿಂಗ್ (ಪಂಜಾಬ್)–2, ದೀಪಕ್ ಭಟ್ (ಉತ್ತರಾಖಂಡ)–3, ಕಾಲ: 8ನಿ.09.86 ಸೆ.; ಟ್ರಿಪಲ್ ಜಂಪ್: ಕಾರ್ತಿಕ್ ಯು (ಕೇರಳ)–1, ಕೃಷ್ಣ ಸಿಂಗ್ (ಮಹಾರಾಷ್ಟ್ರ)–2, ಪುನೀತ್ ಕುಮಾರ್ (ಉತ್ತರ ಪ್ರದೇಶ)–3, ದೂರ: 16.11 ಮೀ.; ಹೈಜಂಪ್: ಸ್ವಾಧಿನ್ ಕುಮಾರ್ ಮಾಝಿ (ಒಡಿಶಾ)–1, ನಿಶಾಂತ್ (ದೆಹಲಿ)–2, ರಾಜೇಶ್ ಕುಮಾರ್ (ಹರಿಯಾಣ)–3, ಎತ್ತರ: 2.10 ಮೀ. ಲಾಂಗ್‌ಜಂಪ್: ಆರ್ಯ ಎಸ್. (ಕರ್ನಾಟಕ)–1, ಸನ್ಮಥ್ ದರ್ಶನ್ (ತಮಿಳುನಾಡು)–2. ದೂರ: 7.76 ಮೀ.; ಶಾಟ್‌ಪಟ್: ಪ್ರಭಕೃಪಾಲ್ ಸಿಂಗ್ (ಪಂಜಾಬ್)–1, ಒಮೇಶ್ ರಂಗ (ಪಂಜಾಬ್)–2, ದೂರ: 17.49 ಮೀ; ಜಾವೆಲಿನ್ ಥ್ರೊ: ಸಚಿನ್ ಯಾದವ್ (ಉತ್ತರಪ್ರದೇಶ)–1, ರೋಹಿತ್ (ಉತ್ತರ ಪ್ರದೇಶ)–2, ದೂರ: 82.69 ಮೀ.

**ಮಹಿಳೆಯರು:** 100 ಮೀ. ಓಟ: ಸ್ನೇಹಾ ಎಸ್. ಎಸ್. (ಕರ್ನಾಟಕ)–1, ಅಭಿನಯಾ ರಾಜರಾಜನ್ (ತಮಿಳುನಾಡು)–2, ವಿ.ಸುಧೀಕ್ಷಾ (ಕರ್ನಾಟಕ)–3, ಕಾಲ: 11.41 ಸೆ.; 200 ಮೀ. ಓಟ: ನಿತ್ಯಾ ಗಂಧೆ (ತೆಲಂಗಾಣ)–1, ಕಾವೇರಿ ಲಕ್ಷ್ಮಣಗೌಡ (ಕರ್ನಾಟಕ)–2, ಅಭಿನಯಾ ರಾಜರಾಜನ್ –3, ಕಾಲ: 24.23 ಸೆ.; 400 ಮೀ. ಓಟ: ದಂಡಿ ಜ್ಯೋತಿಶ್ರೀ (ಆಂಧ್ರಪ್ರದೇಶ)–1, ಶುಭಾ ವೆಂಕಟೇಶನ್ (ತಮಿಳುನಾಡು)–2, ಪೂವಮ್ಮ ರಾಜು (ಕರ್ನಾಟಕ)–3, ಕಾಲ: 51.53 ಸೆ.; 800 ಮೀ: ಹೀನಾ (ಹರಿಯಾಣ)–1, ಅರ್ಪಿತಾ ಇ.ಬಿ. (ಕರ್ನಾಟಕ)–2, ವಿನೀತಾ ಗುರ್ಜರ್ (ಉತ್ತರ ಪ್ರದೇಶ)–3, ಕಾಲ: 2ನಿ.12.21 ಸೆ.; 3000 ಮೀ.: ಅಕ್ಷಣಾ (ಮಧ್ಯಪ್ರದೇಶ)–1, ಸಂಘಮಿತ್ರ ಮಹತಾ (ಜಾರ್ಖಂಡ್)–2, ಪ್ರಾಚಿ ದೇವ್ಕರ್ (ಮಹಾರಾಷ್ಟ್ರ)–3, ಕಾಲ: 9ನಿ.55.14 ಸೆ.; ಲಾಂಗ್‌ಜಂಪ್: ಆ್ಯನ್ಸಿ ಸೋಜನ್ ಇ (ಕೇರಳ)–1, ನಯನಾ ಜೇಮ್ಸ್ (ಕೇರಳ)–2, ಭವಾನಿ ಯಾದವ್ (ಆಂಧ್ರಪ್ರದೇಶ)–3, ದೂರ: 6.52 ಮೀ.; ಟ್ರಿಪಲ್ ಜಂಪ್: ಪೂರ್ವಾ ಹಿತೇಶ್ ಸಾವಂತ್ (ಮಹಾರಾಷ್ಟ್ರ)–1, ಶಾರ್ವರಿ ಅವಿನಾಶ್ ಪಾರುಲೆ (ಮಹಾರಾಷ್ಟ್ರ)–2, ದೂರ: 13.14 ಮೀ.; ಹೈಜಂಪ್: ಅಭಿನಯಾ ಶೆಟ್ಟಿ (ಕರ್ನಾಟಕ)–1, ಕೆವಿನಾ (ತಮಿಳುನಾಡು)–2, ಎತ್ತರ: 1.74 ಮೀ.; ಜಾವೆಲಿನ್ ಥ್ರೊ: ರಶ್ಮಿ ಕೆ. (ಆಂಧ್ರಪ್ರದೇಶ)–1, ಲಲಿತಾ ಚೌಧರಿ (ರಾಜಸ್ಥಾನ)–2, ದೂರ: 46.69 ಮೀ.; ಶಾಟ್‌ಪಟ್: ಅಭಾ ಖತುವಾ (ಮಹಾರಾಷ್ಟ್ರ)–1, ಶಿಕ್ಷಾ (ಹರಿಯಾಣ)–2, ಅಂಬಿಕಾ ವಿ. (ಕರ್ನಾಟಕ)–3, ದೂರ: 17.93 ಮೀ.

**20 ವರ್ಷದೊಳಗಿನವರು:** 100 ಮೀ. ಹರ್ಡಲ್ಸ್: ಅಲಿಝಾ ಅಫ್ತಾಬ್ ಮುಲ್ಲಾ (ಮಹಾರಾಷ್ಟ್ರ)–1. ಕಾಲ: 14.26 ಸೆ.; ಜಾವೆಲಿನ್ ಥ್ರೊ: ಪ್ರತೀಕ್ಷಾ ಪಟೇಲ್ (ಉತ್ತರ ಪ್ರದೇಶ)–1, ದೂರ: 46.00 ಮೀ.; 400 ಮೀ. ಹರ್ಡಲ್ಸ್: ಶ್ರೀವರ್ತನಿ ಎಸ್.ಕೆ. (ತಮಿಳುನಾಡು)–1, ಕಾಲ: 1ನಿ.04.84 ಸೆ.;

UPSC, KPSC, PSI, Banking, Railways, NABARD ಮುಂತಾದ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಯಲ್ಲಿರುವ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ, ಪ್ರಜಾವಾಣಿ ವಿಶ್ವಾಸಾರ್ಹ ಮಾಹಿತಿ ಮೂಲದಿಂದ ಸ್ಪರ್ಧಾವಾಣಿ ಮಾಸಿಕವನ್ನು ಹೊರತಂದಿದೆ.

ಏನಿರಲಿದೆ:
- ಪ್ರತಿ ತಿಂಗಳೂ ಯುಪಿಎಸ್‌ಸಿ ಪಾಸು ಮಾಡಿರುವ ಗಣ್ಯರ ಸಂದರ್ಶನ, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಮಾದರಿ ಪ್ರಶ್ನೋತ್ತರಗಳು.
- ಬಹು ಆಯ್ಕೆಯ ಪ್ರಶ್ನೋತ್ತರಗಳು, ಪ್ರಬಂಧ ಮಾದರಿಯ ಪ್ರಚಲಿತ ವಿದ್ಯಮಾನಗಳು.
- ಸಂಪನ್ಮೂಲ: ಅತ್ಯಂತ ವಿಶ್ವಾಸಾರ್ಹ ಮಾಹಿತಿಮೂಲದಿಂದ ಸಂಪನ್ಮೂಲ ವ್ಯಕ್ತಿಗಳು ಸ್ಪರ್ಧಾತ್ಮಕ ಪರೀಕ್ಷೆಗೆ ಬರುವ ಪ್ರಶ್ನೆ ಮತ್ತು ಮಾದರಿ ಉತ್ತರಗಳನ್ನು ಸಿದ್ಧಪಡಿಸುವರು.

ಆರ್ಡರ್ ಮಾಡಲು ನಿಮ್ಮ ಹತ್ತಿರದ ಪುಸ್ತಕದ ಅಂಗಡಿ/ಪತ್ರಿಕಾ ವಿತರಕರನ್ನು ಸಂಪರ್ಕಿಸಿ

ಹೆಚ್ಚಿನ ಮಾಹಿತಿಗಾಗಿ, WhatsApp/ಕರೆ ಮಾಡಿ: 9606966128

ಈ QR ಕೋಡ್ ಸ್ಕ್ಯಾನ್ ಮಾಡಿ, ಪ್ರಕಟವಾಗುವ ಅರ್ಜಿ ಭರ್ತಿ ಮಾಡಿ, ಚಂದಾದಾರರಾಗಿ ನೋಂದಣಿ ಮಾಡಿಕೊಳ್ಳಿ

ಚಂದಾದಾರಿಕೆ ಕೇವಲ ₹360 ರಿಂದ ಪ್ರಾರಂಭ

ಜೂನ್ ಸಂಚಿಕೆ ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ